ಶನಿವಾರ, ಏಪ್ರಿಲ್ 30, 2022 | ₹ 6.00

www.prajavani.net

/prajavani.net @prajavani /prajavani http://bit.ly/Prajavani

ಪ್ರಜಾವಾಣಿ

ಅತ್ಯಂತ ವಿಶ್ವಾಸಾರ್ಹ ಕನ್ನಡ ದಿನಪತ್ರಿಕೆ

ಪ್ರಾರ್ಥನೆ


ರಂಜಾನ್ ಮಾಸದ ಪ್ರಯುಕ್ತ ಪಂಜಾಬ್‌ನ ಅಮೃತಸರದಲ್ಲಿನ ಜಾಮಾ ಮಸೀದಿಯಲ್ಲಿ ಶುಕ್ರವಾರ ಮಕ್ಕಳು ಪ್ರಾರ್ಥನೆ ಸಲ್ಲಿಸಿದರು



ಶನಿವಾರ, ಏಪ್ರಿಲ್ 30, 2022 | ಬೆಂಗಳೂರು | ₹ 6.00 | ಸಂಪುಟ 75 | ಸಂಚಿಕೆ 119 | ಪುಟ 24
www.prajavani.net
/prajavani.net @prajavani /prajavani http://bit.ly/Prajavani

ಪ್ರಜಾವಾಣಿ

ಅತ್ಯಂತ ವಿಶ್ವಾಸಾರ್ಹ ಕನ್ನಡ ದಿನಪತ್ರಿಕೆ



ಭೂಮಿಕಾ
ಕೋವಿಡ್ ನಂತರ ಕಚೇರಿಗಳು ಪುನರಾರಂಭವಾಗಿದ್ದು ಏಕಾಂಗಿ ಪೋಷಕಿಯರಿರುವ ಮನೆಗಳಲ್ಲಿ ಮತ್ತೆ ಹೊಸ ಟೈಮ್ ಟೇಬಲ್ ತಯಾರಿಸಬೇಕಾಗಿದೆ

ಸೆನ್ಸೆಕ್ಸ್ 57,061 | ನಿಫ್ಟಿ 17,103 | ಚಿನ್ನ (Std. 10g) ₹53,620 (ಬೆಂಗಳೂರು) | ಶುದ್ಧ ಬೆಳ್ಳಿ (kg) ₹65,900 (ಬೆಂಗಳೂರು) | ₹/$ 76.50

ಚರ್ಚೆ
ಆರೋಪಿಗಳ ಆಸ್ತಿ ನೆಲಸಮಗೊಳಿಸುವುದು ಸರಿಯಾದ ಕ್ರಮವೇ? 9
ಬಿಸಿಗಾಳಿಗೆ ಬಸವಳಿದ ದೆಹಲಿ 6

ಪರೀಕ್ಷಾ ಅಕ್ರಮ: ದಿವ್ಯಾ ಹಾಗರಗಿ ಬಂಧನದ ಬೆನ್ನಲ್ಲೇ ಸರ್ಕಾರದ ತೀರ್ಮಾನ

ಪಿಎಸ್ಐ: ಮರುಪರೀಕ್ಷೆ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಪರೀಕ್ಷಾ ಅಕ್ರಮದ ಹಿನ್ನೆಲೆಯಲ್ಲಿ 545 ಪಿಎಸ್ಐ ಹುದ್ದೆಗಳ ನೇಮಕಾತಿಗೆ ನಡೆದಿದ್ದ ಪರೀಕ್ಷೆಯನ್ನೇ ರದ್ದುಪಡಿಸಿರುವ ಸರ್ಕಾರ, ಮರುಪರೀಕ್ಷೆ ನಡೆಸಲು ತೀರ್ಮಾನಿಸಿದೆ. ಪರೀಕ್ಷೆಯಲ್ಲಿ ಉತ್ತೀರ್ಣರಾದವರು ಈ ನಡೆಯನ್ನು ಕಟುವಾಗಿ ಟೀಕಿಸಿದ್ದಾರೆ.

ಪರೀಕ್ಷಾ ಅಕ್ರಮದ ಸೂತ್ರಧಾರಿ ಎನ್ನಲಾಗಿರುವ ಬಿಜೆಪಿ ನಾಯಕಿ ದಿವ್ಯಾ ಹಾಗರಗಿ ಬಂಧನ ಆಗುತ್ತಿದ್ದಂತೆಯೇ ರಾಜ್ಯ ಸರ್ಕಾರ ಪರೀಕ್ಷೆ ರದ್ದುಪಡಿಸಿರುವುದೂ ಚರ್ಚೆಗೆ ಗ್ರಾಸವಾಗಿದೆ.

ಶುಕ್ರವಾರ ಸುದ್ದಿಗೋಷ್ಠಿಯಲ್ಲಿ ಮಾತನಾಡಿದ ಗೃಹ ಸಚಿವ ಆರಗ ಜ್ಞಾನೇಂದ್ರ,' ಪಿಎಸ್ಐ ನೇಮಕಾತಿಗಾಗಿ ನಡೆಸಿದ್ದ ಪರೀಕ್ಷೆ ರದ್ದುಪಡಿಸಲಾಗಿದೆ. ಈ ಹಿಂದೆ ಪರೀಕ್ಷೆ ಬರೆದಿದ್ದ ಎಲ್ಲಾ 54,289 ಅಭ್ಯರ್ಥಿಗಳಿಗೆ ಹೊಸದಾಗಿ ಪರೀಕ್ಷೆ ಬರೆಯಲು ಅವಕಾಶ ನೀಡುತ್ತೇವೆ' ಎಂದರು.

ಪರೀಕ್ಷೆಯನ್ನು ರದ್ದು ಮಾಡಿ, ಮರು ಪರೀಕ್ಷೆ ನಡೆಸುವ ತೀರ್ಮಾನವನ್ನುಮುಖ್ಯಮಂತ್ರಿ ಬಸವರಾಜ ಬೊಮ್ಮಾಯಿಅವರು ಸಮರ್ಥಿಸಿಕೊಂಡಿದ್ದಾರೆ.

ಶೀಘ್ರವೇ ದಿನಾಂಕ ನಿಗದಿ: 'ಪರೀಕ್ಷಾ ಅಕ್ರಮ ಸಂಬಂಧ ಸಿಐಡಿಯಿಂದ ಬಂಧಿತರಾದ ಅಭ್ಯರ್ಥಿಗಳಿಗೆ ಮರುಪರೀಕ್ಷೆ ಬರೆಯಲು ಅವಕಾಶ ನೀಡುವುದಿಲ್ಲ. ಹೊಸಬರಿಗೂ ಅವಕಾಶ ಇಲ್ಲ. ಹಿಂದೆ ಪರೀಕ್ಷೆ ಬರೆದವರಿಗೆ ಮಾತ್ರ ಪರೀಕ್ಷೆ ಬರೆಯಲು ಅವಕಾಶ ನೀಡಲಾಗುವುದು. ಮರುಪರೀಕ್ಷೆ ದಿನಾಂಕವನ್ನು ಶೀಘ್ರವೇ ನಿಗದಿಪಡಿಸುತ್ತೇವೆ' ಎಂದೂ ಜ್ಞಾನೇಂದ್ರ ತಿಳಿಸಿದರು.

'ಈ ನಿರ್ಧಾರದಿಂದ ಅಕ್ರಮವಾಗಿ ನೇಮಕಾತಿ ಪಡೆದವರ ಜಾಗಕ್ಕೆ ಪ್ರತಿಭಾವಂತರು, ಪ್ರಾಮಾಣಿಕ ಅಭ್ಯರ್ಥಿಗಳಿಗೆ ಅವಕಾಶ ಸಿಗಲಿದೆ. ಪರೀಕ್ಷಾ ಅಕ್ರಮಗಳು ಒಂದಕ್ಕಿಂತ ಹೆಚ್ಚು ಕೇಂದ್ರಗಳಲ್ಲಿ ನಡೆದಿರುವ ಬಗ್ಗೆಯೂ ಶಂಕೆ ಇರುವ ಕಾರಣ ಮರುಪರೀಕ್ಷೆ ನಡೆಸುವ ತೀರ್ಮಾನ ತೆಗೆದುಕೊಳ್ಳಲಾಗಿದೆ' ಎಂದು ಪ್ರಶ್ನೆಯೊಂದಕ್ಕೆ ಪ್ರತಿಕ್ರಿಯಿಸಿದರು.

ದಿವ್ಯಾ ಸೇರಿ ಆರು ಮಂದಿ ಸಿಐಡಿ ಕಸ್ಟಡಿಗೆ



ದಿವ್ಯಾ ಹಾಗರಗಿ

ಕಲಬುರಗಿ: ಪಿಎಸ್ಐ ನೇಮಕಾತಿ ಪರೀಕ್ಷೆಯಲ್ಲಿ ನಡೆದಿದೆ ಎನ್ನಲಾದ ಅಕ್ರಮಕ್ಕೆ ಸಂಬಂಧಿಸಿದಂತೆ ಪ್ರಮುಖ ಆರೋಪಿ, ಬಿಜೆಪಿ ನಾಯಕಿ ದಿವ್ಯಾ ಹಾಗರಗಿ ಸೇರಿ ಆರು ಮಂದಿಯನ್ನು ಸಿಐಡಿ ಅಧಿಕಾರಿಗಳು ಬಂಧಿಸಿದ್ದಾರೆ.

ದಿವ್ಯಾ ಒಡೆತನದ ಕಲಬುರಗಿಯ ಜ್ಞಾನಜ್ಯೋತಿ ಇಂಗ್ಲಿಷ್ ಮಾಧ್ಯಮ ಶಾಲೆಯ ಶಿಕ್ಷಕಿಯರಾದ ಅರ್ಚನಾ, ಸುನಂದಾ, ಇವರೆಲ್ಲರಿಗೂ ಆಶ್ರಯ ನೀಡಿದ್ದ ಮಹಾರಾಷ್ಟ್ರದ ಸೊಲ್ಲಾಪುರದ ಮರಳು ಉದ್ಯಮಿಗಳಾದ ಸುರೇಶ ಕಾಟೇಗಾಂವ ಹಾಗೂ ಕಾಳಿದಾಸ, ಇವರ ಕಾರು ಚಾಲಕ ಸದ್ದಾಂ ಬಂಧಿತರು. ಹಗರಣದಲ್ಲಿ ಬಂಧಿತರ ಸಂಖ್ಯೆ 23ಕ್ಕೆ ಏರಿದೆ. ಮಹಾರಾಷ್ಟ್ರದ ಪುಣೆಯ ಹತ್ತಿರದ ಹೋಟೆಲ್‌ನಲ್ಲಿ ಗುರುವಾರ ರಾತ್ರಿ ಇವರು ಊಟ ಮುಗಿಸಿ ಕುಳಿತಿದ್ದರು. ದಾಳಿ ನಡೆಸಿದ ಅಧಿಕಾರಿಗಳು ಅವರನ್ನು ಬಂಧಿಸಿ ಕರೆತಂದರು. ನ್ಯಾಯಾಲಯ ಈ ಆರು ಆರೋಪಿಗಳನ್ನು 11 ದಿನ ಸಿಐಡಿ ವಶಕ್ಕೆ ನೀಡಿದೆ.

ಇನ್ನಷ್ಟು ಸುದ್ದಿಗಳು 6

ಮರುಪರೀಕ್ಷೆಗೆ ಎಚ್‌ಡಿಕೆ ವಿರೋಧ

ಹುಬ್ಬಳ್ಳಿ: 'ಪಿಎಸ್ಐ ನೇಮಕಾತಿಯ ಭ್ರಷ್ಟಾಚಾರ ಕುರಿತು ತನಿಖೆ ನಡೆಯುತ್ತಿರುವಾಗಲೇ ಸರ್ಕಾರ ಮರುಪರೀಕ್ಷೆ ನಡೆಸುವ ತೀರ್ಮಾನಕ್ಕೆ ಬಂದಿದ್ದು ಸರಿಯಲ್ಲ' ಎಂದು ಜೆಡಿಎಸ್ ಶಾಸಕಾಂಗ ಪಕ್ಷದ ನಾಯಕ ಎಚ್.ಡಿ ಕುಮಾರಸ್ವಾಮಿ ಹೇಳಿದರು. ಶುಕ್ರವಾರ ಸುದ್ದಿಗಾರರೊಂದಿಗೆ ಮಾತನಾಡಿದ ಅವರು 'ಸರ್ಕಾರದ ನಿರ್ಧಾರದಿಂದ ಬಡ ಪ್ರತಿಭಾನ್ವಿತ ವಿದ್ಯಾರ್ಥಿಗಳಿಗೆ ತೊಂದರೆಯಾಗುತ್ತದೆ. ಮುಂದೆಯೂ ಸರ್ಕಾರ ಸರಿಯಾಗಿ ಪರೀಕ್ಷೆ ನಡೆಸುತ್ತದೆ ಎನ್ನುವುದಕ್ಕೆ ಏನು ಗ್ಯಾರಂಟಿ? ಯಾರೋ ಕೊಟ್ಟಿರುವ ದೂರಿನ ಆಧಾರದ ಮೇಲೆ ಸರ್ಕಾರ ಈ ರೀತಿಯ ನಿರ್ಧಾರಕ್ಕೆ ಬರಬಾರದಿತ್ತು' ಎಂದರು.

'ಈ ವ್ಯವಸ್ಥೆ ಸರಿಪಡಿಸದಿದ್ದರೆ ಕೇವಲ ದುಡ್ಡಿದ್ದವರಿಗೆ ಮಾತ್ರ ಉನ್ನತ ಹುದ್ದೆಗಳು ಸಿಗುತ್ತವೆ. ಹಣ ಕೊಟ್ಟು ಕೆಲಸ ಪಡೆದವರು ಬಡಜನರ ಪರವಾಗಿ ಕೆಲಸ ಮಾಡುತ್ತಾರೆಯೇ? ಈ ಕುರಿತು ಮುಖ್ಯಮಂತ್ರಿ ಜೊತೆ ಮಾತನಾಡುವೆ. ಅಕ್ರಮವೆಸಗಿದ ನಿಜವಾದ ತಪ್ಪಿತಸ್ಥರಿಗೆ ಶಿಕ್ಷೆಯಾಗಲಿ' ಎಂದು ಆಗ್ರಹಿಸಿದರು.

ಶಿಸ್ತುಕ್ರಮ ಆದಾಗ ಅಕ್ರಮಕ್ಕೆ ಕಡಿವಾಣ

'ಪಿಎಸ್ಐ ನೇಮಕಾತಿ ಮರುಪರೀಕ್ಷೆ ನಿರ್ಧಾರದ ಮೂಲಕ ನೊಂದ ಅರ್ಹ ಅಭ್ಯರ್ಥಿಗಳಿಗೆ ಸರ್ಕಾರವು ನ್ಯಾಯ ಒದಗಿಸಿದೆ. ನೇಮಕಾತಿ ಉಸ್ತುವಾರಿ ಹೊತ್ತಿರುವ ಹಿರಿಯ ಅಧಿಕಾರಿಗಳಿಂದ ಹಿಡಿದು ಅಮಾನತು ಮುಂತಾದ ಶಿಸ್ತು ಕ್ರಮ (ವರ್ಗಾವಣೆ ಶಿಸ್ತು ಕ್ರಮ ಅಲ್ಲ) ಆದಾಗ ಮಾತ್ರ ಮುಂದೆ ಇಂತಹ ಘಟನೆ ತಡೆಯಲು ಸಾಧ್ಯ. ಇಲ್ಲವಾದಲ್ಲಿ ಅಧಿಕಾರಿಗಳು ಆಡಿದ್ದೇ ಆಟ ಎಂದು ಕರ್ನಾಟಕ ಕೈಮಗ್ಗ ನಿಗಮದ ವ್ಯವಸ್ಥಾಪಕ ನಿರ್ದೇಶಕಿಯೂ ಆಗಿರುವ ಐಪಿಎಸ್ ಅಧಿಕಾರಿ ಡಿ.ರೂಪಾ ಟ್ವೀಟ್ ಮಾಡಿದ್ದಾರೆ.

ಕರ್ನಾಟಕದಲ್ಲಿ 'ಸಿಂಘಂ' ನಂಥ ಅಧಿಕಾರಿಗಳಿದ್ದರೂ ಪಿಎಸ್ಐ ಅಕ್ರಮ ಹೇಗಾಯ್ತು ಎಂದು ರೂಪಾ ಗುರುವಾರ ಪ್ರಶ್ನಿಸಿದ್ದರು.

ಕಲ್ಲಿದ್ದಲು ಸಾಗಿಸಲು 657 ಪ್ರಯಾಣಿಕ ರೈಲು ರದ್ದು

ಪ್ರಜಾವಾಣಿ ವಾರ್ತೆ

ನವದೆಹಲಿ: ಕಲ್ಲಿದ್ದಲು ಸಾಗಣೆ ರೈಲುಗಳ ಸುಗಮ ಸಂಚಾರಕ್ಕೆ ಅನುವು ಮಾಡಿಕೊಡುವ ಸಲುವಾಗಿ ರೈಲ್ವೆ ಇಲಾಖೆಯು 657 ಪ್ರಯಾಣಿಕ ರೈಲುಗಳ ಸಂಚಾರವನ್ನು ರದ್ದು ಮಾಡಿದೆ. ಕಲ್ಲಿದ್ದಲು ಕೊರತೆ ಎದುರಿಸುತ್ತಿರುವ ಉಷ್ಣ ವಿದ್ಯುತ್ ಸ್ಥಾವರಗಳಿಗೆ ತ್ವರಿತವಾಗಿ ಕಲ್ಲಿದ್ದಲನ್ನು ಸಾಗಿಸುವ ಉದ್ದೇಶದಿಂದ ಈ ಕ್ರಮ ತೆಗೆದುಕೊಳ್ಳಲಾಗಿದೆ ಎಂದು ಭಾರತೀಯ ರೈಲ್ವೆಯ ಹೆಚ್ಚುವರಿ ಮಹಾ ನಿರ್ದೇಶಕ ರಾಜೀವ್ ಜೈನ್ ಹೇಳಿದ್ದಾರೆ.

ದೇಶದ 100ಕ್ಕೂ ಹೆಚ್ಚು ಉಷ್ಣ ವಿದ್ಯುತ್ ಸ್ಥಾವರಗಳಲ್ಲಿ ಕಲ್ಲಿದ್ದಲಿನ ಸಂಗ್ರಹ ಶೋಚನೀಯ ಮಟ್ಟಕ್ಕೆ ಕುಸಿದಿದೆ. ಈ ಸ್ಥಾವರಗಳಿಗೆ ತಕ್ಷಣವೇ ಕಲ್ಲಿದ್ದಲನ್ನು ಪೂರೈಕೆ ಮಾಡಬೇಕು ಎಂದು ರಾಜ್ಯ ಸರ್ಕಾರಗಳು ಕೇಂದ್ರವನ್ನು ಒತ್ತಾಯಿಸಿದ್ದವು.

'ಮೇಲ್, ಎಕ್ಸ್‌ಪ್ರೆಸ್ ಮತ್ತು ಸಾಮಾನ್ಯ ಪ್ರಯಾಣಿಕ ರೈಲುಗಳು ಸೇರಿ ಒಟ್ಟು 657 ರೈಲುಗಳ ಸಂಚಾರವನ್ನು ತಾತ್ಕಾಲಿಕವಾಗಿ ರದ್ದು ಮಾಡಲಾಗಿದೆ' ಎಂದು ರಾಜೀವ್ ಮಾಹಿತಿ ನೀಡಿದ್ದಾರೆ.

'ಒಂದು ದಿನಕ್ಕಾಗುವಷ್ಟು ಮಾತ್ರ ಸಂಗ್ರಹ'

'ದೆಹಲಿಯ ಎಲ್ಲಾ ಉಷ್ಣ ವಿದ್ಯುತ್ ಸ್ಥಾವರಗಳಲ್ಲಿ ಕಲ್ಲಿದ್ದಲು ಸಂಗ್ರಹ ಶೋಚನೀಯ ಮಟ್ಟಕ್ಕೆ ಕುಸಿದಿದೆ. ಇನ್ನು ಒಂದು ದಿನಕ್ಕಾಗುವಷ್ಟು ಕಲ್ಲಿದ್ದಲು ಮಾತ್ರ ಇದೆ' ಎಂದು ದೆಹಲಿ ಇಂಧನ ಸಚಿವ ಸತ್ಯೇಂದರ್ ಜೈನ್ ಅವರು ಹೇಳಿದ್ದಾರೆ.

'ಕಲ್ಲಿದ್ದಲು ಪೂರೈಕೆಗೆ ರೈಲು ವ್ಯವಸ್ಥೆ ಮಾಡದೇ ಇರುವುದರಿಂದ ಪೂರೈಕೆಯಲ್ಲಿ ವ್ಯತ್ಯಯವಾಗಿದೆ. ಕಲ್ಲಿದ್ದಲು ಸಂಗ್ರಹ ಮುಗಿದು, ಸ್ಥಾವರಗಳು ಸ್ಥಗಿತವಾದರೆ ಪರಿಸ್ಥಿತಿ ಬಿಗಡಾಯಿಸುತ್ತದೆ. ದೆಹಲಿ ಮೆಟ್ರೊ ಮತ್ತು ಆಸ್ಪತ್ರೆಗಳಿಗೆ ವಿದ್ಯುತ್ ಪೂರೈಸುವುದೂ ಕಷ್ಟವಾಗುತ್ತದೆ' ಎಂದು ಅವರು ಕಳವಳ ವ್ಯಕ್ತಪಡಿಸಿದ್ದಾರೆ.

ಆದರೆ, 'ದೆಹಲಿಗೆ ವಿದ್ಯುತ್ ಪೂರೈಸುವ ದಾದ್ರಿ ಉಷ್ಣ ವಿದ್ಯುತ್ ಸ್ಥಾವರದ ಆರು ಘಟಕಗಳು ಮತ್ತು ಉನ್‌ಚಹಾರ್ ಘಟಕದ ಐದು ಘಟಕಗಳು ಶೇ 100ರಷ್ಟು ಕಾರ್ಯನಿರ್ವಹಿಸುತ್ತಿವೆ. ಈ ಸ್ಥಾವರಗಳಿಗೆ ಕಲ್ಲಿದ್ದಲು ಪೂರೈಕೆಯಲ್ಲಿ ಯಾವುದೇ ವ್ಯತ್ಯಯವಾಗಿಲ್ಲ. ಉನ್‌ಚಹಾರ್ ಸ್ಥಾವರದ ಒಂದು ಘಟಕವನ್ನು ವಾರ್ಷಿಕ ನಿರ್ವಹಣೆ ಸಲುವಾಗಿ ಸ್ಥಗಿತಗೊಳಿಸಲಾಗಿದೆ' ಎಂದು ರಾಷ್ಟ್ರೀಯ ಉಷ್ಣ ವಿದ್ಯುತ್ ನಿಗಮ ಹೇಳಿದೆ.

ಕೇಂದ್ರದ ಆಡಳಿತ ವೈಫಲ್ಯ ಮತ್ತು ಕಳಪೆ ನಿರ್ವಹಣೆಯಿಂದ ಈ ಬಿಕ್ಕಟ್ಟು ತಲೆದೋರಿದೆ. ಕಲ್ಲಿದ್ದಲು ಪೂರೈಕೆಗೆ ಸರ್ಕಾರವು ಸಾಗಣೆ ವ್ಯವಸ್ಥೆ ಮಾಡುತ್ತಿಲ್ಲ

ಗೌರವ್ ವಲ್ಲಭ್, ಕಾಂಗ್ರೆಸ್ ವಕ್ತಾರ

ದೇಶದ ಉಷ್ಣ ವಿದ್ಯುತ್ ಸ್ಥಾವರಗಳಲ್ಲಿ 2.2 ಕೋಟಿ ಟನ್‌ಗಳಷ್ಟು ಕಲ್ಲಿದ್ದಲಿನ ಸಂಗ್ರಹ ಇದೆ. ಅದು 10 ದಿನಗಳಿಗೆ ಸಾಕಾಗುತ್ತಿದೆ. ಸ್ಥಾವರಗಳಿಗೆ ಪೂರೈಕೆ ನಿರಂತರವಾಗಿದೆ

ಪ್ರಲ್ಹಾದ ಜೋಶಿ
ಕೇಂದ್ರ ಕಲ್ಲಿದ್ದಲು ಸಚಿವ

3A ಪುಟ ನೋಡಿ

ಒಳ ಪುಟಗಳು

ಚಿನಕುರಳಿ

ಪ್ರಕಾಶ್ ಶೆಟ್ಟಿ



ಕಾನೂನಿನ ಬಲವಿಲ್ಲದೇ ಬಿ– ಖಾತಾ ಸಕ್ರಮ ಅಸಾಧ್ಯ?

ಪ್ರಜಾವಾಣಿ ವಾರ್ತೆ

ಬೆಂಗಳೂರು: ಬಿ-ಖಾತಾ ಹೊಂದಿರುವವರಿಗೆ ಎ-ಖಾತಾ ನೀಡುವ ವಿಚಾರದಲ್ಲೂ ಅನೇಕ ಕಾನೂನು ಜಿಜ್ಞಾಸೆಗಳೂ ಇವೆ. ಸಮರ್ಥವಾದ ಕಾನೂನಿನ ಬಲವಿಲ್ಲದೇ ಬಿ-ಖಾತಾ ಹೊಂದಿದ ನಿವೇಶನಗಳಿಗೆ ಎ-ಖಾತಾ ನೀಡಲು ಸಾಧ್ಯವಿಲ್ಲ ಎಂಬುದು ಬಿಬಿಎಂಪಿ ಅಧಿಕಾರಿಗಳ ಅಭಿಪ್ರಾಯ.

ಬಿಬಿಎಂಪಿ ವ್ಯಾಪ್ತಿಯಲ್ಲಿ ಭೂಪರಿವರ್ತನೆ ಆಗದ 2007ಕ್ಕೂ ಹಿಂದಿನ ಕಂದಾಯ ಬಡಾವಣೆಗಳಲ್ಲಿನ ನಿವೇಶನಗಳಿಗೆ 2020ರ ಬಿಬಿಎಂಪಿ ಕಾಯ್ದೆಯಲ್ಲಿರುವ ಅವಕಾಶವನ್ನು ಬಳಸಿಕೊಂಡು ಸುಧಾರಣಾ ವೆಚ್ಚವನ್ನು ಪಾವತಿಸಿಕೊಂಡು ಖಾತಾ/ ಆಸ್ತಿ ಗುರುತಿನ ಸಂಖ್ಯೆ (ಪಿಐಡಿ ನಂಬರ್) ನೀಡಬಹುದು ಹಾಗೂ ಆಸ್ತಿ ತೆರಿಗೆಯನ್ನೂ ಸಂಗ್ರಹಿಸಬಹುದು

ಬಿಬಿಎಂಪಿ ಸುದ್ದಿ

ಎಂದು ಉನ್ನತ ಮಟ್ಟದ ಸಭೆಯಲ್ಲಿ ಇತ್ತೀಚೆಗೆ ನಿರ್ಣಯ ಕೈಗೊಳ್ಳಲಾಗಿದೆ.

ರಿಟ್ ಅರ್ಜಿ ಸಂಖ್ಯೆ ಸಂಖ್ಯೆ: 6734-6751/2013 ಅನ್ನು ವಿಲೇವಾರಿ ಮಾಡಿದ ಹೈಕೋರ್ಟ್ 2014ರ ಡಿ.19ರಂದು ನೀಡಿದ ಆದೇಶದ ಪ್ರಕಾರ, ಕೆಎಂಸಿ ಕಾಯ್ದೆಯ 108 ಎ ಸೆಕ್ಷನ್ ಖಾತೆ ಕುರಿತಾಗಲಿ, ಪಿಐಡಿ ಸಂಖ್ಯೆ ಕುರಿತಾಗಲೀ ಸೊಲ್ಲೆತ್ತುವುದಿಲ್ಲ. ಅದು ಕೇವಲ ಆಸ್ತಿಯ ಮೌಲ್ಯಮಾಪನ ನಡೆಸಿದ್ದನ್ನು ಪ್ರತ್ಯೇಕ ರಿಜಿಸ್ಟರ್‌ನಲ್ಲಿ ನಮೂದಿಸುವುದಕ್ಕೆ ಸೀಮಿತವಾಗಿದೆ. ನಿಯಮ 11ರನ್ವಯ 'ಮೌಲ್ಯಮಾಪನ ನಡೆಸದ ಸ್ವತ್ತು'ಗಳೆಂಬ ಪದ ಬಳಕೆಯೇ ಅಸಮಂಜಸ. ಹಾಗಾಗಿ ಕಾಯ್ದೆಗೆ ಸೂಕ್ತ ತಿದ್ದುಪಡಿ ತರಬೇಕು ಹಾಗೂ ಬಯಸಿದರೆ ತನ್ನ ವ್ಯಾಪ್ತಿಯ ಎಲ್ಲ ಆಸ್ತಿಗಳಿಗೂ ಪಿಐಡಿ ನಂಬರ್ ಸಿಗುವುದನ್ನು ಖಾತರಿಪಡಿಸಬೇಕು ಎಂದು ಹೈಕೋರ್ಟ್ ಸರ್ಕಾರಕ್ಕೆ ನಿರ್ದೇಶನ ನೀಡಿತ್ತು.

ಆ ಬಳಿಕ ಬಿಬಿಎಂಪಿ ಆಸ್ತಿ ತೆರಿಗೆ ನಿಯಮ 11ಕ್ಕೆ 2020ರ ಸೆ.3ರಂದು ತಿದ್ದುಪಡಿ ತಂದು ಅಧಿಕೃತ ಹಾಗೂ ಅನಧಿಕೃತ ಸ್ವತ್ತುಗಳನ್ನು ಸ್ಪಷ್ಟವಾಗಿ ನಿರೂಪಿಸಲಾಗಿದೆ. ಅಧಿಕೃತ ಸ್ವತ್ತುಗಳನ್ನು ನಮೂನೆ 'ಎ'ನಲ್ಲಿ ಹಾಗೂ ಅನಧಿಕೃತ ಸ್ವತ್ತುಗಳನ್ನು ನಮೂನೆ 'ಬಿ'ನಲ್ಲಿ ನಮೂದಿಸಬೇಕು ಎಂದು ಸೂಚಿಸಲಾಗಿದೆ. ಅಲ್ಲದೇ ಬಿಬಿಎಂಪಿ ವ್ಯಾಪ್ತಿಯ ಎಲ್ಲ ಸ್ವತ್ತುಗಳಿಗೂ ಪಿಐಡಿ ಸಂಖ್ಯೆ ನೀಡುವ ಬಗ್ಗೆ ವಿವರಿಸಲಾಗಿದೆ.

2020ರ ಬಿಬಿಎಂಪಿ ಕಾಯ್ದೆಯ ಸೆಕ್ಷನ್ 144 (6)ರ ಅಡಿ ಕಟ್ಟಡಗಳಿಂದ ಹಾಗೂ ಖಾಲಿನ ನಿವೇಶನಗಳಿಂದ ಆಸ್ತಿ ತೆರಿಗೆ ಸಂಗ್ರಹ ಮಾಡಲು ಅವಕಾಶ ಕಲ್ಪಿಸಲಾಗಿದೆ. ಅವು ಅಧಿಕೃತ ಅಥವಾ ಅನಧಿಕೃತವೇ ಇರಬಹುದು. ಅನಧಿಕೃತ ಸ್ವತ್ತುಗಳಿಂದ ತೆರಿಗೆ ಪಡೆದ ಮಾತ್ರಕ್ಕೆ ಅವು ಅಧಿಕೃತ ಆಗುವುದಿಲ್ಲ ಎಂದು ಸ್ಪಷ್ಟಪಡಿಸಲಾಗಿದೆ. ಹಾಗಾಗಿ ಈಗ ಬಿ-ಖಾತಾ ಹೊಂದಿರುವ ಸ್ವತ್ತುಗಳಿಗೆ ಪಿಐಡಿ ಸಂಖ್ಯೆ ನೀಡಿದರೂ ಅವು ಅಧಿಕೃತ ಎಂದೆನಿಸಿಕೊಳ್ಳುವುದಿಲ್ಲ. ಬಿಬಿಎಂಪಿ ಕಾಯ್ದೆಯ ಸೆಕ್ಷನ್ 144 (20) ಪ್ರಕಾರ ಆಸ್ತಿ ತೆರಿಗೆ ಪಾವತಿ ಮಾಡುವ ಪ್ರತಿಯೊಬ್ಬ ವ್ಯಕ್ತಿಗೂ ಸ್ವೀಕೃತಿ ಅಥವಾ ಖಾತಾ ನೀಡಬೇಕು. ಈ ರಶೀದಿ ಅಥವಾ ಖಾತಾ ಅಧಿಕೃತ ಹಾಗೂ ಅನಧಿಕೃತ ಕಟ್ಟಡಗಳಿಗೆ ಅಥವಾ ನಿವೇಶನಗಳಿಗೆ ಬೇರೆಯೇ ನಮೂನೆಗಳಲ್ಲಿ ಇರಬೇಕು. ಇವು ಯಾವ ರೀತಿ ಇರಬೇಕೆಂಬುದನ್ನು ನಿರ್ದಿಷ್ಟ ನಿಯಮಗಳ ಮೂಲಕ ನಿಗದಿಪಡಿಸಬಹುದು. ಇದನ್ನು ನಿರ್ದಿಷ್ಟಪಡಿಸಬೇಕಾಗಿದೆ ಎಂದು ಅಧಿಕಾರಿಯೊಬ್ಬರು ಹೇಳಿದರು.

'ಸೆಮಿಕಂಡಕ್ಟರ್ ಉದ್ಯಮಕ್ಕೆ ಭೂಮಿ ನೀಡಲು ಸಿದ್ಧ'

ಬೆಂಗಳೂರು: 'ರಾಜ್ಯವು ಸಮರ್ಥವಾದ ಎಲೆಕ್ಟ್ರಾನಿಕ್ ವ್ಯವಸ್ಥೆ ಮತ್ತು ಅಭಿವೃದ್ಧಿ ನಿರ್ವಹಣೆ (ಇಎಸ್‌ಡಿಎಂ) ನೀತಿ ಜಾರಿಗೆ ತಂದಿದ್ದು, ಸೆಮಿಕಂಡಕ್ಟರ್ ಉದ್ದಿಮೆಗಳಿಗೆ ಅಗತ್ಯ ಬಿದ್ದರೆ ಹೆಚ್ಚಿನ ಭೂಮಿ ಒದಗಿಸಲು ಸರ್ಕಾರ ಸಿದ್ಧ' ಎಂದು ಐಟಿ–ಬಿಟಿ ಸಚಿವ ಸಿ.ಎನ್.ಅಶ್ವತ್ಥನಾರಾಯಣ ಹೇಳಿದರು.

ನಗರದಲ್ಲಿ ಶುಕ್ರವಾರ ಆರಂಭಗೊಂಡ ಸೆಮಿಕಾನ್ ಇಂಡಿಯಾ ಸಮಾವೇಶದಲ್ಲಿ ಅವರು ಮಾತನಾಡಿದರು. 'ಕೇಂದ್ರ ಸರ್ಕಾರ ಸೆಮಿಕಂಡಕ್ಟರ್ ಕ್ಷೇತ್ರಕ್ಕೆ ಭಾರಿ ಉತ್ತೇಜನ ನೀಡುತ್ತಿದೆ. ರಾಜ್ಯ ಕೂಡ ಇದೇ ಮಾದರಿ ಅನುಸರಿಸುತ್ತಿದ್ದು, ದೇಶದಲ್ಲಿ ಎಲೆಕ್ಟ್ರಾನಿಕ್ ಡಿಸೈನ್ ವಲಯದಲ್ಲಿ ಶೇ 40ರಷ್ಟು ಕಂಪನಿಗಳು ಬೆಂಗಳೂರಿನಲ್ಲೇ ನೆಲೆಗೊಂಡಿವೆ' ಎಂದರು.

'ಕೇಂದ್ರ ಸರ್ಕಾರ ಈ ಸಮಾವೇಶವನ್ನು ಬೆಂಗಳೂರಿನಲ್ಲಿ ಆಯೋಜಿಸುವ ಮೂಲಕ ಸಕಾರಾತ್ಮಕ ಸಂದೇಶ ರವಾನಿಸಿದೆ. ಕರ್ನಾಟಕ ಡಿಜಿಟಲ್ ಎಕಾನಮಿ ಮಿಷನ್ ಉದ್ದಿಮೆಗಳಿಗೆ ನೀಡುತ್ತಿರುವ ನೆರವಿನ ವ್ಯವಸ್ಥೆ ಬೇರೆಲ್ಲೂ ಇಲ್ಲ. ಸೆಮಿಕಂಡಕ್ಟರ್ ವಲಯದಲ್ಲಿ ಹೂಡಿಕೆಗೆ ವಿಪುಲ ಅವಕಾಶಗಳಿದ್ದು, ಸ್ಥಳೀಯ ಅಭಿವೃದ್ಧಿಗೆ ಬಳಸಿಕೊಳ್ಳಲಾಗುವುದು'.

'ಶಿಕ್ಷಣ ವಲಯದಲ್ಲೂ ವ್ಯಾಪಕ ಸುಧಾರಣೆಗಳನ್ನು ಮಾಡಲಾಗುತ್ತಿದೆ. ಹಾಗಾಗಿ ಉದ್ದಿಮೆಗಳಿಗೆ ನುರಿತ ಕೌಶಲಪೂರ್ಣ ಮಾನವ ಸಂಪನ್ಮೂಲ ಒದಗಿಸಲು ಯಾವುದೇ ಅಡೆತಡೆಗಳಿಲ್ಲ' ಎಂದರು.

ಕೇಂದ್ರ ಸಚಿವ ರಾಜೀವ್ ಚಂದ್ರಶೇಖರ್ ಇದ್ದರು.

ನಾಳೆ 'ಕಾಯಕಯೋಗಿ' ಪ್ರಶಸ್ತಿ ಪ್ರದಾನ

ಬೆಂಗಳೂರು: ಕರ್ನಾಟಕ ರಾಜ್ಯ ವೈಜ್ಞಾನಿಕ ಸಂಶೋಧನಾ ಪರಿಷತ್ತು ವತಿಯಿಂದ ಕಾಯಕ ದಿನದ ಅಂಗವಾಗಿ ರಾಜ್ಯಮಟ್ಟದ 'ಕಾಯಕಯೋಗಿ ಪ್ರಶಸ್ತಿ' ಪ್ರದಾನ ಕಾರ್ಯಕ್ರಮವನ್ನು ಮೇ 1ರಂದು ಬೆಳಿಗ್ಗೆ 10.30ಕ್ಕೆ ವಿಜಯನಗರದ ಬಸವೇಶ್ವರ ಸುಜ್ಞಾನ ಮಂಟಪದಲ್ಲಿ ಹಮ್ಮಿಕೊಳ್ಳಲಾಗಿದೆ.

ಶುಕ್ರವಾರ ಇಲ್ಲಿ ಸುದ್ದಿಗೋಷ್ಠಿಯಲ್ಲಿ ಮಾತನಾಡಿದ ಪರಿಷತ್ತಿನ ಅಧ್ಯಕ್ಷ ಹುಲಿಕಲ್ ನಟರಾಜ್,'ಸಾಣೆಹಳ್ಳಿಯ ತರಳಬಾಳು ಮಠದ ಶಿವಾಚಾರ್ಯ ಸ್ವಾಮೀಜಿ ಸಾನಿಧ್ಯದಲ್ಲಿ ನಡೆಯುವ ಕಾರ್ಯಕ್ರಮವನ್ನು ವಿಜ್ಞಾನಿ ಎ.ಎಸ್. ಕಿರಣ್‌ಕುಮಾರ್ ಉದ್ಘಾಟಿಸಲಿದ್ದಾರೆ' ಎಂದರು.

ಸುಭಾಶಿಶ್ ಚೌಧರಿಗೆ ಪ್ರಶಸ್ತಿ

ಬೆಂಗಳೂರು: ಐಐಟಿ–ಬಾಂಬೆ ನಿರ್ದೇಶಕ ಪ್ರೊ.ಸುಭಾಶಿಶ್ ಚೌಧರಿ ಅವರಿಗೆ ಎಸಿಸಿಎಸ್–ಸಿಡಿಎಸಿ ಫೌಂಡೇಷನ್ ನೀಡುವ 2021ನೇ ಸಾಲಿನ ವಾರ್ಷಿಕ ಪ್ರಶಸ್ತಿ ಲಭಿಸಿದೆ.

ಬೆಂಗಳೂರಿನಲ್ಲಿಯ ಕಾರ್ಯಕ್ರಮದಲ್ಲಿ ಪ್ರೊ.ವಿಶ್ವನಾಥ್ ಚಟರ್ಜಿ ಅವರು ಪ್ರಶಸ್ತಿ ಪ್ರದಾನ ಮಾಡಿದರು.

ಕಮ್ಯುನಿಕೇಷನ್ಸ್, ಅಡ್ವಾನ್ಸಡ್ ಕಂಪ್ಯೂಟಿಂಗ್ ಕ್ಷೇತ್ರದ ಸಂಶೋಧಕರಿಗೆ ನೀಡುವ ಈ ಪ್ರಶಸ್ತಿಯು ₹1 ಲಕ್ಷ ನಗದು ಹಾಗೂ ಸ್ಮರಣಿಕೆ ಒಳಗೊಂಡಿದೆ.

ಎಫ್‌ಸಿಐನಲ್ಲೇ ಉಳಿದ 3,760 ಕ್ವಿಂಟಲ್ ಅಕ್ಕಿ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಆದ್ಯತಾ ವಲಯದ ಕುಟುಂಬಗಳ (ಪಿಎಚ್‌ಎಚ್) ಪಡಿತರ ಚೀಟಿದಾರರಿಗೆ ವಿತರಿಸಲು ರಾಜ್ಯ ಸರ್ಕಾರ ಖರೀದಿಸಿರುವ 3,760 ಕ್ವಿಂಟಲ್ ಅಕ್ಕಿಯನ್ನು ಕರ್ನಾಟಕ ರಾಜ್ಯ ಆಹಾರ ಮತ್ತು ನಾಗರಿಕ ಸರಬರಾಜು ನಿಗಮದ (ಕೆಎಫ್‌ಸಿಎಸ್‌ಸಿ) ಬೆಂಗಳೂರು ಉತ್ತರ ಜಿಲ್ಲೆಯ ಅಧಿಕಾರಿಗಳು ತಿಂಗಳ ಕೊನೆಯಾದರೂ ಎತ್ತುವಳಿ ಮಾಡಿ, ಸಾಗಿಸಿಲ್ಲ.

ಆಹಾರ ಮತ್ತು ನಾಗರಿಕರ ಸರಬರಾಜು ಇಲಾಖೆಯ ಬೆಂಗಳೂರು ಪೂರ್ವ, ಬೆಂಗಳೂರು ಪಶ್ಚಿಮ ಮತ್ತು ಬೆಂಗಳೂರು ಉತ್ತರ ಉಪ ನಿರ್ದೇಶಕರ ಕಚೇರಿ ವ್ಯಾಪ್ತಿಯಲ್ಲಿ ಪಿಎಚ್‌ಎಚ್ ಕುಟುಂಬಗಳಿಗೆ ರಾಜ್ಯ ಸರ್ಕಾರದ ವತಿಯಿಂದ ತಲಾ ಒಂದು ಕೆ.ಜಿ. ಅಕ್ಕಿಯನ್ನು ಹೆಚ್ಚುವರಿಯಾಗಿ ವಿತರಿಸಲು ಭಾರತೀಯ ಆಹಾರ ನಿಗಮದಿಂದ (ಎಫ್‌ಸಿಐ) ಖರೀದಿಸಲಾಗಿತ್ತು. ತಿಂಗಳ ಕೊನೆಯ ದಿನದವರೆಗೂ ಅಕ್ಕಿ ಎಫ್‌ಸಿಐ ಬಳಿಯೇ ಉಳಿದಿದೆ.

ರಾಜ್ಯದಾದ್ಯಂತ ಎಲ್ಲ ಪಿಎಚ್‌ಎಚ್ ಕುಟುಂಬಗಳಿಗೆ ತಲಾ ಒಂದು ಕೆ.ಜಿ. ಅಕ್ಕಿಯನ್ನು ರಾಜ್ಯ ಸರ್ಕಾರದಿಂದ ಹೆಚ್ಚುವರಿಯಾಗಿ ವಿತರಿಸಲಾಗುತ್ತಿದೆ. ಇದಕ್ಕಾಗಿ ಎಫ್‌ಸಿಐನಿಂದ ಇ–ಹರಾಜಿನ ಮೂಲಕ ಮಾರುಕಟ್ಟೆ ದರದಲ್ಲಿ ಅಕ್ಕಿ ಖರೀದಿಸಲಾಗುತ್ತಿದೆ. ಕೆಎಫ್‌ಸಿಎ-ಸ್‌ಸಿಯ ಬೆಂಗಳೂರು ಉತ್ತರ ಜಿಲ್ಲಾ ಕಚೇರಿ ವ್ಯಾಪ್ತಿಯಲ್ಲಿ ವಿತರಣೆಗಾಗಿ 3,760 ಕ್ವಿಂಟಲ್ ಅಕ್ಕಿಯನ್ನು ಖರೀದಿಸಿ, ಏಪ್ರಿಲ್ 11ರಂದು ಎಫ್‌ಸಿಐಗೆ ಹಣ ಪಾವತಿಸಲಾಗಿದೆ. ಏ.15ಕ್ಕೂ ಮೊದಲೇ ಎತ್ತುವಳಿ ಆದೇಶ ಪಡೆಯದೇ ಇರುವುದರಿಂದ ಅಕ್ಕಿ ಅಲ್ಲಿಯೇ ಉಳಿದಿದೆ ಎಂದು ಇಲಾಖೆಯ ಮೂಲಗಳು ತಿಳಿಸಿವೆ.

ರಾಜ್ಯದ ಇತರ ಎಲ್ಲ ಜಿಲ್ಲೆಗಳಲ್ಲೂ ಹೆಚ್ಚುವರಿ ವಿತರಣೆಗೆ ಖರೀದಿಸಿದ್ದ ಅಕ್ಕಿಯನ್ನು ಎತ್ತುವಳಿ ಮಾಡಿ, ಪಡಿತರ ಚೀಟಿದಾರರಿಗೆ ನೀಡಲಾಗಿದೆ. ಆದರೆ, ಬೆಂಗಳೂರು ಉತ್ತರ ವ್ಯಾಪ್ತಿಯಲ್ಲಿ ಶುಕ್ರವಾರದವರೆಗೂ (ಏಪ್ರಿಲ್ 29) ಈ ಅಕ್ಕಿಯನ್ನು ಎತ್ತುವಳಿ ಮಾಡಿಲ್ಲ. ಎತ್ತುವಳಿಗೆ ಎಫ್‌ಸಿಐನಿಂದ ಅಕ್ಕಿ ಬಿಡುಗಡೆ ಆದೇಶವನ್ನೂ (ಆರ್‌ಒ) ಪಡೆದಿಲ್ಲ ಎಂಬ ಮಾಹಿತಿ ಲಭಿಸಿದೆ.

ಕೊನೆಯ ದಿನ ಸಾಗಣೆಗೆ ಸಿದ್ಧತೆ: ಎಫ್‌ಸಿಐ ಬಳಿಯೇ ಉಳಿದಿರುವ ಅಕ್ಕಿಯನ್ನು ತಿಂಗಳ ಕೊನೆಯ ದಿನ ಸಾಗಿಸಲು ಮುಂದಾಗಿರುವ ಕೆಫ್‌ಸಿಎಸ್‌ಸಿ ಅಧಿಕಾರಿಗಳು, ಶುಕ್ರವಾರ ಸಂಜೆ ಒಪ್ಪಿಗೆ ಪಡೆದುಕೊಂಡಿದ್ದಾರೆ. ಆಹಾರ ಇಲಾಖೆಯ ಅಧಿಕಾರಿಗಳ ಮಧ್ಯಸ್ಥಿಕೆಯಿಂದ ಎಫ್‌ಸಿಐ ಅಧಿಕಾರಿಗಳು ಅಕ್ಕಿ ಬಿಡುಗಡೆಗೆ ಒಪ್ಪಿಗೆ ಸೂಚಿಸಿದ್ದಾರೆ.

ಶನಿವಾರ ಅಷ್ಟೂ ಪ್ರಮಾಣದ ಅಕ್ಕಿಯನ್ನು ಎಫ್‌ಸಿಐ ಗೋದಾಮಿನಿಂದ ಕೆಎಫ್‌ಸಿಎಸ್‌ಸಿ ಬೆಂಗಳೂರು ಉತ್ತರ ವ್ಯಾಪ್ತಿಯ ಸಗಟು ವಿತರಣಾ ಕೇಂದ್ರಗಳಿಗೆ ಸಾಗಿಸಬೇಕು. ಅದರ ಜತೆಯಲ್ಲೇ ನ್ಯಾಯಬೆಲೆ ಅಂಗಡಿಗಳಿಗೂ ತಲುಪಿಸಬೇಕು. ಕೊನೆಯ ದಿನದ ಈ ಕಸರತ್ತು ಬೃಹತ್ ಪ್ರಮಾಣದ ಅಕ್ಕಿ ಕಾಳಸಂತೆ ಪಾಲಾಗುವುದಕ್ಕೆ ಅವಕಾಶ ಕಲ್ಪಿಸಬಹುದು ಎಂಬ ಅನುಮಾನ ಆಹಾರ ಇಲಾಖೆಯಲ್ಲೇ ವ್ಯಕ್ತವಾಗಿದೆ.

ಈ ಕುರಿತು 'ಪ್ರಜಾವಾಣಿ'ಗೆ ಪ್ರತಿಕ್ರಿಯಿಸಿದ ಆಹಾರ ಮತ್ತು ನಾಗರಿಕ ಸರಬರಾಜು ಇಲಾಖೆ ಆಯುಕ್ತೆ ಎಂ. ಕನಗವಲ್ಲಿ, 'ಕೊನೆಯ ದಿನದವರೆಗೂ ಅಕ್ಕಿ ಸಾಗಿಸದೇ ಇರುವುದು ತಪ್ಪು. ಈಗ ಸಾಗಣೆ ಮಾಡುವಾಗ ಅಕ್ರಮಕ್ಕೆ ಅವಕಾಶ ಆಗದಂತೆ ಕಟ್ಟೆಚ್ಚರ ವಹಿಸಲು ಇಲಾಖೆಯ ಅಧಿಕಾರಿಗಳಿಗೆ ನಿರ್ದೇಶನ ನೀಡಲಾಗಿದೆ' ಎಂದರು.

ಬೆಂಗಳೂರು ಅಕ್ಕಿ ರಾಮನಗರದಲ್ಲಿ ಪತ್ತೆ

ಬೆಂಗಳೂರು ನಗರದಲ್ಲಿ ಪಡಿತರ ಚೀಟಿದಾರರಿಗೆ ಉಚಿತವಾಗಿ ವಿತರಿಸಲು ಪೂರೈಸಿದ್ದ 210 ಕ್ವಿಂಟಲ್ ಅಕ್ಕಿಯನ್ನು ಕಾಳಸಂತೆಗೆ ಕೊಂಡೊಯ್ಯುತ್ತಿದ್ದ ಲಾರಿಯೊಂದನ್ನು ರಾಮನಗರ ನಗರ ಠಾಣೆ ಪೊಲೀಸರು ಏಪ್ರಿಲ್ 22ರಂದು ವಶಪಡಿಸಿಕೊಂಡಿದ್ದಾರೆ.

ಸಂದೀಪ ರೆಡ್ಡಿ ಮತ್ತು ಕೇಶವ ಎಂಬುವರನ್ನು ಈ ಪ್ರಕರಣದಲ್ಲಿ ಬಂಧಿಸಲಾಗಿದೆ. ಬೆಂಗಳೂರು ನಗರ ಮತ್ತು ಚಿಕ್ಕಬಳ್ಳಾಪುರ ಜಿಲ್ಲೆಗಳ ವ್ಯಾಪ್ತಿಯಲ್ಲಿ ಪಡಿತರ ಚೀಟಿದಾರರಿಗೆ ವಿತರಿಸುವ ಆಹಾರ ಧಾನ್ಯಗಳ ಸಗಟು ಸಾಗಾಣಿಕೆ ಗುತ್ತಿಗೆ ಹೊಂದಿರುವ ವಿನಾಯಕ ಟ್ರಾನ್ಸ್‌ಪೋರ್ಟ್ ಕಂಪನಿಯ ಮಾಲೀಕ ಕೆ.ಎಸ್. ವಿಶ್ವನಾಥ್ ಅವರಿಗೆ ಸೇರಿದ ಕೆಎ–01 ಎಡಿ–8761 ನೋಂದಣಿ ಸಂಖ್ಯೆಯ ಲಾರಿಯಲ್ಲೇ ಅಕ್ಕಿ ಕಳ್ಳಸಾಗಣೆ ಮಾಡುತ್ತಿರುವುದು ಪತ್ತೆಯಾಗಿದೆ.

ಬುಕ್ ಬ್ರಹ್ಮ ಸ್ವಾತಂತ್ರ್ಯೋತ್ಸವ ಕಥಾ ಸ್ಪರ್ಧೆ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಬುಕ್ ಬ್ರಹ್ಮ ಸಂಸ್ಥೆಯು ತನ್ನ ಮೂರನೇ ವಾರ್ಷಿಕೋತ್ಸವ ಹಾಗೂ 75ನೇ ಸ್ವಾತಂತ್ರ್ಯೋತ್ಸವದ ಅಂಗವಾಗಿ 'ಬುಕ್ ಬ್ರಹ್ಮ ಸ್ವಾತಂತ್ರ್ಯೋತ್ಸವ ಕಥಾ ಸ್ಪರ್ಧೆ–2022' ಹಮ್ಮಿಕೊಂಡಿದೆ. ಇದಕ್ಕಾಗಿ ಆಸಕ್ತರಿಂದ ಕಥೆಗಳನ್ನು ಆಹ್ವಾನಿಸಿದೆ.

'ಮೊದಲ ಬಹುಮಾನ ₹50 ಸಾವಿರ, ದ್ವಿತೀಯ ಹಾಗೂ ತೃತೀಯ ಸ್ಥಾನ ಪಡೆಯುವ ಕಥೆಗಳಿಗೆ ಕ್ರಮವಾಗಿ ₹25 ಸಾವಿರ ಹಾಗೂ ₹15 ಸಾವಿರ ಬಹುಮಾನ ದೊರೆಯಲಿದೆ. ಆಯ್ದ ಇತರ ಮೂರು ಕಥೆಗಳಿಗೆ ತಲಾ ₹5 ಸಾವಿರ ಸಮಾಧಾನಕರ ಬಹುಮಾನ ನೀಡಲಾಗುತ್ತದೆ' ಎಂದು ಪ್ರಕಟಣೆ ತಿಳಿಸಿದೆ.

'ಕಥೆಯು ಸ್ವತಂತ್ರ ಹಾಗೂ ಅಪ್ರಕಟಿತವಾಗಿರಬೇಕು. 5 ಸಾವಿರ ಪದಗಳಿಗೆ ಮೀರದಂತಿರಬೇಕು. ಎಲ್ಲ ವಯೋಮಾನದವರೂ ಸ್ಪರ್ಧೆಯಲ್ಲಿ ಪಾಲ್ಗೊಳ್ಳಬಹುದು. 'ಆಸಕ್ತರು ಜೂನ್ 15ರೊಳಗೆ ಕಥೆಗಳನ್ನು ಕಳುಹಿಸಬೇಕು. ಅಂತಿಮ ಸುತ್ತಿಗೆ ಆಯ್ಕೆಯಾಗುವ 20 ಕಥೆಗಳ ಪಟ್ಟಿಯನ್ನು ಆಗಸ್ಟ್ 5ರಂದು ಪ್ರಕಟಿಸಲಾಗುತ್ತದೆ. ಇವುಗಳನ್ನು 'ಬುಕ್ ಬ್ರಹ್ಮ' ವೆಬ್‌ಸೈಟ್, ಪುಸ್ತಕ, ಇ-ಪುಸ್ತಕ ಹಾಗೂ ಆಡಿಯೊ ಪುಸ್ತಕದ ರೂಪದಲ್ಲಿ ಪ್ರಕಟಿಸಲಾಗುತ್ತದೆ. ಈ ಪೈಕಿ ಬಹುಮಾನ ಪಡೆಯದಿರುವ 14 ಕಥೆಗಳಿಗೆ ತಲಾ ₹1 ಸಾವಿರ ಗೌರವ ಧನ ನೀಡಲಾಗುತ್ತದೆ. ಆಗಸ್ಟ್ 15ರಂದು ವಿಜೇತ ಕಥೆಗಳನ್ನು ಘೋಷಿಸಲಾಗುತ್ತದೆ. ಅದೇ ದಿನ ಪ್ರಶಸ್ತಿ ಪ್ರದಾನ ಸಮಾರಂಭವೂ ನಿಗದಿಯಾಗಿದೆ. ಒಬ್ಬರು ಒಂದು ಕಥೆಯನ್ನಷ್ಟೇ ಕಳುಹಿಸಬೇಕು' ಎಂದು ವಿವರಿಸಿದೆ.

ಕಥೆಗಳನ್ನು ಇ-ಮೇಲ್ BBKathaSpardhe2022@bookbrahma.com ಅಥವಾ ಪ್ರಧಾನ ಸಂಪಾದಕರು, ಬುಕ್ ಬ್ರಹ್ಮ ಕನ್ನಡ, 3ನೇ ಮಹಡಿ, ಆರ್.ಕೆ.ಕಾಂಪ್ಲೆಕ್ಸ್, ಕೆಎಸ್‌ಎಸ್‌ಐಡಿಸಿ ಕಾಂಪೌಂಡ್, ಎಲೆಕ್ಟ್ರಾನಿಕ್‌ಸಿಟಿ ಮೊದಲ ಹಂತ, ಬೆಂಗಳೂರು-560100ಗೆ ಕಳುಹಿಸಿಕೊಡಬೇಕು.

ಹೆಚ್ಚಿನ ಮಾಹಿತಿಗೆ: 78926 08118

ಕಲ್ಲಿದ್ದಲು ಸಾಗಿಸಲು 657 ಪ್ರಯಾಣಿಕ ರೈಲು ರದ್ದು

ಒಂದನೇ ಪುಟದಿಂದ...

'ಇದು ಏಪ್ರಿಲ್ 28ರ ರಾತ್ರಿಯಿಂದ ಮೇ ಮೂರನೇ ವಾರದವರೆಗೆ ಅನ್ವಯವಾಗಲಿದೆ. ದಟ್ಟಣೆ ಇಲ್ಲದೇ ಇರುವ ಮಾರ್ಗಗಲ್ಲಿನ ರೈಲುಗಳನ್ನು ಮಾತ್ರ ರದ್ದು ಪಡಿಸಲಾಗಿದೆ' ಎಂದು ಹೇಳಿದ್ದಾರೆ.

'ಗುರುವಾರ 427 ರೈಲುಗಳಿಗೆ 16.2 ಲಕ್ಷ ಟನ್ ಕಲ್ಲಿದ್ದಲು ಭರ್ತಿ ಮಾಡಲಾಗಿದೆ' ಎಂದು ಅವರು ಮಾಹಿತಿ ನೀಡಿದ್ದಾರೆ.

ಉಷ್ಣ ವಿದ್ಯುತ್ ಸ್ಥಾವರಗಳಿಗೆ ಕಲ್ಲಿದ್ದಲನ್ನು ತ್ವರಿತವಾಗಿ ಪೂರೈಕೆ ಮಾಡಲು ಪ್ರತಿದಿನ 422 ರೈಲುಗಳ ಅವಶ್ಯಕತೆ ಇದೆ. ಆ ರೈಲುಗಳ ವ್ಯವಸ್ಥೆ ಮಾಡಿ ಎಂದು ಕಲ್ಲಿದ್ದಲು ಸಚಿವಾಲಯವು, ರೈಲ್ವೆ ಸಚಿವಾಲಯಕ್ಕೆ ಈ ವಾರದ ಆರಂಭದಲ್ಲಿ ಮನವಿ ಮಾಡಿಕೊಂಡಿತ್ತು.

ವಿದ್ಯುತ್ ಬೇಡಿಕೆ ಏರಿಕೆ: ದೇಶದಲ್ಲಿ ಬಿಸಿಗಾಳಿಯ ಪರಿಣಾಮವಾಗಿ ಫ್ಯಾನ್ ಮತ್ತು ಹವಾನಿಯಂತ್ರಣ ವ್ಯವಸ್ಥೆಯ ಬಳಕೆ ವಿಪರೀತ ಪ್ರಮಾಣದಲ್ಲಿ ಏರಿಕೆಯಾಗಿದೆ. ಇದರಿಂದ ಏಪ್ರಿಲ್ ತಿಂಗಳೊಂದರಲ್ಲೇ ವಿದ್ಯುತ್ ಬೇಡಿಕೆಯಲ್ಲಿ ಶೇ 12ರಷ್ಟು ಏರಿಕೆಯಾಗಿದೆ ಎಂದು ಇಂಧನ ಸಚಿವಾಲಯ ಹೇಳಿದೆ.



ನವದೆಹಲಿಯಲ್ಲಿ ಶುಕ್ರವಾರ ಸಿಖ್ ನಿಯೋಗವು ಪ್ರಧಾನಿ ನರೇಂದ್ರ ಮೋದಿ ಅವರನ್ನು ಭೇಟಿ ಮಾಡಿತು —ಪಿಟಿಐ ಚಿತ್ರ

'ಸಿಖ್ಖರ ಕೊಡುಗೆಗಳಿಗೆ ಭಾರತ ಕೃತಜ್ಞ'

ನವದೆಹಲಿ (ಪಿಟಿಐ): 'ಸಿಖ್ಖರ ಕೊಡುಗೆಗಳಿಗೆ ಭಾರತ ಕೃತಜ್ಞವಾಗಿರುತ್ತದೆ. ಭಾರತ ಹಾಗೂ ಇತರ ದೇಶಗಳ ನಡುವಿನ ಸಂಬಂಧಗಳು ರೂಪುಗೊಳ್ಳುವಲ್ಲಿ ಸಿಖ್ ಸಮುದಾಯ ಬಲವಾದ ಕೊಂಡಿಯಾಗಿದೆ' ಎಂದು ಪ್ರಧಾನಿ ನರೇಂದ್ರ ಮೋದಿ ಅವರು ಹೇಳಿದರು.

ಶುಕ್ರವಾರ ತಮ್ಮ ನಿವಾಸದಲ್ಲಿ ಸಿಖ್ ಸಮಾಜದ ವಿವಿಧ ಕ್ಷೇತ್ರಗಳ ಸದಸ್ಯರನ್ನು ಉದ್ದೇಶಿಸಿ ಮಾತನಾಡಿದ ಮೋದಿ, 'ಸ್ವಾತಂತ್ರ್ಯ ಹೋರಾಟದಲ್ಲಿ ಹಾಗೂ ಸ್ವಾತಂತ್ರ್ಯಾನಂತರದಲ್ಲಿ ಸಿಖ್ಖರು ನೀಡಿದ ಕೊಡುಗೆಗಳಿಗೆ ದೇಶ ಕೃತಜ್ಞವಾಗಿದೆ. ಸಿಖ್ ಸಂಪ್ರದಾಯವು ನಿಜಾರ್ಥದಲ್ಲೂ ಒಂದು ಭಾರತ, ಶ್ರೇಷ್ಠ ಭಾರತದ ಜೀವಂತ ಸಂಪ್ರದಾಯವಾಗಿದೆ' ಎಂದು ಹೇಳಿದರು.

'ವಿದೇಶಕ್ಕೆ ವಲಸೆ ಹೋಗಿರುವ ಎಲ್ಲ ಸಿಖ್ ಸಮುದಾಯದವರು ದೇಶದ ಬಲವಾದ ಧ್ವನಿಯಾಗಿದ್ದಾರೆ. ಅವರೆಲ್ಲರೂ ಭಾರತ ಮಾತೆಯ ಹೆಮ್ಮೆಯ ಗುರುತನ್ನು ಪ್ರತಿನಿಧಿಸುತ್ತಾರೆ.' ಎಂದು ಮೋದಿ ತಿಳಿಸಿದರು.

ರುದ್ರಗೌಡ ಅವರ ಊರು ಸೊನ್ನ ಗ್ರಾಮದಲ್ಲಿ ಜನರೂಢಿಯ ಮಾತು

'ಸರ್ಕಾರಿ ನೌಕರಿ ಸಾಹುಕಾರನ ಜೇಬಿನಲ್ಲಿ..'

• ಸಂತೋಷ ಈ. ಚಿನಗುಡಿ

ಪ್ರಜಾವಾಣಿ ವಿಶೇಷ

ಸೊನ್ನ (ಕಲಬುರಗಿ ಜಿಲ್ಲೆ): 'ನಮ್ಮೂರಿನ ಮಂದಿಗೆ ಸರ್ಕಾರಿ ನೌಕರಿ ಅಂದರ ಕಿಸೆದಾಗಿನ ಮಾತು. ಇಲ್ಲಿ ಮಾತ್ರ ವಲ್ಲ; ಅಫಜಲಪುರ ಪಟ್ಟಣದಾಗ ಯಾರ ನ್ನಾದರೂ ಸರ್ಕಾರಿ ನೌಕರಿ ಎಲ್ಲಿ ಸಿಗತಾವ ಅಂತ ಕೇಳಿ ನೋಡ್ರಿ. ಸೊನ್ನ ಸಾಹುಕಾರನ ಕಿಸೆದಾಗ ಐತಿ ಅಂತಾರ...'



ರುದ್ರಗೌಡ ಡಿ. ಪಾಟೀಲ

ಅಫಜಲಪುರ ತಾಲ್ಲೂಕಿನ ಸೊನ್ನ ಗ್ರಾಮದಲ್ಲಿ ಜನರೂಢಿ ಮಾತಿದು. ಪಿಎಸ್‌ಐ ನೇಮಕಾತಿ ಪರೀಕ್ಷೆಯಲ್ಲಿ ನಡೆದಿದೆ ಎನ್ನಲಾದ ಹಗರಣದಲ್ಲಿ ಪ್ರಮುಖ ಪಾತ್ರ ವಹಿಸಿದ ಆರೋಪ ಎದುರಿಸುತ್ತಿರುವ ರುದ್ರಗೌಡ ಡಿ. ಪಾಟೀಲ ಅವರ ಸ್ವಂತ ಊರು ಇದು.

'ಪ್ರಜಾವಾಣಿ' ವರದಿಗಾರ ಈ ಗ್ರಾಮಕ್ಕೆ ಭೇಟಿ ನೀಡಿದಾಗ, ಗ್ರಾಮಸ್ಥರು ಕೆಲ ಆಸಕ್ತಿದಾಯಕ ವಿಷಯಗಳನ್ನು ಹೊರಹಾಕಿದರು.

ಅಫಜಲಪುರದ ಬಸವೇಶ್ವರ ವೃತ್ತದಲ್ಲಿ ರುದ್ರಗೌಡ ಅವರ 20 ಅಡಿಯ ದೊಡ್ಡ ಕಟೌಟ್ ಇನ್ನೂ ರಾರಾಜಿಸುತ್ತಿದೆ. ಈ ಹಿಂದೆ ನಡೆದ ಸಾಮೂಹಿಕ ವಿವಾಹ, ಜಾತ್ರೆ, ಕ್ರೀಡೆಗಳ ಪೋಸ್ಟರ್ ಬ್ಯಾನರ್‌ಗಳು ಸುತ್ತಲಿನ ಹಳ್ಳಿಗಳಲ್ಲೂ ಇವೆ. ಸ್ಪರ್ಧೆಯಲ್ಲಿ ಗೆದ್ದವರಿಗೆ ಚಿನ್ನ, ಹಣದ ರೂಪದ ಬಹುಮಾನ ನೀಡಿದ ಯುವನಾಯಕ ಎಂದು ಅದರಲ್ಲಿ ಬರೆಯಲಾಗಿದೆ.

ಸಿಐಡಿ ವಶದಲ್ಲಿರುವ ರುದ್ರಗೌಡ ಹಾಗೂ ಅವರ ಅಣ್ಣ ಮಹಾಂತೇಶ ಅವರ ರಾಜಕೀಯ ಜೀವನ ಇಲ್ಲಿಂದಲೇ ಆರಂಭವಾಗಿದೆ. 2000ನೇ ಇಸ್ವಿ ವೇಳೆಗೆ ಅಣ್ಣ– ತಮ್ಮ ಜೆಡಿಎಸ್‌ನಲ್ಲಿ ಗುರುತಿಸಿಕೊಂಡಿದ್ದರು. ಮಹಾಂತೇಶ ಮೂರು ಬಾರಿ ಜಿಲ್ಲಾ ಪಂಚಾಯಿತಿ ಚುನಾವಣೆಗೆ ಸ್ಪರ್ಧಿಸಿ ಸೋತಿದ್ದಾರೆ. 2000 ಹಾಗೂ 2005ರಲ್ಲಿ ಜೆಡಿಎಸ್‌ನಿಂದ, ನಂತರ ಕಾಂಗ್ರೆಸ್ ಸೇರಿ 2010ರಲ್ಲಿ ಕರಜಗಿ ಕ್ಷೇತ್ರದಿಂದ ಕಾಂಗ್ರೆಸ್ ಅಭ್ಯರ್ಥಿಯಾಗಿದ್ದರು. ರುದ್ರಗೌಡ ಕೂಡ ಒಮ್ಮೆ ಅಫಜಲಪುರ ತಾಲ್ಲೂಕು ಪಂಚಾಯಿತಿಯ ಬಂಕಲಗಾ ಕ್ಷೇತ್ರದಲ್ಲಿ ಸೋತಿದ್ದಾರೆ. 2014–15ರಲ್ಲಿ ಗೌರ (ಬಿ) ಗ್ರಾಮ ಪಂಚಾಯಿತಿಗೆ ಒಂದು ಅವಧಿಗೆ ಅಧ್ಯಕ್ಷರಾಗಿದ್ದರು.

ಚುನಾವಣೆಗಳಲ್ಲಿ ಪದೇಪದೇ ಸೋಲಾಗಿದ್ದರಿಂದ ಸಾಕಷ್ಟು ಸಾಲ ಮಾಡಿದ್ದರು. ಅದನ್ನು ತೀರಿಸಲು ಹಿರಿಯರಿಂದ ಬಂದ ಆಸ್ತಿ ಮಾರಿದ್ದಾರೆ. ಇದಾದ ಬಳಿಕ ಕೇವಲ ಎಂಟು ವರ್ಷಗಳ ಅವಧಿಯಲ್ಲಿ ವಿಧಾನಸಭೆ ಚುನಾವಣೆಗೆ ಸ್ಪರ್ಧೆಯೊಡ್ಡುವ ಮಟ್ಟಕ್ಕೆ ಬೆಳೆದಿದ್ದಾರೆ. ಸದ್ಯ ಸೊನ್ನ ಗ್ರಾಮದಲ್ಲಿ ಒಂದು ಹಳೆಯ ಮನೆ, ಒಂದಷ್ಟು ಹೊಲ ಇದೆ. ಅಫಜಲಪುರದಲ್ಲಿ ಒಂದು, ಕಲಬುರಗಿಯಲ್ಲಿ ಎರಡು ಮನೆಗಳಿವೆ ಎಂದು ಕೆಲವರು ಹೇಳಿದರು.

ಅಫಜಲಪುರ ಸಮೀಪದ ಮಲ್ಲಾಬಾದ್ ಗ್ರಾಮದಲ್ಲಿ ಮಹಾಂತೇಶ ಅವರು ಜ್ಞಾನಭಾರತಿ ಶಿಕ್ಷಣ ಸಂಸ್ಥೆ ಆರಂಭಿಸಿದ್ದಾರೆ. ಸಿದ್ಧಾರ್ಥ ಪ್ರೌಢಶಾಲೆ, ದೇವರಾಜ ಅರಸು ಪದವಿಪೂರ್ವ ಕಾಲೇಜು, ಮಹಾಲಕ್ಷ್ಮಿ ಪ್ಯಾರಾಮೆಡಿಕಲ್ ಕಾಲೇಜು, ಮಹಾಂತೇಶಗೌಡ ಪಾಟೀಲ ನರ್ಸಿಂಗ್ ಸ್ಕೂಲ್ ಇಲ್ಲಿವೆ.

'ನೀವೇನ್ ಸಿಐಡಿ ಆಫೀಸಿನವರಾ?'

ಸೊನ್ನ ಗ್ರಾಮದಲ್ಲಿ ಯಾರೇ ಹೊಸದಾಗಿ ಬಂದರೂ ಜನ ಅನುಮಾನದಿಂದಲೇ ನೋಡುತ್ತಿದ್ದಾರೆ. 'ಗೌಡರ ಮನೆತನ ಹೇಗೆ' ಎಂದು ಕೇಳಿದ ತಕ್ಷಣ 'ನೀವೇನ್ ಸಿಐಡಿ ಆಫೀಸಿನವರಾ' ಎಂದು ಮರುಪ್ರಶ್ನೆ ಮಾಡಿದರು.

ಸೊನ್ನದಲ್ಲಿನ ಅವರ ಹಳೆಯ ಮನೆಯ ಸುತ್ತ ಕೆಲವರು ಗುಂಪಾಗಿ ಕುಳಿತಿದ್ದರು.

'ಈ ಸಾರಿ ಎಂಎಲ್‌ಎ ಆಗುವ ಲೆವಲ್‌ಗೆ ರುದ್ರಗೌಡ ವರ್ಚಸ್ಸು ಬೆಳೆಸಿಕೊಂಡಿದ್ದಾರೆ. ಅದಕ್ಕಿಂತ ಹೆಚ್ಚಾಗಿ ಯುವಕರ ದೊಡ್ಡ ಗುಂಪೇ ಅವರೊಂದಿಗಿದೆ. ಈ ಅಕ್ರಮದಲ್ಲಿ ದೊಡ್ಡ ದೊಡ್ಡ ರಾಜಕಾರಣಿಗಳೂ ಇರಬಹುದು. ರುದ್ರಗೌಡರು ಎಲೆಕ್ಷನ್‌ಗೆ ನಿಲ್ಲಬಾರದು ಎಂದು ಉಪಾಯ ಮಾಡಿ ಹೀಗೆಲ್ಲ ಮಾಡಿಸಿದ್ದಾರೆ' ಎಂದು ಕೆಲವರು ಹೇಳಿದರು.

ಭಾನುವಾರ 36° 23° | ಸೋಮವಾರ 36° 23° | ಮಂಗಳವಾರ 36° 23°

ಹವಾಮಾನ ಮುನ್ಸೂಚನೆ
ಭಾಗಶಃ ಮೋಡ ಮುಸುಕಿದ ವಾತಾವರಣ ಇರಲಿದೆ. ತುಂತುರು ಮಳೆ ಆಗುವ ಸಾಧ್ಯತೆ ಇದೆ

ಶನಿವಾರದ ಉಷ್ಣಾಂಶ 36° ಗರಿಷ್ಠ 23° ಕನಿಷ್ಠ

ಬೆಂಗಳೂರು ನಗರ

ಸಂಕ್ಷಿಪ್ತ ಸುದ್ದಿ

ವಿದ್ಯುತ್ ಪ್ರತಿನಿಧಿ: ಪ್ರೋತ್ಸಾಹಧನ ಹೆಚ್ಚಳಕ್ಕೆ ಸಮಿತಿ

ಬೆಂಗಳೂರು: ರಾಜ್ಯದ ಎಲ್ಲ ವಿದ್ಯುತ್ ಸರಬರಾಜು ಕಂಪನಿಗಳಲ್ಲಿ ಸೇವೆ ಸಲ್ಲಿಸುತ್ತಿರುವ ಗ್ರಾಮ ವಿದ್ಯುತ್ ಪ್ರತಿನಿಧಿಗಳ ಕನಿಷ್ಠ ಖಚಿತ ಪ್ರೋತ್ಸಾಹ ಧನ ಪರಿಷ್ಕರಣೆ ಮಾಡಲು ಸಮಿತಿ ರಚನೆ ಮಾಡಲಾಗಿದೆ.

ಇಂಧನ ಸಚಿವ ವಿ.ಸುನಿಲ್ ಕುಮಾರ್ ಅವರ ಸೂಚನೆಯ ಮೇರೆಗೆ ಬೆಸ್ಕಾಂ ವ್ಯವಸ್ಥಾಪಕ ನಿರ್ದೇಶಕ ಅಧ್ಯಕ್ಷತೆಯಲ್ಲಿ ಹೆಸ್ಕಾಂ ವ್ಯವಸ್ಥಾಪಕ ನಿರ್ದೇಶಕ, ಜೆಸ್ಕಾಂ ಪ್ರಧಾನ ವ್ಯವಸ್ಥಾಪಕ, ಮೈಸೂರು ಕಾರ್ಯಪಾಲನಾ ವೃತ್ತದ ಸೂಪರಿಂಟೆಂಡೆಂಟ್ ಎಂಜಿನಿಯರ್ ಮತ್ತು ಹೆಸ್ಕಾಂ ತಾಂತ್ರಿಕ ನಿರ್ದೇಶಕರನ್ನು ಒಳಗೊಂಡ ಸಮಿತಿಯನ್ನು ರಚನೆ ಮಾಡಲಾಗಿದೆ.

ನಾಳೆ ಕಾರ್ಮಿಕರ ಸಮಾವೇಶ

ಬೆಂಗಳೂರು: ಕರುನಾಡ ವಿಜಯಸೇನೆ ಸಂಘಟನೆಯು ಮೇ 1ರಂದು ಬೆಳಿಗ್ಗೆ 10.30ಕ್ಕೆ ಅರಮನೆ ಮೈದಾನದದಲ್ಲಿ ಕಾರ್ಮಿಕರ ಸಮಾವೇಶ ಹಮ್ಮಿಕೊಂಡಿದೆ. ಬೆಳಿಗ್ಗೆ ಚಾಲುಕ್ಯ ವೃತ್ತದಲ್ಲಿ ಬಸವಣ್ಣನ ಪುತ್ಥಳಿಗೆ ನಿರ್ಮಾಪಕ ಉಮಾಪತಿ ಶ್ರೀನಿವಾಸ ಗೌಡ ಮಾಲಾರ್ಪಣೆ ಮಾಡಲಿದ್ದಾರೆ. ವೇದಿಕೆ ಕಾರ್ಯಕ್ರಮದಲ್ಲಿ ವಿಶ್ವ ಒಕ್ಕಲಿಗರ ಸಂಸ್ಥಾನ ಮಠದ ಕುಮಾರ ಚಂದ್ರಶೇಖರ ಶ್ರೀ ಸಾನ್ನಿಧ್ಯ ವಹಿಸಲಿದ್ದು, ಎಚ್.ಡಿ.ಕುಮಾರಸ್ವಾಮಿ ಉದ್ಘಾಟಿಸಲಿದ್ದಾರೆ.

ಸಹಕಾರ ಸಂಘಗಳ ಉಪನಿಬಂಧಕರಿಗೆ ದೂರು ಸಲ್ಲಿಕೆ

‘ಕಸಾಪ: ಬೈ–ಲಾ ತಿದ್ದುಪಡಿಗೆ ಕಾರ್ಯಕಾರಿ ಒಪ್ಪಿಗೆ ಪಡೆದಿಲ್ಲ’

ಪ್ರಜಾವಾಣಿ ವಾರ್ತೆ

ಬೆಂಗಳೂರು: ಕನ್ನಡ ಸಾಹಿತ್ಯ ಪರಿಷತ್ತಿನ ಬೈ–ಲಾ ತಿದ್ದುಪಡಿಗಳಿಗೆ ಕಾರ್ಯಕಾರಿ ಸಭೆಯ ಅನುಮೋದನೆ ಪಡೆದಿಲ್ಲ ಮತ್ತು ಕ್ರಮಬದ್ಧವಾಗಿಲ್ಲ ಎಂದು ಸಹಕಾರ ಸಂಘಗಳ ಉಪನಿಬಂಧಕರಿಗೆ ದೂರು ಸಲ್ಲಿಸಲಾಗಿದೆ.

ಪರಿಷತ್ತಿನ ಸರ್ವ ಸದಸ್ಯರ ವಿಶೇಷ ಸಭೆ ಮತ್ತು ಮಹಾಸಭೆಯನ್ನು ಮೇ 1ರಂದು ಹಾವೇರಿ ಜಿಲ್ಲೆಯ ಕಾಗಿನೆಲೆಯಲ್ಲಿ ಕರೆಯಲಾಗಿದೆ. ಆದರೆ, ಮಹಾಸಭೆ ಕರೆದಾಗ ವಿಶೇಷ ಸಭೆಯ ಅಗತ್ಯ ಏನು ಎಂದು ಪ್ರಶ್ನಿಸಿ ಪರಿಷತ್ತಿನ ಸದಸ್ಯರಾದ ಎಸ್.ಸಿ. ಜಯಶಂಕರಸ್ವಾಮಿ, ಎನ್. ಹನುಮೇಗೌಡ, ಎಲ್. ವಿಜಯಕುಮಾರ್, ವಿ. ಹರೀಶ್, ಕೆ. ರಾಜೇಶ್, ನಂಜುಂಡಸ್ವಾಮಿ ಅವರು ದೂರು ಸಲ್ಲಿಸಿದ್ದಾರೆ.

‘ವಿಶೇಷ ಸಭೆಗೆ ತಡೆಯಾಜ್ಞೆ ನೀಡಬೇಕು. ಇಲ್ಲದಿದ್ದರೆ ಪರಿಷತ್ತಿನ ಮತ್ತು ಸದಸ್ಯರ ಹಿತಾಸಕ್ತಿಗೆ ವಿರುದ್ಧವಾಗಿ ಬೈ–ಲಾ ತಿದ್ದುಪಡಿ ಮಾಡಿ ಪ್ರಜಾಪ್ರಭುತ್ವದ ಆಶಯಗಳಿಗೆ ವಿರುದ್ಧ ವಾಗಿ ಅಧಿಕಾರ ಕೇಂದ್ರೀಕರಣಕ್ಕೆ ಅವಕಾಶ ದೊರೆಯುತ್ತದೆ. ಉದ್ದೇಶಿತ ತಿದ್ದುಪಡಿಯು ಜಿಲ್ಲಾಧ್ಯಕ್ಷರ ಅಧಿಕಾರವನ್ನು ಮೊಟಕುಗೊಳಿಸಿ ಪರಿಷತ್ತಿನ ಮೂಲ ಆಶಯಗಳನ್ನು ವಿಫಲಗೊಳಿಸುತ್ತದೆ’ ಎಂದು ಹನುಮೇಗೌಡ ಅವರು ದೂರಿದ್ದಾರೆ.

‘ಬೈ–ಲಾ ತಿದ್ದುಪಡಿಗಳ ಬಗ್ಗೆ ನಿಯಮಗಳ ಅನುಸಾರ ಕಾರ್ಯಕಾರಿ ಸಮಿತಿಯಲ್ಲಿ ಚರ್ಚಿಸಿಲ್ಲ. ಜತೆಗೆ, ಉದ್ದೇಶಿತ ತಿದ್ದುಪಡಿಯಲ್ಲಿ ಟ್ರಸ್ಟ್ ರಚಿಸಲು ಪ್ರಸ್ತಾಪಿಸಲಾಗಿದೆ. ಇದು ಕನ್ನಡ ಸಾಹಿತ್ಯ ಪರಿಷತ್ತಿಗೆ ಪರ್ಯಾಯ ಸಂಸ್ಥೆಯನ್ನು ಹುಟ್ಟುಹಾಕುವ ಪ್ರಯತ್ನವಾಗಿದೆ’ ಎಂದು ಅವರು ತಿಳಿಸಿದ್ದಾರೆ.

‘ತಿದ್ದುಪಡಿಗಳ ಮಾಹಿತಿಯನ್ನು ವೈಯಕ್ತಿಕವಾಗಿ ಸದಸ್ಯರಿಗೆ ಕಳುಹಿಸಿಲ್ಲ. ಈ ಮಾಹಿತಿಯನ್ನು ಸಹ 21 ದಿನಗಳ ಮುಂಚೆಯೇ ಕಳುಹಿಸಬೇಕಾಗಿತ್ತು. ಜತೆಗೆ, ಒಟ್ಟಾರೆಯಾಗಿ ಬೈ–ಲಾಗೆ ತಿದ್ದುಪಡಿ ಮಾಡಲಾಗುತ್ತಿದೆ. ಹಾಗಿದ್ದರೆ, ಇಲ್ಲಿಯವರೆಗೆ ಪರಿಷತ್ತಿಗಾಗಿ ಶ್ರಮಿಸಿದ ಮಹಾನ್ ವ್ಯಕ್ತಿಗಳಿಗೆ ಅಗೌರವ ಸಲ್ಲಿಸಿದಂತಾಗುವುದಿಲ್ಲವೇ’ ಎಂದು ಪ್ರಶ್ನಿಸಿದ್ದಾರೆ.

‘ಕಾರ್ಮಿಕರ ದಿನಾಚರಣೆ ದಿನ ಸಭೆ ಬೇಡ’

ಅಂತರರಾಷ್ಟ್ರೀಯ ಕಾರ್ಮಿಕರ ದಿನವಾದ ಮೇ 1ರಂದು ಕನ್ನಡ ಸಾಹಿತ್ಯ ಪರಿಷತ್ತಿನ ವಾರ್ಷಿಕ ಸರ್ವ ಸದಸ್ಯರ ಸಭೆ ಕರೆದಿರುವುದಕ್ಕೆ ಹಲವು ಪ್ರಗತಿಪರ ಚಿಂತಕರು ಆಕ್ಷೇಪ ವ್ಯಕ್ತಪಡಿಸಿದ್ದಾರೆ.

ಅಂದು ನಾಡು–ನುಡಿ, ಸಂಸ್ಕೃತಿ ಮತ್ತು ಸಂಪತ್ತಿಗೆ ಶ್ರಮಿಕರು ನೀಡುವ ಕೊಡುಗೆಯನ್ನು ನೆನೆಯುವ, ಗೌರವಿಸುವ ದಿನವಾಗಿದೆ. ಕಸಾಪದಂತಹ ಸಾರ್ವಜನಿಕ ಸಂಸ್ಥೆಯು ಕಾರ್ಮಿಕರ ದಿನಾಚರಣೆಯಂದು ಸಭೆ ಕರೆಯುವ ಕುರಿತು ಯೋಚಿಸದಿರುವುದು ವಿಷಾದನೀಯ ಎಂದು ದು. ಸರಸ್ವತಿ, ಮೂಡ್ನಾಕೂಡು ಚಿನ್ನಸ್ವಾಮಿ, ಬಿ.ಟಿ.ಜಾಹ್ನವಿ, ಡಾ.ಅರುಂಧತಿ, ಲಡಾಯಿ ಬಸೂ, ಸಬಿಹಾ ಭೂಮಿಗೌಡ, ಭೂಮಿಗೌಡ, ಬಿ.ಎನ್. ಶಾರದ, ನವೀನ್ ಸೂರಿಂಜೆ, ಗುಲಾಬಿ ಬಿಳಿಮಲೆ, ಮಲ್ಲಿಕಾ ಬಸವರಾಜು ಮತ್ತಿತರರು ತಿಳಿಸಿದ್ದಾರೆ.



ಚಂದ್ರಶೇಖರ ಕಂಬಾರ ಅವರು ನೂತನ ಕಟ್ಟಡದ ಭೂಮಿ ಪೂಜೆ ನೆರವೇರಿಸಿದರು. ಕೇಂದ್ರ ಸಾಹಿತ್ಯ ಅಕಾಡೆಮಿಯ ಭಾಷಾಂತರ ಕೇಂದ್ರದ ಗೌರವ ನಿರ್ದೇಶಕ ಎಸ್.ಆರ್.ವಿಜಯಶಂಕರ್, ಅಕಾಡೆಮಿಯ ಸಲಹಾ ಸಮಿತಿ ಸದಸ್ಯ ಮನು ಬಳಿಗಾರ್, ಮುಖ್ಯ ಎಂಜಿನಿಯರ್ ಎಸ್.ಎನ್.ರೈ, ಕಟ್ಟಡದ ಸಲಹೆಗಾರ ವೆಂಕಟೇಶಮೂರ್ತಿ, ಅಕಾಡೆಮಿಯ ಪ್ರಾದೇಶಿಕ ಕಾರ್ಯದರ್ಶಿ ಎಸ್.ಪಿ.ಮಹಾಲಿಂಗೇಶ್ವರ, ಪಿನಾಕಲ್ ಸಂಸ್ಥೆಯ ಆಡಳಿತ ನಿರ್ದೇಶಕ ರವಿಚಂದ್ರ ಇದ್ದರು

ಕೇಂದ್ರ ಸಾಹಿತ್ಯ ಅಕಾಡೆಮಿ: ನೂತನ ಕಟ್ಟಡದ ಭೂಮಿ ಪೂಜೆ

ಬೆಂಗಳೂರು: ಕೇಂದ್ರ ಸಾಹಿತ್ಯ ಅಕಾಡೆಮಿಯು ಮಲ್ಲತ್ತಹಳ್ಳಿಯಲ್ಲಿ ದಕ್ಷಿಣ ಭಾರತೀಯ ಕಚೇರಿ ಆರಂಭಿಸುತ್ತಿದ್ದು, ಅಕಾಡೆಮಿ ಅಧ್ಯಕ್ಷ ಡಾ.ಚಂದ್ರಶೇಖರ ಕಂಬಾರ ಅವರು ಶುಕ್ರವಾರ ನೂತನ ಕಟ್ಟಡದ ಭೂಮಿ ಪೂಜೆ ನೆರವೇರಿಸಿದರು.

‘ದಕ್ಷಿಣ ಭಾರತ ರಾಜ್ಯಗಳ ಕಚೇರಿಯು ಬೆಂಗಳೂರಿನಲ್ಲಿ ನಿರ್ಮಾಣವಾಗುತ್ತಿರುವುದು ಸಂತಸದ ವಿಷಯ. ಕೇಂದ್ರ ಸಾಹಿತ್ಯ ಅಕಾಡೆಮಿಯ ಪ್ರಕಟಣಾ ವಿಭಾಗ, ಸಾಹಿತ್ಯ ಆಸಕ್ತರ ಅಧ್ಯಯನಕ್ಕೆ ಪೂರಕವಾಗುವ ಗುಣಮಟ್ಟದ ಗ್ರಂಥಾಲಯ, ಸಾಹಿತ್ಯ ಹಾಗೂ ಸಾಂಸ್ಕೃತಿಕ ಕಾರ್ಯಕ್ರಮಗಳಿಗೆ ಅಗತ್ಯವಿರುವ ಸುಸಜ್ಜಿತ ಸಭಾಭವನ ನೂತನ ಕಟ್ಟಡದಲ್ಲಿ ಇರಲಿದೆ’ ಎಂದು ಚಂದ್ರಶೇಖರ ಕಂಬಾರ ತಿಳಿಸಿದರು.

‘ಅಕಾಡೆಮಿಯು ದೇಶದ ಎಲ್ಲ ಭಾಷೆಗಳ ಸಾಹಿತ್ಯ ಅಧ್ಯಯನಕ್ಕೆ ಪೂರಕವಾದ ವಾತಾವರಣ ಸೃಷ್ಟಿಸಲಿದೆ. ಸಾಂಸ್ಕೃತಿಕ ಚಟುವಟಿಕೆಗಳಿಗೂ ಬೆಂಬಲವಾಗಿ ನಿಲ್ಲಲಿದೆ. ಇನ್ನು ಒಂದು ವರ್ಷದೊಳಗೆ ಕಚೇರಿ ನಿರ್ಮಾಣ ಕಾರ್ಯ ಪೂರ್ಣಗೊಳ್ಳುವ ನಿರೀಕ್ಷೆ ಇದೆ’ ಎಂದು ಹೇಳಿದರು.

ಮೇ 8ರಿಂದ ಲಕ್ಷ್ಮೀನರಸಿಂಹ ನವರಾತ್ರೋತ್ಸವ

ಬೆಂಗಳೂರು: ಶ್ರೀಅಭಯ ಲಕ್ಷ್ಮೀನರಸಿಂಹ ಚಾರಿಟಬಲ್ ಟ್ರಸ್ಟ್ ವತಿಯಿಂದ ತ್ಯಾಗರಾಜ ನಗರದ ಶ್ರೀಅಭಯ ಲಕ್ಷ್ಮೀನರಸಿಂಹ ಶ್ರೀಪಟ್ಟಾಭಿರಾಮ ಮತ್ತು ಕಂಭದ ನರಸಿಂಹ ದೇವಸ್ಥಾನದಲ್ಲಿ (ವಜ್ರಕ್ಷೇತ್ರ) ಮೇ 8ರಿಂದ 16ರವರೆಗೆ ‘ಲಕ್ಷ್ಮೀನರಸಿಂಹ ನವರಾತ್ರೋತ್ಸವ’ ನಡೆಯಲಿದೆ.

ಉತ್ಸವದ ಅಂಗವಾಗಿ ಪ್ರತಿದಿನ ವಿವಿಧ ಧಾರ್ಮಿಕ ಕಾರ್ಯಕ್ರಮಗಳು ನೆರವೇರಲಿವೆ. ದೇವರಿಗೆ ವಿಶೇಷ ಅಲಂಕಾರ, ನೈವೇದ್ಯ, ಅಭಿಷೇಕ ನಡೆಯಲಿವೆ. 13ರಂದು ಬೆಳಿಗ್ಗೆ 9 ಗಂಟೆಗೆ ಧ್ವಜಾರೋಹಣ, ಲಕ್ಷ್ಮೀನರಸಿಂಹ ಕಲ್ಯಾಣೋತ್ಸವ, ಸಂಜೆ 6ಕ್ಕೆ ರಾಯಚೂರು ಶೇಷಗಿರಿರಾವ್ ಅವರಿಂದ ದಾಸವಾಣಿ ಕಾರ್ಯಕ್ರಮ ಇರಲಿದೆ. 14ರಂದು ನರಸಿಂಹ ಜಯಂತಿ, ಮೂಲ ದೇವರಿಗೆ ಫಲಪಂಚಾಮೃತ, ನರಸಿಂಹ ತಾರಕ ಹೋಮ, ದ್ವಾರಪೂಜೆ, ಬ್ರಹ್ಮರಥೋತ್ಸವ, ಮಹಾಮಂಗಳಾರತಿ, 15ರಂದು 108 ಲೀಟರ್ ಹಾಲಿನಿಂದ ವಿಶೇಷ ಅಭಿಷೇಕ ಜರುಗಲಿದೆ.

16ರಂದು ಸತ್ಯನಾರಾಯಣ ಪೂಜೆ, ಕಂಭದ ನರಸಿಂಹ ದೇವರಿಗೆ 1,008 ಲೀಟರ್ ಹಾಲಿನಿಂದ ಅಭಿಷೇಕ, ಪೂರ್ಣಕುಂಭಾಭಿಷೇಕ, ವಸಂತೋತ್ಸವ, ಉಯ್ಯಾಲೆ ಸೇವೆ ಹಾಗೂ ರಾಜಬೀದಿ ರಥೋತ್ಸವ ನೆರವೇರಲಿವೆ.

ಭಕ್ತಾದಿಗಳು ಉತ್ಸವದ ಧಾರ್ಮಿಕ ಕಾರ್ಯಕ್ರಮಗಳಲ್ಲಿ ಭಾಗವಹಿಸಬಹುದು.ದೇಣಿಗೆ ನೀಡಲು ಇಚ್ಛಿಸುವವರು ಮೊಬೈಲ್ ಸಂಖ್ಯೆ 9448850552 ಅಥವಾ 7019475877 ಅನ್ನು ಸಂಪರ್ಕಿಸಬಹುದು ಎಂದು ಪ್ರಕಟಣೆ ತಿಳಿಸಿದೆ.

ಕೋವಿಡ್: ನಿಯಮ ಪಾಲನೆಗೆ ಸೂಚನೆ


ಬೆಂಗಳೂರು: ದೇಶದ ಕೆಲವು ರಾಜ್ಯಗಳಲ್ಲಿ ಮತ್ತು ಬೆಂಗಳೂರು ನಗರದಲ್ಲಿ ಕಳೆದ ಒಂದು ವಾರದಿಂದ ಕೋವಿಡ್–19 ಪ್ರಕರಣಗಳು ಹೆಚ್ಚುತ್ತಿರುವುದರಿಂದ ಬಿಬಿಎಂಪಿ ಹೊಸ ನಿಯಮಾವಳಿಗಳನ್ನು ಪ್ರಕಟಿಸಿದೆ.

ಈ ಬಗ್ಗೆ ಶುಕ್ರವಾರ ಬಿಬಿಎಂಪಿ ವಿಶೇಷ ಆಯುಕ್ತರು(ಆರೋಗ್ಯ) ಡಾ. ತ್ರಿಲೋಕ್ ಚಂದ್ರ ಅವರು ಸಭೆ ನಡೆಸಿದರು.

ಖಾಸಗಿ ಆಸ್ಪತ್ರೆ, ನರ್ಸಿಂಗ್ ಹೋಮ್‌ಗಳ ಅಸೋಸಿಯೇಷನ್(ಫಾನಾ) ಮತ್ತು ಪ್ರಮುಖ ಖಾಸಗಿ ಆಸ್ಪತ್ರೆಗಳ ಪ್ರತಿನಿಧಿಗಳು, ನಿವಾಸಿಗಳ ಕ್ಷೇಮಾಭಿವೃದ್ಧಿ ಸಂಘಗಳು, ವರ್ತಕರ ಸಂಘಗಳ, ಮಾಲ್‌ಗಳು, ಹೋಟೆಲ್‌ಗಳು, ಚಿತ್ರಮಂದಿರಗಳು ಮತ್ತು ಇತರೆ ವಾಣಿಜ್ಯ ಸಂಸ್ಥೆಗಳ ಪ್ರತಿನಿಧಿಗಳು ಮತ್ತು ಪದಾಧಿಕಾರಿಗಳು ಸಭೆಯಲ್ಲಿ ಪಾಲ್ಗೊಂಡಿದ್ದರು.

ಆಸ್ಪತ್ರೆಗಳಿಗೆ ಸೂಚನೆಗಳು:

- ಹೊರ ರೋಗಿಗಳ ವಿಭಾಗಗಳಲ್ಲಿ ವಿಷಮ ಶೀತ ಜ್ವರ (ಐಎಲ್‌ಐ) ಮತ್ತು ತೀವ್ರ ಉಸಿರಾಟದ ತೊಂದರೆ (ಎಸ್‌ಎಆರ್‌ಐ) ಪ್ರಕರಣಗಳನ್ನು ಪರೀಕ್ಷಿಸಬೇಕು ಹಾಗೂ ಒಳರೋಗಿಗಳಿಗೆ ಕೋವಿಡ್-19 ಪರೀಕ್ಷೆ ಮಾಡಬೇಕು.
- ಐಸಿಎಂಆರ್ ಪೋರ್ಟಲ್‌ನಲ್ಲಿ ಸಂಪೂರ್ಣ ಮಾಹಿತಿಯೊಂದಿಗೆ ಎಲ್ಲ ಪರೀಕ್ಷಾ ವಿವರಗಳನ್ನು ಅಪ್‌ಲೋಡ್ ಮಾಡಬೇಕು. ಸೋಂಕು ದೃಢಪಟ್ಟ ಪ್ರಕರಣಗಳನ್ನು ಜೀನೋಮಿಕ್ ಸೀಕ್ವೆನ್ಸಿಂಗ್ ಕಳುಹಿಸಬೇಕು.
- ಖಾಸಗಿ ಆಸ್ಪತ್ರೆಯಲ್ಲಿ ಶೇ10ರಷ್ಟು ಹಾಸಿಗೆಗಳನ್ನು ಕಡ್ಡಾಯವಾಗಿ ಮೀಸಲಿರಿಸುವ ಕೇಂದ್ರ ಸರ್ಕಾರದ ಹಿಂದಿನ ಆದೇಶವು ಇನ್ನೂ ಪ್ರಸ್ತುತವಾಗಿದೆ. ಹೀಗಾಗಿ, ಆಸ್ಪತ್ರೆಗಳು ಸನ್ನದ್ಧ ಸ್ಥಿತಿಯಲ್ಲಿ ಇರಬೇಕು.



ಚಿತ್ರಮಂದಿರಗಳು, ವಾಣಿಜ್ಯ ಸಂಸ್ಥೆಗಳಿಗೆ ನಿರ್ದೇಶನಗಳು:

- ಎರಡು ಡೋಸ್ ಲಸಿಕೆ ಪಡೆಯುವುದನ್ನು ಕಟ್ಟುನಿಟ್ಟಾಗಿ ಕಡ್ಡಾಯಗೊಳಿಸಬೇಕು.
- ಮಾಸ್ಕ್ ಧರಿಸುವುದನ್ನು ಕಡ್ಡಾಯಗೊಳಿಸಬೇಕು, ಸುರಕ್ಷಿತ ಅಂತರ ಪಾಲಿಸಬೇಕು. ಪ್ರವೇಶ ದ್ವಾರಗಳಲ್ಲಿ ತಾಪಮಾನ ತಪಾಸಣೆ ಮಾಡಬೇಕು.
- ಎಲ್ಲ ಸಿಬ್ಬಂದಿಗಳು ಲಸಿಕೆ ಪಡೆದಿರುವುದನ್ನು ಖಚಿತಪಡಿಸಿಕೊಳ್ಳಬೇಕು.
- ಹೆಚ್ಚು ಜನರು ಸೇರುವ ವ್ಯಾಪಾರ ಪ್ರದೇಶಗಳಲ್ಲಿ ಮಾರ್ಷಲ್‌ಗಳು ಗಸ್ತು ತಿರುಗಬೇಕು ಮತ್ತು ಜಾಗೃತಿ ಕ್ರಮಗಳನ್ನು ಕೈಗೊಳ್ಳಬೇಕು.

ನಿವಾಸಿಗಳ ಕ್ಷೇಮಾಭಿವೃದ್ಧಿ ಸಂಘಗಳಿಗೆ ಸೂಚನೆಗಳು:

- ಮುನ್ನೆಚ್ಚರಿಕೆ ಡೋಸ್ ಕವರೇಜ್ ಮತ್ತು ಮಕ್ಕಳ ವ್ಯಾಕ್ಸಿನೇಷನ್ ಬಗ್ಗೆ ಜಾಗೃತಿ ಕ್ರಮಗಳನ್ನು ಕೈಗೊಳ್ಳಬೇಕು.
- ಎಲ್ಲಾ ವಯೋಮಾನದವರೂ ಶೇ 100ರಷ್ಟು ಲಸಿಕೆ ಪಡೆದಿರುವುದನ್ನು ಖಚಿತಪಡಿಸಿಕೊಳ್ಳಲು ಶಿಬಿರಗಳನ್ನು ಆಯೋಜಿಸಬೇಕು.
- ದೊಡ್ಡ ಅಪಾರ್ಟ್‌ಮೆಂಟ್ ಸಂಕೀರ್ಣಗಳಿಂದ ವೈರಾಣುವಿನ ವಂಶವಾಹಿ ಸಂಚರನೆಯ ವಿಶ್ಲೇಷಣೆಗೆ ಚರಂಡಿಯ ಮಾದರಿಗಳನ್ನು ಸಂಗ್ರಹಿಸಲಾಗುತ್ತದೆ.
- ಉಗುಳುವಿಕೆ ವಿರುದ್ಧ ಆಂದೋಲನ ಮತ್ತು ಮಾಸ್ಕ್ ಧರಿಸುವಂತೆ ಅಭಿಯಾನ ಕೈಗೊಳ್ಳಬೇಕು

‘ರೈತರನ್ನು ದಿವಾಳಿ ಮಾಡುವ ಸಂಸ್ಕೃತಿ ನಿಲ್ಲಲಿ’

ಪ್ರಜಾವಾಣಿ ವಾರ್ತೆ

ಬೆಂಗಳೂರು: ‘ನಾಗರಿಕತೆ ಹುಟ್ಟಿಕೊಂಡಾಗಲೇ ಕೃಷಿ ಜನ್ಮ ತಾಳಿತು. ಅಂದಿನಿಂದ ಈವರೆಗೂ ರೈತರು ಶೋಷಣೆಗೆ ಒಳಗಾಗುತ್ತಲೇ ಇದ್ದಾರೆ. ರೈತರನ್ನು ದಿವಾಳಿ ಮಾಡುವ ಸಂಸ್ಕೃತಿ ಹೀಗೆಯೇ ಮುಂದುವರಿದರೆ ಭವಿಷ್ಯದಲ್ಲಿ ಆಹಾರದ ಕೊರತೆ ನಮ್ಮನ್ನು ಕಾಡಲಿದೆ’ ಎಂದು ಹೈಕೋರ್ಟ್‌ನ ನಿವೃತ್ತ ನ್ಯಾಯಮೂರ್ತಿ ಎಚ್.ಎನ್. ನಾಗಮೋಹನ್ ದಾಸ್ ಎಚ್ಚರಿಸಿದರು.

ಸಂಯುಕ್ತ ಕಿಸಾನ್ ಮೋರ್ಚಾ, ರಾಜ್ಯ ಕಬ್ಬು ಬೆಳೆಗಾರರ ಸಂಘ ಹಾಗೂ ರೈತ ಸಂಘಗಳ ಸಹಯೋಗದಲ್ಲಿ ಶುಕ್ರವಾರ ನಡೆದ ‘ಕೃಷಿ ಉತ್ಪನ್ನಗಳಿಗೆ ಕನಿಷ್ಠ ಬೆಂಬಲ ಬೆಲೆ ಮರೀಚಿಕೆ’ ಕುರಿತ ಚಿಂತನ–ಮಂಥನ ಕಾರ್ಯಕ್ರಮದಲ್ಲಿ ಅವರು ಮಾತನಾಡಿದರು.

ಕಬ್ಬು ಬೆಳೆಗಾರರ ಸಂಘದ ಅಧ್ಯಕ್ಷ ಕುರುಬೂರು ಶಾಂತಕುಮಾರ್,‘ಪ್ರಧಾನಿ ನರೇಂದ್ರ ಮೋದಿ ಅವರು ತಾವು ಅಧಿಕಾರಕ್ಕೆ ಬರುವ ಮುನ್ನ ಸ್ವಾಮಿನಾಥನ್ ಆಯೋಗದ ವರದಿ ಜಾರಿ ಮಾಡುವ ಆಶ್ವಾಸನೆ ನೀಡಿದ್ದರು. ಈಗ ಅದರ ಬಗ್ಗೆ ಮಾತನಾಡುತ್ತಲೇ ಇಲ್ಲ’ ಎಂದರು.

ಕೃಷಿ ತಜ್ಞ ಪ್ರಕಾಶ್ ಕಮ್ಮರಡಿ, ‘ರೈತರು ಕನಿಷ್ಠ ಬೆಂಬಲ ಬೆಲೆಗಾಗಿ ಹಲವು ವರ್ಷಗಳಿಂದ ಒತ್ತಾಯ ಮಾಡುತ್ತಲೇ ಬಂದಿದ್ದಾರೆ. ಆದರೆ, ಕೇಂದ್ರ ಸರ್ಕಾರ ರೈತರ ಸಮಸ್ಯೆಗೆ ಸ್ಪಂದಿಸುತ್ತಿಲ್ಲ’ ಎಂದರು.

ಬಾಗಲಕೋಟೆ ತೋಟಗಾರಿಕೆ ವಿಶ್ವವಿದ್ಯಾಲಯದ ವಿಶ್ರಾಂತ ಕುಲಪತಿ ಎಸ್.ಬಿ.ದಂಡಿನ, ಬಿ.ಎನ್.ಹುಂಬರವಾಡಿ, ರೈತ ಮುಖಂಡರಾದ ಸಿದ್ದನಗೌಡ ಪಾಟೀಲ, ವಿ.ಆರ್.ನಾರಾಯಣ ರೆಡ್ಡಿ ಭಾಗವಹಿಸಿದ್ದರು.



ಕುರುಬೂರು ಶಾಂತಕುಮಾರ್, ಎಚ್.ಎನ್.ನಾಗಮೋಹನ್ ದಾಸ್ ಮತ್ತು ಪ್ರಕಾಶ್ ಕಮ್ಮರಡಿ ಅವರು ರಾಗಿ ಕಲ್ಲು ಬೀಸುವ ಮೂಲಕ ಕಾರ್ಯಕ್ರಮಕ್ಕೆ ಚಾಲನೆ ನೀಡಿದರು. –ಪ್ರಜಾವಾಣಿ ಚಿತ್ರ

ಪೆರೋಲ್ ಶಿಫಾರಸು: ವೈದ್ಯರ ವಿರುದ್ಧ ಕ್ರಮಕ್ಕೆ ಹೈಕೋರ್ಟ್ ಆದೇಶ

ಬೆಂಗಳೂರು: ‘ಸ್ಪಾಂಡಿಲೈಟಿಸ್‌ನಿಂದ (ಬೆನ್ನುಮೂಳೆಯ ಕಾಯಿಲೆ) ಹಾಸಿಗೆ ಹಿಡಿದಿರುವ ನನ್ನ ತಾಯಿಯನ್ನು ಕೆಲ ದಿನ ಆರೈಕೆ ಮಾಡಲು ಪೆರೋಲ್ ಮೇಲೆ ಬಿಡುಗಡೆ ಮಾಡುವಂತೆ ಜೈಲು ಅಧಿಕಾರಿಗಳಿಗೆ ನಿರ್ದೇಶಿಸಬೇಕು’ ಎಂದು ಕೋರಿದ್ದ ಕೈದಿಯೊಬ್ಬರ ಮನವಿಯನ್ನು ಹೈಕೋರ್ಟ್ ತಳ್ಳಿ ಹಾಕಿದೆ.

ಇದೇ ವೇಳೆ, ‘ಕೈದಿಯ ತಾಯಿ ಸ್ಪಾಂಡಿಲೈಟಿಸ್‌ನಿಂದ ನರಳುತ್ತಿದ್ದು ಅವರನ್ನು ಖುದ್ದು ಆರೈಕೆ ಮಾಡಲು 2ರಿಂದ 3 ವಾರಗಳ ಕಾಲ ಪೆರೋಲ್ ಮೇಲೆ ಬಿಡುಗಡೆಗೆ ಅವಕಾಶ ನೀಡಬೇಕು’ ಎಂದು ಶಿಫಾರಸು ಮಾಡಿ ಪ್ರಮಾಣ ಪತ್ರ ನೀಡಿದ್ದ ವೈದ್ಯರ ವಿರುದ್ಧ ಸೂಕ್ತ ವಿಚಾರಣೆ ನಡೆಸುವಂತೆ ನ್ಯಾಯಮೂರ್ತಿ ಸೂರಜ್ ಗೋವಿಂದರಾಜ್ ಅವರಿದ್ದ ರಜಾಕಾಲದ ಏಕಸದಸ್ಯ ನ್ಯಾಯಪೀಠ ವೈದ್ಯಕೀಯ ಮಂಡಳಿಗೆ ಆದೇಶಿಸಿದೆ.

ಮಡಿವಾಳ ಪೊಲೀಸ್ ಠಾಣೆಯಲ್ಲಿ ದಾಖಲಾಗಿರುವ ಕೊಲೆ ಪ್ರಕರಣದಲ್ಲಿ ವಾಸುದೇವ ಅಲಿಯಾಸ್ ವಾಸು (37) ಪ್ರಮುಖ ಆರೋಪಿಯಾಗಿದ್ದು, ಪರಪ್ಪನ ಅಗ್ರಹಾರ ಜೈಲಿನಲ್ಲಿದ್ದಾನೆ. ಅರ್ಜಿ ವಿಚಾರಣೆ ವೇಳೆ ಸರ್ಕಾರದ ಪರ ವಕೀಲ ಎಂ.ವಿನೋದ್ ಕುಮಾರ್, ಅರ್ಜಿದಾರ ಆರೋಪಿಗೆ ‘ಲೈಫ್ ಕೇರ್ ಆಸ್ಪತ್ರೆ’ ನಿರ್ವಾಹಕ ನಿರ್ದೇಶಕರು ನೀಡಿದ್ದ ಶಿಫಾರಸು ಪತ್ರವನ್ನು ಆಕ್ಷೇಪಿಸಿ, ಪೆರೋಲ್ ನೀಡದಂತೆ ಮನವಿ ಮಾಡಿದರು.

ಎನ್‌ಇಪಿ ಅಡಿಯಲ್ಲಿ ಸಿದ್ಧಪಡಿಸಿರುವ 'ರಾಷ್ಟ್ರೀಯ ಪಠ್ಯಕ್ರಮ ಚೌಕಟ್ಟಿನ ಆದೇಶ ದಾಖಲೆ' ಬಿಡುಗಡೆ

ಭಾಷೆ ಆಧಾರದಲ್ಲಿ ರಾಜಕಾರಣ ಸಲ್ಲ: ಪ್ರಧಾನ್

ಪ್ರಜಾವಾಣಿ ವಾರ್ತೆ

ಬೆಂಗಳೂರು: 'ದೇಶದ ಪ್ರಗತಿಗೆ ಭಾಷೆ ಅಡ್ಡಿಯಾಗಬಾರದು. ಭಾಷೆ ಆಧಾರದಲ್ಲಿ ರಾಜಕಾರಣವೂ ಸರಿಯಲ್ಲ. ಆ ರೀತಿ ಮಾಡುವವರು ಮಾಡಲಿ. ಅದಕ್ಕೆ ನಮ್ಮ ಬೆಂಬಲ ಇಲ್ಲ' ಎಂದು ಕೇಂದ್ರ ಶಿಕ್ಷಣ ಮತ್ತು ಕೌಶಲಾಭಿವೃದ್ಧಿ ಸಚಿವ ಧರ್ಮೇಂದ್ರ ಪ್ರಧಾನ್ ಶುಕ್ರವಾರ ಹೇಳಿದರು.

ರಾಷ್ಟ್ರೀಯ ಶಿಕ್ಷಣ ನೀತಿ (ಎನ್‌ಇಪಿ) ಅಡಿಯಲ್ಲಿ ಸಿದ್ಧಪಡಿಸಿರುವ 'ರಾಷ್ಟ್ರೀಯ ಪಠ್ಯಕ್ರಮ ಚೌಕಟ್ಟಿನ ಆದೇಶ ದಾಖಲೆ'ಯನ್ನು ಭಾರತೀಯ ವಿಜ್ಞಾನ ಸಂಸ್ಥೆಯಲ್ಲಿ ನಡೆದ ಕಾರ್ಯಕ್ರಮದಲ್ಲಿ ಬಿಡುಗಡೆ ಮಾಡಿ ಮಾತನಾಡಿದರು.



ಸಮಾರಂಭದಲ್ಲಿ ಕೇಂದ್ರ ಶಿಕ್ಷಣ ಸಚಿವ ಧರ್ಮೇಂದ್ರ ಪ್ರಧಾನ್ ರಾಷ್ಟ್ರೀಯ ಪಠ್ಯಕ್ರಮ ಚೌಕಟ್ಟು ದಾಖಲೆಯ ಕಡ್ಡಾಯ ಮಾರ್ಗದರ್ಶಿ ಕೈಪಿಡಿ ಬಿಡುಗಡೆ ಮಾಡಿದರು. ಕೇಂದ್ರ ಶಾಲಾ ಶಿಕ್ಷಣ ಇಲಾಖೆ ಕಾರ್ಯದರ್ಶಿ ಅನಿತಾ ಕರವಾಲ್, ಪಠ್ಯಕ್ರಮ ಚೌಕಟ್ಟು ಚಾಲನಾ ಸಮಿತಿ ಅಧ್ಯಕ್ಷ ಡಾ.ಕೆ. ಕಸ್ತೂರಿರಂಗನ್, ಸಚಿವರಾದ ಡಾ.ಸಿ.ಎನ್. ಅಶ್ವತ್ಥನಾರಾಯಣ ಮತ್ತು ಬಿ.ಸಿ. ನಾಗೇಶ್ ಇದ್ದರು –ಪ್ರಜಾವಾಣಿ ಚಿತ್ರ

'ಹಿಂದಿಯಲ್ಲಿ ಕಲಿಯಬೇಕೆ?, ಇಂಗ್ಲಿಷ್‌ನಲ್ಲಿ ಕಲಿಯಬೇಕೆ? ಅಥವಾ ಮಾತೃ ಭಾಷೆಯಲ್ಲಿ ಕಲಿಯಬೇಕೆ ಎಂಬ ಪ್ರಶ್ನೆ ವಿವಾದಕ್ಕೆ ಎಡೆ ಮಾಡಿಕೊಡಬಾರದು' ಎಂದು ಅವರು ಹೇಳಿದರು.

'ಒಬ್ಬೊಬ್ಬರು ಒಂದೊಂದು ಭಾಷೆ ಪರವಾಗಿ ಇರುತ್ತಾರೆ. ನಾನು ಒಡಿಯಾ ಭಾಷೆಯವನು. ಒಡಿಯಾದಲ್ಲಿ ಯೋಚಿಸುತ್ತಾ, ಹಿಂದಿಯಲ್ಲಿ ಅರ್ಥ ಮಾಡಿಕೊಂಡು ಇಂಗ್ಲಿಷ್‌ನಲ್ಲಿ ಸಂವಹನ ನಡೆಸುತ್ತೇನೆ. ಮಾತೃಭಾಷೆ ಮತ್ತು ಸ್ಥಳೀಯ ಭಾಷೆಗೆ ಆದ್ಯತೆ ದೊರೆಯಬೇಕು' ಎಂದು ಹೇಳಿದರು.

ಜಪಾನ್‌ನಲ್ಲಿ ಇಂಗ್ಲಿಷ್ ಬಳಕೆ ಇಲ್ಲ. ಮಾತೃಭಾಷೆಯಲ್ಲಿ ವಿಜ್ಞಾನ ಮತ್ತು ತಂತ್ರಜ್ಞಾನವನ್ನು ಕಲಿತ ಅಲ್ಲಿನ ಜನರು ಆ ರಾಷ್ಟ್ರವನ್ನು ಜಗತ್ತಿನ ದೊಡ್ಡ ಆರ್ಥಿಕ ಶಕ್ತಿಯನ್ನಾಗಿ ಮಾಡಿದ್ದಾರೆ. ಆ ರೀತಿಯಲ್ಲಿ ಯೋಚಿಸಬೇಕಿದೆ ಎಂದರು.

ಎನ್‌ಇಪಿಯಿಂದ ಪರಿಹಾರ: ಶಿಕ್ಷಣ ಕ್ಷೇತ್ರದಲ್ಲಿನ ಸಮಸ್ಯೆಗಳಿಗೆ ಎನ್‌ಇಪಿ ಪರಿಹಾರ ಒದಗಿಸಲಿದೆ. ವಸಾಹತುಶಾಹಿ ಪ್ರಭಾವದಿಂದ ಭಾರತದ ಶಿಕ್ಷಣ ಕ್ಷೇತ್ರವನ್ನು ಹೊರತರಲು ಎನ್‌ಇಪಿ ನೆರವಾಗಲಿದೆ. ಆ ಗುರಿಯನ್ನು ತಲುಪಲು ಪಠ್ಯಕ್ರಮ ಚೌಕಟ್ಟು ಪೂರಕವಾಗಿ ಕೆಲಸ ಮಾಡಲಿದೆ ಎಂದು ಧರ್ಮೇಂದ್ರ ಪ್ರಧಾನ್ ಹೇಳಿದರು.

'ಪಠ್ಯಕ್ರಮಕ್ಕೆ ಸಂಬಂಧಿಸಿದಂತೆ ಸಾರ್ವಜನಿಕರಿಂದ ಅಭಿಪ್ರಾಯ ಸಂಗ್ರಹಿಸಲು ಆ್ಯಪ್ ಒಂದನ್ನು ರೂಪಿಸಬೇಕು. ಅದರ ಮೂಲಕ ಬರುವ ಸಲಹೆ ಸೂಚನೆಗಳನ್ನು ಆಧರಿಸಿ ಸರ್ಕಾರಕ್ಕೆ ಶಿಫಾರಸು ಸಲ್ಲಿಸಬೇಕು' ಎಂದು ಎನ್‌ಸಿಇಆರ್‌ಟಿ ಅಧಿಕಾರಿಗಳಿಗೆ ಸೂಚಿಸಿದರು.

'ದಸರೆಗೆ ಹೊಸ ಪಠ್ಯ'

'ಮುಂದಿನ ಸರಸ್ವತಿ ಪೂಜೆಗೆ (ದಸರಾ) ಮೊದಲು ಪೂರ್ವ ಪ್ರಾಥಮಿಕ ಶಿಕ್ಷಣಕ್ಕೆ ಹೊಸ ಪಠ್ಯಕ್ರಮ ಅಳವಡಿಸುವ ಗುರಿ ಇದೆ' ಎಂದು ಧರ್ಮೇಂದ್ರ ಪ್ರಧಾನ್ ಹೇಳಿದರು. ಅದಕ್ಕೂ ಮೊದಲು ಪಠ್ಯಕ್ರಮ ಚೌಕಟ್ಟು ದಾಖಲೆ ಚಾಲನಾ ಸಮಿತಿಯು ಹೊಸ ಪಠ್ಯಕ್ರಮವನ್ನು ಅಂತಿಮಗೊಳಿಸಿ, ಸರ್ಕಾರಕ್ಕೆ ಸಲ್ಲಿಸಬೇಕು' ಎಂದು ತಿಳಿಸಿದರು.

ಜಗಳೂರು: ಕೆರೆ ತುಂಬಿಸುವ ಯೋಜನೆಗೆ ಚಾಲನೆ ನೀಡಿದ ಸಿಎಂ ಬೊಮ್ಮಾಯಿ

ಮಧ್ಯ ಕರ್ನಾಟಕದಲ್ಲಿ ಕೃಷಿ, ಕೈಗಾರಿಕೆ ಕ್ರಾಂತಿ


ಪ್ರಜಾವಾಣಿ ವಾರ್ತೆ

ಜಗಳೂರು: 'ನೀರಾವರಿ, ಕೃಷಿ ಹಾಗೂ ಕೈಗಾರಿಕೆ ಕ್ರಾಂತಿ ಮಾಡುವ ಮೂಲಕ ಮಧ್ಯ ಕರ್ನಾಟಕದ ಭವ್ಯ ಭವಿಷ್ಯವನ್ನು ನಮ್ಮ ಸರ್ಕಾರ ಬರೆಯುತ್ತಿದೆ' ಎಂದು ಮುಖ್ಯಮಂತ್ರಿ ಬಸವರಾಜ ಬೊಮ್ಮಾಯಿ ಹೇಳಿದರು.

ಭದ್ರಾ ಮೇಲ್ದಂಡೆ ಯೋಜನೆಯಿಂದ ಜಗಳೂರಿನ 9 ಕೆರೆ ತುಂಬಿಸುವ ಹಾಗೂ 18,423 ಹೆಕ್ಟೇರ್ ಪ್ರದೇಶಕ್ಕೆ ಹನಿ ನೀರಾವರಿ ಸೌಲಭ್ಯ ಕಲ್ಪಿಸುವ ಮತ್ತು ವಿವಿಧ ಅಭಿವೃದ್ಧಿ ಕಾಮಗಾರಿಗಳಿಗೆ ಶುಕ್ರವಾರ ಶಂಕುಸ್ಥಾಪನೆ ನೆರವೇರಿಸಿ ಅವರು ಮಾತನಾಡಿದರು.

'ಇದುವರೆಗೂ ಮಧ್ಯ ಕರ್ನಾಟಕ ನಿರ್ಲಕ್ಷ್ಯಕ್ಕೆ ಒಳಗಾಗಿತ್ತು. ಬರೀ ಘೋಷಣೆಗಳನ್ನು ಮಾಡಲಾಗುತ್ತಿತ್ತು. ಯಾವ ಕೆಲಸವನ್ನೂ ಆರಂಭಿಸುತ್ತಿರಲಿಲ್ಲ. ಪ್ರಗತಿಯಲ್ಲಿದ್ದ ಯೋಜನೆಗಳನ್ನು ಪೂರ್ಣಗೊಳಿಸುವ ತಾಕತ್ತು ಹಿಂದಿನ ಸರ್ಕಾರಗಳಿಗೆ ಇರಲಿಲ್ಲ. ವೋಟ್‌ಬ್ಯಾಂಕ್ ರಾಜಕಾರಣ ಮಾಡುತ್ತಿದ್ದವು. ವಿರೋಧ ಪಕ್ಷದವರು ಈಗ ಭದ್ರಾ ಮೇಲ್ದಂಡೆ ಯೋಜನೆಯನ್ನು ನಾವು ಮಾಡಿದ್ದೇವೆ ಎಂದು ಸುಳ್ಳಿನ ಕಂತೆಯನ್ನು ಹೇಳುತ್ತಿದ್ದಾರೆ' ಎಂದು ಆಕ್ಷೇಪಿಸಿದರು.

'ನೀರಾವರಿ, ಶಿಕ್ಷಣ, ಆರೋಗ್ಯ ಹಾಗೂ ಕೈಗಾರಿಕಾ ವಲಯಗಳ ಅಭಿವೃದ್ಧಿಗೆ ನಮ್ಮ ಸರ್ಕಾರ ವಿಶೇಷ ಯೋಜನೆಗಳನ್ನು ರೂಪಿಸುತ್ತಿದೆ. ನಮ್ಮ ಸರ್ಕಾರ ಮಧ್ಯ ಕರ್ನಾಟಕದ ಬಗ್ಗೆ ವಿಶೇಷ ಕಳಕಳಿ ವಹಿಸುತ್ತಿದೆ' ಎಂದರು.



ಭದ್ರಾ ಮೇಲ್ದಂಡೆ ಯೋಜನೆಯ ಹೋರಾಟಗಾರ ತೋರಣಗಟ್ಟೆ ತಿಪ್ಪೇಸ್ವಾಮಿ ಅವರನ್ನು ಮುಖ್ಯಮಂತ್ರಿ ಬಸವರಾಜ ಬೊಮ್ಮಾಯಿ ಸನ್ಮಾನಿಸಿದರು. ಶಾಸಕ ಎಸ್.ವಿ. ರಾಮಚಂದ್ರ, ಸಂಸದ ಜಿ.ಎಂ. ಸಿದ್ದೇಶ್ವರ, ಸಚಿವರಾದ ಗೋವಿಂದ ಕಾರಜೋಳ, ಬಿ.ಶ್ರೀರಾಮುಲು, ಶಾಸಕ ಬಿ.ಎಸ್. ಯಡಿಯೂರಪ್ಪ ಇದ್ದಾರೆ. –ಪ್ರಜಾವಾಣಿ ಚಿತ್ರ

'ರೈತರು ಬೆಳೆದ ಉತ್ಪನ್ನಗಳಿಗೆ ಯೋಗ್ಯ ಬೆಲೆ ಸಿಗಬೇಕು ಹಾಗೂ ಈ ಭಾಗದ ಜನರ ಕೈಗೆ ಕೆಲಸ ಸಿಗಬೇಕು ಎಂದು ನೀರಾವರಿ ಹಾಗೂ ಕೈಗಾರಿಕೆಗೆ ಒತ್ತು ಕೊಟ್ಟಿದ್ದೇವೆ. ಮುಂಬೈ–ಚೆನ್ನೈ ಕೈಗಾರಿಕಾ ಕಾರಿಡಾರ್ ಯೋಜನೆ ಮೂಲಕ ತುಮಕೂರು, ಚಿತ್ರದುರ್ಗ, ದಾವಣಗೆರೆ, ಹಾವೇರಿ, ಧಾರವಾಡ ಜಿಲ್ಲೆಗಳಲ್ಲಿ ಕೈಗಾರಿಕೆಗಳನ್ನು ಸ್ಥಾಪಿಸುವ ಮೂಲಕ ಮಧ್ಯ ಕರ್ನಾಟಕಕ್ಕೆ ಭವ್ಯ ಭವಿಷ್ಯ ಕಲ್ಪಿಸಿಕೊಡುತ್ತೇವೆ' ಎಂದು ಮುಖ್ಯಮಂತ್ರಿ ಹೇಳಿದರು.

'ಭದ್ರಾ ಮೇಲ್ದಂಡೆ ಯೋಜನೆಯನ್ನು ರಾಷ್ಟ್ರೀಯ ಯೋಜನೆಯನ್ನಾಗಿ ಮಾಡಲು ಪ್ರಧಾನಿ ನರೇಂದ್ರ ಮೋದಿ ತೀರ್ಮಾನಿಸಿದ್ದಾರೆ. ಮುಂಬರುವ ತಿಂಗಳಲ್ಲಿ ಕೇಂದ್ರ ಸಚಿವ ಸಂಪುಟದಲ್ಲಿ ಇದಕ್ಕೆ ಅನುಮೋದನೆ ಸಿಗಲಿದೆ. ₹ 16 ಸಾವಿರ ಕೋಟಿ ಅನುದಾನ ಸಿಗಲಿದೆ. ಚಿತ್ರದುರ್ಗ ಹಾಗೂ ತುಮಕೂರು ಜಿಲ್ಲೆಗಳ 337 ಕೆರೆ ತುಂಬಿಸುವ ಯೋಜನೆಯನ್ನು ಸಂಪೂರ್ಣಗೊಳಿಸುವ ಶಕ್ತಿಯನ್ನು ಮೋದಿ ನೀಡಲಿದ್ದಾರೆ. ಮಾಜಿ ಮುಖ್ಯಮಂತ್ರಿ ಯಡಿಯೂರಪ್ಪ ಆರಂಭಿಸಿದ್ದ ಭದ್ರಾ ಮೇಲ್ದಂಡೆ ಯೋಜನೆಯನ್ನು ಪ್ರಧಾನಿ ಮೋದಿ ಪೂರ್ಣಗೊಳಿಸಲಿದ್ದಾರೆ' ಎಂದು ವಿಶ್ವಾಸ ವ್ಯಕ್ತಪಡಿಸಿದರು.

'ಇನ್ನೂ ಎರಡು ಲಕ್ಷ ಟನ್ ರಾಗಿ ಖರೀದಿ'

ಚಿತ್ರದುರ್ಗ/ದಾವಣಗೆರೆ: ಮೂರ್ನಾಲ್ಕು ಜಿಲ್ಲೆಗಳಿಂದ ಇನ್ನಷ್ಟು ರಾಗಿ ಖರೀದಿಸಬೇಕು ಎಂಬ ಬೇಡಿಕೆ ಬಂದಿದೆ. ಹೀಗಾಗಿ ಇನ್ನೂ ಎರಡು ಲಕ್ಷ ಟನ್ ಖರೀದಿಸಬೇಕು ಎಂದು ತೀರ್ಮಾನಿಸಿರುವ ಬಗ್ಗೆ ಕೇಂದ್ರ ಆಹಾರ ಸಚಿವ ಪಿಯೂಷ್ ಗೋಯಲ್ ಅವರೊಂದಿಗೆ ಮಾತನಾಡಿದ್ದೇನೆ ಎಂದು ಮುಖ್ಯಮಂತ್ರಿ ಬಸವರಾಜ ಬೊಮ್ಮಾಯಿ ತಿಳಿಸಿದರು.

'ದೆಹಲಿಗೆ ಬಂದಾಗ ಅಧಿಕಾರಿಗಳೊಂದಿಗೆ ಚರ್ಚಿಸಿ ತೀರ್ಮಾನ ಕೈಗೊಳ್ಳುವುದಾಗಿ ಭರವಸೆ ನೀಡಿದ್ದಾರೆ. ಶೀಘ್ರದಲ್ಲೇ ಪರವಾನಗಿ ಪಡೆದುಕೊಂಡು ಇನ್ನೂ 2 ಲಕ್ಷ ಟನ್ ರಾಗಿ ಖರೀದಿಸಲಾಗುವುದು' ಎಂದು ಸುದ್ದಿಗಾರರಿಗೆ ಹೇಳಿದರು.

'ಈಗಾಗಲೇ 2 ಲಕ್ಷ ಟನ್ ರಾಗಿಯನ್ನು ಬೆಂಬಲ ಬೆಲೆಯಲ್ಲಿ ಖರೀದಿಸಲಾಗಿತ್ತು. ಈಗ ನಾವು 1.14 ಲಕ್ಷ ಟನ್ ರಾಗಿ ಖರೀದಿಸಲು ಅವಕಾಶ ಕಲ್ಪಿಸಿದ್ದೆವು' ಎಂದು ಹೇಳಿದರು.

ಆಯ್ಕೆ ಪರಿಷ್ಕರಣೆ ಪಟ್ಟಿ ಪ್ರಶ್ನಿಸಿದ ಅರ್ಜಿಯ ವಿಚಾರಣೆ

1998ರ ನೇಮಕಾತಿ: ಯಥಾಸ್ಥಿತಿಗೆ ಆದೇಶ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಕರ್ನಾಟಕ ಲೋಕಸೇವಾ ಆಯೋಗದ (ಕೆಪಿಎಸ್‌ಸಿ) ಮೂಲಕ ಆಯ್ಕೆಯಾಗಿದ್ದ 1998ನೇ ಸಾಲಿನ 383 ಗೆಜೆಟೆಡ್ ಪ್ರೊಬೇಷನರಿ ಹುದ್ದೆಗಳ ನೇಮಕಾತಿ ಪಟ್ಟಿಯನ್ನು 2021ರ ಜನವರಿ 30ರಂದು ಪರಿಷ್ಕರಿಸಿರುವ ಸರ್ಕಾರದ ನಿರ್ಧಾರ ಪ್ರಶ್ನಿಸಿ ಏಳು ಜನ ಐಎಎಸ್ ಅಧಿಕಾರಿಗಳು ಸಲ್ಲಿಸಿದ್ದ ಅರ್ಜಿಯನ್ನು ಕರ್ನಾಟಕ ಆಡಳಿತಾತ್ಮಕ ನ್ಯಾಯಮಂಡಳಿ (ಕೆಎಟಿ) ವಜಾಗೊಳಿಸಿದ ಬೆನ್ನಲ್ಲೇ, ಕೆಎಟಿಯ ಆದೇಶಕ್ಕೆ ಹೈಕೋರ್ಟ್ ಮಧ್ಯಂತರ ತಡೆ ನೀಡಿದೆ.

ಕೆಎಟಿ ಆದೇಶ ಪ್ರಶ್ನಿಸಿ ಐಎಎಸ್ ಅಧಿಕಾರಿಗಳಾದ ಎಚ್.ಎನ್. ಗೋಪಾಲಕೃಷ್ಣ (ವಯಸ್ಸು 48), ಕವಿತಾ ಎಸ್.ಮನ್ನಿಕೇರಿ (47), ಶಿವಾನಂದ ಕಾಪಸಿ (53), ಎಚ್.ಬಸವರಾಜೇಂದ್ರ (53) ಮತ್ತು ಪಿ.ವಸಂತಕುಮಾರ್ (46) ರಿಟ್ ಅರ್ಜಿ ಸಲ್ಲಿಸಿದ್ದರು.

ನ್ಯಾಯಮೂರ್ತಿ ಆರ್.ದೇವದಾಸ್ ಹಾಗೂ ಕೆ.ಎಸ್.ಹೇಮಲೇಖಾ ಅವರಿದ್ದ ರಜಾಕಾಲದ ವಿಭಾಗೀಯ ನ್ಯಾಯಪೀಠ ಗುರುವಾರ (ಮಾ.28) ವಿಚಾರಣೆ ನಡೆಸಿ ಯಥಾಸ್ಥಿತಿ ಕಾಯ್ದುಕೊಳ್ಳುವಂತೆ ಆದೇಶಿಸಿತು.

ಅರ್ಜಿದಾರರ ಪರ ವಾದ ಮಂಡಿಸಿದ ಹಿರಿಯ ವಕೀಲ ಎಂ.ಎಸ್. ಭಾಗವತ್, 'ಈ ಪ್ರಕರಣದ ಅರ್ಜಿದಾರರ ಮನವಿಯನ್ನೇ ಪುನರಾವರ್ತಿಸುವಂತಹ ಮತ್ತೊಂದು ರಿಟ್ ಅರ್ಜಿಯ ವಿಚಾರಣೆ ನ್ಯಾಯಮೂರ್ತಿ ಜಿ.ನರೇಂದರ್ ನೇತೃತ್ವದ ವಿಭಾಗೀಯ ನ್ಯಾಯಪೀಠದಲ್ಲಿ ನಡೆಯುತ್ತಿದೆ.

ಮುಖ್ಯಾಂಶಗಳು
- ಐವರು ಐಎಎಸ್ ಅಧಿಕಾರಿಗಳು ಸಲ್ಲಿಸಿದ್ದ ಅರ್ಜಿ
- ಮೇ 25ಕ್ಕೆ ವಿಚಾರಣೆ ಮುಂದೂಡಿಕೆ

ಕರ್ನಾಟಕ ರಾಜ್ಯ ಪಾನೀಯ ನಿಗಮದ ಕಾರ್ಯನಿರ್ವಾಹಕ ನಿರ್ದೇಶಕಿ (ಹಣಕಾಸು ಮತ್ತು ಆಡಳಿತ ವಿಭಾಗ) ಎಂ.ಸುನೀತಾ ಸಲ್ಲಿಸಿರುವ ಈ ಅರ್ಜಿಯಲ್ಲಿ (5056/2022) ಯಥಾಸ್ಥಿತಿ ಕಾಯ್ದುಕೊಂಡು ಹೋಗುವಂತೆ ನ್ಯಾಯಪೀಠ ರಾಜ್ಯ ಸರ್ಕಾರಕ್ಕೆ ನಿರ್ದೇಶಿಸಿದೆ. ಹೀಗಾಗಿ, ಈ ಪ್ರಕರಣದಲ್ಲೂ ಅದೇ ಆದೇಶವನ್ನು ಪರಿಗಣಿಸಬೇಕು' ಎಂದು ಕೋರಿದರು.

ಈ ಮನವಿಯನ್ನು ಮಾನ್ಯ ಮಾಡಿದ ನ್ಯಾಯಪೀಠ, ಸರ್ಕಾರದ ಮುಖ್ಯ ಕಾರ್ಯದರ್ಶಿ ಹಾಗೂ ಕೆಪಿಎಸ್‌ಸಿ ಕಾರ್ಯದರ್ಶಿಗೆ ನೋಟಿಸ್ ಜಾರಿಗೆ ಆದೇಶಿಸಿದ್ದು, ವಿಚಾರಣೆಯನ್ನು ಮೇ 25ಕ್ಕೆ ನಿಗದಿಪಡಿಸಿದೆ. ಕೆಪಿಎಸ್‌ಸಿ ಸಲ್ಲಿಸಿರುವ ಮತ್ತೊಂದು ರಿಟ್ ಅರ್ಜಿ (2855/2021) ಜೊತೆಗೆ ಈ ಅರ್ಜಿ ವಿಚಾರಣೆಯನ್ನೂ ನಿಗದಿಗೊಳಿಸಿದೆ.

ಅರ್ಜಿದಾರರ ಅಳಲು: 1998ನೇ ಸಾಲಿನ 383 ಗೆಜೆಟೆಡ್ ಪ್ರೊಬೇಷನರಿ ಹುದ್ದೆಗಳ ನೇಮಕಾತಿಯಲ್ಲಿ ಅಕ್ರಮ ನಡೆದಿದೆ ಎಂಬ ಕಾರಣಕ್ಕೆ ಹಲವು ಹಂತದ ಕಾನೂನು ಹೋರಾಟ ನಡೆದ ಪರಿಣಾಮ ಸರ್ಕಾರ ಈ ಅಂತಿಮ ಆಯ್ಕೆ ಪಟ್ಟಿಯನ್ನು ಪರಿಷ್ಕರಿಸಿದೆ. 'ಪರಿಷ್ಕೃತ ಆಯ್ಕೆಪಟ್ಟಿಯಿಂದಾಗಿ ನಾವು ಈಗಿನ-ಹುದ್ದೆಗಳಿಂದ ಹಿಂಬಡ್ತಿ ಪಡೆಯುತ್ತೇವೆ' ಎಂಬುದು ಅರ್ಜಿದಾರರ ಅಳಲು.

ಅಜಯ್ ಹೇಳಿಕೆಯಲ್ಲಿ ತಪ್ಪಿಲ್ಲ ಎಂದ ಕಂಗನಾ

ಮುಂಬೈ (ಪಿಟಿಐ): ಹಿಂದಿ ರಾಷ್ಟ್ರ ಭಾಷೆ ಎಂದು ನಟ ಅಜಯ್ ದೇವಗನ್ ಹೇಳಿರುವುದರಲ್ಲಿ ತಪ್ಪಿಲ್ಲ. ಪ್ರತಿಯೊಬ್ಬರಿಗೂ ತಮ್ಮ ಭಾಷೆ ಹಾಗೂ ಸಂಸ್ಕೃತಿ ಬಗ್ಗೆ ಹೆಮ್ಮೆ ಪಡುವ ಹಕ್ಕಿದೆ ಎಂದು ಬಾಲಿವುಡ್ ನಟಿ ಕಂಗನಾ ರನೌತ್ ಹೇಳಿದ್ದಾರೆ.

ಸುದ್ದಿ 2 ನಿಮಿಷ

'ಬಿಜೆಪಿ ನಾಯಕರೇ ಅಮಿತ್ ಶಾ ಗುಲಾಮರಾಗಬೇಡಿ'

ಬೆಂಗಳೂರು: 'ಬಿಜೆಪಿ ನಾಯಕರೇ, ಅಮಿತ್ ಶಾ ಹಿಂದಿ ಪರ ವಕಾಲತ್ತು ಮಾಡಿದ ತಕ್ಷಣ ಅದನ್ನು ಬೆಂಬಲಿಸಿ ಅವರ ಗುಲಾಮರಾಗಬೇಡಿ. ಕನ್ನಡ ತಾಯಿಯ ಸ್ವಾಭಿಮಾನಿ ಮಕ್ಕಳಾಗಿ' ಎಂದು ವಿಧಾನಸಭೆ ವಿರೋಧ ಪಕ್ಷದ ನಾಯಕ ಸಿದ್ದರಾಮಯ್ಯ ಆಗ್ರಹಿಸಿದ್ದಾರೆ.

ಶುಕ್ರವಾರ ಸರಣಿ ಟ್ವೀಟ್ ಮಾಡಿರುವ ಅವರು, 'ಹಿಂದಿಯ ಪರ ವಕಾಲತ್ತು ಮಾಡಲು ಹೊರಟಿರುವ ಬಿಜೆಪಿಯ ಸಿ.ಟಿ.ರವಿ, ಮುರುಗೇಶ ನಿರಾಣಿ, ರಮೇಶ ಜಿಗಜಿಣಗಿ ಇವರಿಗೆಲ್ಲ ಆ ಭಾಷೆಯ ಬಗ್ಗೆಯೂ ಪ್ರೀತಿ ಇಲ್ಲ. ಇವರೆಲ್ಲರೂ ತಮ್ಮ ದೆಹಲಿ ದೊರೆಗಳನ್ನು ಓಲೈಸಲು ಹೊರಟಿದ್ದಾರೆ' ಎಂದು ಟೀಕಿಸಿದ್ದಾರೆ.



ಕನ್ನಡವನ್ನು ತುಳಿದು ಹಿಂದಿ ಹೇರಲು ಹೊರಟಿರುವ ಬಿಜೆಪಿ ನಾಯಕರ ಕುತಂತ್ರದ ರಾಜಕಾರಣವನ್ನು ಸ್ವಾಭಿಮಾನಿ ಕನ್ನಡಿಗರೆಲ್ಲರೂ ಒಕ್ಕೊರಲಿನಿಂದ ವಿರೋಧಿಸಬೇಕಿದೆ. ಒಂದು ಧರ್ಮ, ಒಂದು ಭಾಷೆ, ಒಂದು ಸಂಸ್ಕೃತಿಯನ್ನು ಹೇರುವುದು ಜನವಿರೋಧಿ ಮಾತ್ರವಲ್ಲ, ಸಂವಿಧಾನ ವಿರೋಧಿ ಕೂಡ ಎಂದು ಹೇಳಿದ್ದಾರೆ.

'ಕನ್ನಡ ಕಾವಲು ಸಮಿತಿ ಮೊದಲ ಅಧ್ಯಕ್ಷನಾಗಿ ರಾಜಕೀಯ ಪ್ರಾರಂಭಿಸಿದ ನಾನು ಇಂದು, ಮುಂದೆ, ಎಂದೆಂದೂ ಕನ್ನಡದ ಕಾವಲುಗಾರ. ಕಳ್ಳರ ಜತೆ ಶಾಮೀಲಾಗುವ ಡೋಂಗಿ ಚೌಕಿದಾರ ಅಲ್ಲ' ಎಂದು ವಾಗ್ದಾಳಿ ನಡೆಸಿದ್ದಾರೆ.

₹ 61 ಸಾವಿರ ಕೋಟಿ ಹೂಡಿಕೆ ಒಪ್ಪಂದ

ಬೆಂಗಳೂರು: ರಾಜ್ಯದ ನವೀಕರಿಸಬಹುದಾದ ಇಂಧನ ಕ್ಷೇತ್ರದಲ್ಲಿ ₹61 ಸಾವಿರ ಕೋಟಿ ಮೊತ್ತದ ಹೂಡಿಕೆಯ ಒಡಂಬಡಿಕೆಗೆ ಹಲವು ಸಂಸ್ಥೆಗಳು ಸಹಿ ಹಾಕಿದ್ದು, ಇದರಿಂದ ರಾಜ್ಯದಲ್ಲಿ ಪ್ರತ್ಯಕ್ಷ ಮತ್ತು ಪರೋಕ್ಷವಾಗಿ 12 ಸಾವಿರ ಉದ್ಯೋಗ ಸೃಷ್ಟಿಯಾಗಲಿದೆ ಎಂದು ಇಂಧನ ಸಚಿವ ವಿ.ಸುನಿಲ್ ಕುಮಾರ್ ತಿಳಿಸಿದ್ದಾರೆ.

ನವದೆಹಲಿಯಲ್ಲಿ ನಡೆಯುತ್ತಿರುವ 'ವಿಂಡರ್ಜಿ 2022' ಸಮ್ಮೇಳನದಲ್ಲಿ ಕರ್ನಾಟಕದಲ್ಲಿ ಹೂಡಿಕೆ ಮಾಡಲು ಹಲವಾರು ಹೂಡಿಕೆದಾರರು ₹61,000 ಕೋಟಿ ಮೊತ್ತದ ಎಕ್ಸ್‌ಪ್ರೆಶನ್ ಆಫ್ ಇಂಟರೆಸ್ಟ್‌ಗೆ ಸಹಿ ಹಾಕಿದ್ದಾರೆ. ರಾಜ್ಯದ ಇಂಧನ ಇಲಾಖೆ ಇತಿಹಾಸದಲ್ಲಿ ಇದೊಂದು ಮೈಲಿಗಲ್ಲು ಎಂದು ಅಭಿಪ್ರಾಯಪಟ್ಟಿದ್ದಾರೆ.

ಕೊಪ್ಪಳ, ಗದಗ, ದಾವಣರೆಗೆರೆ, ಚಿತ್ರದುರ್ಗ, ವಿಜಯನಗರ, ತುಮಕೂರು, ಬಾಗಲಕೋಟೆ ಭಾಗದಲ್ಲಿ ಹೂಡಿಕೆಯಾಗಿ ಉದ್ಯೋಗ ಸೃಷ್ಟಿಯಾಗಲಿದೆ. 9,218 ಮೆಗಾ ವ್ಯಾಟ್ ವಿದ್ಯುತ್ ಉತ್ಪಾದನೆ ಆಗಲಿದೆ ಎಂದರು.

ರಿನ್ಯೂ, ಟೊರೆಂಟ್, ಇಡಿಎಫ್ ರಿನ್ಯೂಬಲ್ ನಂತಹ ಖ್ಯಾತ ಕಂಪನಿಗಳು ಎಕ್ಸ್‌ಪ್ರೆಶನ್ ಆಫ್ ಇಂಟರೆಸ್ಟ್‌ಗೆ ಸಹಿ ಮಾಡಿವೆ. ಇಂಡಿಯನ್ ವಿಂಡ್ ಟರ್ಬೈನ್ ಮ್ಯಾನ್ಯುಫಾಕ್ಚರರ್ಸ್ ಅಸೋಸಿಯೇಶನ್ ಮತ್ತು ಪಿಡಿಎ ಟ್ರೇಡ್ ಫೇರ್ಸ್ ಪ್ರೈವೇಟ್ ಲಿಮಿಟೆಡ್ ಮೂರು ದಿನಗಳ ಸಮ್ಮೇಳನ ಆಯೋಜಿಸಿದೆ.

ಮೋಟಾರು ಇನ್‌ಸ್ಪೆಕ್ಟರ್ ಆಯ್ಕೆಪಟ್ಟಿ ಹಿಂಪಡೆದ ಕೆಪಿಎಸ್‌ಸಿ

ಬೆಂಗಳೂರು: ಸಾರಿಗೆ ಇಲಾಖೆಯಲ್ಲಿನ ಮೋಟಾರು ವಾಹನ ಇನ್‌ಸ್ಪೆಕ್ಟರ್ (ಎಂವಿಐ) 129 ಹುದ್ದೆಗಳ ಭರ್ತಿಗೆ 2019ರ ಜುಲೈ 4ರಂದು ಪ್ರಕಟಿಸಿದ್ದ ಆಯ್ಕೆಪಟ್ಟಿಯನ್ನು ಕರ್ನಾಟಕ ಲೋಕಸೇವಾ ಆಯೋಗ (ಕೆಪಿಎಸ್‌ಸಿ) ಶುಕ್ರವಾರ ಹಿಂಪಡೆದಿದೆ.

150 ಮೋಟಾರು ವಾಹನ ನಿರೀಕ್ಷಕರ ಹುದ್ದೆಗಳ ಭರ್ತಿಗೆ 2016ರ ಫೆಬ್ರುವರಿಯಲ್ಲಿ ಪ್ರಕ್ರಿಯೆ ಆರಂಭಿಸಲಾಗಿತ್ತು. 129 ಹುದ್ದೆಗಳಿಗೆ 2019ರ ಜುಲೈ 4ರಂದು ತಾತ್ಕಾಲಿಕ ಆಯ್ಕೆಪಟ್ಟಿ ಪ್ರಕಟಿಸಲಾಗಿತ್ತು. ಮರುದಿನವೇ ತಿರಸ್ಕೃತಗೊಂಡ ಅಭ್ಯರ್ಥಿಗಳ ಪಟ್ಟಿಯನ್ನೂ ಪ್ರಕಟಿಸಲಾಗಿತ್ತು.

ಒಂದು ವರ್ಷದ ಸೇವಾ ಅನುಭವ ಕಡ್ಡಾಯಗೊಳಿಸಿ ಆಯ್ಕೆಪಟ್ಟಿ ಪ್ರಕಟಿಸಿರುವುದನ್ನು ಪ್ರಶ್ನಿಸಿ ಕರ್ನಾಟಕ ಆಡಳಿತ ನ್ಯಾಯಮಂಡಳಿ ಹಾಗೂ ಹೈಕೋರ್ಟ್‌ನಲ್ಲಿ ಹಲವು ಅರ್ಜಿಗಳು ಸಲ್ಲಿಕೆಯಾಗಿದ್ದವು. ಈ ಎಲ್ಲ ಅರ್ಜಿಗಳನ್ನೂ ವಿಲೇವಾರಿ 2021 ಆಗಸ್ಟ್ 25ರಂದು ತೀರ್ಪು ನೀಡಿದ್ದ ಹೈಕೋರ್ಟ್, 2016ರ ಫೆಬ್ರುವರಿ 4ರಂದು ಹೊರಡಿಸಿದ್ದ ಅಧಿಸೂಚನೆಯ ಪ್ರಕಾರವೇ ನೇಮಕಾತಿ ಪ್ರಕ್ರಿಯೆಯನ್ನು ಅಂತಿಮಗೊಳಿಸುವಂತೆ ಆದೇಶಿಸಿತ್ತು.

ಹೈಕೋರ್ಟ್ ಆದೇಶದಂತೆ ಮೋಟಾರು ವಾಹನ ನಿರೀಕ್ಷಕರ ನೇಮಕಾತಿ ಪ್ರಕ್ರಿಯೆ ನಡೆಯಬೇಕು. ಹೀಗಾಗಿ, 2019ರ ಜು.4ರಂದು ಪ್ರಕಟಿಸಿರುವ ತಾತ್ಕಾಲಿಕ ಆಯ್ಕೆಪಟ್ಟಿ, ಜುಲೈ 5ರಂದು ಹೊರಡಿಸಿದ್ದ ತಿರಸ್ಕೃತ ಅಭ್ಯರ್ಥಿಗಳ ಪಟ್ಟಿ ಹಿಂಪಡೆಯಲಾಗಿದೆ ಎಂದು ಕೆಪಿಎಸ್‌ಸಿ ಕಾರ್ಯದರ್ಶಿ ಜಿ.ಸತ್ಯವತಿ ಅಧಿಸೂಚನೆ ಹೊರಡಿಸಿದ್ದಾರೆ.

ತೀವ್ರ ವಿರೋಧ; ಕಿಟ್ ವಿತರಣೆ ರದ್ದು

ಪ್ರಜಾವಾಣಿ ವಾರ್ತೆ

ಹುಬ್ಬಳ್ಳಿ: ಹಳೇಹುಬ್ಬಳ್ಳಿ ಗಲಭೆ ಪ್ರಕರಣದಲ್ಲಿ ಬಂಧಿತರಾದ ಆರೋಪಿಗಳ ಕುಟುಂಬಕ್ಕೆ ಶಾಸಕ ಜಮೀರ್ ಅಹಮ್ಮದ್ ಅವರ ನೆರವಿನಿಂದ ಧನ ಸಹಾಯ ಮತ್ತು ಆಹಾರದ ಕಿಟ್ ವಿತರಿಸುವ ಕಾರ್ಯಕ್ರಮಕ್ಕೆ ವಿರೋಧ ವ್ಯಕ್ತವಾದ ಹಿನ್ನೆಲೆಯಲ್ಲಿ ಕಾಂಗ್ರೆಸ್ ಮುಖಂಡರು ಹಾಗೂ ಜಮೀರ್ ಬೆಂಬಲಿಗರು ಕಾರ್ಯಕ್ರಮ ರದ್ದುಪಡಿಸಿದರು.

ಶುಕ್ರವಾರ ಶಾಸಕ ಜಮೀರ್ ಅವರು ಕರೆ ಮಾಡಿ 'ಗಲಭೆಯಲ್ಲಿ ತಪ್ಪು ಮಾಡಿದವರಿಗೆ ಶಿಕ್ಷೆಯಾಗಲಿ. ರಂಜಾನ್ ಇರುವುದರಿಂದ ಪ್ರಕರಣದಲ್ಲಿ ಬಂಧಿತರಾಗಿರುವವರ ಕುಟುಂಬದವರಿಗೆ ಆಹಾರದ ಕಿಟ್ ಹಾಗೂ ₹5 ಸಾವಿರ ನೆರವು ನೀಡುತ್ತಿದ್ದೇನೆ. ಇದಕ್ಕೆ ಬೇರೆ ಅರ್ಥ ಕೊಡುವುದು ಬೇಡ' ಎಂದು ಬೆಂಬಲಿಗರಿಗೆ ತಿಳಿಸಿದ್ದರು. ಆ ಹಿನ್ನೆಲೆಯಲ್ಲಿ ಹಳೇಹುಬ್ಬಳ್ಳಿಯ ಶಾದಿ ಮಹಲ್ ಕಲ್ಯಾಣ ಮಂಟಪದಲ್ಲಿ ಕಿಟ್ ವಿತರಣೆ ಕಾರ್ಯಕ್ರಮ ಹಮ್ಮಿಕೊಳ್ಳಲಾಗಿತ್ತು.

ಇದನ್ನು ಖಂಡಿಸಿ ಹು–ಧಾ ಮಹಾನಗರ ಜಿಲ್ಲಾ ಬಿಜೆಪಿ ಘಟಕ ಪೊಲೀಸ್ ಕಮಿಷನರ್‌ಗೆ ಹಾಗೂ ಶಹರ ಠಾಣೆ ಇನ್‌ಸ್ಪೆಕ್ಟರ್‌ಗೆ ಮನವಿ ಸಲ್ಲಿಸಿ ಆಕ್ರೋಶ ವ್ಯಕ್ತಪಡಿಸಿತ್ತು. ಕಿಟ್ ವಿತರಣೆ ನಡೆಯುತ್ತದೆ ಎಂಬ ಮಾಹಿತಿ ಹಿನ್ನೆಲೆಯಲ್ಲಿ ಶ್ರೀರಾಮ ಸೇನೆಯ ಕೆಲವರು ಪ್ರತಿಭಟನೆ ನಡೆಸಲು ಯೋಜಿಸಿದ್ದರು.

'ಜಮೀರ್ ಅವರು ಆಹಾರದ ಕಿಟ್ ವಿತರಿಸುವಂತೆ ಹೇಳಿದ್ದರು. ಆರೋಪಿಗಳ ಕುಟುಂಬದವರಿಗೆ ನೀಡುತ್ತಿದ್ದಾರೆ ಎಂದು ವಿರೋಧ ವ್ಯಕ್ತವಾಗಿದ್ದರಿಂದ ಕಾರ್ಯಕ್ರಮ ರದ್ದುಗೊಳಿಸಲಾಯಿತು' ಎಂದು ಕಾಂಗ್ರೆಸ್ ಮುಖಂಡ ಅಲ್ತಾಫ್ ಕಿತ್ತೂರು ಹೇಳಿದರು.

'ಓಟ್ ಬ್ಯಾಂಕ್ ಗಟ್ಟಿಗೊಳಿಸಲು ಇವರು ಯಾವುದೇ ಮಟ್ಟಕ್ಕೆ ಇಳಿಯುತ್ತಾರೆ ಎಂಬುದನ್ನು ಇದು ಸೂಚಿಸುತ್ತದೆ. ಗಲಭೆಯಲ್ಲಿ ಬಂಧಿತರಾದವರಿಗೆ ಹಣದ ನೆರವು, ಉಡುಗೊರೆ ನೀಡಲು ಮುಂದಾಗಿರುವುದು ನಾಚಿಕೆಗೇಡು ' ಎಂದು ಕೇಂದ್ರ ಸಚಿವ ಪ್ರಲ್ಹಾದ ಜೋಶಿ ಟ್ವೀಟ್ ಮಾಡಿದ್ದಾರೆ.

ಗಲಭೆ ಆರೋಪಿ ಆತ್ಮಹತ್ಯೆಗೆ ಯತ್ನ

ಹುಬ್ಬಳ್ಳಿ: ಹಳೇಹುಬ್ಬಳ್ಳಿ ಗಲಭೆ ಪ್ರಕರಣದ ಆರೋಪಿ ಮೊಹಮ್ಮದ್ ಆರೀಫ್ ನಾಗರಾಳ ಗುರುವಾರ ಮಧ್ಯರಾತ್ರಿ ಟರ್ಪಂಟೈಲ್ ಕುಡಿದು ಆತ್ಮಹತ್ಯೆಗೆ ಯತ್ನಿಸಿದ್ದಾನೆ. ಹಳೇಹುಬ್ಬಳ್ಳಿ ಪೊಲೀಸರ ಕಸ್ಟಡಿಯಲ್ಲಿದ್ದ ಆರೀಫ್, ಅಲ್ಲಿದ್ದ ಸಿಬ್ಬಂದಿಗೆ ಟರ್ಪಂಟೈಲ್ ನೀಡುವಂತೆ ವಿನಂತಿಸಿದ್ದಾನೆ. ಗಾಯಕ್ಕೆ ಹಚ್ಚಲು ಕೇಳಿರಬಹುದು ಎಂದು ಸಿಬ್ಬಂದಿ ಬಾಟಲ್ ನೀಡಿದ್ದು, ಅದನ್ನು ತಕ್ಷಣವೇ ಕುಡಿದಿದ್ದಾನೆ. ಅಲ್ಲಿಯೇ ಇದ್ದ ಮತ್ತೊಬ್ಬ ಆರೋಪಿ ಮಹಾನಗರ ಪಾಲಿಕೆಯ ಎಐಎಂಐಎಂ ಸದಸ್ಯ ನಸೀರ್ ಅಹ್ಮದ್ ಹೊನ್ಯಾಳ ಅದನ್ನು ನೋಡಿ ಬಾಟಲಿ ಕಿತ್ತುಕೊಂಡಿದ್ದಾರೆ ಎಂದು ಪೊಲೀಸರು ತಿಳಿಸಿದ್ದಾರೆ.

ಆರೀಫ್ ಚೇತರಿಸಿ ಕೊಂಡಿದ್ದು, ಕಿಮ್ಸ್ ಆಸ್ಪತ್ರೆಯಲ್ಲಿ ಚಿಕಿತ್ಸೆ ಪಡೆಯುತ್ತಿದ್ದಾನೆ ಎಂದು ಪೊಲೀಸರು ಹೇಳಿದ್ದಾರೆ.

183 ವಿದ್ಯಾರ್ಥಿನಿಯರ ಕೊರಳಿಗೆ ಚಿನ್ನದ ಪದಕಗಳು ● ಮೂವರು ಸಾಧಕರಿಗೆ ಗೌರವ ಡಾಕ್ಟರೇಟ್

ವಿ.ವಿ ಘಟಿಕೋತ್ಸವ: ವಿದ್ಯಾರ್ಥಿನಿಯರ ಸಂಭ್ರಮ

ಪ್ರಜಾವಾಣಿ ವಾರ್ತೆ



ಅತಿ ಹೆಚ್ಚು ಚಿನ್ನದ ಪದಕ ಪಡೆದ ವಿದ್ಯಾರ್ಥಿಗಳು (ಹಿಂದಿನ ಸಾಲು) ಎನ್‌. ಸುರಭಿ, ಸೌಮ್ಯಾ ರಾಣಿ ಮತ್ತು ಯದುಶ್ರೀ (ಮುಂದಿನ ಸಾಲು) ವಿ.ನಂದಿನಿ, ಎಚ್‌.ಸುಷ್ಮಾ, ಪಿ.ಸಿ. ಐಶ್ವರ್ಯಾ, ಎಸ್‌. ಶ್ರೀನಿವಾಸ್‌, ಎನ್‌. ಸುರೇಶ್ ಬಾಬು, ಆರ್‌. ಚಂದನಾ ಇದ್ದರು —ಪ್ರಜಾವಾಣಿ ಚಿತ್ರ

ಬೆಂಗಳೂರು: ಇಲ್ಲಿನ ಸೆಂಟ್ರಲ್ ಕಾಲೇಜು ಆವರಣದ ಜ್ಞಾನ ಜ್ಯೋತಿ ಸಭಾಂಗಣದಲ್ಲಿ ಶುಕ್ರವಾರ ಆಯೋಜಿಸಿದ್ದ ಬೆಂಗಳೂರು ವಿಶ್ವವಿದ್ಯಾಲಯದ 56ನೇ ವಾರ್ಷಿಕ ಘಟಿಕೋತ್ಸವದಲ್ಲಿ ವಿದ್ಯಾರ್ಥಿನಿಯರದ್ದೇ ಸಂಭ್ರಮ. ಚಿನ್ನದ ಪದಕಗಳನ್ನು ಪಡೆಯುವಲ್ಲಿ ವಿದ್ಯಾರ್ಥಿನಿಯರೇ ಮೇಲುಗೈ ಸಾಧಿಸಿದರು.

ಒಟ್ಟು 245 ವಿದ್ಯಾರ್ಥಿಗಳಲ್ಲಿ 183 ವಿದ್ಯಾರ್ಥಿನಿಯರೇ ಚಿನ್ನದ ಪದಕಗಳನ್ನು ಪಡೆದರು. ಸ್ನಾತಕೋತ್ತರ ಪದವಿ ವಿಭಾಗದಲ್ಲಿ ರಸಾಯನವಿಜ್ಞಾನ ವಿಭಾಗದ ಎಚ್‌. ಸುಷ್ಮಾ ಅತಿ ಹೆಚ್ಚು ಏಳು ಚಿನ್ನದ ಪದಕಗಳನ್ನು ಪಡೆದರು.

ಸಂಸ್ಕೃತ ವಿಭಾಗದ ಪಿ.ಸಿ. ಐಶ್ವರ್ಯಾ ಮತ್ತು ಕನ್ನಡ ಅಧ್ಯಯನ ಕೇಂದ್ರದ ವಿದ್ಯಾರ್ಥಿ ಎಸ್‌. ಶ್ರೀನಿವಾಸ್ ತಲಾ ಆರು, ಗಣಿತ ವಿಭಾಗದ ಎನ್‌. ಸುರಭಿ, ಸಸ್ಯವಿಜ್ಞಾನ ವಿಭಾಗದ ಎನ್‌. ಸುರೇಶ್ ಬಾಬು, ಪ್ರಾಣಿವಿಜ್ಞಾನ ವಿಭಾಗದ ಆರ್‌. ಚಂದನಾ ತಲಾ ಐದು ಚಿನ್ನದ ಪದಕ ಪಡೆದರು.

ಬಿ.ಎಸ್ಸಿ. ಪದವಿ ವಿಭಾಗದಲ್ಲಿ ಯಲಹಂಕ ಪ್ರಥಮ ದರ್ಜೆ ಕಾಲೇಜಿನ ವಿ. ನಂದಿನಿ ಆರು ಚಿನ್ನದ ಪದಕಗಳನ್ನು ಪಡೆದರು. ಬಿಬಿಎ ಪದವಿಯಲ್ಲಿ ಬೆಂಗಳೂರಿನ ಸೇಂಟ್ ಆ್ಯನ್ಸ್ ಪದವಿ ಕಾಲೇಜಿನ ಮುಸ್ಕಾನ್ ಖಾನಂ ಹಾಗೂ ಬಿ.ಇ. ಮೆಕ್ಯಾನಿಕಲ್ ಎಂಜಿನಿಯರಿಂಗ್‌ನಲ್ಲಿ ಬಿ.ವಿ. ರಕ್ಷಿತಾ ತಲಾ ಐದು ಚಿನ್ನದ ಪದಕ ಪಡೆದರು.

ರಾಜ್ಯಪಾಲ ಥಾವರಚಂದ್ ಗೆಹಲೋತ್ ವಿದ್ಯಾರ್ಥಿಗಳಿಗೆ ಪದವಿ ಪ್ರಮಾಣಪತ್ರ ಪ್ರದಾನ ಮಾಡಿದರು.

ಒಟ್ಟು 125 ಅಭ್ಯರ್ಥಿಗಳಿಗೆ ಪಿಎಚ್‌.ಡಿ ಪದವಿ ಮತ್ತು 321 ಚಿನ್ನದ ಪದಕಗಳು ಹಾಗೂ 132 ನಗದು ಬಹುಮಾನಗಳನ್ನು ವಿದ್ಯಾರ್ಥಿಗಳಿಗೆ ಪ್ರದಾನ ಮಾಡಲಾಯಿತು. ಸಾಮಾಜಿಕ ಅಸಮಾನತೆ ತೊಡೆದು ಹಾಕಲು ಶ್ರಮಿಸಿರುವುದನ್ನು ಪರಿಗಣಿಸಿ ಎಂ.ಎಸ್. ಮುತ್ತುರಾಜ್, ದೃಶ್ಯಕಲೆ ಕ್ಷೇತ್ರಕ್ಕೆ ಕೊಡುಗೆ ನೀಡಿರುವುದಕ್ಕೆ ಕಲಾವಿದ ಎಸ್.ಜಿ. ವಾಸುದೇವ್ ಮತ್ತು ಅಧ್ಯಾತ್ಮ ಕ್ಷೇತ್ರಕ್ಕೆ ನೀಡಿರುವ ಕೊಡುಗೆ ಪರಿಗಣಿಸಿ ಅಕ್ಷಯ ಪಾತ್ರ ಪ್ರತಿಷ್ಠಾನದ ಸಂಸ್ಥಾಪಕ ಅಧ್ಯಕ್ಷ ಮಧು ಪಂಡಿತ್ ದಾಸ್ ಅವರಿಗೆ ಘಟಿಕೋತ್ಸವದಲ್ಲಿ ಗೌರವ ಡಾಕ್ಟರೇಟ್ ಪದವಿ ಪ್ರದಾನ ಮಾಡಲಾಯಿತು.

ಪದಕ ಪ್ರದಾನಕ್ಕೆ ಸಮಯದ ಅಭಾವ: ವಿದ್ಯಾರ್ಥಿಗಳಿಗೆ ಪದಕ ಪ್ರದಾನವನ್ನು ಸಮಯದ ಅಭಾವಕ್ಕೆ ರಾಜ್ಯಪಾಲರು ಮೊಟಕುಗಳಿಸಿದರು. ನಂತರ, ನ್ಯಾಕ್ ನಿರ್ದೇಶಕ ಡಾ.ಎಸ್‌.ಸಿ. ಶರ್ಮಾ ಮತ್ತು ರಾಜ್ಯಪಾಲರು ಭಾಷಣ ಮಾಡಿದರು. ರಾಜ್ಯಪಾಲರು ಘಟಿಕೋತ್ಸವ ಕಾರ್ಯಕ್ರಮದಿಂದ ತೆರಳಿದ ಬಳಿಕ ಉಳಿದ ವಿದ್ಯಾರ್ಥಿಗಳಿಗೆ ಕುಲಪತಿ ಪ್ರೊ. ಕೆ.ಆರ್. ವೇಣುಗೋಪಾಲ್ ಪ್ರದಾನ ಮಾಡಿದರು.

‘ವಿದ್ಯಾರ್ಥಿಗಳು ಉದ್ಯಮಿಗಳಾಗಬೇಕು’

‘ಬೆಂಗಳೂರು ವಿಶ್ವವಿದ್ಯಾಲಯದಲ್ಲಿ ಅಧ್ಯಯನ ಮಾಡಿದ ನಾಲ್ವರು ಭಾರತ ರತ್ನ ಪಡೆದಿದ್ದಾರೆ. ಇದು ವಿಶ್ವವಿದ್ಯಾಲಯದ ಬೋಧಕರಿಗೂ ಮತ್ತು ಸಿಬ್ಬಂದಿಗೂ ಹೆಮ್ಮೆ ತರುವ ಸಂಗತಿ. ಇಂತಹ ಮಹಾಪುರುಷರು ನಮಗೆ ಪ್ರೇರಣೆಯಾಗಬೇಕು’ ಎಂದು ರಾಜ್ಯಪಾಲ ಥಾವರಚಂದ್ ಗೆಹಲೋತ್ ಅವರು ತಮ್ಮ ಭಾಷಣದಲ್ಲಿ ಹೇಳಿದರು.

‘ವಿದ್ಯಾರ್ಥಿಗಳು ಉದ್ಯೋಗಿಗಳಾಗುವ ಬದಲು ಉದ್ಯಮಿಗಳಾಗಿ ಉದ್ಯೋಗಗಳನ್ನು ಸೃಷ್ಟಿಸಬೇಕು. ಈ ವಿಶ್ವವಿದ್ಯಾಲಯವನ್ನು ದೇಶ ಮತ್ತು ಜಗತ್ತಿನಲ್ಲೇ ಉತ್ತುಂಗ ಸ್ಥಾನಕ್ಕೆ ಕೊಂಡೊಯ್ಯಬೇಕು’ ಎಂದು ಹೇಳಿದರು.

‘ಹೊಸ ಸವಾಲುಗಳಿಗೆ ವಿಶ್ವವಿದ್ಯಾಲಯಗಳು ಸಜ್ಜುಗೊಳ್ಳಬೇಕು’

‘ಡಿಜಿಟಲ್ ಯುಗದಲ್ಲಿ ಎದುರಾಗುತ್ತಿರುವ ಹೊಸ, ಹೊಸ ಸವಾಲುಗಳನ್ನು ಎದುರಿಸುವ ನಿಟ್ಟಿನಲ್ಲಿ ಶಿಕ್ಷಣ ಸಂಸ್ಥೆಗಳು ಸಿದ್ಧವಾಗಿವೆಯೇ ಎನ್ನುವುದನ್ನು ಆತ್ಮವಿಮರ್ಶೆ ಮಾಡಿಕೊಳ್ಳಬೇಕು’ ಎಂದು ರಾಷ್ಟ್ರೀಯ ಮೌಲ್ಯಮಾಪನ ಮತ್ತು ಮಾನ್ಯತಾ ಮಂಡಳಿ (ನ್ಯಾಕ್) ನಿರ್ದೇಶಕ ಪ್ರೊ. ಎಸ್‌.ಸಿ. ಶರ್ಮಾ ಹೇಳಿದರು.

ಘಟಿಕೋತ್ಸವ ಭಾಷಣ ಮಾಡಿದ ಅವರು, ‘ವಿಶ್ವವಿದ್ಯಾಲಯಗಳು ಶ್ರೇಷ್ಠ ಕೇಂದ್ರಗಳಾಗಿ ಅಭಿವೃದ್ಧಿ ಹೊಂದಲು ಇದು ಸಕಾಲಿಕವಾಗಿದೆ. ಉದ್ಯಮ ವಲಯ ಅಥವಾ ಉದ್ಯೋಗದ ಮಾರುಕಟ್ಟೆಗೆ ವಿದ್ಯಾರ್ಥಿಗಳನ್ನು ಸಿದ್ಧಗೊಳಿಸುವ ನಿಟ್ಟಿನಲ್ಲಿ ಗುಣಮಟ್ಟದ ಶಿಕ್ಷಣ ನೀಡುವುದು ಅಗತ್ಯವಿದೆ’ ಎಂದು ಸಲಹೆ ನೀಡಿದರು.

‘ನಿರಂತರ ಅಧ್ಯಯನದಿಂದ ಯಶಸ್ಸು’

‘ರಸಾಯನ ವಿಜ್ಞಾನ ನನ್ನ ನೆಚ್ಚಿನ ವಿಷಯ. ಪಠ್ಯಕ್ರಮವನ್ನು ಅರ್ಥ ಮಾಡಿಕೊಂಡು ನಿರಂತರವಾಗಿ ಮತ್ತು ವ್ಯವಸ್ಥಿತವಾಗಿ ವೇಳಾಪಟ್ಟಿ ಸಿದ್ಧಪಡಿಸಿಕೊಂಡು ಅಧ್ಯಯನ ಮಾಡಿದ್ದರಿಂದ ಯಶಸ್ಸು ದೊರೆತಿದೆ’ ಎಂದು ಏಳು ಚಿನ್ನದ ಪದಕಗಳನ್ನು ಪಡೆದ ರಸಾಯನ ವಿಜ್ಞಾನ ವಿಭಾಗದ ಎಚ್‌. ಸುಷ್ಮಾ ಪ್ರತಿಕ್ರಿಯಿಸಿದರು.

‘ನನಗೆ ಐಎಎಸ್ ಅಧಿಕಾರಿಯಾಗುವ ಗುರಿ ಇದೆ. ಇದಕ್ಕಾಗಿ ತಯಾರಿ ನಡೆಸಿದ್ದೇನೆ’ ಎಂದು ಹೇಳಿದರು. ಬಿ.ಎಸ್ಸಿ. ಪದವಿಯನ್ನು ಸುಷ್ಮಾ ಮೌಂಟ್ ಕಾರ್ಮೆಲ್ ಕಾಲೇಜಿನಲ್ಲಿ ಓದಿದ್ದಾರೆ.

ಆರು ಚಿನ್ನದ ಪದಕಗಳನ್ನು ಪಡೆದಿರುವ ಯಲಹಂಕ ಸರ್ಕಾರಿ ಕಾಲೇಜಿನಲ್ಲಿ ಬಿ.ಎಸ್ಸಿ. ಪದವಿ ಪಡೆದಿರುವ ವಿ. ನಂದಿನಿ, ’ನನಗೆ ದೊರೆತ ಚಿನ್ನದ ಪದಕಗಳನ್ನು ತಾಯಿ ಮತ್ತು ಶಿಕ್ಷಕರಿಗೆ ಅರ್ಪಿಸುತ್ತೇನೆ. ನನಗೆ ಉಪನ್ಯಾಸಕಿಯಾಗುವ ಬಯಕೆ ಇದೆ’ ಎಂದು ತಿಳಿಸಿದರು.

ಪ್ರಸ್ತುತ ಸೆಂಟ್ರಲ್ ಕಾಲೇಜಿನಲ್ಲಿ ನಂದಿನಿ ಎಂ.ಎಸ್ಸಿ. ರಸಾಯನ ವಿಜ್ಞಾನ ಅಧ್ಯಯನ ಮಾಡುತ್ತಿದ್ದಾರೆ. ಇವರ ತಾಯಿ ಮನೆಗೆಲಸ ಮಾಡುತ್ತ, ನಂದಿನಿ ಅವರ ವಿದ್ಯಾಭ್ಯಾಸಕ್ಕೆ ಬೆಂಬಲ ನೀಡಿದ್ದಾರೆ.

‘ಜಲ ಕ್ರೀಡೆ: ಜೆಎಲ್‌ಆರ್‌ಗೆ ಇರುವ ಅನುಭವವೇನು?’

ಬೆಂಗಳೂರು: ‘ಜಂಗಲ್ ಲಾಡ್ಜಸ್ ಮತ್ತು ರೆಸಾರ್ಟ್ಸ್ (ಜೆಎಲ್‌ಆರ್) ಸಂಸ್ಥೆಯು ಕಾಳಿ ನದಿಯಲ್ಲಿ ಜಲಕ್ರೀಡೆ (ವೈಟ್ ವಾಟರ್ ರ‍್ಯಾಫ್ಟಿಂಗ್) ನಡೆಸಲು ಟೆಂಡರ್ ಪ್ರಕ್ರಿಯೆ ಪೂರ್ಣಗೊಳಿಸಿ ತಿಂಗಳು ಕಳೆದರೂ ಪ್ರವಾಸೋದ್ಯಮ ಸಚಿವ ಆನಂದ ಸಿಂಗ್ ದುರುದ್ದೇಶದಿಂದ ಅದಕ್ಕೆ ತಡೆ ಒಡ್ಡಿದ್ದಾರೆ’ ಎಂದು ಆರೋಪಿಸಿರುವ ಕರ್ನಾಟಕ ರಾಷ್ಟ್ರ ಸಮಿತಿ ಪಕ್ಷವು (ಕೆಆರ್‌ಎಸ್), ಸಚಿವರಿಗೆ ಎಂಟು ಪ್ರಶ್ನೆಗಳನ್ನು ಕೇಳಿದೆ.

‘ವೈಟ್ ವಾಟರ್ ರ‍್ಯಾಫ್ಟಿಂಗ್‌ನಿಂದ ಇಷ್ಟೊಂದು ಆದಾಯ ಬರುತ್ತದೆ ಎಂದು ತಿಳಿದಿರಲಿಲ್ಲ. ಜೆಎಲ್‌ಆರ್ ವತಿಯಿಂದಲೇ 9 ತಿಂಗಳು ರ‍್ಯಾಫ್ಟಿಂಗ್ ನಡೆಸಿದಾಗ ದುಪ್ಪಟ್ಟು ಲಾಭ ಗಳಿಸಿದ್ದೇವೆ’ ಎಂದು ಸಚಿವರು ಪ್ರತಿಕ್ರಿಯೆ ನೀಡಿದ್ದರು. ಈ ಬಗ್ಗೆ ಸಚಿವರಿಗೆ ಗುರುವಾರ ಪತ್ರ ಬರೆದಿರುವ ಪಕ್ಷವು, ‘ಸಂದೇಹಗಳಿಗೆ ಸ್ಪಷ್ಟನೆ ನೀಡಬೇಕು’ ಎಂದಿದೆ.

ಪಕ್ಷ ಕೇಳಿರುವ ಪ್ರಶ್ನೆಗಳು:

- ರ‍್ಯಾಫ್ಟಿಂಗ್‌ನಿಂದ ಜೆಎಲ್‌ಆರ್ 10 ವರ್ಷಗಳಲ್ಲಿ ಗಳಿಸಿರುವ ವರ್ಷವಾರು ಆದಾಯವೆಷ್ಟು?
- ಯಾವ ವರ್ಷದಲ್ಲಿ ಎಷ್ಟು ತಿಂಗಳುಗಳ ಕಾಲ ಜೆಎಲ್‌ಆರ್ ಸ್ವತಃ ರ‍್ಯಾಫ್ಟಿಂಗ್ ನಡೆಸಿತ್ತು. ಆಗ ಗಳಿಸಿದ ಆದಾಯ ಎಷ್ಟು?
- ದುಪ್ಪಟ್ಟು ಆದಾಯ ಬರುತ್ತದೆ ಎಂದು ಹೇಳಲು ಯಾವ ವರದಿಯ ಆಧಾರವಿದೆ? ಬಹಿರಂಗಪಡಿಸಿ.
- ಟೆಂಡರ್ ಪ್ರಕ್ರಿಯೆ ಬಗ್ಗೆ ಯಾರು ಯಾವಾಗ ದೂರು ನೀಡಿದ್ದಾರೆ? ದೂರಿನ ಪ್ರತಿ ಬಿಡುಗಡೆ ಮಾಡಿ.
- ಪ್ರಸ್ತುತ ಟೆಂಡರ್ ಪ್ರಕ್ರಿಯೆಯು ಈ ಗುತ್ತಿಗೆ ನೀಡುವ ಸಲುವಾಗಿ ನಡೆದಿರುವ ಮೂರನೇ ಟೆಂಡರ್ ಆಗಿದೆ. ಮೊದಲನೇ ಟೆಂಡರ್ 2021ರ ಅಕ್ಟೋಬರ್‌ನಲ್ಲಿ ನಡೆದು, ಕೇವಲ ಇಬ್ಬರು ಭಾಗವಹಿಸಿದ್ದಾರೆ ಎಂಬ ಕಾರಣಕ್ಕೆ ರದ್ದಾಗಿತ್ತು. ಡಿಸೆಂಬರ್‌ನಲ್ಲಿ ನಡೆದಿದ್ದ ಎರಡನೇ ಟೆಂಡರ್ ಪ್ರಕ್ರಿಯೆ ಸಹ ತಾಂತ್ರಿಕ ಕಾರಣಗಳಿಂದ ರದ್ದಾಗಿ, ಈಗ ಮೂರನೇ ಬಾರಿ ಸಂಪೂರ್ಣವಾಗಿದೆ. ಹೀಗಿರುವಾಗ, ಆರು ತಿಂಗಳಿಂದ ನಡೆದಿರುವ ಟೆಂಡರ್ ಪ್ರಕ್ರಿಯೆ ಸಚಿವರಿಗೆ ತಿಳಿದಿರಲಿಲ್ಲವೇ?
- 2021ರ ಡಿಸೆಂಬರ್ 29ರಂದು ಜೆಎಲ್‌ಆರ್ ವಾರ್ಷಿಕ ಸಾಮಾನ್ಯ ಸಭೆ ನಡೆಸಿದೆ. ಈ ಸಭೆಯ ವರದಿ ಸಚಿವರಿಗೆ ತಲುಪಿಲ್ಲವೇ? ಅದನ್ನು ಸಚಿವರು ಪರಿಶೀಲಿಸಿಲ್ಲವೇ? ಈ ಟೆಂಡರ್ ಪ್ರಕ್ರಿಯೆ ಬಗ್ಗೆ ಸಭೆಯಲ್ಲಿ ಅನುಮೋದನೆ ಪಡೆದಿಲ್ಲವೇ?
- ಜಲ ಕ್ರೀಡೆ ನಡೆಸುವ ಸಂಸ್ಥೆ ಕನಿಷ್ಠ ಮೂರು ವರ್ಷಗಳ ಅನುಭವ ಹೊಂದಿರಬೇಕು ಎಂದು ಟೆಂಡರ್ ಷರತ್ತಿನಲ್ಲಿ ಇದೆ. ಆದರೆ, ಜೆಎಲ್‌ಆರ್ ಸಂಸ್ಥೆಗೆ ಇರುವುದು 9 ತಿಂಗಳ ಅನುಭವ ಮಾತ್ರ. ಯಾರ ಜೀವಕ್ಕೂ ಅಪಾಯವಾಗದ ರೀತಿಯಲ್ಲಿ ಸಂಸ್ಥೆಯಿಂದ ರ‍್ಯಾಫ್ಟಿಂಗ್ ನಡೆಸಲು ಸಾಧ್ಯವೇ?

ಕುಮಟಾದ ಪ್ರತೀಕ್ಷಾಗೆ ಒಂಬತ್ತು ಚಿನ್ನ

ಬೆಂಗಳೂರು ವೈದ್ಯಕೀಯ ಕಾಲೇಜು ಮತ್ತು ಸಂಶೋಧನಾ ಸಂಸ್ಥೆ ಘಟಿಕೋತ್ಸವ

ಪ್ರಜಾವಾಣಿ ವಾರ್ತೆ



ವಿವಿಧ ವಿಷಯಗಳಲ್ಲಿ ಚಿನ್ನದ ಪದಕ ಪಡೆದ (ಎಡದಿಂದ) ಕೆ.ಎಂ.ಕಾರ್ತಿಕ್‌, ಜಿ.ಅನಂತ್‌, ಪ್ರತೀಕ್ಷಾ ಜೆ.ಪೈ, ವರ್ಷಾ ರಾವ್‌, ಅವಂತಿಕ ಸೂದ್ ಹಾಗೂ ಎಸ್‌.ಬಿ.ರವೀಶ್ ಸಂಭ್ರಮಿಸಿದರು —ಪ್ರಜಾವಾಣಿ ಚಿತ್ರ

ಬೆಂಗಳೂರು: ಉತ್ತರಕನ್ನಡ ಜಿಲ್ಲೆ ಕುಮಟಾದ ಪ್ರತೀಕ್ಷಾ ಜೆ.ಪೈ, ಬೆಂಗಳೂರು ವೈದ್ಯಕೀಯ ಕಾಲೇಜು, ಸಂಶೋಧನಾ ಸಂಸ್ಥೆಯ 2022ನೇ ಸಾಲಿನ ಘಟಿಕೋತ್ಸವದಲ್ಲಿ ಒಟ್ಟು 9 ಚಿನ್ನದ ಪದಕಗಳನ್ನು ಪಡೆದಿದ್ದಾರೆ.

ಫಿಸಿಯಾಲಜಿ, ಬಯೋಕೆಮಿಸ್ಟ್ರಿ, ಮೈಕ್ರೋಬಯಾಲಜಿ, ಪೆಥಾಲಜಿ, ಫೋರೆನ್ಸಿಕ್ ಮೆಡಿಸಿನ್, ಕಮ್ಯುನಿಟಿ ಮೆಡಿಸಿನ್, ಜನರಲ್ ಮೆಡಿಸಿನ್, ಜನರಲ್ ಸರ್ಜರಿ ಮತ್ತು ಪಿಡಿಯಾಟ್ರಿಕ್ಸ್ ವಿಷಯಗಳಲ್ಲಿ ಈ ಸಾಧನೆ ಮಾಡಿದ್ದಾರೆ.

ಮೊದಲನೇ, ಎರಡನೇ ಹಾಗೂ ಅಂತಿಮ ವರ್ಷದ ಎಂಬಿಬಿಎಸ್‌ನಲ್ಲಿ ಸಮಗ್ರ ಪ್ರಶಸ್ತಿ ಪಡೆದಿರುವ ಅವರಿಗೆ ಪೆಥಾಲಜಿ ಹಾಗೂ ಮೈಕ್ರೋಬಯಾಲಜಿ ವಿಭಾಗದಿಂದ ನಗದು ಪುರಸ್ಕಾರ, ಎನ್‌.ವೀರಯ್ಯ, ಡಾ.ಎಚ್‌.ಗೀತಾ, ಡಾ.ಬಿ.ಎನ್‌.ಲಿಂಗರಾಜು, ಡಾ.ಎಲ್‌. ಜಿ.ಹಾವನೂರು ಮತ್ತು ಸುಶೀಲಮ್ಮ ಹಾವನೂರು ಅವರ ಹೆಸರಿನಲ್ಲಿ ನೀಡುವ ವಿಶೇಷ ಪ್ರಶಸ್ತಿಗಳೂ ಲಭಿಸಿವೆ.

‘ಐದೂವರೆ ವರ್ಷಗಳ ಪರಿಶ್ರಮಕ್ಕೆ ಪ್ರತಿಫಲ ಸಿಕ್ಕಿದೆ. ಮೊದಲನೇ ವರ್ಷದಿಂದಲೂ ಓದಿನಲ್ಲಿ ಸ್ಥಿರತೆ ಕಾಪಾಡಿಕೊಂಡು ಬಂದಿದ್ದೆ. ಅಂತಿಮ ವರ್ಷದಲ್ಲಿ ಪಠ್ಯದ ಜೊತೆಗೆ ಪ್ರಾಯೋಗಿಕ ಪರೀಕ್ಷೆಯೂ ಇತ್ತು. ಪಠ್ಯೇತರ ಚಟುವಟಿಕೆಗಳಲ್ಲಿ ಪಾಲ್ಗೊಳ್ಳುವ ಮೂಲಕ ಒತ್ತಡ ಮುಕ್ತಳಾಗುತ್ತಿದ್ದೆ’ ಎಂದು ಪ್ರತೀಕ್ಷಾ ‘ಪ್ರಜಾವಾಣಿ’ಗೆ ತಿಳಿಸಿದರು.

‘ಕೋವಿಡ್‌ ವೇಳೆ ಪಿಪಿಇ ಕಿಟ್‌ಗಳನ್ನು ಧರಿಸಿಕೊಂಡೇ ಕೆಲಸ ಮಾಡುವುದು ಸವಾಲೆನಿಸಿತ್ತು. ಇದು ನಮಗೆ ಹೊಸ ಅನುಭವವನ್ನೂ ನೀಡಿತು’ ಎಂದರು.

‘ಮಗಳು ಏನೇ ಕೆಲಸ ಮಾಡಿದರೂ ಅದರಲ್ಲಿ ಪರಿಪೂರ್ಣತೆ ಇರುತ್ತಿತ್ತು. ಆಕೆಯ ಸಾಧನೆಯಿಂದ ಹೆಮ್ಮೆಯಾಗಿದೆ’ ಎಂದು ಪ್ರತೀಕ್ಷಾ ಅವರ ತಾಯಿ ಭಾರತಿ ಸಂತಸ ವ್ಯಕ್ತಪಡಿಸಿದರು.



9 ಚಿನ್ನದ ಪದಕಗಳನ್ನು ಪಡೆದ ಡಾ.ಪ್ರತೀಕ್ಷಾ ಜೆ.ಪೈಗೆ ತಾಯಿ ಭಾರತಿ ಹಾಗೂ ಅಪ್ಪ ಜಯಂತ್ ಅವರು ಮುತ್ತುಕೊಟ್ಟು ಸಂಭ್ರಮಿಸಿದರು —ಪ್ರಜಾವಾಣಿ ಚಿತ್ರ

ಭಾಗ್ಯಶ್ರೀ (ಇಎನ್‌ಟಿ), ಅವಂತಿಕಾ ಸೂದ್ (ಆಪ್ತಲ್ಮಾಲಜಿ), ಎಸ್‌. ಬಿ.ರವೀಶ್ (ಫಾರ್ಮಕಾಲಜಿ ಮತ್ತು ಒಬಿಜಿ), ವರ್ಷಾ ರಾವ್ (ಫೋರೆನ್ಸಿಕ್ ಮೆಡಿಸಿನ್), ಕೆ.ಎಂ.ಕಾರ್ತಿಕ್ (ಜನರಲ್ ಮೆಡಿಸಿನ್), ಜಿ.ಅನಂತ್ ಹಾಗೂ ಯು.ಎಂ.ಶ್ರೀರಾಘವಿ (ಅನಾಟಮಿ) ಚಿನ್ನದ ಪದಕಗಳನ್ನು ಪಡೆದರು.

ಎಸ್‌.ಎಂ.ತೇಜಸ್ ಹಾಗೂ ಎನ್‌. ಎಂ.ಶ್ರದ್ಧಾ (ಉತ್ತಮ ಕ್ರೀಡಾಪಟು), ಸಂಜಯ್ ಎಂ.ಗೌಡರ್ ಮತ್ತು ಶರಣ್ಯಾ ಕೌಶಿಕ್ (ಬೆಸ್ಟ್ ಔಟ್‌ಗೋಯಿಂಗ್ ಆಲ್‌ರೌಂಡರ್) ಪ್ರಶಸ್ತಿಗಳನ್ನು ಸ್ವೀಕರಿಸಿದರು. ಒಟ್ಟು 238 ವಿದ್ಯಾರ್ಥಿಗಳಿಗೆ ಪದವಿ ಪ್ರದಾನ ಮಾಡಲಾಯಿತು.

ವಿಜ್ಞಾನಿ ಡಾ.ವಿ.ಕೆ.ಅತ್ರೆ ಹಾಗೂ ಪಿಇಎಸ್ ವಿಶ್ವವಿದ್ಯಾಲಯದ ಕುಲಾಧಿಪತಿ ಪ್ರೊ.ಎಂ.ಆರ್. ದೊರೆಸ್ವಾಮಿ ಇದ್ದರು.

‘ವೈದ್ಯಕೀಯ ಶಿಕ್ಷಣ ವೆಚ್ಚ ಕಡಿಮೆ ಮಾಡಲು ಕ್ರಮ’

‘ವೈದ್ಯಕೀಯ ಶಿಕ್ಷಣವು ದುಬಾರಿಯಾಗಿದೆ. ಇದರ ವೆಚ್ಚ ಕಡಿಮೆ ಮಾಡಲು ಸರ್ಕಾರ ಕ್ರಮ ಕೈಗೊಳ್ಳಲಿದೆ’ ಎಂದು ವೈದ್ಯಕೀಯ ಶಿಕ್ಷಣ ಸಚಿವ ಡಾ.ಕೆ.ಸುಧಾಕರ್ ತಿಳಿಸಿದರು.

‘ರಾಜ್ಯದಲ್ಲಿ ಒಟ್ಟು 65 ವೈದ್ಯಕೀಯ ಕಾಲೇಜುಗಳಿವೆ. 4 ಸರ್ಕಾರಿ ಕಾಲೇಜುಗಳು ಶೀಘ್ರವೇ ಆರಂಭವಾಗಲಿವೆ. ಖಾಸಗಿ ವಲಯದಲ್ಲಿ 3 ಹೆಚ್ಚುವರಿ ಕಾಲೇಜುಗಳಿಗೆ ಅನುಮತಿ ನೀಡಲಾಗಿದೆ. 9 ಜಿಲ್ಲೆಗಳಲ್ಲಿ ಹೊಸದಾಗಿ ವೈದ್ಯಕೀಯ ಕಾಲೇಜು ಆರಂಭಿಸಲು ಸಿದ್ಧತೆ ಮಾಡಿಕೊಳ್ಳಲಾಗಿದೆ’ ಎಂದು ಅವರು ತಿಳಿಸಿದರು.

ಸೇನೆಯ ನೂತನ ಉಪ ಮುಖ್ಯಸ್ಥರಾಗಿ ಲೆ.ಜ. ರಾಜು ನೇಮಕ



ಸೋಮಶೇಖರ್

ನವದೆಹಲಿ (ಪಿಟಿಐ): ಸೇನಾ ಸಿಬ್ಬಂದಿಯ ನೂತನ ಉಪ ಮುಖ್ಯಸ್ಥರಾಗಿ ಲೆಫ್ಟಿನೆಂಟ್ ಜನರಲ್ ಬಗ್ಗವಳ್ಳಿ ಸೋಮಶೇಖರ್ ರಾಜು ಅವರು ಮೇ 1ರಂದು ಅಧಿಕಾರ ವಹಿಸಿಕೊಳ್ಳಲಿದ್ದಾರೆ ಎಂದು ರಕ್ಷಣಾ ಸಚಿವಾಲಯ ತಿಳಿಸಿದೆ.

ಅವರು ವಿಜಯಪುರದ ಸೈನಿಕ ಶಾಲೆಯ ಮಾಜಿ ವಿದ್ಯಾರ್ಥಿ. ಅವರು ಲೆಫ್ಟಿನೆಂಟ್ ಜನರಲ್ ಮನೋಜ್ ಪಾಂಡೆ ಅವರ ಉತ್ತರಾಧಿಕಾರಿಯಾಗಲಿದ್ದಾರೆ.

ಚೀನಾದ ಡ್ರೋನ್ ಹೊಡೆದುರುಳಿಸಿದ ಬಿಎಸ್‌ಎಫ್

ಅಮೃತಸರ: ಪಾಕಿಸ್ತಾನದಿಂದ ಗಡಿ ಪ್ರವೇಶಿಸುತ್ತಿದ್ದ ಚೀನಾದ ಡ್ರೋನ್ ಅನ್ನು ಪಂಜಾಬ್‌ನಲ್ಲಿನ ಅಂತರರಾಷ್ಟ್ರೀಯ ಗಡಿಯಲ್ಲಿ ಬಿಎಸ್‌ಎಫ್ ಯೋಧರು ಹೊಡೆದುರುಳಿಸಿದ್ದಾರೆ.

ಚೀನಾದಲ್ಲಿ ತಯಾರಿಸಿದ ‘ಡಿಜೆಐ ಮ್ಯಾಟ್ರೈಸ್-300’ ಮಾದರಿಯ ಕಪ್ಪುಬಣ್ಣದ ಡ್ರೋನ್ ಅಮೃತಸರ ಸಮೀಪದ ಧನೋ ಕಲಾಂ ಗ್ರಾಮದ ಬಳಿ ಹಾರಾಟ ನಡೆಸುವಾಗ, ಯೋಧರು ಹೊಡೆದುರುಳಿಸಿದರು ಎಂದು ಬಿಎಸ್‌ಎಫ್ ವಕ್ತಾರ ತಿಳಿಸಿದ್ದಾರೆ.

ತಹಶೀಲ್ದಾರ್ ನಾಗೇಶ್ ಎತ್ತಂಗಡಿ

ಚನ್ನಪಟ್ಟಣ: ತಾಲ್ಲೂಕಿನ ನೂತನ ತಹಶೀಲ್ದಾರ್ ಆಗಿ ಬಿ.ಕೆ. ಸುದರ್ಶನ್ ಶುಕ್ರವಾರ ಅಧಿಕಾರ ವಹಿಸಿಕೊಂಡಿದ್ದು, ತಹಶೀಲ್ದಾರ್ ವರ್ಗಾವಣೆ ವಿಚಾರದಲ್ಲಿ ಕಳೆದ 20 ದಿನಗಳಿಂದ ನಡೆಯುತ್ತಿದ್ದ ಹಗ್ಗಜಗ್ಗಾಟಕ್ಕೆ ತೆರೆ ಬಿದ್ದಿದೆ.

ತಹಶೀಲ್ದಾರ್ ಆಗಿ ಕಾರ್ಯ ನಿರ್ವಹಿಸುತ್ತಿದ್ದ ನಾಗೇಶ್ ಅವರನ್ನು ವರ್ಗಾವಣೆ ಮಾಡಿ, ಅವರ ಸ್ಥಾನಕ್ಕೆ ಸುದರ್ಶನ್ ಅವರನ್ನು ನೇಮಿಸಿ ಕಂದಾಯ ಇಲಾಖೆ ಆದೇಶಿಸಿದೆ.

ನಿರ್ಗಮಿತ ತಹಶೀಲ್ದಾರ್ ನಾಗೇಶ್ ರನ್ನು ಏ. 8ರಂದು ಸಂಜೆ ವರ್ಗಾವಣೆಗೊಳಿಸಿ ಅಂದಿನ ಸರ್ಕಾರದ ಅಧೀನ ಕಾರ್ಯದರ್ಶಿ (ಕಂದಾಯ ಇಲಾಖೆ) ಎಂ.ಎಸ್. ರಶ್ಮಿ ಆದೇಶಿಸಿದ್ದರು. ಅವರ ಜಾಗಕ್ಕೆ ಸುದರ್ಶನ್‌ರನ್ನು ನಿಯುಕ್ತಿಗೊಳಿಸಲಾಗಿತ್ತು. ನಂತರ ಅಂದು ರಾತ್ರಿಯೇ ನಾಗೇಶ್‌ರನ್ನು ವರ್ಗಾವಣೆ ಆದೇಶವನ್ನು ಹಿಂಪಡೆದಿರುವುದಾಗಿ ರಶ್ಮಿ ಮರು ಆದೇಶ ಹೊರಡಿಸಿದ್ದರು. ಒಂದೇ ದಿನ ನಡೆದ ಈ ವರ್ಗಾವಣೆ ಪ್ರಹಸನವು ತಾಲ್ಲೂಕಿನಲ್ಲಿ ಚರ್ಚೆಗೆ ಗ್ರಾಸವಾಗಿತ್ತು.

ಈ ವರ್ಗಾವಣೆಯಲ್ಲಿ ಶಾಸಕ ಎಚ್‌.ಡಿ. ಕುಮಾರಸ್ವಾಮಿ, ವಿಧಾನ ಪರಿಷತ್ ಸದಸ್ಯ ಸಿ.ಪಿ. ಯೋಗೇಶ್ವರ್ ಪಾತ್ರವಿದೆ ಎಂದು ಚರ್ಚಿತವಾಗಿತ್ತು.

‘ಆರಗ ರಾಜೀನಾಮೆ ಕೊಡಲಿ’

ಪ್ರಜಾವಾಣಿ ವಾರ್ತೆ

ಬೆಂಗಳೂರು: ಪೊಲೀಸ್ ಸಬ್ ಇನ್‌ಸ್ಪೆಕ್ಟರ್ (ಪಿಎಸ್‌ಐ) ನೇಮಕಾತಿ ಪರೀಕ್ಷೆಯಲ್ಲಿ ನಡೆದಿರುವ ಅಕ್ರಮದ ಹೊಣೆ ಹೊತ್ತು ಗೃಹ ಸಚಿವ ಆರಗ ಜ್ಞಾನೇಂದ್ರ ತಕ್ಷಣವೇ ರಾಜೀನಾಮೆ ನೀಡಬೇಕು ಎಂದು ವಿಧಾನ ಪರಿಷತ್ ವಿರೋಧ ಪಕ್ಷದ ನಾಯಕ ಬಿ.ಕೆ. ಹರಿಪ್ರಸಾದ್ ಆಗ್ರಹಿಸಿದ್ದಾರೆ.

ಶುಕ್ರವಾರ ಪತ್ರಿಕಾ ಹೇಳಿಕೆ ನೀಡಿರುವ ಅವರು, ‘ಪಿಎಸ್‌ಐ ನೇಮಕಾತಿಯಲ್ಲಿ ಅಕ್ರಮವೇ ನಡೆದಿಲ್ಲ ಎಂದು ಗೃಹ ಸಚಿವರು ಹೇಳಿಕೆ ನೀಡಿದ್ದರು. ಈಗ ಅಕ್ರಮ ನಡೆದಿರುವುದನ್ನು ಒಪ್ಪಿಕೊಂಡು ಪರೀಕ್ಷೆಯನ್ನೇ ರದ್ದು ಮಾಡಿದ್ದಾರೆ. ಇನ್ನು ಯಾವ ನೈತಿಕತೆಯ ಆಧಾರದ ಮೇಲೆ ಗೃಹ ಸಚಿವರ ಹುದ್ದೆಯಲ್ಲಿ ಮುಂದುವರಿಯುತ್ತಾರೆ’ ಎಂದಿದ್ದಾರೆ.

‘ಹೈಕೋರ್ಟ್ ನ್ಯಾಯಮೂರ್ತಿ ಮೇಲುಸ್ತುವಾರಿಯಲ್ಲಿ ತನಿಖೆಯಾಗಲಿ’

ಬೆಂಗಳೂರು: ಪೊಲೀಸರೇ ಆರೋಪಿಗಳಾಗಿರುವ ಪಿಎಸ್‌ಐ ನೇಮಕಾತಿ ಅಕ್ರಮ ಪ್ರಕರಣದಲ್ಲಿ ಸಿಐಡಿ ಪೊಲೀಸರು ನಿಷ್ಪಕ್ಷಪಾತ ತನಿಖೆ ನಡೆಸುವ ವಿಶ್ವಾಸವಿಲ್ಲ. ಪ್ರಕರಣವನ್ನು ಮುಚ್ಚಿಹಾಕುವ ಪ್ರಯತ್ನ ನಡೆಯುತ್ತಿರುವಂತೆ ಕಾಣುತ್ತಿದೆ. ಹೈಕೋರ್ಟ್ ನ್ಯಾಯಮೂರ್ತಿಯೊಬ್ಬರ ಮೇಲುಸ್ತುವಾರಿಯಲ್ಲಿ ಸಿಐಡಿ ತನಿಖೆ ನಡೆಸುವಂತೆ ಆದೇಶ ಹೊರಡಿಸಬೇಕು ಎಂದು ಕೆಪಿಸಿಸಿ ಕಾರ್ಯಾಧ್ಯಕ್ಷ ರಾಮಲಿಂಗಾ ರೆಡ್ಡಿ ಆಗ್ರಹಿಸಿದ್ದಾರೆ.

‘ಆರೋಪಿ ದಿವ್ಯಾ ಹಾಗರಗಿ ಸೇರಿದಂತೆ ಬಿಜೆಪಿಯ ಹಲವು ಪ್ರಭಾವಿಗಳು ಅಕ್ರಮದಲ್ಲಿ ಶಾಮೀಲಾಗಿದ್ದಾರೆ. ತನಿಖೆ ಆರಂಭವಾಗಿ ಹಲವು ದಿನಗಳಾದರೂ ಮಧ್ಯಂತರ ವರದಿ ಸಲ್ಲಿಸಲು ಸಿಐಡಿಗೆ ಸಾಧ್ಯವಾಗಿಲ್ಲ.’ ಎಂದು ಕೇಳಿದ್ದಾರೆ.

ನೇಮಕಾತಿಯ ನೇತೃತ್ವ ವಹಿಸಿದ್ದ ಐಪಿಎಸ್ ಅಧಿಕಾರಿ ಅಮೃತ್ ಪಾಲ್ ಅವರನ್ನು ಏಕೆ ವರ್ಗಾವಣೆ ಮಾಡಲಾಗಿದೆ? ಇದೊಂದು ಸಾಮಾನ್ಯ ವರ್ಗಾವಣೆ ಎನ್ನುವ ಮೂಲಕ ಮುಖ್ಯಮಂತ್ರಿ ಬಸವರಾಜ ಬೊಮ್ಮಾಯಿ ಅವರು ಅಕ್ರಮದ ಹೊಣೆ ಹೊರಬೇಕಾಗಿದ್ದ ಅಧಿಕಾರಿಯನ್ನು ಸಮರ್ಥಿಸುತ್ತಿದ್ದಾರೆ ಎಂದು ದೂರಿದ್ದಾರೆ.

ಮನೆಗೆ ನುಗ್ಗಿ ಲೆಕ್ಕಾಧಿಕಾರಿ ಕೊಲೆ

ಬೆಂಗಳೂರು: ಯಶವಂತಪುರ ಠಾಣೆ ವ್ಯಾಪ್ತಿಯ ಮನೆಯೊಂದರಲ್ಲಿ ಶಂಕರ್ ರೆಡ್ಡಿ (35) ಅವರನ್ನು ಚಾಕುವಿನಿಂದ ಇರಿದು ಕೊಲೆ ಮಾಡಲಾಗಿದ್ದು, ಅವರ ಪತ್ನಿ ರಾಣಿ (27) ಮೇಲೂ ಹಲ್ಲೆ ಮಾಡಿ ದುಷ್ಕರ್ಮಿಗಳು ಪರಾರಿಯಾಗಿದ್ದಾರೆ.

‘ಚಿತ್ತೂರಿನ ಶಂಕರ್ ರೆಡ್ಡಿ, ನಗರದ ಖಾಸಗಿ ಕಂಪನಿಯೊಂದರಲ್ಲಿ ಲೆಕ್ಕಾಧಿಕಾರಿ ಆಗಿ ಕೆಲಸ ಮಾಡುತ್ತಿದ್ದರು. ಪತ್ನಿ ರಾಣಿ ಹಾಗೂ ಇಬ್ಬರು ಮಕ್ಕಳ ಜೊತೆ ಎಂ.ಕೆ. ನಗರದಲ್ಲಿ ವಾಸವಿದ್ದರು’ ಎಂದು ಪೊಲೀಸರು ಹೇಳಿದರು.

‘ದಂಪತಿ, ಮಕ್ಕಳು ಗುರುವಾರ ರಾತ್ರಿ ಮನೆಯ ಪ್ರತ್ಯೇಕ ಕೊಠಡಿಗಳಲ್ಲಿ ಮಲಗಿದ್ದರು. ರಾತ್ರಿ 11 ಗಂಟೆ ಸುಮಾರಿಗೆ ದುಷ್ಕರ್ಮಿಗಳು ಮನೆಗೆ ನುಗ್ಗಿದ್ದರು. ಶಂಕರ್ ಅವರ ಕುತ್ತಿಗೆಯ ಹಿಂಭಾಗಕ್ಕೆ ಚಾಕುವಿನಿಂದ ಇರಿದಿದ್ದರು. ರಕ್ಷಣೆಗೆ ಹೋದ ಪತ್ನಿಯ ಕೈಗೂ ಚಾಕುವಿನಿಂದ ಚುಚ್ಚಿದ್ದರು’ ಎಂದೂ ತಿಳಿಸಿದರು.

‘ತಂದೆ–ತಾಯಿ ಕೂಗಾಟದಿಂದ ಮಕ್ಕಳು ಎಚ್ಚರಗೊಂಡಿದ್ದರು. ಅಷ್ಟರಲ್ಲೇ ದುಷ್ಕರ್ಮಿಗಳು ಸ್ಥಳದಿಂದ ಪರಾರಿಯಾಗಿದ್ದಾರೆ. ಸ್ಥಳೀಯರು ನೀಡಿದ್ದ ಮಾಹಿತಿ ಆಧರಿಸಿ ಸ್ಥಳಕ್ಕೆ ಹೋಗಿ ಸಿಬ್ಬಂದಿ ಪರಿಶೀಲನೆ ನಡೆಸಿದ್ದರು. ತೀವ್ರ ರಕ್ತಸ್ರಾವದಿಂದ ಶಂಕರ್ ಮೃತಪಟ್ಟಿದ್ದಾರೆ. ರಾಣಿ ಸ್ಥಿತಿಯೂ ಚಿಂತಾಜನಕವಾಗಿದ್ದು, ಆಸ್ಪತ್ರೆಗೆ ದಾಖಲಿಸಲಾಗಿದೆ’ ಎಂದೂ ಹೇಳಿದರು.

ಪರಿಚಯಸ್ಥರಿಂದ ಕೃತ್ಯ: ‘ದುಷ್ಕರ್ಮಿಗಳು ರಾತ್ರಿ ಮನೆಗೆ ಬಂದು ಬಾಗಿಲು ಬಡಿದಿದ್ದರೆಂದು ಗೊತ್ತಾಗಿದೆ. ಪರಿಚಯಸ್ಥರೆಂಬ ಕಾರಣಕ್ಕೆ ಬಾಗಿಲು ತೆರೆಯುತ್ತಿದ್ದಂತೆ ಶಂಕರ್ ಮೇಲೆ ದಾಳಿ ಮಾಡಿ ಕೊಲೆ ಮಾಡಲಾಗಿದೆ. ಹೀಗಾಗಿ, ಪರಿಚಯಸ್ಥರೇ ಕೃತ್ಯ ಎಸಗಿರುವ ಮಾಹಿತಿ ಇದೆ’ ಎಂದೂ ತಿಳಿಸಿದರು.

‘ದುಷ್ಕರ್ಮಿಗಳು ಓಡಿಹೋಗುತ್ತಿದ್ದಂತೆ, ಮನೆಯಿಂದ ಹೊರಗೆ ಬಂದಿದ್ದ ಮಕ್ಕಳು ಚೀರಾಡಿದ್ದರು. ‘ತಂದೆ–ತಾಯಿ ರಕ್ತದ ಮಡುವಿನಲ್ಲಿ ಬಿದ್ದಿದ್ದಾರೆ. ಯಾರಾದರೂ ಬಂದು ಕಾಪಾಡಿ’ ಎಂದು ಕೂಗಾಡಿದ್ದರು. ಅವಾಗಲೇ ಸ್ಥಳೀಯರೂ ರಕ್ಷಣೆಗೆ ಬಂದಿದ್ದರು. ಆರೋಪಿಗಳ ಬಗ್ಗೆ ತಾಂತ್ರಿಕ ಸುಳಿವುಗಳು ಸಿಕ್ಕಿವೆ. ಅದನ್ನು ಆಧರಿಸಿ ಅವರನ್ನು ಪತ್ತೆ ಮಾಡಲಾಗುತ್ತಿದೆ’ ಎಂದೂ ಪೊಲೀಸರು ಮಾಹಿತಿ ನೀಡಿದರು.

ಮಿನಿ ಬಸ್ ಹರಿದು ಕಾರ್ಮಿಕ ಸಾವು

ಬೆಂಗಳೂರು: ಜಯನಗರ ಸಂಚಾರ ಠಾಣೆ ವ್ಯಾಪ್ತಿಯಲ್ಲಿ ಗುರುವಾರ ರಾತ್ರಿ ಅಪಘಾತ ಸಂಭವಿಸಿದ್ದು, ಕಾರ್ಮಿಕ ವೆಂಕಟರಾಮಪ್ಪ ಎಂಬುವವರು ಮೃತಪಟ್ಟಿದ್ದಾರೆ.

‘ಜಯನಗರದ 2ನೇ ಹಂತದ ನಿವಾಸಿ ವೆಂಕಟರಾಮಪ್ಪ, ಗುರುವಾರ ರಾತ್ರಿ ಮನೆಗೆ ನಡೆದುಕೊಂಡು ಹೊರಟಿದ್ದಾಗ ಈ ಅವಘಡ ಸಂಭವಿಸಿದೆ’ ಎಂದು ಪೊಲೀಸರು ಹೇಳಿದರು.

‘ಕಾಲೇಜೊಂದರ ಮಿನಿ ಬಸ್, ವೆಂಕಟರಾಮಪ್ಪ ಅವರಿಗೆ ಗುದ್ದಿತ್ತು. ಕೆಳಗೆ ಬಿದ್ದ ಅವರ ಮೇಲೆಯೇ ಬಸ್ಸಿನ ಚಕ್ರ ಹರಿದು ಹೋಗಿತ್ತು. ತೀವ್ರ ಗಾಯಗೊಂಡಿದ್ದ ಅವರನ್ನು ಸ್ಥಳೀಯರು ಆಸ್ಪತ್ರೆಗೆ ಕರೆದೊಯ್ದಿದ್ದರು. ಆದರೆ, ಮಾರ್ಗಮಧ್ಯೆಯೇ ಅವರು ಮೃತಪಟ್ಟಿರುವುದಾಗಿ ವೈದ್ಯರು ತಿಳಿಸಿದರು.’ ‘ಮಿನಿ ಬಸ್ ಚಾಲಕನ ನಿರ್ಲಕ್ಷ್ಯವೇ ಅಪಘಾತಕ್ಕೆ ಕಾರಣ. ಆತನ ವಿರುದ್ಧವೇ ಪ್ರಕರಣ ದಾಖಲಿಸಲಾಗಿದೆ’ ಎಂದರು.

ಪರೀಕ್ಷೆ ರದ್ದು: ಒಂದು ತೊಟ್ಟು ವಿಷ ಕೊಡಿ– ಆಕ್ರೋಶ

ಹುಬ್ಬಳ್ಳಿ: ‘ಕೆಲವರು ಅಕ್ರಮ ಎಸಗಿದ್ದಾರೆ ಎಂದ ಮಾತ್ರಕ್ಕೆ ಮರುಪರೀಕ್ಷೆ ಮಾಡುವುದಾಗಿ ಘೋಷಿಸಿ ಸರ್ಕಾರ ಅನ್ಯಾಯ ಮಾಡಿದೆ. ಅದರ ಬದಲು ಸರ್ಕಾರವೇ ನಮಗೆ ಒಂದು ತೊಟ್ಟು ವಿಷ ಕೊಟ್ಟು ಬಿಡಲಿ...’

ಪಿಎಸ್‌ಐ ನೇಮಕಾತಿ ಪರೀಕ್ಷೆಯಲ್ಲಿ 75ನೇ ರ‍್ಯಾಂಕ್ ಪಡೆದಿರುವ ಬೆಳಗಾವಿ ಜಿಲ್ಲೆಯ ಸವದತ್ತಿಯ ಅರುಣ್ ಮೇಟಿ ಅವರ ಆಕ್ರೋಶದ ಮಾತುಗಳು ಇವು.

ನಗರದಲ್ಲಿ ಶುಕ್ರವಾರ ಎಚ್‌.ಡಿ. ಕುಮಾರಸ್ವಾಮಿ ಅವರನ್ನು ಭೇಟಿಯಾದ ಬಳಿಕ ‘ಪ್ರಜಾವಾಣಿ’ ಜೊತೆ ಮಾತನಾಡಿದ ಅವರು ‘ಪ್ರಾಮಾಣಿಕವಾಗಿ ಪರೀಕ್ಷೆ ಬರೆದವರ ಸಂಖ್ಯೆ ಹೆಚ್ಚಿದೆ. ಇನ್ನೂ ತನಿಖೆ ಪೂರ್ಣಗೊಂಡಿಲ್ಲ, ಆಗಲೇ ಮರು ಪರೀಕ್ಷೆ ಎಂದರೆ ಹಗಲಿರುಳು ಕಷ್ಟಪಟ್ಟು ಓದಿ ಪರೀಕ್ಷೆ ಪಾಸಾದವರ ಗತಿ ಏನು’ ಎಂದು ಪ್ರಶ್ನಿಸಿದರು.


‘ಒಂದು ಸಲ ಪರೀಕ್ಷೆ ಪಾಸಾಗಲು 3 ವರ್ಷ ಕುಟುಂಬಕ್ಕೂ ಸಮಯ ನೀಡದೆ ಕಷ್ಟಪಟ್ಟು ಓದಿದ್ದೇನೆ. ಸರ್ಕಾರದ ನಿರ್ಧಾರದಿಂದ ಪ್ರಾಮಾಣಿಕರಿಗೆ ಅನ್ಯಾಯವಾಗುತ್ತದೆ.’ ಎಂದರು.

‘ಅಕ್ರಮ ಎಸಗಿದವರ ವಿರುದ್ಧ ಸರ್ಕಾರ ಕಠಿಣ ಕ್ರಮಕೈಗೊಂಡು ನ್ಯಾಯಕೊಡುತ್ತದೆ ಎಂದು ಬಲವಾಗಿ ನಂಬಿಕೊಂಡಿದ್ದೆ.’ ಎಂದರು.

31ನೇ ರ‍್ಯಾಂಕ್ ಪಡೆದ ಬೆಳಗಾವಿ ಜಿಲ್ಲೆಯ ರಾಯಬಾಗದ ವಿದ್ಯಾಶ್ರೀ ಬಳಿಗಾರ ‘ಮರುಪರೀಕ್ಷೆ ನಿರ್ಧಾರ ಸರಿಯಲ್ಲ. ಲಾಕ್‌ಡೌನ್ ಸಮಯದಲ್ಲಿ ಮನೆಬಿಟ್ಟು ಧಾರವಾಡದಲ್ಲಿದ್ದು ಓದಿದ್ದೇನೆ. ಪ್ರಾಮಾಣಿಕವಾಗಿ ಆಯ್ಕೆಯಾದವರಿಗೆ ಸರ್ಕಾರ ನ್ಯಾಯ ಕೊಡಬೇಕು. ಮರು ಪರೀಕ್ಷೆಯೂ ಅಕ್ರಮವಿಲ್ಲದೇ ನಡೆಯುತ್ತದೆ ಎನ್ನುವುದಕ್ಕೆ ಏನು ಗ್ಯಾರಂಟಿ’ ಎಂದು ಪ್ರಶ್ನಿಸಿದರು.

ಮನವಿ: ಪಿಎಸ್‌ಐ ಪರೀಕ್ಷೆಯಲ್ಲಿ ಉತ್ತೀರ್ಣ ರಾದ ಗದಗ, ಬೆಳಗಾವಿ, ವಿಜಯಪುರ ಹಾಗೂ ಧಾರವಾಡ ಜಿಲ್ಲೆಯ 20ಕ್ಕೂ ಹೆಚ್ಚು ಮಂದಿ ಕುಮಾರಸ್ವಾಮಿ ಅವರಿಗೆ ಮನವಿ ಸಲ್ಲಿಸಿದರು.

ವಂಚನೆ: ‘ಕಮಲಿ’ ಧಾರಾವಾಹಿ ನಿರ್ದೇಶಕ ಸೆರೆ



ಅರವಿಂದ್ ಕೌಶಿಕ್

ಬೆಂಗಳೂರು: ‘ಕಮಲಿ’ ಧಾರಾವಾಹಿ ನಿರ್ಮಾಣಕ್ಕೆ ₹ 73 ಲಕ್ಷ ಪಡೆದು ವಂಚಿಸಿದ್ದ ಆರೋಪದಡಿ ನಿರ್ದೇಶಕ ಅರವಿಂದ್ ಕೌಶಿಕ್ ಅವರನ್ನು ವೈಯಾಲಿಕಾವಲ್ ಪೊಲೀಸರು ಬಂಧಿಸಿದ್ದಾರೆ.

‘ನಿರ್ಮಾಪಕ ರೋಹಿತ್ ಅವರು ಇತ್ತೀಚೆಗೆ ದೂರು ನೀಡಿದ್ದರು. ವಂಚನೆ (ಐಪಿಸಿ 420) ಹಾಗೂ ಜೀವ ಬೆದರಿಕೆ (ಐಪಿಸಿ 506) ಆರೋಪದಡಿ ಪ್ರಕರಣ ದಾಖಲಿಸಿಕೊಂಡು ಆರೋಪಿ ಅರವಿಂದ್ ಕೌಶಿಕ್ ಅವರನ್ನು ಬಂಧಿಸಲಾಗಿದೆ. ಸದ್ಯ ನ್ಯಾಯಾಂಗ ಬಂಧನದಲ್ಲಿದ್ದಾರೆ’ ಎಂದು ಪೊಲೀಸರು ಹೇಳಿದರು.

‘ಬಂಧಿತ ಅರವಿಂದ್, ಖಾಸಗಿ ವಾಹಿನಿಯೊಂದರಲ್ಲಿ ಮೂಡಿಬರುತ್ತಿರುವ ‘ಕಮಲಿ’ ಧಾರಾವಾಹಿ ನಿರ್ದೇಶಕ. ‘ಹುಲಿರಾಯ’, ‘ನಮ್ಮ ಏರಿಯಾದಲ್ಲಿ ಒಂದು ದಿನ’ ಹಾಗೂ ‘ಶಾರ್ದೂಲ’ ಸಿನಿಮಾವನ್ನೂ ಅವರು ನಿರ್ದೇಶಿಸಿದ್ದಾರೆ’ ಎಂದೂ ತಿಳಿಸಿದರು.

2018ರಲ್ಲಿ ಹಣ ಪಡೆದಿದ್ದ ನಿರ್ದೇಶಕ: ‘ಕಮಲಿ’ ಧಾರಾವಾಹಿಗಾಗಿ ಅರವಿಂದ್ ಕಥೆ ಸಿದ್ಧಪಡಿಸಿಕೊಂಡಿದ್ದರು. ಧಾರಾವಾಹಿ ನಿರ್ಮಾಣಕ್ಕೆ ಹಣದ ಅವಶ್ಯಕತೆ ಇತ್ತು. ದೂರುದಾರ ರೋಹಿತ್, 2018ರಲ್ಲಿ ಹಂತ ಹಂತವಾಗಿ ₹ 73 ಲಕ್ಷ ಹೂಡಿಕೆ ಮಾಡಿದ್ದರು. ಕಮಲಿ ಧಾರಾವಾಹಿಯಿಂದ ಇದುವರೆಗೂ ₹7 ಕೋಟಿ ಆದಾಯ ಬಂದಿರುವ ಮಾಹಿತಿ ಇದೆ. ಆದರೆ, ಆದಾಯದಲ್ಲಿ ನಿರ್ಮಾಪಕ ರೋಹಿತ್‌ಗೆ ಯಾವುದೇ ಪಾಲು ನೀಡಿರಲಿಲ್ಲ’ ಎಂದೂ ತಿಳಿಸಿದರು.

ನಿರ್ಮಾಪಕರ ಹೆಸರಿಲ್ಲ: ‘ಹಣಕಾಸಿನ ವ್ಯವಹಾರ, ಪ್ರಸಾರದ ಸಂಬಂಧ ಖಾಸಗಿ ವಾಹಿನಿ ಜೊತೆ ಧಾರಾವಾಹಿ ತಂಡ ಒಪ್ಪಂದ ಮಾಡಿಕೊಂಡಿತ್ತು. ಧಾರಾವಾಹಿ ಟೈಟಲ್ ಕಾರ್ಡ್‌ನಲ್ಲಿ ಇರುತ್ತಿದ್ದ ನಿರ್ಮಾಪಕರ ಹೆಸರು, ಒಪ್ಪಂದದಲ್ಲಿ ಇರಲಿಲ್ಲವೆಂದು ದೂರುದಾರರು ಆರೋಪಿಸಿದ್ದರು’ ಎಂದು ಹೇಳಿದರು.

ಆ್ಯಸಿಡ್ ದಾಳಿ ಆರೋಪಿಗಾಗಿ ಹುಡುಕಾಟ

ಬೆಂಗಳೂರು: ಪ್ರೀತಿಸಲು ನಿರಾಕರಿಸಿದ್ದಕ್ಕೆ 24 ವರ್ಷದ ಯುವತಿ ಮೇಲೆ ಆ್ಯಸಿಡ್ ಎರಚಿ ಪರಾರಿಯಾದ ಆರೋಪಿ ನಾಗರಾಜ್‌ಗಾಗಿ ಪಶ್ಚಿಮ ವಿಭಾಗದ ಪೊಲೀಸರು ಹುಡುಕಾಟ ಆರಂಭಿಸಿದ್ದಾರೆ.

ಕಾಮಾಕ್ಷಿಪಾಳ್ಯ ಠಾಣೆ ವ್ಯಾಪ್ತಿಯ ಸುಂಕದಕಟ್ಟೆಯಲ್ಲಿರುವ ಫೈನಾನ್ಸ್ ಕಂಪನಿಯೊಂದರಲ್ಲಿ ಕೆಲಸ ಮಾಡುತ್ತಿದ್ದ ಯುವತಿ ಮೇಲೆ ಗುರುವಾರ (ಏಪ್ರಿಲ್ 28) ಬೆಳಿಗ್ಗೆ ಆರೋಪಿ ಆ್ಯಸಿಡ್ ಎರಚಿ ಪರಾರಿಯಾಗಿದ್ದಾನೆ. ದೇಹದ ಶೇ 45ರಷ್ಟು ಭಾಗ ಗಾಯಗೊಂಡಿರುವ ಯುವತಿಗೆ ಸೇಂಟ್ ಜಾನ್ಸ್ ಆಸ್ಪತ್ರೆಯಲ್ಲಿ ಚಿಕಿತ್ಸೆ ನೀಡಲಾಗುತ್ತಿದ್ದು, ಆರೋಗ್ಯ ಸ್ಥಿತಿ ಚಿಂತಾಜನಕವಾಗಿದೆ.

‘ಏಳು ವರ್ಷದಿಂದ ಸ್ನೇಹ ಹೊಂದಿದ್ದ ಯುವತಿ, ತನ್ನನ್ನು ಪ್ರೀತಿಸಲು ನಿರಾಕರಿಸಿದರು’ ಎಂಬ ಕಾರಣಕ್ಕೆ ಆರೋಪಿ ಕೃತ್ಯ ಎಸಗಿರುವುದು ಪ್ರಾಥಮಿಕ ತನಿಖೆಯಿಂದ ಗೊತ್ತಾಗಿದೆ. ತಲೆಮರೆಸಿಕೊಂಡಿರುವ ಆರೋಪಿ ಪತ್ತೆಗಾಗಿ ಇನ್‌ಸ್ಪೆಕ್ಟರ್‌ಗಳ ನೇತೃತ್ವದಲ್ಲಿ ಮೂರು ಪ್ರತ್ಯೇಕ ತಂಡಗಳನ್ನು ರಚಿಸಲಾಗಿದೆ. ಈಗಾಗಲೇ ಆರೋಪಿ ಸುಳಿವು ಸಿಕ್ಕಿದೆ’ ಎಂದು ಪೊಲೀಸ್ ಮೂಲಗಳು ಹೇಳಿವೆ.

ಕೋರ್ಟ್‌ಗೆ ಹೋಗಿದ್ದ ಆರೋಪಿ: ‘ಆ್ಯಸಿಡ್ ಎರಚಿದ್ದ ಬಳಿಕ ಪರಾರಿಯಾಗಿದ್ದ ಆರೋಪಿ, ನ್ಯಾಯಾಲಯದ ಆವರಣಕ್ಕೆ ಹೋಗಿದ್ದ. ತನ್ನ ಪರ ವಕಾಲತ್ತು ವಹಿಸಿ ಜಾಮೀನು ಕೊಡಿಸುವಂತೆ ಹಲವು ವಕೀಲರ ಬಳಿ ಕೇಳಿದ್ದ. ಆದರೆ, ವಕೀಲರು ವಕಾಲತ್ತು ವಹಿಸಲು ನಿರಾಕರಿಸಿದ್ದರು. ಅವಾಗಲೇ ಆರೋಪಿ, ಮನೆಗೆ ಹೋಗಿ ಪೋಷಕರನ್ನು ಕರೆದುಕೊಂಡು ನಗರದಿಂದ ಪರಾರಿಯಾಗಿದ್ದಾನೆ’ ಎಂದೂ ತಿಳಿಸಿವೆ.

ನಗರದಲ್ಲಿ ಇಂದು

ಅಂಬೇಡ್ಕರ್ ಜಯಂತಿ: ಅಧ್ಯಕ್ಷತೆ–ರಾಧಾಕೃಷ್ಣ, ಅತಿಥಿಗಳು–ಕೆ.ಆರ್. ವೇಣುಗೋಪಾಲ್, ಪ್ರೊ.ಎಚ್‌.ಟಿ.ಪೋತೆ, ಆಯೋಜನೆ ಮತ್ತು ಸ್ಥಳ–ಅಂಬೇಡ್ಕರ್ ಶಿಕ್ಷಣ ಮಹಾವಿದ್ಯಾಲಯದ ಸಭಾಂಗಣ, ಕುರುಬರಹಳ್ಳಿ, ಜೆ.ಸಿ.ನಗರ, ಬೆಳಿಗ್ಗೆ 10.30

ಮನೆಯಂಗಳದಲ್ಲಿ ಮಾತುಕತೆ: ತಿಂಗಳ ಅತಿಥಿ–ಸಾಹಿತಿ ಬಿ.ಆರ್. ಲಕ್ಷ್ಮಣರಾವ್, ಆಯೋಜನೆ–ಕನ್ನಡ ಮತ್ತು ಸಂಸ್ಕೃತಿ ಇಲಾಖೆ, ಸ್ಥಳ–ನಯನ ಸಭಾಂಗಣ, ಕನ್ನಡ ಭವನ, ಸಂಜೆ 4



ಬಿ.ಆರ್. ಲಕ್ಷ್ಮಣರಾವ್

ಸುಚೇತನ ಸ್ವರೂಪ್ ಅವರ ‘ಆ ಪೂರ್ವ ಈ ಪಶ್ಚಿಮ’ ಕುರಿತು ಚರ್ಚೆ: ಭಾಗವಹಿಸುವವರು–ಸಿ.ಎನ್‌.ರಾಮಚಂದ್ರನ್, ಒ.ಎಲ್. ನಾಗಭೂಷಣಸ್ವಾಮಿ, ಎಚ್‌.ಎಸ್. ರಾಘವೇಂದ್ರ ರಾವ್, ವನಮಾಲಾ ವಿಶ್ವನಾಥ, ಅಧ್ಯಕ್ಷತೆ–ಎಂ.ಎನ್. ವೆಂಕಟಾಚಲಯ್ಯ, ಆಯೋಜನೆ–ಇಂಡಿಯನ್ ಇನ್‌ಸ್ಟಿಟ್ಯೂಟ್ ಆಫ್ ವರ್ಲ್ಡ್ ಕಲ್ಚರ್, ಬೆಳಿಗ್ಗೆ 10.30 (ಆನ್‌ಲೈನ್ ಕಾರ್ಯಕ್ರಮ)

ರಾಜೀವ್ ಗಾಂಧಿ ಆರೋಗ್ಯ ವಿಜ್ಞಾನಗಳ ವಿಶ್ವವಿದ್ಯಾಲಯದ ಘಟಿಕೋತ್ಸವ: ಅಧ್ಯಕ್ಷತೆ–ರಾಜ್ಯಪಾಲ ಥಾವರಚಂದ್ ಗೆಹಲೋತ್, ಮುಖ್ಯ ಭಾಷಣ–ಕೇಂದ್ರ ಸಚಿವೆ ಭಾರತಿ ಪ್ರವೀಣ್ ಪವಾರ್, ಅತಿಥಿ–ಆರೋಗ್ಯ ಸಚಿವ ಕೆ.ಸುಧಾಕರ್, ‘ಡಾಕ್ಟರ್ ಆಫ್ ಸೈನ್ಸ್’ ಗೌರವ ಪುರಸ್ಕೃತರು–ನಿರ್ಮಲಾನಂದನಾಥ ಸ್ವಾಮೀಜಿ, ಬಿ.ಎನ್‌.ಗಂಗಾಧರ್, ರಾಜನ್ ದೇಶಪಾಂಡೆ, ಸ್ಥಳ–ನಿಮ್ಹಾನ್ಸ್ ಸಮಾವೇಶ ಕೇಂದ್ರ, ಬೆಳಿಗ್ಗೆ 11

ಚಲನಚಿತ್ರಗಳ ಸಂಗೀತೋತ್ಸವ: ಗಾಯನ–ಇಂಚರ ಪ್ರವೀಣ್ ಕುಮಾರ್, ರಮ್ಯಾ ವಿನಯಂತ್, ವಾದ್ಯ ಸಹಕಾರ–ರಾಜ್‌ಕಿರಣ್ ರಾಜಾರಾಂ, ಸುಪ್ರಿತ್, ರವಿಕಿರಣ್, ಸೃಷ್ಟಿ ಶ್ರೀನಿವಾಸ್, ಆಯೋಜನೆ–ಭಾರತೀಯ ವಿದ್ಯಾಭವನ ಮತ್ತು ಇನ್ಫೋಸಿಸ್ ಪ್ರತಿಷ್ಠಾನ, ಸ್ಥಳ–ಖಿಂಚಾ ಸಭಾಂಗಣ, ಭಾರತೀಯ ವಿದ್ಯಾಭವನ, ರೇಸ್‌ಕೋರ್ಸ್ ರಸ್ತೆ, ಬೆಳಿಗ್ಗೆ 11



ಇಂಚರ ಪ್ರವೀಣ್ ಕುಮಾರ್



ಪ್ರಿಯಾ ಸಹೋದರಿಯರು

84ನೇ ಶ್ರೀರಾಮನವಮಿ ಉತ್ಸವ ಮತ್ತು ಅಂತರರಾಷ್ಟ್ರೀಯ ಸಂಗೀತೋತ್ಸವ: ಸ್ಫೂರ್ತಿ ನೃತ್ಯ ಶಾಲೆಯಿಂದ ಭರತನಾಟ್ಯ ಪ್ರದರ್ಶನ ಮತ್ತು ಪ್ರಿಯಾ ಸಹೋದರಿಯರಿಂದ ಕರ್ನಾಟಕ ಸಂಗೀತ ಕಾರ್ಯಕ್ರಮ, ಆಯೋಜನೆ–ಶ್ರೀರಾಮಸೇವಾ ಮಂಡಳಿಯ ರಾಮನವಮಿ ಉತ್ಸವ ಟ್ರಸ್ಟ್, ಸ್ಥಳ–ಚಾಮರಾಜಪೇಟೆಯ ಕೋಟೆ ಪ್ರೌಢಶಾಲೆ ಮೈದಾನ, ಸಂಜೆ 5ರಿಂದ

ಊಂಜಲ್ ಸಂಗೀತೋತ್ಸವ: ಮಾಲಾ ವೆಂಕಟೇಶ್ ಮತ್ತು ಸ್ಫೂರ್ತಿ ಗುರುಪ್ರಸಾದ್ ಅವರಿಂದ ಸಂಗೀತ ಕಾರ್ಯಕ್ರಮ, ವಾದ್ಯ ಸಹಕಾರ–ಅನಿರುದ್ಧ ಶ್ರೀಧರ್, ಕೃತಿನ್ ಕಾರಂತ್, ಆಯೋಜನೆ–ತಿರುಮಲ ತಿರುಪತಿ ದೇವಸ್ಥಾನಗಳು ಹಿಂದೂಧರ್ಮ ಪ್ರಚಾರ ಪರಿಷತ್, ಸ್ಥಳ–ಶ್ರೀವೆಂಕಟೇಶ್ವರ ಸ್ವಾಮಿ ದೇವಸ್ಥಾನ, ವೈಯಾಲಿಕಾವಲ್, ಸಂಜೆ 6

ಮೇರುನಟರ ಹುಟ್ಟುಹಬ್ಬ ಆಚರಣೆ: ಬೆಂಗಳೂರು ಮೋಹನ್ ವಾದ್ಯಗೋಷ್ಠಿ, ಆಯೋಜನೆ–ಅಖಿಲ ಕರ್ನಾಟಕ ಅಣ್ಣ ಪ್ರತಿಷ್ಠಾನ, ಸ್ಥಳ–ರವೀಂದ್ರ ಕಲಾಕ್ಷೇತ್ರ, ಸಂಜೆ 4

‘ತೈಲ ಮತ್ತು ಅನಿಲ ಕೈಗಾರಿಕೆಗಳ ಮೇಲೆ ಕೇಂದ್ರೀಕೃತವಾಗಿರುವ ಸಾರ್ವಜನಿಕ ವಲಯದ ಘಟಕಗಳಲ್ಲಿ ಎಂಜಿನಿಯರ್‌ಗಳಿಗೆ ವೃತ್ತಿ ಅವಕಾಶಗಳು’ ಕುರಿತು ಉಪನ್ಯಾಸ: ವಿದ್ಯಾಧರ್ ಎಸ್. ಸಾಲಿಮಠ್, ಅತಿಥಿ–ಎಂ.ಲಕ್ಷ್ಮಣ, ಆಯೋಜನೆ ಮತ್ತು ಸ್ಥಳ–ದಿ ಇನ್‌ಸ್ಟಿಟ್ಯೂಟ್ ಆಫ್ ಎಂಜಿನಿಯರ್ಸ್, ಅಂಬೇಡ್ಕರ್ ವೀದಿ, ಸಂಜೆ 5.30

ವ್ಯಾಸನಕೆರೆ ಪ್ರಭಂಜನಾಚಾರ್ಯ ಅವರಿಂದ ಪ್ರವಚನ: ವಿಷಯ–ಸಾವಿತ್ರೀ ಉಪಾಖ್ಯಾನ, ಸ್ಥಳ–ಶ್ರೀಕಲ್ಯಾಣಿ ರಾಘವೇಂದ್ರ ಸ್ವಾಮಿಗಳ ಮಠ, ಅಶೋಕ ನಗರ, ಸಂಜೆ 6.30 (ಮೇ 1ರಂದೂ ಕಾರ್ಯಕ್ರಮ ಇರಲಿದೆ)

ಉದಕಮಂಡಲ ರೇಸ್

ಅಪ್ಸರಾ ಗೆಲ್ಲುವ ನಿರೀಕ್ಷೆ

ನೀಲ್‌ಗಿರೀಸ್ 1000 ಗಿನ್ನೀಸ್ ಶನಿವಾರದ ಉದಕಮಂಡಲ ರೇಸ್‌ಗಳ ಪ್ರಧಾನ ಆಕರ್ಷಣೆಯಾಗಿದ್ದು, ಅಪ್ಸರಾ ಈ ರೇಸ್‌ನಲ್ಲಿ ಗೆಲ್ಲುವ ಫೇವರಿಟ್ ಎನಿಸಿದೆ. ಬೆಳಿಗ್ಗೆ 11.00ಕ್ಕೆ ಪ್ರಾರಂಭವಾಗಲಿರುವ ದಿನದ ಏಳು ರೇಸ್‌ಗಳಿಗೆ ನಮ್ಮ ಆಯ್ಕೆ ಈ ಕೆಳಕಂಡಂತಿವೆ:

1ನೇ ರೇಸ್: ಪ್ರೈಸ್‌ಲೆಸ್ ಟ್ರೆಸರ್ 1, ಆಂಟಿಗುವಾ 2, ಒಬೆಸನ್ 4
2ನೇ ರೇಸ್: ಟರ್ಮಿನೇಟರ್ 5, ಸಿನತ್ರ 4, ಅಡ್ಮಿರಲ್ ಶಾ 1
3ನೇ ರೇಸ್: ಗೋಲ್ಡನ್ ಸ್ಟ್ರೈಕ್ 1, ಬೀ ಕಾಮ್ 5, ಹಲ್ಲೂಸಿನೇಟ್ 2
4ನೇ ರೇಸ್: ಅನಸ್ತೇಸಿಯಾ 2, ಅಲೆಕ್ಸಾಂಡ್ರೆ ಡೂಮಾಸ್ 6, ಅಮೆಂಡ್‌ಮೆಂಟ್ 10
5ನೇ ರೇಸ್: ಅಪ್ಸರಾ 1, ಕ್ವೀನ್ ಸ್ಪಿರಿಟ್ 4, ಸ್ಪಾರ್ಕಲ್ಸ್ 7
6ನೇ ರೇಸ್: ವ್ಯಾಲೆಸ್ಕ 7, ಅನೆಕ್ಡಡ್ 8, ಅಲೆಕ್ಸಾಂಡರ್ 3
7ನೇ ರೇಸ್: ಟಫೋಸಿ 3, ಮೆಜೆಸ್ಟಿಕ್ ಚಾರ್ಮರ್ 2, ಸೆನೋರ ಬಿಯಾಂಕ 4

ಉತ್ತಮ ಬೆಟ್: ಅನಸ್ತೇಸಿಯಾ

ಜಾಕ್‌ಪಾಟ್	1ನೇ ಟ್ರಿಬಲ್	2ನೇ ಟ್ರಿಬಲ್
3,4,5,6,7	2,3,4	5,6,7

ಹಣದ ವಹಿವಾಟು ಬಗ್ಗೆ ಸಿಗದ ಮಾಹಿತಿ • ಪರಿಶೀಲನೆ ಬಳಿಕ ಮುಂದಿನ ಕ್ರಮ

ಮತ್ತಷ್ಟು ಪ್ರಶ್ನೆ ಸೋರಿಕೆ: ಪ್ರಾಧ್ಯಾಪಕರ ವಿಚಾರಣೆ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಸಹಾಯಕ ಪ್ರಾಧ್ಯಾಪಕರ ನೇಮಕಾತಿ ಪರೀಕ್ಷೆ ಪ್ರಶ್ನೆಗಳ ಸೋರಿಕೆ ಪ್ರಕರಣದ ತನಿಖೆ ಚುರುಕುಗೊಳಿಸಿರುವ ಮಲ್ಲೇಶ್ವರ ಠಾಣೆಯ ಪೊಲೀಸರು ಆರೋಪಿ, ಧಾರವಾಡದ ಕರ್ನಾಟಕ ವಿಶ್ವವಿದ್ಯಾಲಯದ ಕುಲಸಚಿವ (ಮೌಲ್ಯಮಾಪನ) ಪ್ರೊ.ಎಚ್. ನಾಗರಾಜ್ ಅವರ ವಿಚಾರಣೆ ಮುಂದುವರಿಸಿದ್ದಾರೆ.

ನಾಗರಾಜ್ ಅವರು ಸಿದ್ಧಪಡಿಸಿದ್ದ ಭೂಗೋಳಶಾಸ್ತ್ರ ವಿಷಯದ 18 ಪ್ರಶ್ನೆಗಳು ಸೋರಿಕೆ ಆಗಿದ್ದವು. ಈ ಪ್ರಶ್ನೆಗಳಲ್ಲದೆ, ಮತ್ತಷ್ಟು ಪ್ರಶ್ನೆಗಳು ಸೋರಿಕೆಯಾಗಿರುವ ಅನುಮಾನ ಪೊಲೀಸರಿಗೆ ಬಂದಿದೆ. ಹೀಗಾಗಿ, ಪ್ರಶ್ನೆಗಳನ್ನು ಸಿದ್ಧಪಡಿಸಿದ್ದ ಪ್ರಾಧ್ಯಾಪಕರು, ಉಪನ್ಯಾಸಕರ ಬಗ್ಗೆ ಪೊಲೀಸರು ಮಾಹಿತಿ ಕಲೆಹಾಕುತ್ತಿದ್ದಾರೆ.

'ಮಾರ್ಚ್ 14ರಂದು ನಡೆದಿದ್ದ ಭೂಗೋಳಶಾಸ್ತ್ರ ವಿಷಯದ ಪ್ರಶ್ನೆಪತ್ರಿಕೆಯ ಪ್ರಶ್ನೆಗಳು ಸೋರಿಕೆಯಾಗಿವೆ' ಎಂಬುದಾಗಿ ಕರ್ನಾಟಕ ಪರೀಕ್ಷಾ ಪ್ರಾಧಿಕಾರದ (ಕೆಇಎ) ಕಾರ್ಯನಿರ್ವಾಹಕ ನಿರ್ದೇಶಕಿ ಎಸ್. ರಮ್ಯಾ ಅವರು ದೂರು ನೀಡುತ್ತಿದ್ದಂತೆ, ಪರೀಕ್ಷೆ ಅಭ್ಯರ್ಥಿಯೂ ಆಗಿದ್ದ ಅತಿಥಿ ಉಪನ್ಯಾಸಕಿ ಆರ್.ಸೌಮ್ಯಾ ಅವರನ್ನು ಬಂಧಿಸಲಾಗಿತ್ತು. ಅವರು ನೀಡಿದ್ದ ಮಾಹಿತಿಯನ್ವಯ ಕುಲಸಚಿವ ನಾಗರಾಜ್ ಅವರನ್ನೂ ಬಂಧಿಸಲಾಗಿದೆ.

'ಈ ಇಬ್ಬರ ಮನೆ, ಕಚೇರಿಗಳ ಮೇಲೆ ದಾಳಿ ಮಾಡಿ, ದಾಖಲೆಗಳನ್ನು ಜಪ್ತಿ ಮಾಡಲಾಗಿದೆ. ಅವುಗಳ ಪರಿಶೀಲನೆ ನಂತರ ಮತ್ತಷ್ಟು ಪ್ರಶ್ನೆಗಳು ಸೋರಿಕೆಯಾಗಿರುವ ಅನುಮಾನ ಬಂದಿದೆ' ಎಂದು ಪೊಲೀಸ್ ಮೂಲಗಳು ಹೇಳಿವೆ.

'ಪ್ರಶ್ನೆಪತ್ರಿಕೆ ಸಿದ್ಧಪಡಿಸಿದ್ದ ವಿವಿಧ ವಿಶ್ವವಿದ್ಯಾಲಯಗಳ ಪ್ರಾಧ್ಯಾಪಕರು, ಉಪನ್ಯಾಸಕರ ಮಾಹಿತಿಯನ್ನು ಕೆಇಎ ಅಧಿಕಾರಿಗಳಿಂದ ಪಡೆದುಕೊಳ್ಳಲಾಗಿದೆ. ಅವರೆಲ್ಲರನ್ನೂ ಬೆಂಗಳೂರಿಗೆ ಕರೆಸಿ ವಿಚಾರಣೆ ನಡೆಸಲಾಗುತ್ತಿದೆ. ಇವರ ಹೇಳಿಕೆ ಪಡೆದು ಪರಿಶೀಲಿಸಿದ ನಂತರವೇ ಮುಂದಿನ ಕ್ರಮ ಜರುಗಿಸಲಾಗುವುದು' ಎಂದೂ ತಿಳಿಸಿವೆ.

ಹಣದ ವಹಿವಾಟು, ಸಿಗದ ಮಾಹಿತಿ: 'ಆರ್. ಸೌಮ್ಯಾ, ಸ್ನೇಹದ ಕಾರಣಕ್ಕೆ ಸ್ನೇಹಿತೆಗೆ ಪ್ರಶ್ನೆಗಳನ್ನು ಕಳುಹಿಸಿರುವುದು ತನಿಖೆಯಿಂದ ಗೊತ್ತಾಗಿದೆ. ಆದರೆ, ಹಣಕ್ಕೆ ಪ್ರಶ್ನೆಗಳನ್ನು ಮಾರಿಕೊಂಡ ಬಗ್ಗೆ ಪುರಾವೆ ಸಿಕ್ಕಿಲ್ಲ' ಎಂದು ಪೊಲೀಸರು ಹೇಳಿದರು.

'ನಂಬದ ಸ್ನೇಹಿತೆ'

'ಪರೀಕ್ಷೆಗೆ ಮುನ್ನ ಸೌಮ್ಯಾ ಸ್ನೇಹಿತೆಯ ಮೊಬೈಲ್ ವಾಟ್ಸ್‌ಆ್ಯಪ್‌ಗೆ ಪ್ರಶ್ನೆಗಳನ್ನು ಕಳುಹಿಸಿದ್ದರು. ಆದರೆ, ಪ್ರಶ್ನೆಗಳನ್ನು ಸ್ನೇಹಿತೆ ನಂಬಿರಲಿಲ್ಲ. ದಾರಿ ತಪ್ಪಿಸಲು ಸೌಮ್ಯಾ ಹೀಗೆ ಮಾಡುತ್ತಿರ ಬಹುದೆಂದು ತಿಳಿದು ಸ್ನೇಹಿತೆ ಸುಮ್ಮನಾಗಿದ್ದರು' ಎಂದು ಪೊಲೀಸ್ ಮೂಲಗಳು ಹೇಳಿವೆ.

'ಸ್ನೇಹಿತೆಯನ್ನೂ ವಿಚಾರಣೆ ನಡೆಸಿ ಹೇಳಿಕೆ ಪಡೆಯಲಾಗಿದೆ. ಕೃತ್ಯದಲ್ಲಿ ಆಕೆಯು ಭಾಗಿಯಾಗಿರುವ ನಿಖರ ಪುರಾವೆ ಸಿಕ್ಕಿಲ್ಲ' ಎಂದೂ ತಿಳಿಸಿವೆ.

ಪ್ರಶ್ನೆಪತ್ರಿಕೆ ದೋಷ: ಕರ್ನಾಟಕ ಪರೀಕ್ಷಾ ಪ್ರಾಧಿಕಾರದ ನಾಜೂಕಿನ ಉತ್ತರ

ಬೆಂಗಳೂರು: 'ಸರ್ಕಾರಿ ಪ್ರಥಮದರ್ಜೆ ಕಾಲೇಜುಗಳ ಸಹಾಯಕ ಪ್ರಾಧ್ಯಾಪಕರ ನೇಮಕಾತಿಗೆ ಸಂಬಂಧಿಸಿದಂತೆ ಕನ್ನಡ ವಿಷಯದ ಪರೀಕ್ಷೆಯಲ್ಲಿ ಕೆಲವು ಕಾಗುಣಿತ ಮತ್ತು ಮುದ್ರಣ ದೋಷಗಳ ಬಗ್ಗೆ ವಿಷಯ ತಜ್ಞರ ವರದಿ ಅನುಸಾರ ಕ್ರಮ ಕೈಗೊಳ್ಳಲಾಗುವುದು' ಎಂದು ಕರ್ನಾಟಕ ಪರೀಕ್ಷಾ ಪ್ರಾಧಿಕಾರ (ಕೆಇಎ) ತಿಳಿಸಿದೆ.

ಕೆಇಎ ನಡೆಸಿದ್ದ ಸ್ಪರ್ಧಾತ್ಮಕ ಪರೀಕ್ಷೆಯ ಪ್ರಶ್ನೆಪತ್ರಿಕೆಯಲ್ಲಿ ಹಲವಾರು ಲೋಪದೋಷಗಳಿವೆ ಎಂದು ಶಿವಮೊಗ್ಗದ ಡಾ.ಎಂ.ರವಿ ಅವರು ಕನ್ನಡ ಅಭಿವೃದ್ಧಿ ಪ್ರಾಧಿಕಾರಕ್ಕೆ ದೂರು ಸಲ್ಲಿಸಿದ್ದರು.

ಈ ಬಗ್ಗೆ ಪ್ರಾಧಿಕಾರದ ಅಧ್ಯಕ್ಷರಿಗೆ ವಿವರಣೆ ನೀಡಿರುವ ಕೆಇಎ, ಕೇವಲ ಐದು ಪ್ರಶ್ನೆಗಳಿಗೆ ಮಾತ್ರ ಉತ್ತರ ನೀಡಿದೆ.

ದೂರು–ಉತ್ತರ ಹೀಗಿದೆ

- **ದೂರು:** ಎ4 ಸರಣಿ ಪತ್ರಿಕೆಯ ಪ್ರಶ್ನೆ ಸಂಖ್ಯೆ 2ರಲ್ಲಿ ಎಚ್.ಎಲ್. ನಾಗೇಗೌಡರ 'ಪದವವೆ ನಮ್ಮ ಎದೆಯಲ್ಲಿ' ಕೃತಿಯ ಹೆಸರನ್ನು 'ಪದವಿವೆ ನನ್ನ ಎದೆಯಲ್ಲಿ' ಎಂದು ಮಾಡಲಾಗಿದೆ.

ಕೆಇಎ: 'ಪದವವೆ' ಮತ್ತು 'ಪದವಿವೆ' ಎರಡರ ನಡುವೆ ಸಣ್ಣದಾದ ಕಾಗುಣಿತದ ವ್ಯತ್ಯಾಸವಿದೆ.

- **ದೂರು:** ಪ್ರಶ್ನೆ ಸಂಖ್ಯೆ 45ರಲ್ಲಿ ವಚನಕಾರ ಅಲ್ಲಮಪ್ರಭು ಅವರ 'ಇಂದು ಸಾವ ಹೆಂಡತಿಗೆ ನಾಳೆ ಸಾವ ಗಂಡನವ್ವಾ' ಎಂಬ ವಚನವನ್ನು 'ಇಂದು ಸಾವ ಹೆಂಡತಿಗೆ ನಾಳೆ ಸಾವ ಗಂಡ ನೋಡವ್ವಾ' ಎಂದು ಕೊಡಲಾಗಿದೆ. ಬಿ.ವಿ. ಮಲ್ಲಾಪುರರ ಸಂಪಾದಕತ್ವದಲ್ಲಿ ಕನ್ನಡ ಪುಸ್ತಕ ಪ್ರಾಧಿಕಾರ ಪ್ರಕಟಿಸಿದ ಅಲ್ಲಮ ಪ್ರಭುದೇವರ ವಚನ ಸಂಪುಟ–2ರಲ್ಲಿ ಮತ್ತು ಇದೇ ಪ್ರಾಧಿಕಾರವು ಎಂ.ಎಂ.ಕಲಬುರ್ಗಿಯವರ ಪ್ರಧಾನ ಸಂಪಾದಕತ್ವದಲ್ಲಿ ಸಿದ್ಧಪಡಿಸಿದ ಸಂಪುಟಗಳಲ್ಲಿಯೂ 'ಗಂಡನವ್ವಾ' ಎಂದೇ ಇದೆ. ಪ್ರಶ್ನೆಗಾಗಿ ವಚನದ ಸಾಲನ್ನು ತೆಗೆದ ಮಹಾಶಯರು ಯಾವ ಪುಸ್ತಕವನ್ನು ಆಕರವಾಗಿ ಇಟ್ಟುಕೊಂಡಿದ್ದರು ಎನ್ನುವುದು ತಿಳಿಯದು.

ಕೆಇಎ: 'ವಚನಗಳು ಮೌಖಿಕ ಪರಂಪರೆಯಿಂದ ಬಂದಂತ ಸಾಹಿತ್ಯ ಪ್ರಕಾರವಾಗಿದ್ದು, ಭಾವಾರ್ಥ ಒಂದೇ ಇರುತ್ತದೆ. ಗಂಡನವ್ವಾ ಹಾಗೂ ಗಂಡ ನೋಡವ್ವಾ ಎರಡರ ನಡುವೆ ಅರ್ಥದಲ್ಲಿ ಯಾವುದೇ ವ್ಯತ್ಯಾಸ ಇರುವುದಿಲ್ಲ'.

- **ದೂರು:** ಪ್ರಶ್ನೆ ಸಂಖ್ಯೆ 53ರಲ್ಲಿ 'ಚಾಮುಂಡರಾಯ ಪುರಾಣ' ಎಂದು ಬರೆಯಲಾಗಿದೆ. ಈ ಕೃತಿಯನ್ನು ನಮಗೆ 'ಚಾವುಂಡರಾಯ ಪುರಾಣ'ವೆಂದು ಓದಿಸಿದ್ದು ಮತ್ತು ನಾವು ಓದಿದ್ದು ಹೀಗೆಲ್ಲಾ ನಮಗೆ ಅಕ್ಷರ ದೋಷಗಳ ಮೂಲಕ 'ಮುಂಡಾ'ಯಿಸಲಾಗಿದೆ.

ಕೆಇಎ: 'ಚಾಮುಂಡರಾಯ' ಮತ್ತು 'ಚಾವುಂಡರಾಯ' ಎರಡು ಚಾಲ್ತಿಯಲ್ಲಿರುವ ಪದಗಳಾಗಿವೆ .

- **ದೂರು:** ಪ್ರಶ್ನೆ ಸಂಖ್ಯೆ 74ರ ಸರಿಯಾದ ಹೊಂದಾಣಿಕೆಯನ್ನು ಗುರುತಿಸಲು ಸೂಚಿಸಿದ್ದಾರೆ. ದುರಂತ ಅಂದರೆ ಸರಿ ಉತ್ತರದ ಆಯ್ಕೆಯಲ್ಲಿನ ಲೇಖಕರ ಹೆಸರೇ ತಪ್ಪಾಗಿದೆ. ನಮಗೆ ಲೇಖಕ ರಾಘವೇಂದ್ರ ಖಾಸನೀಸ ಗೊತ್ತಿತ್ತು. 'ನಾಘವೇಂದ್ರ ಖಾಸನೀಸ' ಗೊತ್ತಿರಲಿಲ್ಲ.
- **ದೂರು:** ಪ್ರಶ್ನೆ ಸಂಖ್ಯೆ 121ರಲ್ಲಿಯೂ ಜೀ.ಶಂ. ಪರಮಶಿವಯ್ಯನವರ ಹೆಸರನ್ನು 'ಜೀ.ಕಂ. ಪರಮಶಿವಯ್ಯ' ಬರೆದಿದ್ದಾರೆ.

ಕೆಇಎ(ಒಂದೇ ಉತ್ತರ): ಪ್ರಶ್ನೆಪತ್ರಿಕೆಯಲ್ಲಿ ಒಂದೆರಡು ಕಡೆ ಕಾಗುಣಿತ ದೋಷಗಳಿದ್ದು, ಮೌಲ್ಯಮಾಪನದ ಸಮಯದಲ್ಲಿ ತಜ್ಞರ ವರದಿಯಂತೆ ಕ್ರಮವಹಿಸಲಾಗುವುದು.

ಸುದ್ದಿ 2 ನಿಮಿಷ

'ಸಂಪುಟ ವಿಸ್ತರಣೆ: ಮೇ 3ಕ್ಕೆ ಶಾ ಜತೆ ಚರ್ಚೆ'

ಬೆಂಗಳೂರು: ಕೇಂದ್ರ ಗೃಹ ಸಚಿವ ಅಮಿತ್ ಶಾ ಅವರು ಮೇ 3ರಂದು ಬೆಂಗಳೂರಿಗೆ ಬರಲಿದ್ದು, ಆ ಸಂದರ್ಭದಲ್ಲಿ ಸಚಿವ ಸಂಪುಟ ವಿಸ್ತರಣೆ ಕುರಿತು ಚರ್ಚೆ ನಡೆಸುವುದಾಗಿ ಮುಖ್ಯಮಂತ್ರಿ ಬಸವರಾಜ ಬೊಮ್ಮಾಯಿ ಹೇಳಿದ್ದಾರೆ.

ಸುದ್ದಿಗಾರರ ಜತೆ ಶುಕ್ರವಾರ ಮಾತನಾಡಿದ ಅವರು ಈ ವಿಷಯ ತಿಳಿಸಿದರು.



'ದೆಹಲಿಯಲ್ಲಿ ಶನಿವಾರ ನಡೆಯಲಿರುವ ವಿವಿಧ ರಾಜ್ಯಗಳ ಮುಖ್ಯಮಂತ್ರಿಗಳು ಮತ್ತು ಮುಖ್ಯನ್ಯಾಯಮೂರ್ತಿಗಳ ಸಮ್ಮೇಳನದಲ್ಲಿ ಭಾಗವಹಿಸಲಿದ್ದೇನೆ. ಈ ಸಂದರ್ಭದಲ್ಲಿ ವರಿಷ್ಠರ ಜತೆ ಚರ್ಚೆ ಮಾಡುವ ಸಾಧ್ಯತೆ ಇಲ್ಲ. ಅಮಿತ್ ಶಾ ಅವರು ಬೆಂಗಳೂರಿಗೆ ಬಂದಾಗ ಈ ವಿಷಯ ಪ್ರಸ್ತಾಪಿಸುತ್ತೇನೆ' ಎಂದು ತಿಳಿಸಿದ್ದಾರೆ.

ಶಾ ಅವರು ಬೆಂಗಳೂರಿನಲ್ಲಿ ಮೇ 3 ರಂದು ನೃಪತುಂಗ ವಿಶ್ವವಿದ್ಯಾಲಯವನ್ನು ಉದ್ಘಾಟಿಸಲಿದ್ದಾರೆ. ಬಳ್ಳಾರಿಯ ಫೊರೆನ್ಸಿಕ್ ಸೈನ್ಸ್ ಲ್ಯಾಬ್ ಅನ್ನು ವರ್ಚುವಲ್ ಆಗಿ ಉದ್ಘಾಟಿಸಲಿದ್ದು, ಸಂಜೆ 4ಕ್ಕೆ ಮಲ್ಲೇಶ್ವರದಲ್ಲಿರುವ ಪಕ್ಷದ ಕಚೇರಿಗೆ ಭೇಟಿ ನೀಡಲಿದ್ದಾರೆ. ಸಂಜೆ 5ಕ್ಕೆ ಖೇಲೋ ಇಂಡಿಯಾ ಯುನಿವರ್ಸಿಟಿ ಗೇಮ್ಸ್ ಸಮಾರೋಪದಲ್ಲಿ ಭಾಗವಹಿಸಲಿದ್ದಾರೆ ಎಂದು ಮೂಲಗಳು ತಿಳಿಸಿವೆ.

ಮೇ 7ರಂದು 70 ಪಶು ಆಂಬುಲೆನ್ಸ್ ಸೇವೆಗೆ: ಸಚಿವ ಪ್ರಭು ಚವ್ಹಾಣ

ಬೆಂಗಳೂರು: ಮೇ 7ರಂದು ಬೆಂಗಳೂರಿನಲ್ಲಿ 70 ಸಂಚಾರಿ ಪಶು ಚಿಕಿತ್ಸಾಲಯಗಳನ್ನು ಲೋಕಾರ್ಪಣೆ ಮಾಡಲಾಗುವುದು ಎಂದು ಪಶು ಸಂಗೋಪನಾ ಸಚಿವ ಪ್ರಭು ಚವ್ಹಾಣ ಹೇಳಿದ್ದಾರೆ.

ವಿಕಾಸಸೌಧದ ಆವರಣದಲ್ಲಿ ಸಂಚಾರಿ ಪಶು ಚಿಕಿತ್ಸಾಲಯಗಳನ್ನು (ಆಂಬುಲೆನ್ಸ್) ಪರೀಕ್ಷಿಸಿದ ಬಳಿಕ ಅವರು ಸುದ್ದಿಗಾರರಿಗೆ ಈ ವಿಷಯ ತಿಳಿಸಿದರು.

2021–22 ನೇ ಸಾಲಿನ ಕೇಂದ್ರ ಸರ್ಕಾರದ ಜಾನುವಾರು ಆರೋಗ್ಯ ಮತ್ತು ರೋಗ ನಿಯಂತ್ರಣ ಕಾರ್ಯಕ್ರಮ ಅನುದಾನದಲ್ಲಿ ಅಗತ್ಯ ತುರ್ತುಸೇವೆ ಒದಗಿಸಲು ರಾಜ್ಯಕ್ಕೆ 275 ಸಂಚಾರಿ ಪಶು ಚಿಕಿತ್ಸಾ ವಾಹನ ಒದಗಿಸಲಾಗಿದೆ. ಈ ಪೈಕಿ 70 ವಾಹನಗಳನ್ನು ಜಾನುವಾರು ಸೇವೆಗೆ ಬಳಸಲಾಗುವುದು ಎಂದು ಹೇಳಿದರು.

ಸಂಕ್ಷಿಪ್ತ ಸುದ್ದಿ

ಹಲ್ಲೆ ಪ್ರಕರಣ: ಜಿಗ್ನೇಶ್ ಮೆವಾನಿಗೆ ಜಾಮೀನು



ಬಾರ್ಪೇಟಾ (ಅಸ್ಸಾಂ): ಮಹಿಳಾ ಪೊಲೀಸ್ ಅಧಿಕಾರಿಯೊಬ್ಬರ ಮೇಲೆ ಹಲ್ಲೆ ನಡೆಸಿದ ಆರೋಪ ಪ್ರಕರಣದಲ್ಲಿ ಬಂಧಿತರಾಗಿದ್ದ ಗುಜರಾತ್ ಶಾಸಕ ಜಿಗ್ನೇಶ್ ಮೆವಾನಿ ಅವರಿಗೆ ಬಾರ್ಪೇಟಾ ಜಿಲ್ಲೆಯ ನ್ಯಾಯಾಲಯವು ಶುಕ್ರವಾರ ಜಾಮೀನು ನೀಡಿದೆ.

ಮುಂಬೈ: 'ಲೋಕಲ್ ಟ್ರೈನ್' ಪ್ರಯಾಣ ದರ ಶೇ 50ರಷ್ಟು ಕಡಿತ

ಮುಂಬೈ (ಪಿಟಿಐ): ಇಲ್ಲಿನ ಹವಾ ನಿಯಂತ್ರಿತ 'ಲೋಕಲ್ ಟ್ರೈನ್'ಗಳಲ್ಲಿ ಪ್ರಯಾಣ ದರವನ್ನು ಶೇ 50ರಷ್ಟು ಕಡಿಮೆ ಮಾಡಲಾಗುವುದು ಎಂದು ಕೇಂದ್ರ ರೈಲ್ವೆ ಖಾತೆ ರಾಜ್ಯ ಸಚಿವ ರಾವ್‌ಸಾಹೇಬ್ ದಾನ್ವೆ ಶುಕ್ರವಾರ ಘೋಷಿಸಿದ್ದಾರೆ.

ಬೈಕುಲ್ಲಾ ರೈಲು ನಿಲ್ದಾಣದಲ್ಲಿ ಪುನಶ್ಚೇತನಗೊಳಿಸಿರುವ ಪಾರಂಪರಿಕ ಕಟ್ಟಡದ ಉದ್ಘಾಟನಾ ಸಮಾರಂಭದಲ್ಲಿ ಅವರು ಈ ಘೋಷಣೆ ಮಾಡಿದರು. ಪ್ರಸ್ತುತ 5 ಕಿ.ಮೀ ದೂರಕ್ಕೆ ಕನಿಷ್ಠ ದರ ₹ 65 ಇದ್ದು, ಅದನ್ನು ₹ 30ಕ್ಕೆ ಇಳಿಸಲಾಗುವುದು ಎಂದು ತಿಳಿಸಿದರು.

ಇಂಧನ ಮೇಲಿನ ತೆರಿಗೆ ಶೇ 250ರಷ್ಟು ಹೆಚ್ಚಿಸಿದ ಕೇಂದ್ರ: ಪ್ರಿಯಾಂಕಾ

ನವದೆಹಲಿ: 2014–15 ಮತ್ತು 2020–21ರ ನಡುವೆ ಕೇಂದ್ರವು ಪೆಟ್ರೋಲ್ ಮತ್ತು ಡೀಸೆಲ್ ಮೇಲಿನ ತೆರಿಗೆಯನ್ನು ಶೇ 250ರಷ್ಟು ಹೆಚ್ಚಿಸಿದೆ ಎಂದು ಕಾಂಗ್ರೆಸ್ ನಾಯಕಿ ಪ್ರಿಯಾಂಕಾ ಗಾಂಧಿ ವಾದ್ರಾ ಶುಕ್ರವಾರ ಹೇಳಿದ್ದಾರೆ.

ಪ್ರತಿಪಕ್ಷಗಳು ಆಳ್ವಿಕೆ ನಡೆಸುವ ಹಲವು ರಾಜ್ಯಗಳಲ್ಲಿ ಇಂಧನ ದರ ಹೆಚ್ಚಾಗಿದೆ ಎಂದು ಪ್ರಧಾನಿ ನರೇಂದ್ರ ಮೋದಿ ಅವರು ನೀಡಿರುವ ಹೇಳಿಕೆಗೆ ಪ್ರಿಯಾಂಕಾ ಅವರು ಟ್ವೀಟ್ ಮೂಲಕ ತಿರುಗೇಟು ನೀಡಿದ್ದಾರೆ.

ಮರಳು ಉದ್ಯಮಿಗೂ, ದಿವ್ಯಾಗೂ ಪರಿಚಯ ಹೇಗೆ?

ಪ್ರಜಾವಾಣಿ ವಾರ್ತೆ

ಕಲಬುರಗಿ: ಪಿಎಸ್‌ಐ ನೇಮಕಾತಿ ಪರೀಕ್ಷೆ ಹಗರಣದ ಆರೋಪಿ ದಿವ್ಯಾ ಹಾಗರಗಿ ಅವರೊಂದಿಗೆ ಮಹಾರಾಷ್ಟ್ರದ ಸೊಲ್ಲಾಪುರದ ಮರಳು ಉದ್ಯಮಿ ಸುರೇಶ ಕಾಟೇಗಾಂವ ಮತ್ತು ಕಾಳಿದಾಸ ಸಹ ಸಿಐಡಿಗೆ ಸಿಕ್ಕಿಬಿದ್ದಿದ್ದಾರೆ. ಈ ಪ್ರಕರಣಕ್ಕೂ ಇವರಿಗೆ ಏನು ಸಂಬಂಧ ಎಂಬ ಜಾಡು ಹಿಡಿದು ಸಿಐಡಿ ತನಿಖೆ ಆರಂಭಿಸಿದೆ.

ದಿವ್ಯಾ ಹಾಗರಗಿ ಹಾಗೂ ಅವರ ಸಹಚರರಿಗೆ ಆಶ್ರಯ ನೀಡಿದ ಆರೋಪ ಸುರೇಶ ಕಾಟೇಗಾಂವ, ಕಾಳಿದಾಸ ಮೇಲಿದೆ. ಇದುವರೆಗೂ ಕೇಳದೇ ಇದ್ದ ಈ 'ಹೊಸ ಮುಖಗಳು' ಈಗ ಏಕಾಏಕಿಯಾಗಿ ಪ್ರಕರಣದಲ್ಲಿ ಕಾಣಿಸಿಕೊಂಡಿವೆ.

'ಅಫಜಲಪುರದ ಹಿರಿಯ ರಾಜಕಾರಣಿಯೊಬ್ಬರ ಮೂಲಕ ದಿವ್ಯಾ ಹಾಗೂ ಸುರೇಶ ಅವರ ಪರಿಚಯವಾಗಿತ್ತು. ಜಿಲ್ಲೆಯ ಭೀಮಾತೀರದಲ್ಲಿ ಮರಳು ಗುತ್ತಿಗೆ ಪಡೆದವರಲ್ಲಿ ಸುರೇಶ ಕೂಡ ಒಬ್ಬರು. ಮಹಾರಾಷ್ಟ್ರದ ಸೊಲ್ಲಾಪುರ ಹಾಗೂ ಪುಣೆಯಲ್ಲಿ ಅವರು ಬೇರೆ ಉದ್ಯಮಗಳನ್ನೂ ಹೊಂದಿದ್ದಾರೆ. ಹೀಗಾಗಿ, ದಿವ್ಯಾ ಅವರು ಮಹಾರಾಷ್ಟ್ರಕ್ಕೆ ಹೋಗಿ ಅವರ ಬಳಿ ತಲೆಮರೆಸಿಕೊಂಡಿದ್ದರು' ಎಂದು ಸಿಐಡಿ ಮೂಲಗಳು ಮಾಹಿತಿ ನೀಡಿವೆ.

ಪುಣೆಯಲ್ಲೇ ಠಿಕಾಣಿ?: ರುದ್ರಗೌಡ ಪಾಟೀಲ ಏ.23ರಂದು ಮಹಾರಾಷ್ಟ್ರದ ಪುಣೆಯ ಹತ್ತಿರ ಸೆರೆ ಸಿಕ್ಕರು. ಇದಕ್ಕೂ ಮುನ್ನ ಅವರು ಸೊಲ್ಲಾಪುರದಲ್ಲಿ ತಲೆಮರೆಸಿಕೊಂಡಿದ್ದರು. ಶುಕ್ರವಾರ ಬಂಧಿಸಲಾದ ದಿವ್ಯಾ ಹಾಗರಗಿ ಹಾಗೂ ಇತರರು ಕೂಡ ಪುಣೆ ನಗರದಲ್ಲೇ ಸಿಕ್ಕಿಬಿದ್ದಿದ್ದಾರೆ. ಇದಕ್ಕೂ ಮುನ್ನ ಅವರು ಸೊಲ್ಲಾಪುರದ ಮರಳು ಉದ್ಯಮಿ ಮನೆಯಲ್ಲಿ ಆಶ್ರಯ ಪಡೆದಿದ್ದರು ಎಂಬುದು ವಿಚಾರಣೆ ವೇಳೆ ಗೊತ್ತಾಗಿದೆ.

ದಿವ್ಯಾ ಸೆರೆ ಸಿಕ್ಕಿದ್ದು ಹೇಗೆ?': ಅಕ್ರಮಕ್ಕೆ ಸಂಬಂಧಿಸಿದಂತೆ ಸಿಐಡಿ ಅಧಿಕಾರಿಗಳು ಶಹಾಬಾದ್ ನಗರಸಭೆಯ ದ್ವಿತೀಯ ದರ್ಜೆ ಸಹಾಯಕಿ ಜ್ಯೋತಿ ಪಾಟೀಲ ಎಂಬುವವರನ್ನು ಗುರುವಾರ ವಶಕ್ಕೆ ಪಡೆದಿದ್ದರು. ಜ್ಞಾನಜ್ಯೋತಿ ಶಾಲೆಯಲ್ಲಿನ ಕೇಂದ್ರದಲ್ಲಿ ಪಿಎಸ್‌ಐ ನೇಮಕಾತಿ ಪರೀಕ್ಷೆ ಬರೆದಿದ್ದ ಸೇಡಂನ ಶಾಂತಿಬಾಯಿ ಬಸ್ಯನಾಯ್ಕ ಎಂಬುವವರಿಗೆ ಬ್ಲೂಟೂತ್ ಮೂಲಕ ಉತ್ತರ ಹೇಳುವಲ್ಲಿ ಸಹಕರಿಸಿದ ಆರೋಪ ಇವರ ಮೇಲಿತ್ತು.

ಜ್ಯೋತಿ ಪಾಟೀಲ ಅವರ ಮೊಬೈಲ್ ಕರೆಗಳ ಮಾಹಿತಿಯನ್ನು ಸಿಐಡಿ ತಂಡ ಜಾಲಾಡಿದಾಗ, ಆರೋಪಿಗಳಲ್ಲಿ ಒಬ್ಬರು ಜ್ಯೋತಿ ಪಾಟೀಲ ಅವರ ಜೊತೆ ಸಂಪರ್ಕದಲ್ಲಿ ಇರುವುದು ಗೊತ್ತಾಯಿತು. ಆ ಮೊಬೈಲ್ ಲೋಕೇಷನ್ ಪತ್ತೆ ಹಚ್ಚಿದ ತನಿಖಾಧಿಕಾರಿಗಳು, ಮಹಾರಾಷ್ಟ್ರದ ಪೊಲೀಸರ ನೆರವಿನೊಂದಿಗೆ ಆರೋಪಿಗಳನ್ನು ಬಂಧಿಸಿದರು ಎಂದು ಮೂಲಗಳು ತಿಳಿಸಿವೆ.

ಆರೋಪಿಗಳಲ್ಲಿ ಬಹುತೇಕರು ಈ ಅವಧಿಯಲ್ಲಿ ಮೊಬೈಲ್ ಬಳಸುತ್ತಿರಲಿಲ್ಲ. ಜ್ಯೋತಿ ಪಾಟೀಲ ಜೊತೆ ಸಂಪರ್ಕದಲ್ಲಿರುವ ಒಬ್ಬರು ಪದೇ ಪದೇ ಸಿಮ್ ಬದಲಿಸುತ್ತಿದ್ದರು. ಹೀಗಾಗಿ ಅವರ ಪತ್ತೆ ಕಷ್ಟಕರವಾಗಿತ್ತು ಎಂಬುದು ಸಿಐಡಿ ಮೂಲಗಳ ಮಾಹಿತಿ. ಆದರೆ, ಜ್ಯೋತಿ ಸೆರೆಸಿಕ್ಕ ಬಳಿಕ ಅವರಿಂದ ಮೊಬೈಲ್ ಸಂಖ್ಯೆಗಳನ್ನು ಪತ್ತೆ ಮಾಡಿದ ಅಧಿಕಾರಿಗಳು ದಿವ್ಯಾ ಬಂಧಿಸುವಲ್ಲಿ ಯಶಸ್ವಿಯಾದರು.

ದಿವ್ಯಾ ಸುತ್ತಲೇ ಗಿರಕಿ ಹೊಡೆದ ಪ್ರಕರಣ

2021ರ ಅಕ್ಟೋಬರ್ 3ರಂದು ಪಿಎಸ್‌ಐ ನೇಮಕಾತಿ ಪರೀಕ್ಷೆ ನಡೆದ ಇಲ್ಲಿನ ಜ್ಞಾನಜ್ಯೋತಿ ಇಂಗ್ಲಿಷ್ ಮಾಧ್ಯಮ ಶಾಲೆಯೇ ಈ ಎಲ್ಲ ಅಕ್ರಮಗಳ ಕೇಂದ್ರಸ್ಥಾನ. ಈ ಕೇಂದ್ರದಲ್ಲಿ ಪರೀಕ್ಷೆ ಬರೆದಿದ್ದವರ ಪೈಕಿ 11 ಮಂದಿ ನೇಮಕಾತಿಯ ತಾತ್ಕಾಲಿಕ ಆಯ್ಕೆ ಪಟ್ಟಿಯಲ್ಲಿದ್ದರು. ಈ ಪೈಕಿ ಏಳು ಮಂದಿಯನ್ನು ಬಂಧಿಸಲಾಗಿದೆ.

ಪರೀಕ್ಷಾ ಅಕ್ರಮದ ಕುರಿತು ಸಿಐಡಿ ಅಧಿಕಾರಿಗಳು ಇಲ್ಲಿನ ಚೌಕ್ ಪೊಲೀಸ್ ಠಾಣೆಯಲ್ಲಿ ಏ. 9ರಂದು ಎಫ್‌ಐಆರ್ ದಾಖಲಿಸಿದ್ದರು. ಪ್ರಕರಣವನ್ನು ಸಿಐಡಿಗೆ ಒಪ್ಪಿಸಿದ ದಿನದಿಂದಲೇ ದಿವ್ಯಾ ಹಾಗೂ ಇತರ ನಾಲ್ವರು ಆರೋಪಿಗಳು ತಲೆಮರೆಸಿಕೊಂಡಿದ್ದರು. ಅಧಿಕಾರಿಗಳು ಆರು ತಂಡಗಳನ್ನು ರಚಿಸಿಕೊಂಡು 18 ದಿನಗಳಿಂದ ಅವರ ಹುಡುಕಾಟ ನಡೆಸಿದ್ದರು.

ಏತನ್ಮಧ್ಯೆ, ಸ್ಥಳೀಯ ನ್ಯಾಯಾಲಯವು ದಿವ್ಯಾ ಹಾಗೂ ಇತರ ಆರು ಆರೋಪಿಗಳ ವಿರುದ್ಧ ಬಂಧನ ವಾರಂಟ್ ಹೊರಡಿಸಿತ್ತು. ವಾರದಲ್ಲಿ ಶರಣಾಗದಿದ್ದರೆ ಆಸ್ತಿ ಮುಟ್ಟುಗೋಲು ಹಾಕಿಕೊಳ್ಳುವ ಎಚ್ಚರಿಕೆಯನ್ನೂ ನೀಡಿತ್ತು.

ನಾಲ್ವರ ವಿರುದ್ಧ ಬಂಧನ ವಾರಂಟ್

ಜ್ಞಾನಜ್ಯೋತಿ ಆಂಗ್ಲಮಾಧ್ಯಮ ಶಾಲೆಯ ಮುಖ್ಯ ಶಿಕ್ಷಕ ಕಾಶಿನಾಥ, ನೀರಾವರಿ ಇಲಾಖೆ ಸಹಾಯಕ ಎಂಜಿನಿಯರ್ ಮಂಜುನಾಥ ಮೇಳಕುಂದಿ, ಇವರ ಸಹೋದರ ರವೀಂದ್ರ ಮೇಳಕುಂದಿ ಹಾಗೂ ಒಬ್ಬ ಶಿಕ್ಷಕಿ ವಿರುದ್ಧ ಇಲ್ಲಿಯ 3ನೇ ಜೆಎಂಎಫ್ ನ್ಯಾಯಾಲಯದ ಪ್ರಭಾರಿ ನ್ಯಾಯಾಧೀಶ ಸಂತೋಷ ಶ್ರೀವಾಸ್ತವ ಅವರು ಬಂಧನದ ವಾರಂಟ್ ಹೊರಡಿಸಿದ್ದಾರೆ.

ಸರ್ಕಾರದ ವಿರುದ್ಧ ಅಭ್ಯರ್ಥಿಗಳ ಆಕ್ರೋಶ

ಬೆಂಗಳೂರು: 545 ಪಿಎಸ್‌ಐ ಹುದ್ದೆಗಳ ನೇಮಕಾತಿ ಅಕ್ರಮ ಪ್ರಕರಣದ ವಿಚಾರಣೆಗೆ ಸಿಐಡಿ ಕಚೇರಿಗೆ ಶುಕ್ರವಾರ ಬಂದಿದ್ದ ಅಭ್ಯರ್ಥಿಗಳು, ಮರುಪರೀಕ್ಷೆ ನಡೆಸಲು ಮುಂದಾಗಿರುವ ಸರ್ಕಾರದ ವಿರುದ್ಧ ಆಕ್ರೋಶ ವ್ಯಕ್ತಪಡಿಸಿದರು.

ತಾತ್ಕಾಲಿಕ ಆಯ್ಕೆ ಪಟ್ಟಿಯಲ್ಲಿ ಹೆಸರಿರುವ ಅಭ್ಯರ್ಥಿಗಳನ್ನು ಅರಮನೆ ರಸ್ತೆಯ 'ಕಾರ್ಲಟನ್' ಕಟ್ಟಡದಲ್ಲಿರುವ ಸಿಐಡಿ ಕಚೇರಿಗೆ ಕರೆಸಿ ವಿಚಾರಣೆ ನಡೆಸಲಾಗುತ್ತಿದೆ. ಅಧಿಕಾರಿಗಳ ಸೂಚನೆಯಂತೆ ಶುಕ್ರವಾರವೂ ಕಚೇರಿಗೆ ಬಂದಿದ್ದ 50ಕ್ಕೂ ಹೆಚ್ಚು ಅಭ್ಯರ್ಥಿಗಳು ವಿಚಾರಣೆ ಎದುರಿಸಿದರು.

ವಿಚಾರಣೆ ಮುಗಿಸಿ ಹೊರಬಂದ ಅಭ್ಯರ್ಥಿಗಳು, ಮರುಪರೀಕ್ಷೆ ಸುದ್ದಿ ತಿಳಿದು ಸರ್ಕಾರದ ವಿರುದ್ಧ ಕಿಡಿಕಾರಿದರು.

> **ಪಿಎಸ್‌ಐ ನೇಮಕಾತಿ ಅಕ್ರಮದಲ್ಲಿ ಬಿಜೆಪಿಯ ಪ್ರಭಾವಿ ರಾಜಕಾರಣಿಗಳು, ಹಿರಿಯ ಪೊಲೀಸ್ ಅಧಿಕಾರಿಗಳೇ ಭಾಗಿಯಾಗಿದ್ದಾರೆ. ಈ ಪ್ರಕರಣದಲ್ಲಿ ನಿಷ್ಪಕ್ಷಪಾತ ತನಿಖೆ ನಡೆಸಲು ಸಿಐಡಿಗೆ ಸಾಧ್ಯವೆ?**
> **ರಾಮಲಿಂಗಾ ರೆಡ್ಡಿ**, ಕೆಪಿಸಿಸಿ ಕಾರ್ಯಾಧ್ಯಕ್ಷ

'ಅಕ್ರಮದ ಬಗ್ಗೆ ತನಿಖೆ ನಡೆಯುತ್ತಿದ್ದು, ತಪ್ಪಿತಸ್ಥರನ್ನು ಸಿಐಡಿ ಪೊಲೀಸರು ಬಂಧಿಸುತ್ತಿದ್ದಾರೆ. ಇಂಥ ಸಮಯದಲ್ಲಿ ಸರ್ಕಾರ ಮರುಪರೀಕ್ಷೆ ನಿರ್ಧಾರ ಕೈಗೊಂಡಿರುವುದು ಖಂಡನೀಯ' ಎಂದು ಅಭ್ಯರ್ಥಿಗಳು ಆಕ್ರೋಶಗೊಂಡರು.

'ಕಷ್ಟಪಟ್ಟು ಓದಿ ಪ್ರಾಮಾಣಿಕವಾಗಿ ಪರೀಕ್ಷೆ ಬರೆದು ಪಿಎಸ್‌ಐ ಹುದ್ದೆಗೆ ಅರ್ಹತೆ ಪಡೆದಿದ್ದೇವೆ. ಕೆಲವರ ತಪ್ಪಿನಿಂದ ಪ್ರಾಮಾಣಿಕ ಅಭ್ಯರ್ಥಿಗಳಿಗೆ ಅನ್ಯಾಯ ಮಾಡುವುದು ಯಾವ ನ್ಯಾಯ? ಅಕ್ರಮದಲ್ಲಿ ಸಿಕ್ಕಿಬಿದ್ದವರ ಮೇಲೆ ಕಠಿಣ ಕ್ರಮ ಕೈಗೊಳ್ಳಿ. ಪ್ರಾಮಾಣಿಕ ಅಭ್ಯರ್ಥಿಗಳಿಗೆ ನೇಮಕಾತಿ ಪತ್ರ ನೀಡಿ' ಎಂದು ಅಭ್ಯರ್ಥಿಗಳು ಒತ್ತಾಯಿಸಿದರು.

'ಸಿಐಡಿ ತನಿಖೆ ಮೇಲೆ ಭರವಸೆ ಇಟ್ಟು, ವಿಚಾರಣೆಗೆ ಹಾಜರಾಗುತ್ತಿದ್ದೇವೆ. ಆದರೆ, ತನಿಖೆ ಮುಗಿಯುವ ಮುನ್ನವೇ ಸರ್ಕಾರ ಮರುಪರೀಕ್ಷೆ ಮಾಡುತ್ತಿರುವುದು ಸರಿಯಲ್ಲ. ಈ ನಿರ್ಧಾರವನ್ನು ಕೂಡಲೇ ಹಿಂಪಡೆಯಬೇಕು. ಇಲ್ಲದಿದ್ದರೆ, ಕಾನೂನು ಹೋರಾಟ ನಡೆಸಲು ಚಿಂತಿಸಲಾಗುವುದು' ಎಂದು ಅಭ್ಯರ್ಥಿಗಳು ಹೇಳಿದರು.



ಪಂಜಾಬ್‌ನ ಪಟಿಯಾಲದಲ್ಲಿ ಶುಕ್ರವಾರ ನಡೆದ ಘರ್ಷಣೆ ವೇಳೆ ಸಿಖ್ ಸಮುದಾಯದವರು ಪೊಲೀಸರನ್ನು ಅಟ್ಟಿಸಿಕೊಂಡು ಹೋದರು —ಪಿಟಿಐ ಚಿತ್ರ

ನ್ಯಾಯಮೂರ್ತಿಗಳ ನೇಮಕ: ಹೆಸರುಗಳ ಶಿಫಾರಸು ಮಾಡಲು ಸಿಜೆಐ ಸೂಚನೆ

ನವದೆಹಲಿ (ಪಿಟಿಐ): ಹೈಕೋರ್ಟ್‌ಗಳಲ್ಲಿ ಖಾಲಿ ಇರುವ ನ್ಯಾಯಮೂರ್ತಿಗಳ ಹುದ್ದೆಗಳನ್ನು ಭರ್ತಿ ಮಾಡಲು ಎಲ್ಲಾ 25 ಹೈಕೋರ್ಟ್‌ಗಳ ಮುಖ್ಯನ್ಯಾಯಮೂರ್ತಿಗಳು ಬಡ್ತಿ ನೀಡಬಹುದಾದ ನ್ಯಾಯಾಧೀಶರ ಹೆಸರುಗಳನ್ನು ಕಳುಹಿಸಿಕೊಡಬೇಕು ಎಂದು ಸುಪ್ರೀಂಕೋರ್ಟ್‌ನ ಮುಖ್ಯ ನ್ಯಾಯಮೂರ್ತಿ (ಸಿಜೆಐ) ಎನ್.ವಿ. ರಮಣ ಸೂಚಿಸಿದರು.

ಆರು ವರ್ಷಗಳ ನಂತರ ಇಲ್ಲಿ ನಡೆಯುತ್ತಿರುವ ಮುಖ್ಯ ನ್ಯಾಯಮೂರ್ತಿಗಳ 39ನೇ ಸಮ್ಮೇಳನವನ್ನು ಶುಕ್ರವಾರ ಉದ್ಘಾಟಿಸಿ ಮಾತನಾಡಿದ ಅವರು, 'ವಿವಿಧ ಹೈಕೋರ್ಟ್‌ಗಳಲ್ಲಿ ಖಾಲಿ ಇದ್ದ 126 ಹುದ್ದೆಗಳನ್ನು ವರ್ಷದೊಳಗೆ ಭರ್ತಿ ಮಾಡಿದ್ದೇವೆ. ಸಾಮೂಹಿಕ ಪ್ರಯತ್ನದಿಂದ ಇದು ಸಾಧ್ಯವಾಗಿದೆ. ಇನ್ನೂ 50 ಹುದ್ದೆಗಳನ್ನು ಭರ್ತಿ ಮಾಡುವುದನ್ನು ನಿರೀಕ್ಷಿಸುತ್ತಿದ್ದೇವೆ' ಎಂದು ಅವರು ಹೇಳಿದರು.

ಪಟಿಯಾಲದಲ್ಲಿ ಘರ್ಷಣೆ: ಕರ್ಫ್ಯೂ, ಒಬ್ಬನ ಬಂಧನ

ಚಂಡೀಗಡ: ಪಂಜಾಬ್‌ನ ಪಟಿಯಾಲದಲ್ಲಿ ಶುಕ್ರವಾರ ಖಾಲಿಸ್ತಾನ ವಿರೋಧಿ ಮೆರವಣಿಗೆಯ ವೇಳೆ ಎರಡು ಗುಂಪುಗಳ ನಡುವೆ ಘರ್ಷಣೆ ನಡೆದಿದ್ದು, ಕಲ್ಲುತೂರಾಟದಲ್ಲಿ ಪೊಲೀಸರೊಬ್ಬರು ಸೇರಿದಂತೆ ಇಬ್ಬರು ಗಾಯಗೊಂಡಿದ್ದಾರೆ. ಪರಿಸ್ಥಿತಿ ನಿಯಂತ್ರಿಸಲು ಪೊಲೀಸರು ಗಾಳಿಯಲ್ಲಿ ಗುಂಡು ಹಾರಿಸಿದ್ದಾರೆ.

ಘಟನೆಗೆ ಸಂಬಂಧಿಸಿದಂತೆ 'ಶಿವಸೇನಾ' (ಬಾಳಾಠಾಕ್ರೆ) ಸಂಘಟನೆಯ ಕಾರ್ಯಾಧ್ಯಕ್ಷ ಹರೀಶ್ ಸಿಂಗ್ಲಾ ಎಂಬುವರನ್ನು ಬಂಧಿಸಲಾಗಿದೆ.

ಪಟಿಯಾಲದ ಕಾಳಿದೇವಿಯ ದೇಗುಲದ ಮುಂಭಾಗದಲ್ಲಿ 'ಶಿವಸೇನಾ' (ಬಾಳಾ ಠಾಕ್ರೆ) ಸಂಘಟನೆಯ ಸದಸ್ಯರು ಖಾಲಿಸ್ತಾನ ವಿರೋಧಿ ಮೆರವಣಿಗೆ ಆರಂಭಿಸಿದ್ದರು. ಇದಕ್ಕೆ ಪ್ರತಿಯಾಗಿ ನಿಹಾಂಗ್‌ಗಳು ಸೇರಿದಂತೆ ಸಿಖ್ ಸಮುದಾಯದವರು ಮೆರವಣಿಗೆ ನಡೆಸಿದ್ದರು. ಈ ವೇಳೆ ಘರ್ಷಣೆ ನಡೆದಿದೆ. ಮೆರವಣಿಗೆಗೆ ಶಿವಸೇನಾ ಸಂಘಟನೆ ಪೊಲೀಸರ ಅನುಮತಿ ಪಡೆದಿರಲಿಲ್ಲ ಎನ್ನಲಾಗಿದೆ.

ಘರ್ಷಣೆಯ ಹಿನ್ನೆಲೆಯಲ್ಲಿ ಪಟಿಯಾಲದಲ್ಲಿ ಕರ್ಫ್ಯೂ ಜಾರಿಗೊಳಿಸಲಾಗಿದೆ ಎಂದು ಪೊಲೀಸ್ ಅಧಿಕಾರಿಗಳು ತಿಳಿಸಿದ್ದಾರೆ.

ಶೋಚನೀಯ ಮಟ್ಟಕ್ಕೆ ಕುಸಿದ ಸಂಗ್ರಹ • ಹಲವು ರಾಜ್ಯಗಳಲ್ಲಿ ಲೋಡ್‌ಶೆಡ್ಡಿಂಗ್ ಜಾರಿ: ಎಐಪಿಇಎಫ್

ದೇಶದ 106 ಸ್ಥಾವರಗಳಲ್ಲಿ ಕಲ್ಲಿದ್ದಲು ಕೊರತೆ

ನವದೆಹಲಿ (ಪಿಟಿಐ): ದೇಶದ 173 ಉಷ್ಣ ವಿದ್ಯುತ್ ಸ್ಥಾವರಗಳ ಪೈಕಿ, 106 ಸ್ಥಾವರಗಳಲ್ಲಿ ಕಲ್ಲಿದ್ದಲು ಸಂಗ್ರಹ ಶೋಚನೀಯ ಮಟ್ಟಕ್ಕೆ ಕುಸಿದಿದೆ. ಉತ್ತರ ಭಾರತದಲ್ಲಿ ಬಿಸಿಗಾಳಿಯಿಂದಾಗಿ ವಿದ್ಯುತ್‌ಗೆ ಬೇಡಿಕೆ ಹೆಚ್ಚಾಗಿದೆ. ಆದರೆ ಕಲ್ಲಿದ್ದಲು ಕೊರತೆಯಿಂದ ವಿದ್ಯುತ್ ಉತ್ಪಾದಿಸಲು ಸಾಧ್ಯವಾಗದೆ, ವಿದ್ಯುತ್ ಕೊರತೆ ಉಂಟಾಗಿದೆ. ಉತ್ತರ ಭಾರತದ ಹಲವು ರಾಜ್ಯಗಳು ಲೋಡ್‌ಶೆಡ್ಡಿಂಗ್ ಮೊರೆ ಹೋಗಿವೆ.

ನಿಯಮಗಳ ಪ್ರಕಾರ, ಉಷ್ಣ ವಿದ್ಯುತ್ ಸ್ಥಾವರಗಳು ಕನಿಷ್ಠ 26 ದಿನಗಳಿಗೆ ಆಗುವಷ್ಟು ಕಲ್ಲಿದ್ದಲು ಸಂಗ್ರಹ ಹೊಂದಿರಬೇಕು. ಕಲ್ಲಿದ್ದಲು ಸಂಗ್ರಹವು 6.5 ದಿನಗಳಿಗೆ ಮಾತ್ರ ಆಗುವಷ್ಟರ ಮಟ್ಟಿಗೆ ಕುಸಿದರೆ, ಅದನ್ನು ಶೋಚನೀಯ ಮಟ್ಟ ಎಂದು ಕರೆಯಲಾಗುತ್ತದೆ. ಈ ಎಲ್ಲಾ ಸ್ಥಾವರಗಳಲ್ಲಿ ಇರುವ ಕಲ್ಲಿದ್ದಲು ಸಂಗ್ರಹದ ದೈನಂದಿನ ವರದಿಯನ್ನು ಕೇಂದ್ರೀಯ ವಿದ್ಯುತ್ ಪ್ರಾಧಿಕಾರವು ಬಿಡುಗಡೆ ಮಾಡುತ್ತದೆ.

ಗುರುವಾರ ತಡರಾತ್ರಿ ಬಿಡುಗಡೆ ಮಾಡಿರುವ ವರದಿಯ ಪ್ರಕಾರ, ಒಟ್ಟು 106 ಸ್ಥಾವರಗಳಲ್ಲಿ ಸಂಗ್ರಹ ಶೇ 25ಕ್ಕಿಂತಲೂ ಕಡಿಮೆ ಮಟ್ಟಕ್ಕೆ ಕುಸಿದಿದೆ. 150 ಸ್ಥಾವರಗಳಲ್ಲಿ ದೇಶೀಯ ಕಲ್ಲಿದ್ದಲನ್ನು ಬಳಸಲಾಗುತ್ತಿದೆ. ಇವುಗಳಲ್ಲಿ 86 ಸ್ಥಾವರಗಳಲ್ಲಿ ಕಲ್ಲಿದ್ದಲು ಸಂಗ್ರಹವು ಶೋಚನೀಯ ಮಟ್ಟಕ್ಕೆ ಕುಸಿದಿದೆ. ಕೆಲವು ಸ್ಥಾವರಗಳಲ್ಲಿ ಕೇವಲ ಒಂದೂವರೆ–ಎರಡು ದಿನಗಳಿಗೆ ಆಗುವಷ್ಟು ಸಂಗ್ರಹ ಮಾತ್ರ ಉಳಿದಿದೆ. ಆಮದು ಕಲ್ಲಿದ್ದಲು ಉಪಯೋಗಿಸುವ 12 ಸ್ಥಾವರಗಳಲ್ಲಿ ಕಲ್ಲಿದ್ದಲು ಸಂಗ್ರಹ ಶೋಚನೀಯ ಮಟ್ಟಕ್ಕೆ ಕುಸಿದಿದೆ. ಖಾಸಗಿ ವಲಯದ ಎಂಟು ಸ್ಥಾವರಗಳಲ್ಲಿ ಕಲ್ಲಿದ್ದಲು ಕೊರತೆ ಇದೆ.



ಕಲ್ಲಿದ್ದಲು ತುಂಬಿದ ರೈಲೊಂದು ನಾಗಪುರ ರೈಲು ನಿಲ್ದಾಣಕ್ಕೆ ಶುಕ್ರವಾರ ಬಂತು —ಪಿಟಿಐ ಚಿತ್ರ

ಅಖಿಲ ಭಾರತ ವಿದ್ಯುಚ್ಛಕ್ತಿ ಎಂಜಿನಿಯರ್‌ಗಳ ಒಕ್ಕೂಟವು (ಎಐಪಿಇಎಫ್) ಕಲ್ಲಿದ್ದಲು ಕೊರತೆ ಬಗ್ಗೆ ವಿಸ್ತೃತ ಹೇಳಿಕೆ ಬಿಡುಗಡೆ ಮಾಡಿದೆ.

ಉತ್ತರ ಭಾರತದಲ್ಲಿ ವಿದ್ಯುತ್ ಕೊರತೆ ಬಿಗಡಾಯಿಸಿದೆ. ಉತ್ತರ ವಲಯದಲ್ಲಿ ಒಟ್ಟು 1,346 ಲಕ್ಷ ಯೂನಿಟ್‌ಗಳಷ್ಟು ವಿದ್ಯುತ್ ಕೊರತೆಯಾಗಿದೆ. ಪಂಜಾಬ್, ಹರಿಯಾಣ, ಉತ್ತರ ಪ್ರದೇಶ, ಜಮ್ಮು–ಕಾಶ್ಮೀರ, ರಾಜಸ್ಥಾನ ಮತ್ತು ಉತ್ತರಾಖಂಡದಲ್ಲಿ ಪ್ರತಿದಿನ ಮೂರರಿಂದ ಎಂಟು ತಾಸು ಲೋಡ್‌ಶೆಡ್ಡಿಂಗ್ ಜಾರಿಗೆ ತರಲಾಗಿದೆ. ರಾಜಸ್ಥಾನದ ಸರ್ಕಾರಿ ಸ್ವಾಮ್ಯದ ಸ್ಥಾವರಗಳ ಪೈಕಿ, ಆರರಲ್ಲಿ ಕಲ್ಲಿದ್ದಲು ಸಂಗ್ರಹ ಶೋಚನೀಯ ಮಟ್ಟಕ್ಕೆ ಕುಸಿದಿದೆ. ಉತ್ತರ ಪ್ರದೇಶ ನಾಲ್ಕು ಸ್ಥಾವರಗಳ ಪೈಕಿ, ಮೂರರಲ್ಲಿ ಕಲ್ಲಿದ್ದಲು ಸಂಗ್ರಹ ಶೋಚನೀಯ ಮಟ್ಟಕ್ಕೆ ಕುಸಿದಿದೆ ಎಂದು ಒಕ್ಕೂಟವು ಹೇಳಿದೆ.

ಮಹಾರಾಷ್ಟ್ರದ ಏಳು ಸ್ಥಾವರಗಳ ಪೈಕಿ ಆರರಲ್ಲಿ, ಮಧ್ಯಪ್ರದೇಶದ ನಾಲ್ಕರಲ್ಲಿ ಮೂರು ಸ್ಥಾವರಗಳಲ್ಲಿ ಕಲ್ಲಿದ್ದಲು ಸಂಗ್ರಹ ಶೋಚನೀಯ ಮಟ್ಟಕ್ಕೆ ಕುಸಿದಿದೆ. ಆಂಧ್ರಪ್ರದೇಶ, ಪಶ್ಚಿಮಬಂಗಾಳ, ಕರ್ನಾಟಕ ಮತ್ತು ತಮಿಳುನಾಡಿನ ಎಲ್ಲಾ ಸರ್ಕಾರಿ ಸ್ವಾಮ್ಯದ ಸ್ಥಾವರಗಳಲ್ಲಿ ಕಲ್ಲಿದ್ದಲು ಸಂಗ್ರಹ ಶೋಚನೀಯ ಮಟ್ಟಕ್ಕೆ ಕುಸಿದಿದೆ ಎಂದು ಒಕ್ಕೂಟವು ಮಾಹಿತಿ ನೀಡಿದೆ.

ರಾಷ್ಟ್ರೀಯ ಬಿಕ್ಕಟ್ಟು ಘೋಷಿಸಿ ಸಿ.ಎಂ ಅಶೋಕ್ ಗೆಹಲೋತ್

'ಬಿಸಿಗಾಳಿಯ ಪರಿಣಾಮವಾಗಿ ದೇಶದ 16 ರಾಜ್ಯಗಳಲ್ಲಿ ವಿದ್ಯುತ್‌ಗೆ ಬೇಡಿಕೆ ಹೆಚ್ಚಾಗಿದೆ. ಆದರೆ ಬೇಡಿಕೆಯಷ್ಟು ವಿದ್ಯುತ್ ಉತ್ಪಾದಿಸಲು ಅಗತ್ಯವಿರುವ ಕಲ್ಲಿದ್ದಲು ಪೂರೈಕೆಯಾಗುತ್ತಿಲ್ಲ. ಹೀಗಾಗಿ ಇದನ್ನು ರಾಷ್ಟ್ರೀಯ ಬಿಕ್ಕಟ್ಟು ಎಂದು ಘೋಷಿಸಬೇಕು. ಅಗತ್ಯವಿರುವಷ್ಟು ಕಲ್ಲಿದ್ದಲು ಪೂರೈಸುವುದು ಕೇಂದ್ರ ಸರ್ಕಾರದ ಕೆಲಸ. ಕಲ್ಲಿದ್ದಲು ಪೂರೈಸಲು ಕೇಂದ್ರ ಸರ್ಕಾರಕ್ಕೆ ಏಕೆ ಸಾಧ್ಯವಾಗುತ್ತಿಲ್ಲ' ಎಂದು ರಾಜಸ್ಥಾನ ಮುಖ್ಯಮಂತ್ರಿ ಅಶೋಕ್ ಗೆಹಲೋತ್ ಪ್ರಶ್ನಿಸಿದ್ದಾರೆ.

'ಸರ್ಕಾರ ಸಮಸ್ಯೆ ಮರೆಮಾಚಿದೆ'

'ಕೇಂದ್ರ ಸರ್ಕಾರದ ಕಲ್ಲಿದ್ದಲು ಸಚಿವಾಲಯ, ರೈಲ್ವೆ ಇಲಾಖೆ ಮತ್ತು ಇಂಧನ ಸಚಿವಾಲಯಗಳ ನಡುವಣ ಸಮನ್ವಯದ ಕೊರತೆಯ ಕಾರಣದಿಂದ ದೇಶದಲ್ಲಿ ವಿದ್ಯುತ್ ಕೊರತೆ ಉಂಟಾಗಿದೆ' ಎಂದು ಅಖಿಲ ಭಾರತ ವಿದ್ಯುಚ್ಛಕ್ತಿ ಎಂಜಿನಿಯರ್‌ಗಳ ಒಕ್ಕೂಟ ಆರೋಪಿಸಿದೆ.

'ಈ ಸಚಿವಾಲಯಗಳ ನಡುವಣ ಸಮನ್ವಯದ ಕೊರತೆಯಿಂದ ಕಲ್ಲಿದ್ದಲು ಪೂರೈಕೆಯಲ್ಲಿ ವ್ಯತ್ಯಯವಾಗಿದೆ. ಕಲ್ಲಿದ್ದಲು ಪೂರೈಕೆಯಾಗದೇ ಇರುವುದರಿಂದ ಉಷ್ಣ ವಿದ್ಯುತ್ ಸ್ಥಾವರಗಳಲ್ಲಿ ಕಲ್ಲಿದ್ದಲು ಸಂಗ್ರಹ ಶೋಚನೀಯ ಮಟ್ಟಕ್ಕೆ ಕುಸಿದಿದೆ. ಆದರೆ, ಈ ಎಲ್ಲಾ ಸಚಿವಾಲಯಗಳು ಇದಕ್ಕೆ ನಾವು ಹೊಣೆ ಅಲ್ಲ ಎನ್ನುತ್ತಿವೆ' ಎಂದು ಒಕ್ಕೂಟವು ಆರೋಪಿಸಿದೆ.

'ನಿಜವಾದ ಸಮಸ್ಯೆಯನ್ನು ಕೇಂದ್ರ ಸರ್ಕಾರವು ಮರೆಮಾಚಿದೆ. ಕಲ್ಲಿದ್ದಲು ಕಂಪನಿಗಳಿಗೆ ರಾಜ್ಯ ಸರ್ಕಾರಗಳು ಹಣ ಪಾವತಿ ಮಾಡದೇ ಇರುವುದನ್ನೇ ಮುನ್ನೆಲೆಗೆ ತರುತ್ತಿದೆ' ಎಂದು ಒಕ್ಕೂಟದ ವಕ್ತಾರ ವಿ.ಕೆ.ಗುಪ್ತಾ ಆರೋಪಿಸಿದ್ದಾರೆ.

ಬಿಸಿಗಾಳಿಗೆ ಬಸವಳಿದ ದೆಹಲಿ

ನವದೆಹಲಿ (ಪಿಟಿಐ): ದೇಶದ ಹಲವೆಡೆ ಬಿಸಿಗಾಳಿಯ ಹೊಡೆತ ತೀವ್ರಗೊಂಡಿದೆ. ರಾಜಧಾನಿ ದೆಹಲಿಯಲ್ಲಿ ಶುಕ್ರವಾರದ ತಾಪಮಾನವು 46 ಡಿಗ್ರಿ ಸೆಲ್ಸಿಯಸ್ ದಾಟಿ ಹೋಗಿದೆ. ಸ್ಪೋರ್ಟ್ಸ್ ಕಾಂಪ್ಲೆಕ್ಸ್‌ನಲ್ಲಿ ತಾಪಮಾನವು 46.5 ಡಿಗ್ರಿ ಸೆಲ್ಸಿಯಸ್ ದಾಖಲಾಗಿದೆ.

ಹಲವೆಡೆ ರಾತ್ರಿಯ ತಾಪಮಾನ ಕೂಡ 30 ಡಿಗ್ರಿ ಸೆಲ್ಸಿಯಸ್‌ಗಿಂತ ಹೆಚ್ಚು ಇತ್ತು. ಇದೇ ಪರಿಸ್ಥಿತಿ ಇನ್ನೂ 3–4 ದಿನ ಮುಂದುವರಿಯಲಿದೆ ಎಂದು ಹವಾಮಾನ ಇಲಾಖೆ ಹೇಳಿದೆ.

ಮಹಾರಾಷ್ಟ್ರದ ನಾಸಿಕ್ ನಗರದ 68 ವರ್ಷದ ವ್ಯಕ್ತಿಯೊಬ್ಬರು ಬಿಸಿಲಿನ ಆಘಾತದಿಂದಾಗಿ ಶುಕ್ರವಾರ ಮೃತಪಟ್ಟಿದ್ದಾರೆ ಎಂದು ಪೊಲೀಸರು ತಿಳಿಸಿದ್ದಾರೆ. ಮಹಾರಾಷ್ಟ್ರದ ಚಂದ್ರಾಪುರ ಜಿಲ್ಲೆಯಲ್ಲಿ 46.4 ಡಿಗ್ರಿ ಸೆಲ್ಸಿಯಸ್ ತಾಪಮಾನ ದಾಖಲಾಗಿದೆ. ಮಹಾರಾಷ್ಟ್ರದಲ್ಲಿ ಅತಿ ಹೆಚ್ಚು ತಾಪಮಾನ ಇದ್ದ ಸ್ಥಳ ಇದು.

ಅತಿ ಹೆಚ್ಚು ತಾಪಮಾನ ಇದ್ದ ಮಹಾರಾಷ್ಟ್ರದ ಜಿಲ್ಲೆಗಳೆಂದರೆ, ಅಕೋಲ (45.8 ಡಿಗ್ರಿ ಸೆಲ್ಸಿಯಸ್), ವಾರ್ಧಾ (45.5 ಡಿಗ್ರಿ ಸೆಲ್ಸಿಯಸ್), ನಾಗಪುರ (45.2 ಡಿಗ್ರಿ ಸೆಲ್ಸಿಯಸ್), ಯಾವತ್ಮಲ್ (45.2 ಡಿಗ್ರಿ ಸೆಲ್ಸಿಯಸ್) ಮತ್ತು ಅಮರಾವತಿ (45 ಡಿಗ್ರಿ ಸೆಲ್ಸಿಯಸ್).

1941ರ ಏಪ್ರಿಲ್ 29ರಂದು ದೆಹಲಿಯಲ್ಲಿ 45.6 ಡಿಗ್ರಿ ಸೆಲ್ಸಿಯಸ್ ತಾಪಮಾನ ದಾಖಲಾಗಿತ್ತು. ಈಗ ದೆಹಲಿಯ ತಾಪಮಾನ ಅದನ್ನೂ ಮೀರಿ ಹೋಗಿದೆ. ಹವಾಮಾನ ಇಲಾಖೆಯು 'ಆರೆಂಜ್ ಅಲರ್ಟ್' ಘೋಷಿಸಿದೆ. ದೆಹಲಿಯ ಹಲವು ಭಾಗಗಳಲ್ಲಿ ಶನಿವಾರ ಬಿಸಿಗಾಳಿ ಇನ್ನಷ್ಟು ತೀವ್ರಗೊಳ್ಳಬಹುದು ಎಂಬ ಮುನ್ನೆಚ್ಚರಿಕೆ ನೀಡಿದೆ.

ದೆಹಲಿಯ ರಿಡ್ಜ್‌ನಲ್ಲಿ 45.7, ಮುಂಗೇಶ್ ಪುರದಲ್ಲಿ 45.9, ನಜಾಫ್ ಗಡದಲ್ಲಿ 45.9 ಮತ್ತು ಪೀತಮ್ ಪುರದಲ್ಲಿ 45.9 ಡಿಗ್ರಿ ಸೆಲ್ಸಿಯಸ್ ತಾಪಮಾನ ದಾಖಲಾಗಿದೆ. ಈ ಎಲ್ಲ ಪ್ರದೇಶದಲ್ಲಿಯೂ ಕಳೆದ ವರ್ಷಗಳಿಗೆ ಹೋಲಿಸಿದರೆ 5ರಿಂದ 7 ಡಿಗ್ರಿ ಸೆಲ್ಸಿಯಸ್‌ನಷ್ಟು ತಾಪಮಾನ ಏರಿಕೆ ಆಗಿದೆ. ದೆಹಲಿಯಲ್ಲಿ ಭಾನುವಾರ ಭಾಗಶಃ ಮೋಡ ಇರಲಿದ್ದು, ಲಘು ಮಳೆಯ ಸಾಧ್ಯತೆ ಇದೆ. ತಾಸಿಗೆ 50 ಕಿ.ಮೀ. ವೇಗದಲ್ಲಿ ದೂಳುಸಹಿತ ಗಾಳಿ ಬೀಸಬಹುದು. ಸೋಮವಾರದಿಂದ ಬಿಸಿಗಾಳಿಯ ತೀವ್ರತೆ ಕಡಿಮೆ ಆಗಲಿದೆ ಎಂದು ಹವಾಮಾನ ಇಲಾಖೆ ಹೇಳಿದೆ.

ಪರೀಕ್ಷೆ ವೇಳಾಪಟ್ಟಿ ಬದಲು: ಬಿಸಿಗಾಳಿಯ ಕಾರಣ ಒಡಿಶಾದಲ್ಲಿ 10ನೇ ತರಗತಿ ಪರೀಕ್ಷೆಗಳ ವೇಳಾಪಟ್ಟಿಯನ್ನು ಬದಲಿಸಲಾಗಿದೆ. ಬೆಳಗ್ಗೆ 8ರಿಂದ 9.30ರ ಒಳಗೆ ಪರೀಕ್ಷೆಗಳನ್ನು ನಡೆಸಲು ತೀರ್ಮಾನಿಸಲಾಗಿದೆ ಎಂದು ಒಡಿಶಾ ಪ್ರೌಢಶಿಕ್ಷಣ ಮಂಡಳಿಯ ಅಧಿಕಾರಿಯೊಬ್ಬರು ತಿಳಿಸಿದ್ದಾರೆ.

ರಾಜಸ್ಥಾನ: ಮೇ 1ಕ್ಕೆ ಅತ್ಯಧಿಕ ತಾಪಮಾನ

ಜೈಪುರ (ಪಿಟಿಐ): ರಾಜಸ್ಥಾನದಲ್ಲಿ ಬಿಸಿ ಗಾಳಿ ತೀವ್ರತೆ ಮುಂದುವರಿದಿದೆ. ಬೂಂದಿ ಪಟ್ಟಣದಲ್ಲಿ ರಾತ್ರಿ 31.2 ಡಿಗ್ರಿ ಸೆಲ್ಸಿಯಸ್ ಅತ್ಯಧಿಕ ತಾಪಮಾನ ದಾಖಲಾಗಿದೆ. ಜೋಧಪುರ, ಬಿಕನೇರ್ ಜಿಲ್ಲೆಗಳಲ್ಲಿ ಮೇ 1ರಂದು 45ರಿಂದ 46 ಡಿಗ್ರಿ ಸೆಲ್ಸಿಯಸ್ ತಾಪಮಾನ ಇರಲಿದೆ ಎಂದು ಭಾರತೀಯ ಹವಾಮಾನ ಇಲಾಖೆಯು ಹೇಳಿದೆ.


ಬಿಸಿ ಗಾಳಿಯ ಕಾರಣ ರಾಜಸ್ಥಾನದ ಹಲವಾರು ಭಾಗಗಳಲ್ಲಿ ಗರಿಷ್ಠ ತಾಪಮಾನದಲ್ಲಿ ಏರಿಕೆ ಆಗಲಿದೆ. ಅದು ಮುಂದಿನ ಮೂರು ದಿನಗಳ ಕಾಲ ಮುಂದುವರಿಯಲಿದೆ. ಮೇ 2ರಿಂದ ಗುಡುಗು ಸಮೇತ ಸಾಧಾರಣ ಮಳೆ ಆಗಲಿದೆ ಎಂದು ಹವಾಮಾನ ಇಲಾಖೆ ಎಚ್ಚರಿಸಿದೆ.

ಪಾಕಿಸ್ತಾನದಲ್ಲಿ 47 ಡಿಗ್ರಿ ಸೆಲ್ಸಿಯಸ್

ಪೆಶಾವರ (ರಾಯಿಟರ್ಸ್): ಪಾಕಿಸ್ತಾನದ ಕೆಲವು ಭಾಗಗಳಲ್ಲಿ ದಿನದ ಉಷ್ಣತೆಯು 47 ಡಿಗ್ರಿ ಸೆಲ್ಸಿಯಸ್ ದಾಖಲಾಗಿದೆ. ಶುಕ್ರವಾರದ ತಾಪಮಾನವು ಸರಾಸರಿ ತಾಪಮಾನಕ್ಕಿಂತ 6ರಿಂದ 8 ಡಿಗ್ರಿ ಸೆಲ್ಸಿಯಸ್ ಏರಿಕೆಯಾಗಿದೆ.

ಹಿಮಾಲಯ, ಹಿಂದೂಕುಷ್ ಮತ್ತು ಕಾರಕೋರಂ ಪರ್ವತ ಪ್ರದೇಶದಲ್ಲಿರುವ ಹಿಮಗಲ್ಲುಗಳು ತಾಪಮಾನ ಏರಿಕೆಯಿಂದಾಗಿ ದಿಢೀರ್ ಕರಗುವ ಸಾಧ್ಯತೆ ಇದೆ. ಹೀಗೆ ಕರಗಿದರೆ, ಉತ್ತರ ಪಾಕಿಸ್ತಾನದ ಹಲವೆಡೆ ಪ್ರವಾಹ ಸ್ಥಿತಿ ತಲೆದೋರಬಹುದು. ಹೀಗೆ ಪ್ರವಾಹ ಉಂಟಾಗಬಹುದಾದ 30ಕ್ಕೂ ಹೆಚ್ಚು ಸರೋವರಗಳನ್ನು ಗುರುತಿಸಲಾಗಿದೆ. 70 ಲಕ್ಷಕ್ಕೂ ಹೆಚ್ಚು ಜನರು ಅಪಾಯಕ್ಕೆ ಒಳಗಾಗಬಹುದು ಎಂದು ಪಾಕಿಸ್ತಾನದ ಹವಾಮಾನ ಬದಲಾವಣೆ ತಡೆ ಸಚಿವಾಲಯವು ಹೇಳಿದೆ. ದಿಢೀರ್ ಪ್ರವಾಹದಿಂದ ಆಗಬಹುದಾದ ಅಪಾಯ ತಡೆಗೆ ವಿಪತ್ತು ನಿರ್ವಹಣಾ ಪಡೆಗಳನ್ನು ಸನ್ನದ್ಧ ಸ್ಥಿತಿಯಲ್ಲಿ ಇರಿಸಲಾಗಿದೆ.

ಷೇರುಪೇಟೆ ವಹಿವಾಟು



ಎನ್‌ಎಸ್‌ಇ ನಿಫ್ಟಿ

ಹಿಂದಿನ ಅಂತ್ಯ	17,245
ಇಂದಿನ ಅಂತ್ಯ	17,103
	142
ದಿನದ ಕನಿಷ್ಠ	17,053

ವಿನಿಮಯ ದರ

$ ಡಾಲರ್	76.50
£ ಪೌಂಡ್	95.98
€ ಯುರೊ	80.84
¥ ಯೆನ್ (100ಕ್ಕೆ)	59

ಎನ್‌ಇಸಿಸಿ ಸೂಚಿಸಿರುವ ಮೊಟ್ಟೆ ಧಾರಣೆ

ಬೆಂಗಳೂರು	
100 ಮೊಟ್ಟೆಗೆ	₹390
12 ಮೊಟ್ಟೆಗೆ	₹55
ಮೈಸೂರು	
100 ಮೊಟ್ಟೆಗೆ	₹394

ಖಾದ್ಯ ತೈಲ ಮುಂಬೈ (10 ಕೆಜಿಗೆ)

ಶೇಂಗಾ (ಕಚ್ಚಾ)	₹1690 (1665)
ಸೋಯಾ (ಸಂಸ್ಕೃತ)	₹1620 (1610)
ಸೂರ್ಯಕಾಂತಿ (ಸಂಸ್ಕೃತ)	₹1935 (1920)
ಪಾಮೋಲಿನ್	₹1612 (1577)

ರಾಮನಗರ ರೇಷ್ಮೆಗೂಡು ಧಾರಣೆ

ಮಿಶ್ರತಳಿ (ಕೆ.ಜಿ)	₹304-718
ದ್ವಿತಳಿ (ಕೆ.ಜಿ)	₹478-841

ಎನ್.ಆರ್.ಪುರ ರಬ್ಬರ್

ಆರ್‌ಎಸ್‌ಎಸ್-4	₹164
ಆರ್‌ಎಸ್‌ಎಸ್-5	₹158
ಗುಡ್ ಲಾಟ್	₹154

(ಪ್ರತಿ ಕೆ.ಜಿಗೆ)

ಸಂಕ್ಷಿಪ್ತ ಸುದ್ದಿ

ಟೆಸ್ಲಾ ಷೇರು ಮಾರಿದ ಮಸ್ಕ್

(ರಾಯಿಟರ್ಸ್): ವಿದ್ಯುತ್ ಚಾಲಿತ ಕಾರು ತಯಾರಿಕೆ ಕಂಪನಿ ಟೆಸ್ಲಾ ಸಿಇಒ ಎಲಾನ್ ಮಸ್ಕ್ ಅವರು ಟೆಸ್ಲಾ ಕಂಪನಿಯ 52.3 ಲಕ್ಷ ಷೇರುಗಳನ್ನು ಮಾರಾಟ ಮಾಡಿದ್ದಾರೆ. ಈ ಷೇರುಗಳ ಮಾರುಕಟ್ಟೆ ಮೌಲ್ಯ 4.5 ಬಿಲಿಯನ್ ಡಾಲರ್ (ಅಂದಾಜು ₹34 ಸಾವಿರ ಕೋಟಿ).

ಸಾಮಾಜಿಕ ಜಾಲತಾಣ ಟ್ವಿಟರ್‌ಅನ್ನು ₹ 3.36 ಲಕ್ಷ ಕೋಟಿಗೆ ಖರೀದಿಗೆ ಸಜ್ಜಾಗಿರುವ ಮಸ್ಕ್ ಅವರಿಗೆ ಟೆಸ್ಲಾ ಷೇರು ಮಾರಾಟದಿಂದ ಹಣಕಾಸಿನ ನೆರವು ಲಭ್ಯವಾಗಲಿದೆ ಎಂದು ಹೇಳಲಾಗಿದೆ. ಗುರುವಾರ ಟೆಸ್ಲಾದ ಷೇರು ಮಾರಾಟದ ಬಳಿಕ ಮತ್ತೆ ಷೇರು ಮಾರಾಟ ಮಾಡುವ ಚಿಂತನೆ ಇಲ್ಲ ಎಂದು ಮಸ್ಕ್ ಹೇಳಿದ್ದಾರೆ.

ಜೂನ್ ಆರಂಭದಲ್ಲಿ 5ಜಿ ತರಂಗಾಂತರ ಹರಾಜು ಸಾಧ್ಯತೆ

ನವದೆಹಲಿ (ಪಿಟಿಐ): ಕೇಂದ್ರ ಸರ್ಕಾರವು ಜೂನ್ ತಿಂಗಳ ಆರಂಭದಲ್ಲಿ 5ಜಿ ತರಂಗಾಂತರ ಹರಾಜು ಹಾಕುವ ಸಾಧ್ಯತೆ ಇದೆ ಎಂದು ದೂರಸಂಪರ್ಕ ಸಚಿವ ಅಶ್ವಿನಿ ವೈಷ್ಣವ್ ಹೇಳಿದ್ದಾರೆ.

ಹರಾಜು ಸಂಬಂಧಿಸಿದಂತೆ ದೂರಸಂಪರ್ಕ ಇಲಾಖೆಯು ನಿರೀಕ್ಷಿತ ಕಾಲಮಿತಿಯಂತೆಯೇ ಕೆಲಸ ಮಾಡುತ್ತಿದೆ. ತರಂಗಾಂತರ ದರದ ಬಗ್ಗೆ ಉದ್ಯಮ ವಲಯ ಹೊಂದಿರುವ ಆತಂಕವನ್ನು ನಿವಾರಿಸುವ ಕೆಲಸ ನಡೆಯುತ್ತಿದೆ ಎಂದು ತಿಳಿಸಿದ್ದಾರೆ. ಆಗಸ್ಟ್–ಸೆಪ್ಟೆಂಬರ್ ವೇಳೆಗೆ ದೇಶದಲ್ಲಿ 5ಜಿ ಸೇವೆಗಳು ಬಳಕೆಗೆ ಲಭ್ಯವಾಗಲಿವೆ ಎಂದೂ ಹೇಳಿದ್ದಾರೆ.

ಚಿನ್ನದ ದರ ₹ 605ರಷ್ಟು ಹೆಚ್ಚಳ

ನವದೆಹಲಿ (ಪಿಟಿಐ): ಇಲ್ಲಿನ ಚಿನಿವಾರ ಪೇಟೆಯಲ್ಲಿ ಶುಕ್ರವಾರ ಚಿನ್ನದ ದರ 10 ಗ್ರಾಂಗೆ ₹ 605ರಷ್ಟು ಹೆಚ್ಚಾಗಿ ₹ 51,627ರಂತೆ ಮಾರಾಟ ಆಯಿತು. ಬೆಳ್ಳಿ ಧಾರಣೆ ಕೆ.ಜಿ.ಗೆ ₹ 1,596ರಷ್ಟು ಹೆಚ್ಚಾಗಿ ₹ 65,207ಕ್ಕೆ ತಲುಪಿತು.

ಅಂತರರಾಷ್ಟ್ರೀಯ ಮಾರುಕಟ್ಟೆಯಲ್ಲಿ ಚಿನ್ನದ ದರ ಏರಿಕೆಗೆ ಅನುಗುಣವಾಗಿ ದೇಶಿ ಮಾರುಕಟ್ಟೆಯಲ್ಲಿಯೂ ದರ ಹೆಚ್ಚಾಗಿದೆ ಎಂದು ಎಚ್‌ಡಿಎಫ್‌ಸಿ ಸೆಕ್ಯುರಿಟೀಸ್ ತಿಳಿಸಿದೆ.

ಮುಂಬೈ ಧಾರಣೆ

ಶೇಂಗಾ

29-4-2022

ಜಾವಾ 70/80(ಹೊಸ)	10450-10500
ಜಾವಾ 80/90(ಹೊಸ)	9750-9800
ದಪ್ಪ ಮಧ್ಯಪ್ರದೇಶ(ಹೊಸ)	11150-11200
ದಪ್ಪ ಗುಜರಾತ್(ಹೊಸ)	10200-10250

ಶೇಂಗಾ ಎಣ್ಣೆ (10 ಕೆಜಿಗೆ)

ಕಚ್ಚಾ (ತೆರಿಗೆ ಬಿಟ್ಟು)	1700 (1675)
ಒಂದು ವಾರದ ಡೆಲಿವರಿ	1695 (1670)
ಸೋಯಾ ಕಚ್ಚಾ	1637 (1600)
ಪಾಮ್ ವಾರದ ಡೆಲಿವರಿ	1610 (1575)
ಸೂರ್ಯಕಾಂತಿ ಎಣ್ಣೆ ಕಚ್ಚಾ	1890 (1870)

ಚಿನ್ನ- ಬೆಳ್ಳಿ (ಜಿಎಸ್‌ಟಿ ಸೇರಿಲ್ಲ)

ಅಪರಂಜಿ ಚಿನ್ನ 10ಗ್ರಾಂ
51,700 (51,400)
ಬೆಳ್ಳಿ ಕೆ.ಜಿ 64,700 (64,300)

ಆವರಣದಲ್ಲಿ ಹಿಂದಿನ ದಿನದ ಧಾರಣೆ

ಆರು ತಿಂಗಳ ಖರೀದಿ ಒಪ್ಪಂದಕ್ಕೆ ಮುಂದಾದ ಭಾರತದ ಕಂಪನಿಗಳು

ರಷ್ಯಾ ತೈಲ: ಖರೀದಿ ಹೆಚ್ಚಳ?



ನವದೆಹಲಿ (ರಾಯಿಟರ್ಸ್): ಪ್ರತಿ ತಿಂಗಳು ಲಕ್ಷಾಂತರ ಬ್ಯಾರಲ್ ಕಚ್ಚಾ ತೈಲವನ್ನು ಆಮದು ಮಾಡಿಕೊಳ್ಳಲು ಭಾರತದ ತೈಲ ಸಂಸ್ಕರಣಾ ಕಂಪನಿಗಳು ರಷ್ಯಾ ಜೊತೆ ಮಾತುಕತೆ ನಡೆಸಿವೆ. ಆರು ತಿಂಗಳ ಅವಧಿಗೆ ಒಪ್ಪಂದ ಮಾಡಿಕೊಳ್ಳುವ ಉದ್ದೇಶವನ್ನು ಕಂಪನಿಗಳು ಹೊಂದಿವೆ.

ಪಶ್ಚಿಮದ ದೇಶಗಳ ಕೆಲವು ಗ್ರಾಹಕರನ್ನು ಕಳೆದುಕೊಂಡ ನಂತರದಲ್ಲಿ ರಷ್ಯಾದ ರೊಸ್ನೆಫ್ಟ್ ಕಂಪನಿಯು ಭಾರತ ಹಾಗೂ ಚೀನಾದ ಕಂಪನಿಗಳ ಜೊತೆ ತೈಲ ಪೂರೈಕೆ ಸಂಬಂಧ ಮಾತುಕತೆ ನಡೆಸುತ್ತಿದೆ. ರಷ್ಯಾ–ಉಕ್ರೇನ್ ಯುದ್ಧ ಆರಂಭವಾದ ನಂತರದಲ್ಲಿ ಭಾರತವು ರಷ್ಯಾದಿಂದ ಖರೀದಿಸಿರುವ ಕಚ್ಚಾ ತೈಲದ ಪ್ರಮಾಣವು 2021ರಲ್ಲಿ ರಷ್ಯಾದಿಂದ ಖರೀದಿಸಿದ ಒಟ್ಟು ಪ್ರಮಾಣಕ್ಕಿಂತ ಎರಡು ಪಟ್ಟು ಹೆಚ್ಚು ಎಂದು ರಾಯಿಟರ್ಸ್ ಸುದ್ದಿಸಂಸ್ಥೆ ಅಂದಾಜಿಸಿದೆ.

ಹಿಂದೆ ರಷ್ಯಾದ ತೈಲವನ್ನು ಕಡಿಮೆ ಪ್ರಮಾಣದಲ್ಲಿ ಖರೀದಿಸುತ್ತಿದ್ದ ಭಾರತದ ಕಂಪನಿಗಳು ಈಗ ರಿಯಾಯಿತಿ ಬೆಲೆಯಲ್ಲಿ ಸಿಗುತ್ತಿರುವ ರಷ್ಯಾದ ಕಚ್ಚಾ ತೈಲವನ್ನು ಹೆಚ್ಚು ಖರೀದಿಸುತ್ತಿವೆ. ಭಾರತದ ಇಂಡಿಯನ್ ಆಯಿಲ್ ಕಾರ್ಪೊರೇಷನ್ (ಐಒಸಿ), ಭಾರತ್ ಪೆಟ್ರೋಲಿಯಂ ಕಾರ್ಪೊರೇಷನ್ (ಬಿಪಿಸಿಎಲ್) ಮತ್ತು ಹಿಂದುಸ್ಥಾನ್ ಪೆಟ್ರೋಲಿಯಂ ಕಾರ್ಪೊರೇಷನ್ (ಎಚ್‌ಪಿಸಿಎಲ್), ರೊಸ್ನೆಫ್ಟ್ ಕಂಪನಿ ಜೊತೆ ಮಾತುಕತೆಯಲ್ಲಿ ತೊಡಗಿವೆ ಎಂದು ಗೊತ್ತಾಗಿದೆ.

ಐಒಸಿ ಪ್ರತಿ ತಿಂಗಳು 60 ಲಕ್ಷ ಬ್ಯಾರಲ್, ಬಿಪಿಸಿಎಲ್ 40 ಲಕ್ಷ ಬ್ಯಾರಲ್ ಮತ್ತು ಎಚ್‌ಪಿಸಿಎಲ್ 30 ಲಕ್ಷ ಬ್ಯಾರಲ್ ಕಚ್ಚಾ ತೈಲ ಆಮದು ಮಾಡಿಕೊಳ್ಳಲು ಮಾತುಕತೆ ನಡೆಸುತ್ತಿವೆ ಎಂದು ಮೂಲಗಳು ಹೇಳಿವೆ. ಈ ಕಂಪನಿಗಳು ಜೂನ್‌ನಿಂದ ತೈಲ ತರಿಸಿಕೊಳ್ಳಲು ಆಲೋಚನೆ ನಡೆಸಿವೆ.

ರೊಸ್ನೆಫ್ಟ್ ಕಂಪನಿಯಿಂದ ಸಿಗಬಹುದಾದ ರಿಯಾಯಿತಿ ಹಾಗೂ ನಿರ್ಬಂಧಗಳ ಪರಿಣಾಮವನ್ನು ಆಧರಿಸಿ ತೈಲದ ಪ್ರಮಾಣದಲ್ಲಿ ಬದಲಾವಣೆ ಆಗುವ ಸಾಧ್ಯತೆ ಇದೆ ಎನ್ನಲಾಗಿದೆ. ಈ ಕುರಿತು ಭಾರತದ ತೈಲ ಸಂಸ್ಕರಣಾ ಕಂಪನಿಗಳು ಪ್ರತಿಕ್ರಿಯೆ ನೀಡಿಲ್ಲ. ಭಾರತವು ರಷ್ಯಾದಿಂದ ಖರೀದಿಸುವ ಕಚ್ಚಾ ತೈಲಕ್ಕೆ ವಿಮೆ ಹಾಗೂ ಸಾಗಣೆ ಹೊಣೆಯನ್ನು ವರ್ತಕರೇ ವಹಿಸಿಕೊಳ್ಳುತ್ತಿದ್ದಾರೆ.

ಮುಖ್ಯಾಂಶಗಳು

- ಹೆಚ್ಚಳ ಕಂಡಿದೆ ರಷ್ಯಾ ತೈಲ ಖರೀದಿ
- ರಿಯಾಯಿತಿ ದರದಲ್ಲಿ ತೈಲ ಮಾರುತ್ತಿರುವ ರಷ್ಯಾ
- ಭಾರತ, ಚೀನಾ ಕಂಪನಿಗಳ ಜೊತೆ ರೊಸ್ನೆಫ್ಟ್ ಮಾತುಕತೆ

ವಿಪ್ರೊ ಲಾಭ ಶೇ 4ರಷ್ಟು ಹೆಚ್ಚಳ

ನವದೆಹಲಿ (ಪಿಟಿಐ): ವಿಪ್ರೊ ಕಂಪನಿಯು 2022ರ ಮಾರ್ಚ್‌ಗೆ ಕೊನೆಗೊಂಡ ನಾಲ್ಕನೇ ತ್ರೈಮಾಸಿಕದಲ್ಲಿ ₹ 3,092 ಕೋಟಿ ಲಾಭ ಗಳಿಸಿದೆ.

2021ರ ಮಾರ್ಚ್ ತ್ರೈಮಾಸಿಕದಲ್ಲಿ ಕಂಪನಿಯು ₹ 2,974 ಕೋಟಿ ಲಾಭ ಗಳಿಸಿತ್ತು. ಇದಕ್ಕೆ ಹೋಲಿಸಿದರೆ ಈ ಬಾರಿ ಲಾಭವು ಶೇಕಡ 4ರಷ್ಟು ಹೆಚ್ಚಾಗಿದೆ.

ಕಂಪನಿಯ ಕಾರ್ಯಾಚರಣೆ ವರಮಾನ ₹ 16,245 ಕೋಟಿಯಿಂದ ₹ 20,860 ಕೋಟಿಗೆ ಶೇ 28ರಷ್ಟು ಹೆಚ್ಚಾಗಿದೆ ಎಂದು ಕಂಪನಿಯು ಪ್ರಕಟಣೆಯಲ್ಲಿ ತಿಳಿಸಿದೆ.

2021–22ನೇ ಹಣಕಾಸು ವರ್ಷದಲ್ಲಿ ಕಂಪನಿಯು ₹ 12,232 ಕೋಟಿ ಲಾಭ ಗಳಿಸಿದೆ. ಹಿಂದಿನ ಹಣಕಾಸು ವರ್ಷಕ್ಕೆ ಹೋಲಿಸಿದರೆ ಲಾಭವು ಶೇ 12.57ರಷ್ಟು ಹೆಚ್ಚಾಗಿದೆ. ವರಮಾನ ಶೇ 28ರಷ್ಟು ಹೆಚ್ಚಾಗಿ ₹ 79,747 ಕೋಟಿಗಳಿಗೆ ಏರಿಕೆ ಆಗಿದೆ.

ಮಾರುತಿ ಲಾಭ ಶೇ 51ರಷ್ಟು ಹೆಚ್ಚಳ

ನವದೆಹಲಿ (ಪಿಟಿಐ): ಮಾರುತಿ ಸುಜುಕಿ ಇಂಡಿಯಾ ಕಂಪನಿಯು 2022ರ ಮಾರ್ಚ್ 31ಕ್ಕೆ ಕೊನೆಗೊಂಡ ನಾಲ್ಕನೇ ತ್ರೈಮಾಸಿಕದಲ್ಲಿ ₹ 1,875 ಕೋಟಿ ನಿವ್ವಳ ಲಾಭ ಗಳಿಸಿದೆ.

2021ರ ಮಾರ್ಚ್ 31ಕ್ಕೆ ಕೊನೆಗೊಂಡ ತ್ರೈಮಾಸಿಕದಲ್ಲಿ ಕಂಪನಿಯು ₹ 1,241 ಕೋಟಿ ನಿವ್ವಳ ಲಾಭ ಗಳಿಸಿತ್ತು. ಇದಕ್ಕೆ ಹೋಲಿಸಿದರೆ ಲಾಭವು ಶೇಕಡ 51ರಷ್ಟು ಹೆಚ್ಚಾಗಿದೆ ಎಂದು ಷೇರುಪೇಟೆಗೆ ಮಾಹಿತಿ ನೀಡಿದೆ.

ತ್ರೈಮಾಸಿಕ ಅವಧಿಯಲ್ಲಿ ಕಂಪನಿಯು ಒಟ್ಟಾರೆ 4.88 ಲಕ್ಷ ವಾಹನಗಳನ್ನು ಮಾರಾಟ ಮಾಡಿದ್ದು, ಹಿಂದಿನ ಅವಧಿಗೆ ಹೋಲಿಸಿದರೆ ಶೇ 0.7ರಷ್ಟು ಏರಿಕೆ ಆಗಿದೆ.

2021–22ನೇ ಹಣಕಾಸು ವರ್ಷದಲ್ಲಿ ₹ 3,879 ಕೋಟಿ ನಿವ್ವಳ ಲಾಭ ಗಳಿಸಿದ್ದು, ಹಿಂದಿನ ಹಣಕಾಸು ವರ್ಷಕ್ಕೆ ಹೋಲಿಸಿದರೆ ಲಾಭವು ಶೇ 11.6ರಷ್ಟು ಹೆಚ್ಚಾಗಿದೆ.

ಕಂಪನಿಯ ಒಟ್ಟಾರೆ ವರಮಾನ ₹ 70,372 ಕೋಟಿಯಿಂದ ₹ 88,329 ಕೋಟಿಗೆ ಏರಿಕೆ ಆಗಿದೆ ಎಂದು ಕಂಪನಿ ತಿಳಿಸಿದೆ.

ಇ–ಕಾಮರ್ಸ್ ಮಾರಾಟಗಾರರ ಮೇಲೆ ಸಿಸಿಐ ದಾಳಿ

ನವದೆಹಲಿ (ರಾಯಿಟರ್ಸ್): ನಿಯಮ ಉಲ್ಲಂಘನೆಯ ಆರೋಪದ ಅಡಿಯಲ್ಲಿ ಅಮೆಜಾನ್ ಹಾಗೂ ಫ್ಲಿಪ್‌ಕಾರ್ಟ್ ವೇದಿಕೆಗಳ ಪ್ರಮುಖ ಮಾರಾಟಗಾರರ ಮೇಲೆ ದಾಳಿ ನಡೆಸಿರುವ ಭಾರತೀಯ ಸ್ಪರ್ಧಾ ಆಯೋಗದ (ಸಿಸಿಐ) ಅಧಿಕಾರಿಗಳು ಕೆಲವು ದಾಖಲೆಗಳನ್ನು ವಶಪಡಿಸಿಕೊಂಡಿದ್ದಾರೆ ಎಂದು ಮೂಲಗಳು ತಿಳಿಸಿವೆ.

ಅಮೆಜಾನ್ ಮೂಲಕ ಉತ್ಪನ್ನಗಳನ್ನು ಮಾರಾಟ ಮಾಡುವ ಕ್ಲೌಡ್‌ಟೇಲ್ ಮತ್ತು ಅಪಾರಿಯೊ, ಫ್ಲಿಪ್‌ಕಾರ್ಟ್ ಮೂಲಕ ಉತ್ಪನ್ನಗಳನ್ನು ಮಾರಾಟ ಮಾಡುವ ಹಲವು ಮಾರಾಟಗಾರರ ಮೇಲೆ ಸಿಸಿಐ ಅಧಿಕಾರಿಗಳು ಗುರುವಾರ ಮತ್ತು ಶುಕ್ರವಾರ ದಾಳಿ ನಡೆಸಿದ್ದಾರೆ. ಸ್ಪರ್ಧಾ ಕಾನೂನುಗಳನ್ನು ಈ ಮಾರಾಟಗಾರರು ಮತ್ತು ವೇದಿಕೆಗಳು ಉಲ್ಲಂಘಿಸಿವೆ ಎಂಬ ಆರೋಪ ಇದೆ.

ಅಮೆಜಾನ್ ಮತ್ತು ಫ್ಲಿಪ್‌ಕಾರ್ಟ್ ತಮ್ಮ ಆದ್ಯತೆಯ ಮಾರಾಟಗಾರರಿಗೆ ಹೆಚ್ಚಿನ ಒತ್ತು ನೀಡುತ್ತಿವೆ ಎಂಬ ಆರೋಪದ ಅಡಿ ಸಿಸಿಐ 2020ರ ಜನವರಿಯಲ್ಲಿ ತನಿಖೆಗೆ ಆದೇಶಿಸಿತ್ತು. ಇದಕ್ಕೆ ಸಂಬಂಧಿಸಿದಂತೆ ಈ ದಾಳಿಗಳು ನಡೆದಿವೆ ಎನ್ನಲಾಗಿದೆ.

ಈ ಕುರಿತು ಸಿಸಿಐ, ಅಮೆಜಾನ್, ಫ್ಲಿಪ್‌ಕಾರ್ಟ್, ಕ್ಲೌಡ್‌ಟೇಲ್ ಮತ್ತು ಅಪಾರಿಯೊ ಕಡೆಯಿಂದ ಪ್ರತಿಕ್ರಿಯೆ ಲಭ್ಯವಾಗಿಲ್ಲ.

ದೇಶದಾದ್ಯಂತ ಮಾರುಕಟ್ಟೆ ಧಾರಣೆ

ಏಲಕ್ಕಿ ಧಾರಣೆ	
ಸಕಲೇಶಪುರ	
ಕೂಳೆ	430-450
ನಡುಗೋಲು	500-550
ರಾಶಿ	600-650
ರಾಶಿ ಉತ್ತಮ	650-700
ಜರಡಿ	750-800
ಹೆರಕಿದ್ದು	1100-1150
ಹಸಿರು ಸಾಧಾರಣ	600-700
ಹಸಿರು ಉತ್ತಮ	900-950
ಹಸಿರು ಅತಿ ಉತ್ತಮ	1200-1250
ಕಾಳು ಮೆಣಸು	500
ಅಡಿಕೆ	
ಬಂಟ್ವಾಳ	
ಕೋಕ	12500-25000
ಹೊಸತು	27500-45000
ಹಳತು	46000-54000
ಕಾರ್ಕಳ	
ಹೊಸತು	40000-45000
ಹಳತು	46000-54000
ಪುತ್ತೂರು	
ಕೋಕ	11000-26000
ಹೊಸತು	27500-45000
ಚಿತ್ರದುರ್ಗ	
ಆಪಿ	47600-48000
ಬೆಟ್ಟೆ	37600-38000
ಕೆಂಪುಗೋಟು	31600-32000
ರಾಶಿ	47100-47500
ಕುಮಟ	
ಚಿಪ್ಪು	27109-311111
ಕೋಕ	20189-29809
ಫ್ಯಾಕ್ಟರಿ	10109-20811
ಹಳೆಚಾಲಿ	47019-49769
ಹೊಸಚಾಲಿ	35509-40079
ಶಿವಮೊಗ್ಗ	
ಬೆಟ್ಟೆ	50509-53009
ಗೊರಬಲು	17015-36519
ರಾಶಿ	43000-48798
ಸರಕು	57199-78796
ಸಿದ್ದಾಪುರ	
ಬಿಳಿಗೋಟು	24699-31799
ಚಾಲಿ	42611-42611
ಕೋಕ	23199-32580
ಹೊಸಚಾಲಿ	36099-40409
ಕೆಂಪುಗೋಟು	26699-35099
ರಾಶಿ	45312-48089
ತಟ್ಟಿಬೆಟ್ಟೆ	34669-46899
ಶಿರಸಿ	
ಬೆಟ್ಟೆ	37131-47891
ಬಿಳಿಗೋಟು	11899-34799
ಚಾಲಿ	30891-41032
ರಾಶಿ	42229-49941
ಯಲ್ಲಾಪುರ	
ಬಿಳಿಗೋಟು	28899-32899
ಚಾಲಿ	38719-41099
ಕೋಕ	18899-30899
ಕೆಂಪುಗೋಟು	31499-35169
ರಾಶಿ	48699-54379
ತಟ್ಟಿಬೆಟ್ಟೆ	38860-48000

ಕಾಫಿ (50 ಕೆ.ಜಿಗೆ ₹ ಗಳಲ್ಲಿ)

	ಮೂಡಿಗೆರೆ	ಹಾಸನ		
	ಮುದ್ರೆಮನೆ	ಪ್ಲಾಂಟರ್ಸ್	ಅಲ್ಲಾನಾ	ನ್ಯೂಯಾರ್ಕ್
ಎಪಿ	15900	15800	15850	213.60ಸೆಂಟ್ಸ್
ಎಸಿ	8540	8300	8450	
ಆರ್‌ಪಿ	9600	9550	9600	ಲಂಡನ್
ಆರ್‌ಸಿ	4375	4050	4325	2089 ಡಾಲರ್ಸ್

2025ರ ವೇಳೆಗೆ ಮೊದಲ ಮಾದರಿ: ಟಾಟಾ

‘ಅವಿನ್ಯಾ’ ಇ.ವಿ. ಅನಾವರಣ

ನವದೆಹಲಿ (ರಾಯಿಟರ್ಸ್): ಟಾಟಾ ಮೋಟರ್ಸ್ ಕಂಪನಿಯು ‘ಅವಿನ್ಯಾ’ ಹೆಸರಿನ ವಿದ್ಯುತ್ ಚಾಲಿತ ಕಾನ್ಸೆಪ್ಟ್ ಕಾರನ್ನು ಶುಕ್ರವಾರ ಅನಾವರಣಗೊಳಿಸಿತು.

2025ರ ವೇಳೆಗೆ ಮೊದಲ ಮಾದರಿಯನ್ನು ಮಾರುಕಟ್ಟೆಗೆ ಬಿಡುಗಡೆ ಮಾಡುವ ಆಲೋಚನೆಯನ್ನು ಕಂಪನಿ ಹೊಂದಿದೆ. ಈ ಮಾದರಿಯು ಒಮ್ಮೆ ಚಾರ್ಜ್ ಮಾಡಿದರೆ ಕನಿಷ್ಠ 500 ಕಿಲೋ ಮೀಟರ್ ದೂರ ಕ್ರಮಿಸುವ ಸಾಮರ್ಥ್ಯವನ್ನು ಹೊಂದಿರಲಿದೆ. ಆಧುನಿಕ ತಂತ್ರಜ್ಞಾನ, ತಂತ್ರಾಂಶ ಮತ್ತು ಕೃತಕ ಬುದ್ಧಿಮತ್ತೆಯನ್ನು ಒಳಗೊಂಡಿರಲಿದೆ ಎಂದು ಕಂಪನಿ ತಿಳಿಸಿದೆ.

ಕಂಪನಿಯು ಈಗ ದೇಶದಲ್ಲಿ ವಿದ್ಯುತ್ ಚಾಲಿತ ಪ್ರಯಾಣಿಕ ವಾಹನ ವಿಭಾಗದಲ್ಲಿ ಮುಂಚೂಣಿಯಲ್ಲಿ ಇದ್ದು, ಜೆನ್–3 ವಿನ್ಯಾಸದ ಆಧಾರದ ಮೇಲೆ ಈ ಕಾನ್ಸೆಪ್ಟ್ ಕಾರ್ ಅಭಿವೃದ್ಧಿಪಡಿಸಲಾಗಿದೆ.



ಟಾಟಾ ಮೋಟರ್ಸ್‌ನ ವಿದ್ಯುತ್ ಚಾಲಿತ ಕಾನ್ಸೆಪ್ಟ್ ಕಾರ್ ಅವಿನ್ಯಾ –ಎಎಫ್‌ಪಿ

ಈ ಕಾನ್ಸೆಪ್ಟ್ ಕಾರಿನಿಂದಾಗಿ ವಿದ್ಯುತ್ ಚಾಲಿತ ವಾಹಗಳ ಅಳವಡಿಕೆಗೆ ವೇಗ ದೊರೆಯಲಿದೆ. ಅಲ್ಲದೆ, ವಿದ್ಯುತ್ ಚಾಲಿತ ವಾಹನ ವಿಭಾಗವನ್ನು ಇದು ಮುನ್ನಡೆಸಲಿದೆ ಎಂದು ಟಾಟಾ ಸನ್ಸ್ ಅಧ್ಯಕ್ಷ ಎನ್. ಚಂದ್ರಶೇಖರನ್ ಅವರು ಕಾರು ಅನಾವರಣ ಕಾರ್ಯಕ್ರಮದಲ್ಲಿ ತಿಳಿಸಿದ್ದಾರೆ.

ಅಂತಿಮವಾಗಿ ಜಾಗತಿಕ ಮಾರುಕಟ್ಟೆಯನ್ನು ತಲುಪುವುದು ತಮ್ಮ ಗುರಿ ಎಂದು ಅವರು ಹೇಳಿದ್ದಾರೆ.

‘ಅವಿನ್ಯಾ’ ಮೂಲಕ ಮುಂದಿನ ಪೀಳಿಗೆಯ ವಿದ್ಯುತ್ ಚಾಲಿತ ವಾಹನಗಳ ತಯಾರಿಕೆಯತ್ತ ಕಂಪನಿಯು ಮಹತ್ವದ ಹೆಜ್ಜೆ ಇಟ್ಟಿದೆ ಎಂದು ಟಾಟಾ ಮೋಟರ್ಸ್‌ನ ಪ್ರಯಾಣಿಕ ವಾಹನ ವಿಭಾಗದ ವ್ಯವಸ್ಥಾಪಕ ನಿರ್ದೇಶಕ ಶೈಲೇಶ್ ಚಂದ್ರ ಹೇಳಿದ್ದಾರೆ.

ಸೆಮಿಕಂಡಕ್ಟರ್: ಶೀಘ್ರವೇ ಕಂಪನಿಗಳಿಗೆ ಒಪ್ಪಿಗೆ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಸೆಮಿಕಂಡಕ್ಟರ್ ತಯಾರಿಕಾ ಕಂಪನಿಗಳಿಗೆ ಇನ್ನು ಆರರಿಂದ ಎಂಟು ತಿಂಗಳಲ್ಲಿ ಒಪ್ಪಿಗೆ ನೀಡಲಾಗುವುದು ಎಂದು ಕೇಂದ್ರ ಸಂವಹನ, ಎಲೆಕ್ಟ್ರಾನಿಕ್ಸ್ ಮತ್ತು ಮಾಹಿತಿ ತಂತ್ರಜ್ಞಾನ ಸಚಿವ ಅಶ್ವಿನಿ ವೈಷ್ಣವ್ ಹೇಳಿದರು.

ಬೆಂಗಳೂರಿನಲ್ಲಿ ಶುಕ್ರವಾರ ಆರಂಭವಾದ ಸೆಮಿಕಾನ್ ಇಂಡಿಯಾ ಸಮಾವೇಶದ ಉದ್ಘಾಟನಾ ಕಾರ್ಯಕ್ರಮದಲ್ಲಿ ಅವರು ಮಾತನಾಡಿದರು. ಸೆಮಿಕಂಡಕ್ಟರ್ ತಯಾರಿಕೆಯಲ್ಲಿ ಭಾರತವನ್ನು ಜಾಗತಿಕ ಕೇಂದ್ರವನ್ನಾಗಿಸುವ ವಿಚಾರದಲ್ಲಿ ಕೇಂದ್ರವು ಗಂಭೀರವಾಗಿದೆ ಎಂದು ತಿಳಿಸಿದರು.

ಉತ್ಪಾದನೆ ಆಧಾರಿತ ಉತ್ತೇಜನ (ಪಿಎಲ್‌ಐ) ಯೋಜನೆಯಿಂದ 4 ವರ್ಷಗಳಲ್ಲಿ ಸೆಮಿಕಂಡಕ್ಟರ್ ವಲಯದಲ್ಲಿ ದೇಶದಲ್ಲಿ 1.35 ಲಕ್ಷ ಉದ್ಯೋಗಗಳು ಸೃಷ್ಟಿಯಾಗಲಿವೆ ಎಂಬುದು ಸರ್ಕಾರದ ಅಂದಾಜು.

ಸೆಮಿಕಂಡಕ್ಟರ್ ಚಿಪ್ ತಯಾರಿಕೆಗೆ ಐದು ಕಂಪನಿಗಳಿಂದ ಪ್ರಸ್ತಾವ ಬಂದಿದೆ, ಇವುಗಳಿಂದ ₹ 1.53 ಲಕ್ಷ ಕೋಟಿ ಹೂಡಿಕೆ ಆಗಬಹುದು ಎಂದು ಸರ್ಕಾರವು ಫೆಬ್ರುವರಿಯಲ್ಲಿ ಹೇಳಿತ್ತು.

ಪ್ರಧಾನಿ ನರೇಂದ್ರ ಮೋದಿ ಅವರು ಸಮಾವೇಶವನ್ನು ವರ್ಚುವಲ್ ಆಗಿ ಉದ್ಘಾಟಿಸಿದರು. ಸೆಮಿಕಂಡಕ್ಟರ್ ತಯಾರಿಕೆಯಲ್ಲಿ ಪ್ರಭಾವಿ ದೇಶ ಆಗುವ ವಿಶಿಷ್ಟ ಸ್ಥಾನದಲ್ಲಿ ಭಾರತ ಇದೆ ಎಂದು ಮೋದಿ ಅವರು ಮುದ್ರಿತ ಭಾಷಣದಲ್ಲಿ ಹೇಳಿದರು. ಸೆಮಿಕಂಡಕ್ಟರ್ ಡಿಸ್‌ಪ್ಲೆ ತಯಾರಿಕಾ ಕಂಪನಿಯಾದ ಅಪ್ಲೈಡ್ ಮೆಟೀರಿಯಲ್ಸ್ ಬೆಂಗಳೂರಿನಲ್ಲಿ ₹ 1,800 ಕೋಟಿ ಹೂಡಿಕೆ ಮಾಡುವುದಾಗಿ ಪ್ರಕಟಿಸಿತು.

ವಿಶ್ವಸಂಸ್ಥೆ ಪ್ರಧಾನ ಕಾರ್ಯದರ್ಶಿ ಗುಟೆರಸ್ ಭೇಟಿ ಹಿಂದೆಯೇ ರಷ್ಯಾದ ಕ್ರಮ

ಉಕ್ರೇನ್‌ನ ವಿವಿಧೆಡೆ ಕ್ಷಿಪಣಿ, ಶೆಲ್ ದಾಳಿ ತೀವ್ರ

ಕೀವ್ (ಎ.ಪಿ): ಉಕ್ರೇನ್‌ನ ರಾಜಧಾನಿ ಕೀವ್ ಸೇರಿದಂತೆ ವಿವಿಧ ನಗರಗಳಲ್ಲಿ ರಷ್ಯಾ ಗುರುವಾರ ತೀವ್ರವಾಗಿ ಬಾಂಬ್, ಶೆಲ್ ದಾಳಿ ನಡೆಸಿದೆ. ಯುದ್ಧ ಕುರಿತು ಪಶ್ಚಿಮ ರಾಷ್ಟ್ರಗಳ ವಿರೋಧ ಹಾಗೂ ವಿಶ್ವಸಂಸ್ಥೆಯ ಮುಖ್ಯಸ್ಥರು ಉಕ್ರೇನ್‌ಗೆ ಭೇಟಿ ನೀಡಿದ್ದ ಅವಧಿಯಲ್ಲಿಯೇ ರಷ್ಯಾ ದಾಳಿಯನ್ನು ತೀವ್ರಗೊಳಿಸಿದೆ.

ದಾಳಿಯಿಂದ ಕೀವ್‌ನಲ್ಲಿ ಒಬ್ಬರು ಮೃತಪಟ್ಟಿದ್ದಾರೆ. ಎರಡು ಕಟ್ಟಡಗಳ ಮೇಲೆ ಶೆಲ್ ದಾಳಿ ನಡೆದಿದೆ. ಝಪೋರಿಝಿಯಾದಲ್ಲಿ ವಸತಿ ಕಟ್ಟಡದ ಮೇಲೆ ನಡೆದ ದಾಳಿಯಲ್ಲಿ 11 ವರ್ಷದ ಬಾಲಕ ಸೇರಿ ಮೂವರು ತೀವ್ರವಾಗಿ ಗಾಯಗೊಂಡರು ಎಂದು ಅಧಿಕಾರಿಗಳು ತಿಳಿಸಿದ್ದಾರೆ.

ಪೋಲೆಂಡ್, ಬೆಲಾರಸ್ ಗಡಿಭಾಗದ ಚೆರ್ನಿಹಿವ್, ಅತಿದೊಡ್ಡದಾದ ರೈಲ್ವೆ ಸುರಂಗಮಾರ್ಗ ಫಾಸ್ಟಿವ್ ಸೇರಿ ವಿವಿಧೆಡೆ ದಾಳಿ ನಡೆದಿದೆ. ಒಡೆಸಾದಲ್ಲಿ ರಾಕೆಟ್ ದಾಳಿಯನ್ನು ರಕ್ಷಣಾ ಪಡೆ ತಡೆದಿದೆ ಎಂದು ಅಲ್ಲಿನ ಮೇಯರ್ ತಿಳಿಸಿದ್ದಾರೆ.

ಕೀವ್‌ನಲ್ಲಿರುವ ಸೇನಾ ಕಾರ್ಖಾನೆ ಉತ್ಪಾದನಾ ಸಂಕೀರ್ಣದ ಮೇಲೆ ಕ್ಷಿಪಣಿ ದಾಳಿ ನಡೆಸಿದ್ದು, ಪೂರ್ಣ ನಾಶಪಡಿಸಲಾಗಿದೆ ಎಂದು ರಷ್ಯಾದ ಸೇನಾ ವಕ್ತಾರ ಇಗೊರ್ ಕೊನಾಶೆಂಕೋವ್ ಅವರು ತಿಳಿಸಿದರು.



ರಷ್ಯಾ ಸೇನೆಯು ನಡೆಸಿದ ಕ್ಷಿಪಣಿ ದಾಳಿಯಿಂದ ಶುಕ್ರವಾರ ಉಕ್ರೇನ್ ರಾಜಧಾನಿ ಕೀವ್‌ನಲ್ಲಿ ಹಾನಿಗೊಂಡ ಕಟ್ಟಡದ ಅವಶೇಷಗಳನ್ನು ಸಿಬ್ಬಂದಿ ತೆರವುಗೊಳಿಸಿದರು –ಎಎಫ್‌ಪಿ ಚಿತ್ರ

ಉಕ್ರೇನ್ ಅಧ್ಯಕ್ಷ ವೊಲೊಡಿಮಿರ್ ಝೆಲೆನ್‌ಸ್ಕಿ ಮತ್ತು ವಿಶ್ವಸಂಸ್ಥೆಯ ಪ್ರಧಾನ ಕಾರ್ಯದರ್ಶಿ ಆಂಟೊನಿಯೊ ಗುಟೆರಸ್ ಜಂಟಿ ಸುದ್ದಿಗೋಷ್ಠಿ ನಡೆಸಿದ ಒಂದು ಗಂಟೆ ತರುವಾಯ ಈ ದಾಳಿ ನಡೆದಿದೆ. ಗುಟೆರಸ್ ಮತ್ತು ಅವರ ಜೊತೆಗೆ ಬಂದಿರುವ ತಂಡ ಸುರಕ್ಷಿತವಾಗಿದೆ ಎಂದು ಉಕ್ರೇನ್‌ನ ವಕ್ತಾರರು ತಿಳಿಸಿದ್ದಾರೆ.



ಉಕ್ರೇನ್ ಅಧ್ಯಕ್ಷ ವೊಲೊಡಿಮಿರ್ ಝೆಲೆನ್ ಸ್ಕಿ ಅವರು, ವಿಶ್ವಸಂಸ್ಥೆಯ ಮುಖಂಡರ ಭೇಟಿ ವೇಳೆಯೇ ದಾಳಿಯನ್ನು ತೀವ್ರಗೊಳಿಸುವ ಮೂಲಕ ರಷ್ಯಾ ವಿಶ್ವಸಂಸ್ಥೆಗೆ ಅಪಮಾನ ಮಾಡುತ್ತಿದೆ ಎಂದು ಆರೋಪಿಸಿದರು.

ಮರಿಯುಪೋಲ್‌ನಲ್ಲಿ ಉಕ್ರೇನ್‌ನ ಯೋಧರು ಉಕ್ಕು ಸ್ಥಾವರ ಸುತ್ತುವರಿದಿದ್ದು, ಉಳಿಸಿಕೊಳ್ಳುವ ಯತ್ನ ನಡೆಸಿದ್ದಾರೆ. ಇತ್ತ ದಾಳಿ, ಅಹಿತಕರ ಬೆಳವಣಿಗೆಗಳಿಂದಾಗಿ ಕುಡಿಯುವ ನೀರು ಪೂರೈಕೆಯು ವ್ಯತ್ಯಯವಾಗಿದೆ. ಇದು, ಸಾಂಕ್ರಾಮಿಕ ರೋಗ ವ್ಯಾಪಿಸಲು ಕಾರಣವಾಗಬಹುದು ಎಂದು ಅಧಿಕಾರಿಗಳು ಆತಂಕ ವ್ಯಕ್ತಪಡಿಸಿದ್ದಾರೆ.

ಯುದ್ಧ ಸ್ಥಿತಿ ಪರಿಶೀಲನೆ: ವಿಶ್ವಸಂಸ್ಥೆಯ ಮಹಾಪ್ರಧಾನ ಕಾರ್ಯದರ್ಶಿ ಆಂಟೊನಿಯೊ ಗುಟೆರಸ್, ಉಕ್ರೇನ್‌ನಲ್ಲಿ ಯುದ್ಧ ಸ್ಥಿತಿ ಅವಲೋಕಿಸಿದರು. ಬುಚಾದಲ್ಲಿ ನಡೆದ ದೌರ್ಜನ್ಯವನ್ನು ಖಂಡಿಸಿದರು. ‘ಯುದ್ಧ ನಡೆದಾಗ ಹೆಚ್ಚಿನ ಬೆಲೆ ತೆರುವವರು ನಾಗರಿಕರೇ. ಯುದ್ಧ ಅಪರಾಧಗಳ ತನಿಖೆ ನಡೆಯುವ ಅಗತ್ಯವಿದೆ’ ಎಂದು ಹೇಳಿದರು. ಈ ಮಧ್ಯೆ, ‘ರಷ್ಯಾದ 10 ಯೋಧರು, ಜನರಿಗೆ ಕಿರುಕುಳ ನೀಡಿದ್ದಾರೆ’ ಎಂದು ಉಕ್ರೇನ್‌ನ ಪ್ರಾಸಿಕ್ಯೂಟರ್ ಜನರಲ್ ಇರಿನಾ ವೆನೆಡಿಕ್‌ಟೊವಾ ಹೇಳಿದ್ದಾರೆ. ಈ ಬಗ್ಗೆ ಸಾಕ್ಷ್ಯ ಸಂಗ್ರಹಿಸಲು ಜನತೆಗೆ ಸಲಹೆ ಮಾಡಿದ್ದಾರೆ. ಆದರೆ, ನಾಗರಿಕರಿಗೆ ಕಿರುಕುಳ ನೀಡಲಾಗಿದೆ ಎಂಬುದನ್ನು ರಷ್ಯಾ ನಿರಾಕರಿಸಿದೆ.

ಹೊಸದಾಗಿ 3,377 ಪ್ರಕರಣ ದಾಖಲು

ನವದೆಹಲಿ (ಪಿಟಿಐ): ದೇಶದಲ್ಲಿ ಕೋವಿಡ್ ಪ್ರಕರಣಗಳ ಸಂಖ್ಯೆ ತುಸು ಹೆಚ್ಚಾಗಿದ್ದು, ಶುಕ್ರವಾರ ಬೆಳಿಗ್ಗೆ 8ಕ್ಕೆ ಅಂತ್ಯಗೊಂಡಂತೆ 24 ಗಂಟೆಗಳ ಅವಧಿಯಲ್ಲಿ ಹೊಸದಾಗಿ 3,377 ಪ್ರಕರಣಗಳು ವರದಿಯಾಗಿವೆ. ಸಕ್ರಿಯ ಪ್ರಕರಣಗಳ ಸಂಖ್ಯೆ 17,801ಕ್ಕೆ ಏರಿಕೆಯಾಗಿವೆ ಎಂದು ಕೇಂದ್ರ ಆರೋಗ್ಯ ಸಚಿವಾಲಯ ತಿಳಿಸಿದೆ.

ಹೊಸದಾಗಿ 60 ಮಂದಿ ಸಾವನ್ನಪ್ಪಿದ್ದು, ಮೃತರ ಒಟ್ಟು ಸಂಖ್ಯೆ 5,23,753ಕ್ಕೆ ಏರಿದೆ. ಚೇತರಿಕೆ ಪ್ರಮಾಣ ಶೇ 98.74ರಷ್ಟಿದೆ.

‘12-17 ವರ್ಷದವರಿಗೆ ಲಸಿಕೆ; ಕೊವೊವ್ಯಾಕ್ಸ್ ಸೇರಿಸಿ’: ದೇಶದಾದ್ಯಂತ ಮಕ್ಕಳಿಗೂ ಲಸಿಕೆ ಅಭಿಯಾನ ಆರಂಭವಾಗಿರುವ ಬೆನ್ನಲ್ಲೇ, 12ರಿಂದ 17 ವರ್ಷದೊಳಗಿನ ಮಕ್ಕಳಿಗಾಗಿ ಸೀರಂ ಇನ್‌ಸ್ಟಿಟ್ಯೂಟ್‌ನ ಕೋವೊವ್ಯಾಕ್ಸ್ ಅನ್ನು ರಾಷ್ಟ್ರೀಯ ಕೋವಿಡ್‌-19 ಲಸಿಕಾಕರಣ ಕಾರ್ಯಕ್ರಮದಲ್ಲಿ ಸೇರಿಸಬೇಕು ಎಂದು ಪ್ರತಿರಕ್ಷಣೆ ಕುರಿತ ರಾಷ್ಟ್ರೀಯ ತಾಂತ್ರಿಕ ಸಲಹಾ ಗುಂಪಿನ ತಾಂತ್ರಿಕ ಸ್ಥಾಯಿ ಉಪ ಸಮಿತಿಯು ಶಿಫಾರಸು ಮಾಡಿದೆ.

ಉತ್ತರ ಕೊರಿಯಾ- ಚೀನಾ ಮಧ್ಯೆ ಸರಕು ಸಾಗಣೆ ರೈಲು ಸ್ಥಗಿತ

ಬೀಜಿಂಗ್(ರಾಯಿಟರ್ಸ್): ಕೊರೊನಾ ವೈರಸ್ ಕಾರಣದಿಂದಾಗಿ ಉತ್ತರ ಕೊರಿಯಾ ಮತ್ತು ಚೀನಾ ನಡುವಿನ ಸರಕು ಸಾಗಣೆ ರೈಲು ಸೇವೆಗಳನ್ನು ತಡೆಹಿಡಿಯಲಾಗಿದೆ ಎಂದು ಚೀನಾದ ವಿದೇಶಾಂಗ ಸಚಿವಾಲಯದ ವಕ್ತಾರ ತಿಳಿಸಿದ್ದಾರೆ.

ಚೀನಾದ ಗಡಿ ನಗರವಾದ ದಬಾಂಗ್‌ನಲ್ಲಿ ಕೊರೊನಾ ಸೋಂಕು ಹರಡುವುದು ಹೆಚ್ಚಾಗಿರುವ ಕಾರಣ ಉಭಯ ದೇಶಗಳ ನಡುವಿನ ಸರಕು ಸಾಗಣೆ ರೈಲು ಸೇವೆಗಳನ್ನು ತಡೆ ಹಿಡಿಯಲಾಗಿದೆ ಎಂದು ದಕ್ಷಿಣ ಕೊರಿಯಾದ ಸುದ್ದಿ ಸಂಸ್ಥೆಯೊಂದು ವರದಿ ಮಾಡಿದೆ.

65ನೇ ದಿನದ ಬೆಳವಣಿಗೆಗಳು

- ರಷ್ಯಾದ ಜಲಾಂತರ್ಗಾಮಿ ನೌಕೆಗಳಿಂದ ಉಕ್ರೇನ್‌ನ ಸೇನಾ ನೆಲೆಗಳ ಮೇಲೆ ದಾಳಿ ನಡೆಸಲಾಗಿದೆ. ಇದೇ ಮೊದಲ ಬಾರಿಗೆ ಯುದ್ಧದಲ್ಲಿ ಜಲಾಂತರ್ಗಾಮಿ ನೌಕೆಗಳನ್ನು ಬಳಸಲಾಗಿದೆ ಎಂದು ರಷ್ಯಾ ತಿಳಿಸಿದೆ. ಜಲಾಂತರ್ಗಾಮಿ ನೌಕೆಯಿಂದ ‘ಕಲಿಬ್ರ’ ಕ್ಷಿಪಣಿ ಬಳಕೆ ಕುರಿತಂತೆ ರಷ್ಯಾ ವಿಡಿಯೊ ಬಿಡುಗಡೆ ಮಾಡಿದೆ.
- ಕೀವ್‌ನಲ್ಲಿ ರಾಯಭಾರ ಕಚೇರಿ ಮರು ಆರಂಭಿಸಲಾಗುವುದು ಎಂದು ನೆದರ್‌ಲೆಂಡ್ ತಿಳಿಸಿದೆ. ಇತ್ತೀಚೆಗೆ ನೆದರ್‌ಲೆಂಡ್ ತನ್ನ ರಾಜತಾಂತ್ರಿಕ ಸಿಬ್ಬಂದಿಯನ್ನು ವಾಪಸು ಕರೆಸಿಕೊಂಡಿತ್ತು.
- ಉಕ್ರೇನ್‌ನ ಆಗ್ನೇಯ ಭಾಗದಲ್ಲಿ ರಷ್ಯಾದ ಸೇನೆಯು ಬ್ರಿಟನ್‌ನ ಇಬ್ಬರನ್ನು ಅಪಹರಿಸಿದೆ ಎಂದು ಬ್ರಿಟಿಷ್‌ನ ನೆರವು ತಂಡ ಪ್ರೆಸಿಡಿಯಂ ನೆಟ್‌ವರ್ಕ್‌ನ ಡೊಮ್ನಿಕ್ ಬೈರ್‌ನೆ ತಿಳಿಸಿದ್ದಾರೆ.
- ಲಂಡನ್: ಉಕ್ರೇನ್‌ನಲ್ಲಿ ಸಂಭವನೀಯ ಯುದ್ಧ ಅಪರಾಧ ಕೃತ್ಯಗಳ ಬಗ್ಗೆ ತನಿಖೆ ನಡೆಸಲು ಇಂಗ್ಲೆಂಡ್ ಪರಿಣತರ ತಂಡವನ್ನು ಕಳುಹಿಸಲಿದೆ ಎಂದು ಬ್ರಿಟನ್‌ನ ವಿದೇಶಾಂಗ ಕಾರ್ಯದರ್ಶಿ ಲಿಜ್ ಟ್ರಸ್ ತಿಳಿಸಿದ್ದಾರೆ.
- ರಷ್ಯಾದ ದಾಳಿಯಲ್ಲಿ ತನ್ನ ಸಿಬ್ಬಂದಿ ವಿರಾ ಹೈರಿಚ್ ಮೃತಪಟ್ಟಿದ್ದಾರೆ. ಆಕೆ ವಾಸವಿದ್ದ ಕಟ್ಟಡದ ಮೇಲೆ ಕ್ಷಿಪಣಿ ದಾಳಿ ನಡೆದಿದ್ದು, ಅವಶೇಷಗಳ ಮಧ್ಯೆ ಶವ ದೊರೆತಿದೆ ಎಂದು ‘ರೇಡಿಯೊ ಫ್ರೀ ಯೂರೋಪ್’ ತಿಳಿಸಿದೆ.
- ಇಂಡೊನೇಷ್ಯಾದಲ್ಲಿ ನಡೆಯಲಿರುವ ಜಿ–20 ಶೃಂಗಸಭೆಗೆ ರಷ್ಯಾ ಸಿದ್ಧತೆ ಮಾಡಿಕೊಳ್ಳುತ್ತಿದೆ ಎಂದು ರಷ್ಯಾ ಪ್ರಕಟಿಸಿದೆ.
- ಉಕ್ರೇನ್ ಕುರಿತಂತೆ ಭಾರತ ಜೊತೆಗಿನ ಚರ್ಚೆಯನ್ನು ಅಮೆರಿಕ ಮುಂದುವರಿಸಲಿದೆ. ಜಪಾನ್‌ನಲ್ಲಿ ಮುಂದಿನ ತಿಂಗಳು ನಡೆಯುವ ಕ್ವಾಡ್ ಶೃಂಗಸಭೆಯಲ್ಲಿಯೂ ಪ್ರಧಾನಿ ನರೇಂದ್ರ ಮೋದಿ ಅವರೊಂದಿಗೆ ಅಧ್ಯಕ್ಷ ಜೋ ಬೈಡನ್ ಚರ್ಚಿಸಲಿದ್ದಾರೆ ಎಂದು ಶ್ವೇತಭವನ ಹೇಳಿಕೆ ನೀಡಿದೆ.

ನೆರವು: ಅಮೆರಿಕ ಅನುಮೋದನೆ

ವಾಷಿಂಗ್ಟನ್ (ಎ.ಪಿ): ರಷ್ಯಾದ ಅತಿಕ್ರಮಣ ಎದುರಿಸಲು ಉಕ್ರೇನ್ ಮತ್ತು ಪೂರ್ವ ಯೂರೋಪಿಯನ್ ದೇಶಗಳಿಗೆ ಹೆಚ್ಚಿನ ನೆರವು ಒದಗಿಸುವ ಮಸೂದೆಗೆ ಅಮೆರಿಕ ಸಂಸತ್ತು 417–10 ಮತಗಳಿಂದ ಅನುಮೋದನೆ ನೀಡಿದೆ.

ಮಸೂದೆಯನ್ನು ಅಧ್ಯಕ್ಷ ಜೋ ಬೈಡನ್ ಅವರ ಸಹಿಗಾಗಿ ಶ್ವೇತಭವನಕ್ಕೆ ಕಳುಹಿಸಲಾಗಿದೆ. ಸಹಿ ನಂತರ ಇದು ಕಾಯ್ದೆಯಾಗಿ ಜಾರಿಗೊಳ್ಳಲಿದೆ. ಸಂಸತ್ತಿನ ವಿದೇಶಾಂಗ ವ್ಯವಹಾರಗಳ ಸಮಿತಿ ಸದಸ್ಯ, ನ್ಯೂಯಾರ್ಕ್‌ನ ಗ್ರೆಗೊರಿ ಮೀಕ್ಸ್ ಅವರು, ‘ಈ ಸಂಘಟಿತ ಬೆಂಬಲದೊಂದಿಗೆ ಉಕ್ರೇನ್ ಗೆಲ್ಲಲಿದೆ’ ಎಂದರು. ಗುರುವಾರವಷ್ಟೇ ಜೋ ಬೈಡನ್ ಆಡಳಿತವು ಸೇನಾ, ಮಾನವೀಯ ನೆರವಿಗೆ 30 ಬಿಲಿಯನ್ ಡಾಲರ್ ನೀಡುವ ಕುರಿತು ಸಂಸತ್ತಿನ ಅನುಮೋದನೆ ಕೋರುವುದಾಗಿ ತಿಳಿಸಿತ್ತು. ‘ರಷ್ಯಾದ ಸೇನೆ ಉಕ್ರೇನ್‌ನ ವಿವಿಧ ನಗರ, ಗ್ರಾಮಗಳ ಮೇಲೆ ದಾಳಿ ನಡೆಸುತ್ತಿದೆ. ಉಕ್ರೇನ್‌ನ ಜನರು ನಮ್ಮೆಲ್ಲರಿಗಾಗಿ ಹೋರಾಟ ನಡೆಸುತ್ತಿದ್ದಾರೆ’ ಎಂದು ಸಂಸದ ಫ್ರೆಂಚ್ ಹಿಲ್ ಹೇಳಿದರು. ಉಕ್ರೇನ್‌ನಲ್ಲಿ ನಿರಾಶ್ರಿತರಿಗೆ ಆಹಾರ ಪೂರೈಕೆ ಸೇರಿದಂತೆ ತ್ವರಿತಗತಿಯಲ್ಲಿ ನೆರವು ಒದಗಿಸಬೇಕಾಗಿದೆ ಎಂದು ರಿಪಬ್ಲಿಕನ್ಸ್ ಮತ್ತು ಡೆಮಾಕ್ರಟಿಕ್ ಪಕ್ಷದ ಸದಸ್ಯರು ಒಕ್ಕೊರಲಿನಿಂದ ಸಂಸತ್ತಿನಲ್ಲಿ ಒತ್ತಾಯಿಸಿದರು.



ಸುಭಾಷಿತ

ಸತ್ಯ ಕೂಡ ಆಯಾ ಕಾಲಮಾನದ ತುಲನೆಯಿಂದ ಬದಲಾಗುವ ಜೀವನ ನಿರ್ಣಯ.

–ಶಿವರಾಮ ಕಾರಂತ

ತೈಲದ ಮೇಲಿನ ತೆರಿಗೆ ವಿಚಾರ ಕ್ಷುಲ್ಲಕ ರಾಜಕೀಯ ಸರಿಯಲ್ಲ

ಬಿಜೆಪಿಯೇತರ ಪಕ್ಷಗಳ ಆಳ್ವಿಕೆ ಇರುವ ರಾಜ್ಯ ಸರ್ಕಾರಗಳು ಪೆಟ್ರೋಲ್ ಮತ್ತು ಡೀಸೆಲ್ ಮೇಲಿನ ಮೌಲ್ಯವರ್ಧಿತ ತೆರಿಗೆಯನ್ನು (ವ್ಯಾಟ್) ಕಡಿತ ಮಾಡಬೇಕು ಎಂದು ಪ್ರಧಾನಿ ನರೇಂದ್ರ ಮೋದಿ ಕರೆ ಕೊಟ್ಟಿದ್ದಾರೆ. ಆದರೆ, ಈ ಕರೆಯು ಬಿಜೆಪಿಯೇತರ ಪಕ್ಷಗಳು ಮತ್ತು ಮುಖ್ಯಮಂತ್ರಿಗಳಲ್ಲಿ ಆಕ್ರೋಶ ಮೂಡಿಸಿದೆ. ವ್ಯಾಟ್ ಕಡಿತ ಮಾಡದ ಆರು ರಾಜ್ಯಗಳನ್ನು ಪ್ರಧಾನಿ ಹೆಸರಿಸಿದ್ದಾರೆ. ಆ ರಾಜ್ಯ ಸರ್ಕಾರಗಳನ್ನು ತೀವ್ರವಾಗಿ ಟೀಕಿಸಿದ್ದಾರೆ. ಆದರೆ, ಪ್ರಧಾನಿಯವರ ಮಾತು ಪೂರ್ಣ ಸತ್ಯ ಅಲ್ಲ. ಅವರ ಟೀಕೆಯು ನೈತಿಕವಾಗಿ ಹಾಗೂ ರಾಜಕೀಯವಾಗಿ ದುರ್ಬಲವಾಗಿದೆ. 2020ರ ಮಾರ್ಚ್–ಮೇ ಅವಧಿಯಲ್ಲಿ ಕೇಂದ್ರ ಸರ್ಕಾರವು ಪೆಟ್ರೋಲ್ ಮತ್ತು ಡೀಸೆಲ್ ಮೇಲಿನ ಎಕ್ಸೈಸ್ ಸುಂಕವನ್ನು ಕ್ರಮವಾಗಿ ಶೇ 44ರಷ್ಟು ಮತ್ತು ಶೇ 69ರಷ್ಟು ಹೆಚ್ಚಿಸಿದೆ. ವಿರೋಧಾಭಾಸ ಎಂದರೆ, ಈ ಅವಧಿಯಲ್ಲಿ ಜಾಗತಿಕ ಮಟ್ಟದಲ್ಲಿ ಕಚ್ಚಾ ತೈಲದ ದರ ಕುಸಿಯುತ್ತಲೇ ಇತ್ತು. 2020–21ರಲ್ಲಿ ಪೆಟ್ರೋಲಿಯಂನಿಂದ ಕೇಂದ್ರವು ಪಡೆಯುತ್ತಿದ್ದ ವರಮಾನದಲ್ಲಿ ಹೆಚ್ಚಳವಾಗಿದ್ದರೆ, ರಾಜ್ಯಗಳ ವರಮಾನದಲ್ಲಿ ಕುಸಿತವಾಗಿದೆ. ಪೆಟ್ರೋಲ್ ಮತ್ತು ಡೀಸೆಲ್ ಮೇಲಿನ ತೆರಿಗೆಯನ್ನು ಕೇಂದ್ರ ಸರ್ಕಾರವು ಕಳೆದ ನವೆಂಬರ್‌ನಲ್ಲಿ ಕಡಿತ ಮಾಡಿದೆ. ಜನರ ಹೊರೆ ತಗ್ಗಿಸುವುದಕ್ಕಾಗಿ ಹೀಗೆ ಮಾಡಲಾಗಿದೆ ಎಂದು ಕೇಂದ್ರ ಹೇಳಿಕೊಂಡಿದೆ. ಆದರೆ, ಕೆಲವು ರಾಜ್ಯಗಳ ವಿಧಾನಸಭೆಗೆ ಚುನಾವಣೆ ಹತ್ತಿರವಿತ್ತು ಎಂಬುದೇ ನಿಜವಾದ ಕಾರಣ. ಜಾಗತಿಕ ಮಾರುಕಟ್ಟೆಯಲ್ಲಿ ಕಚ್ಚಾ ತೈಲ ದರದಲ್ಲಿ ಏರಿಕೆ ಆಗುತ್ತಲೇ ಇದ್ದರೂ ಉತ್ತರಪ್ರದೇಶ ಸೇರಿ ಐದು ರಾಜ್ಯಗಳ ವಿಧಾನಸಭೆ ಚುನಾವಣೆಗೆ ಮುಂಚಿನ 137 ದಿನ ಪೆಟ್ರೋಲ್ ಮತ್ತು ಡೀಸೆಲ್ ದರಗಳು ಸ್ಥಿರವಾಗಿಯೇ ಇದ್ದವು. ಈ ಹಿಂದೆ, ಪಶ್ಚಿಮ ಬಂಗಾಳ, ಗುಜರಾತ್ ಮತ್ತು ಕರ್ನಾಟಕ ವಿಧಾನಸಭೆ ಚುನಾವಣೆಗೆ ಮುಂಚೆಯೂ ಪೆಟ್ರೋಲ್ ಮತ್ತು ಡೀಸೆಲ್ ದರ ಏರಿಸಿರಲಿಲ್ಲ. ಚುನಾವಣಾ ಫಲಿತಾಂಶ ಪ್ರಕಟವಾದ ಬಳಿಕ, ಪೆಟ್ರೋಲ್ ಮತ್ತು ಡೀಸೆಲ್ ದರದಲ್ಲಿ ಹಲವು ಬಾರಿ ಹೆಚ್ಚಳವಾಗಿದೆ. ಹಾಗಾಗಿ, ಕೇಂದ್ರವು ತೆರಿಗೆಯನ್ನು ಕಡಿತ ಮಾಡಿದ್ದು ಮತ್ತು ದರ ಏರಿಸದೇ ಇದ್ದದ್ದು ಚುನಾವಣಾ ರಾಜಕೀಯದ ತಂತ್ರವೇ ಹೊರತು ಜನರ ಹೊರೆ ತಗ್ಗಿಸುವ ಕಾಳಜಿಯಿಂದ ಅಲ್ಲ ಎಂಬುದು ನಿಚ್ಚಳ. ಪೆಟ್ರೋಲ್ ಮತ್ತು ಡೀಸೆಲ್ ದರವನ್ನು ಸರ್ಕಾರದ ನಿಯಂತ್ರಣದಿಂದ ಮುಕ್ತವಾಗಿಸಿ ಬಹಳ ಕಾಲ ಕಳೆದಿದೆ. ಅಂದರೆ, ಕಚ್ಚಾ ತೈಲ ದರದ ಆಧಾರದಲ್ಲಿ ಪೆಟ್ರೋಲ್ ಮತ್ತು ಡೀಸೆಲ್ ದರವು ನಿಗದಿಯಾಗಬೇಕು.



ಪೆಟ್ರೋಲಿಯಂ ಉತ್ಪನ್ನಗಳ ದರ ಕಡಿತ ಆಗಲೇಬೇಕು. ಆದರೆ, ಅದರ ದೊಡ್ಡ ಹೊಣೆಗಾರಿಕೆ ಕೇಂದ್ರದ ಮೇಲೆಯೇ ಇದೆ

ಇದು ಸರ್ವ ಋತುವಿಗೂ ಅನ್ವಯವಾಗುವ ನಿಯಮ. ಆದರೆ, ಜಾಗತಿಕ ಮಟ್ಟದಲ್ಲಿ ಕಚ್ಚಾ ತೈಲ ದರ ಇಳಿಕೆಯಾಗುತ್ತಿದ್ದಾಗಲೂ ಭಾರತದ ಯಾವುದೇ ರಾಜ್ಯದಲ್ಲಿ ಚುನಾವಣೆ ಇಲ್ಲದ ಸಂದರ್ಭದಲ್ಲಿ ಪೆಟ್ರೋಲ್ ಮತ್ತು ಡೀಸೆಲ್ ದರದಲ್ಲಿ ಏರಿಕೆ ಆಗಿದೆ. ಜಾಗತಿಕ ಮಟ್ಟದಲ್ಲಿ ಕಚ್ಚಾ ತೈಲದ ದರದಲ್ಲಿ ತೀವ್ರ ಏರಿಕೆ ಆಗುತ್ತಿದ್ದಾಗಲೂ ಯಾವುದೋ ರಾಜ್ಯದಲ್ಲಿ ಚುನಾವಣೆ ಇದ್ದಾಗ ಇಂಧನ ದರದಲ್ಲಿ ಯಾವ ಏರಿಕೆಯೂ ಆಗದ ಪ್ರಹಸನಕ್ಕೆ ಭಾರತದ ಜನರು ಸಾಕ್ಷಿಯಾಗಿದ್ದಾರೆ.

ಈಗ, ಬಿಜೆಪಿಯೇತರ ಪಕ್ಷಗಳು ಆಡಳಿತದಲ್ಲಿರುವ ರಾಜ್ಯಗಳು ಪೆಟ್ರೋಲ್, ಡೀಸೆಲ್ ಮೇಲಿನ ವ್ಯಾಟ್ ಕಡಿತ ಮಾಡಬೇಕು ಎಂದು ಪ್ರಧಾನಿ ಹೇಳಿರುವುದು ರಾಜಕೀಯ ಅಲ್ಲ, ನೈಜವಾದ ಕಾಳಜಿ ಎಂದು ಭಾವಿಸಲು ಯಾವ ಕಾರಣವೂ ಇಲ್ಲ. ಗುಜರಾತ್ ವಿಧಾನಸಭೆಗೆ ಈ ವರ್ಷ ಚುನಾವಣೆ ನಡೆಯಲಿದೆ ಎಂಬುದನ್ನು ಪ್ರಧಾನಿಯವರ ಮಾತು ನೆನಪಿಸಿದೆ ಅಷ್ಟೇ. ಜಿಎಸ್‌ಟಿ ಜಾರಿಗೆ ಬಂದ ಬಳಿಕ, ಇಂಧನ, ಮದ್ಯದ ಮೇಲಿನ ತೆರಿಗೆ ಮತ್ತು ಮುದ್ರಾಂಕ ಸುಂಕವಷ್ಟೇ ರಾಜ್ಯ ಸರ್ಕಾರಗಳ ಮುಖ್ಯ ವರಮಾನಗಳಾಗಿ ಉಳಿದಿವೆ. ಕೋವಿಡ್ ಸಾಂಕ್ರಾಮಿಕ ತಂದ ಸಂಕಷ್ಟವು ರಾಜ್ಯಗಳ ಆರ್ಥಿಕ ಸ್ಥಿತಿಯನ್ನು ಶೋಚನೀಯವಾಗಿಸಿದೆ. ಜಿಎಸ್‌ಟಿ ಪರಿಹಾರದ ಮೊತ್ತವನ್ನು ಕೇಂದ್ರವು ರಾಜ್ಯಗಳಿಗೆ ಸಮರ್ಪಕವಾಗಿ ಪಾವತಿಸಿಲ್ಲ. ಕಳೆದ ವರ್ಷದ ಎಂಟು ತಿಂಗಳ ಜಿಎಸ್‌ಟಿ ಪರಿಹಾರವನ್ನು ಮಾತ್ರ ರಾಜ್ಯಗಳಿಗೆ ಪಾವತಿಸಲಾಗಿದೆ. ₹ 78,704 ಕೋಟಿ ಬಾಕಿ ಇದೆ ಎಂದು ಕೇಂದ್ರವೇ ಒಪ್ಪಿಕೊಂಡಿದೆ.

ಕೋವಿಡ್ ಸ್ಥಿತಿಗತಿಯ ಬಗ್ಗೆ ಚರ್ಚಿಸುವುದಕ್ಕಾಗಿ ಆಯೋಜನೆಗೊಂಡಿದ್ದ ಸಭೆಯಲ್ಲಿ ಮೋದಿಯವರು ರಾಜ್ಯಗಳನ್ನು ಟೀಕಿಸಿದ್ದಾರೆ. ಮುಖ್ಯಮಂತ್ರಿಗಳಿಗೆ ತಮ್ಮ ನಿಲುವನ್ನು ಪ್ರತಿಪಾದಿಸಲು ಅವಕಾಶ ಇಲ್ಲದಲ್ಲಿ ಪ್ರಧಾನಿಯವರು ಸಮರ್ಥನೀಯವಲ್ಲದ ಆರೋಪಗಳನ್ನು ಮಾಡಿರುವುದು ಸರಿಯಲ್ಲ. ಪ್ರಧಾನಿಯವರು ಹೇಳಿರುವಂತೆ ಪೆಟ್ರೋಲ್–ಡೀಸೆಲ್ ದರದಲ್ಲಿ ಬಿಜೆಪಿ ಆಳ್ವಿಕೆಯ ರಾಜ್ಯಗಳು ಮತ್ತು ಬಿಜೆಪಿಯೇತರ ರಾಜ್ಯಗಳಲ್ಲಿ ಭಾರಿ ವ್ಯತ್ಯಾಸವೇನೂ ಇಲ್ಲ. ದರ ಕಡಿತದ ಪ್ರಯೋಜನವನ್ನು ಜನರಿಗೆ ವರ್ಗಾಯಿಸದೇ ಇರುವ ಮೂಲಕ ಬಿಜೆಪಿಯೇತರ ಪಕ್ಷಗಳ ಸರ್ಕಾರಗಳು ಜನರಿಗೆ ಅನ್ಯಾಯ ಮಾಡಿವೆ ಎಂದು ಮೋದಿ ಆರೋಪಿಸಿದ್ದಾರೆ. ಆದರೆ, ಇಂತಹ ಅನ್ಯಾಯವನ್ನು ಕೇಂದ್ರವೇ ಬಹಳ ಕಾಲದಿಂದ ಮಾಡಿಕೊಂಡು ಬಂದಿದೆ. ಪ್ರಧಾನಿಯವರೇ ಹೇಳಿದಂತೆ 'ಸಹಕಾರಿ ಒಕ್ಕೂಟ' ಎಂಬುದು ಇಲ್ಲಿ ಅನ್ವಯವೇ ಆಗುವುದಿಲ್ಲ. ಈ ವಿಚಾರದಲ್ಲಿ ಮತ್ತು ಇತರ ಹಲವು ವಿಚಾರಗಳಲ್ಲಿ ಒಕ್ಕೂಟದ ತತ್ವಗಳನ್ನು ಕೇಂದ್ರವು ಉಲ್ಲಂಘನೆ ಮಾಡಿದೆ. ದರ ಕಡಿತಕ್ಕೆ ಸಂಬಂಧಿಸಿ ಪ್ರಧಾನಿಯವರು ರಾಜಕೀಯ ಹೇಳಿಕೆ ನೀಡಿದ್ದಾರೆಯೇ ಹೊರತು ಉಪಯುಕ್ತ ಸಲಹೆ ಅಂತೂ ಖಂಡಿತ ಅಲ್ಲ. ಪೆಟ್ರೋಲಿಯಂ ಉತ್ಪನ್ನಗಳ ದರ ಕಡಿತ ಆಗಲೇಬೇಕು. ಆದರೆ, ಅದರ ದೊಡ್ಡ ಹೊಣೆಗಾರಿಕೆ ಕೇಂದ್ರದ ಮೇಲೆಯೇ ಇದೆ.

ದಿನದ ಟ್ವೀಟ್


ಆರೋಗ್ಯಕರ ಸ್ಪರ್ಧೆ ಇರಲಿ



ಭಾಷೆಗೆ ಸಂಬಂಧಿಸಿದಂತೆ ಕಿತ್ತಾಡಿಕೊಳ್ಳುವ ಬದಲು, ದೇಶದ ಎಲ್ಲ ನಟರು ಮತ್ತು ನಿರ್ದೇಶಕರ ನಡುವೆ ಪರಸ್ಪರ ಆರೋಗ್ಯಕರ ಸ್ಪರ್ಧೆ ಆರಂಭವಾದರೆ, ಎಲ್ಲ ಭಾಷೆಗಳಲ್ಲಿ ಒಬ್ಬರನ್ನೊಬ್ಬರು ಮೀರಿಸುವಂತಹ ಕಾರ್ಯ ಸಾಧ್ಯವಾದರೆ, ಪ್ರೇಕ್ಷಕರು ಎಲ್ಲ ಕಡೆಯಿಂದಲೂ ಎಲ್ಲ ಬಗೆಯ ರುಚಿಯನ್ನೂ ಆಸ್ವಾದಿಸಲು ಸಾಧ್ಯವಾಗುತ್ತದೆ. ಆ ಬಳಿಕ, ಯಾವುದು ಉತ್ತಮ ಮತ್ತು ಯಾರು ಉತ್ತಮ ಎಂಬುದನ್ನು ಭಾರತದ ಜನ ನಿರ್ಣಯಿಸಲಿ.

ರಾಮ್‌ಗೋಪಾಲ್ ವರ್ಮಾ, ಚಲನಚಿತ್ರ ನಿರ್ದೇಶಕ

ಕಿಡಿನುಡಿ



ಹಿಂದಿ ಹೇರಿಕೆಗೆ ಸಂಬಂಧಿಸಿದ ಚಿತ್ರಗಳು ಬೇಕಾದಲ್ಲಿ #stopHindiImposition ಹ್ಯಾಷ್‌ಟ್ಯಾಗ್ ಅನ್ನು ಟ್ವಿಟರ್/ಫೇಸ್‌ಬುಕ್‌ನಲ್ಲಿ ಸರ್ಚ್ ಮಾಡಿದ್ರೆ ನೂರಾರು ಚಿತ್ರಗಳು ಸಿಗಲಿವೆ. ಹಿಂದಿ ಹೇರಿಕೆ ಸಮರ್ಥನೆ ಮಾಡುವವರಿಗೆ ಈ ಚಿತ್ರಗಳ ಮೂಲಕ ಉತ್ತರ ನೀಡಬಹುದು.

ಅರುಣ್ ಜಾವಗಲ್, ಕನ್ನಡಪರ ಕಾರ್ಯಕರ್ತ

25 ವರ್ಷಗಳ ಹಿಂದೆ

ಬುಧವಾರ, 30-4-1997

- **ರಂಗ ಸರ್ಕಾರ ಸೇರಲು ಟಿಎಂಸಿ ನಿರ್ಧಾರ**

ಚೆನ್ನೈ, ಏ. 29 (ಯುಎನ್ಐ, ಪಿಟಿಐ)– ಕೇಂದ್ರ ಸಂಯುಕ್ತರಂಗ ಸರ್ಕಾರವನ್ನು ಸೇರಲು ತಮಿಳು ಮಾನಿಲ ಕಾಂಗ್ರೆಸ್ (ಟಿಎಂಸಿ) ನಿರ್ಧರಿಸಿದೆ. ಕಿಕ್ಕಿರಿದು ತುಂಬಿದ್ದ ಪತ್ರಿಕಾಗೋಷ್ಠಿಯಲ್ಲಿ ಪಕ್ಷದ ಅಧ್ಯಕ್ಷ ಜಿ.ಕೆ. ಮೂಪನಾರ್ ಅವರು ಇಂದು ಇಲ್ಲಿ ಈ ವಿಷಯವನ್ನು ಪ್ರಕಟಿಸಿದರು.

ಭಾನುವಾರ ನಡೆದ ಟಿಎಂಸಿ ಕಾರ್ಯಕಾರಿ ಸಭೆಯಲ್ಲಿ ಸಂಯುಕ್ತ ರಂಗ ಸರ್ಕಾರವನ್ನು ಸೇರುವ ಬಗ್ಗೆ ನಿರ್ಧರಿಸುವ ಜವಾಬ್ದಾರಿಯನ್ನು ಮೂಪನಾರ್ ಅವರಿಗೆ ನೀಡಲಾಗಿತ್ತು. ಸಂಯುಕ್ತ ರಂಗ ಸರ್ಕಾರವನ್ನು ಸೇರುವುದಕ್ಕೆ ಕಾರ್ಯಕಾರಿ ಸಮಿತಿಯ ಬಹುತೇಕ ಸದಸ್ಯರು ಭಾರಿ ವಿರೋಧ ವ್ಯಕ್ತಪಡಿಸಿದ್ದರು ಎಂದೂ ಹೇಳಲಾಗಿತ್ತು.

- **ನಕಲಿ ಛಾಪಾ ಕಾಗದ ಮಾರಾಟ ರಾಜ್ಯವ್ಯಾಪಿ ಜಾಲ ಶಂಕೆ**

ಬೆಂಗಳೂರು, ಏ. 29– ಕೊಡಗು ಜಿಲ್ಲೆಯ ಮಡಿಕೇರಿ ವಕೀಲರ ಸಹಕಾರ ಸಂಘದಲ್ಲಿ ಈಗ ಪತ್ತೆಯಾಗಿರುವ ನಕಲಿ ಛಾಪಾ ಕಾಗದಗಳ ಮಾರಾಟ ಜಾಲ ರಾಜ್ಯವ್ಯಾಪಿ ಹರಡಿರುವ ಪ್ರಬಲವಾದ ಶಂಕೆ ಪೊಲೀಸ್ ವಲಯದಲ್ಲಿ ವ್ಯಕ್ತವಾಗಿದೆ.

ಕಳೆದ ಎರಡು ವರ್ಷಗಳಿಂದ ನಡೆದಿದೆ ಎನ್ನಲಾದ ಈ ಹಗರಣದಲ್ಲಿ ಸರ್ಕಾರದ ಬೊಕ್ಕಸಕ್ಕೆ ಕೋಟ್ಯಂತರ ರೂಪಾಯಿ ವಂಚಿಸಲಾಗಿದೆ ಎನ್ನಲಾಗಿದೆ.

50 ವರ್ಷಗಳ ಹಿಂದೆ

ಭಾನುವಾರ, 30-4-1972

- **ರಾಜ್ಯಗಳಿಗೆ ಹೆಚ್ಚಿನ ಅಧಿಕಾರ ನೀಡಲು ವಿರೋಧ**

ಹೈದರಾಬಾದ್, ಏ. 29– ಹಿಂದುಳಿದ ರಾಜ್ಯಗಳಿಗೆ ಪ್ರತಿಕೂಲವಾಗುವ ಕಾರಣ ರಾಜ್ಯಗಳಿಗೆ ಹೆಚ್ಚಿನ ಅಧಿಕಾರ ಕೊಡಲು ಪ್ರಧಾನಿ ಇಂದಿರಾ ಗಾಂಧಿ ಅವರು ಇಂದು ಇಲ್ಲಿ ತಮ್ಮ ವಿರೋಧ ವ್ಯಕ್ತಪಡಿಸಿದರು.

ಅವರು ಬೆಂಗಳೂರಿಗೆ ಹೊರಡುವ ಮುನ್ನ ರಾಜಭವನದಲ್ಲಿ ಪತ್ರಿಕಾಗೋಷ್ಠಿಯನ್ನು ಉದ್ದೇಶಿಸಿ ಮಾತನಾಡಿದರು.

ಸಹಜ ಬಯಕೆ: ಹೆಚ್ಚಿನ ಅಧಿಕಾರಕ್ಕೆ ರಾಜ್ಯಗಳು ಬಯಸುವುದು ಸಹಜ. ಅದರಲ್ಲೂ ಆರ್ಥಿಕ ವಿಷಯದಲ್ಲಿ ಹೆಚ್ಚಿನ ಅಧಿಕಾರ ಇರಬೇಕೆಂಬುದು ರಾಜ್ಯಗಳ ಬಯಕೆ. ಹೆಚ್ಚು ಸಂಪನ್ಮೂಲಗಳನ್ನು ಪಡೆಯುವ ಶ್ರೀಮಂತ ರಾಜ್ಯವನ್ನು ಇತರ ಹಿಂದುಳಿದ ರಾಜ್ಯಗಳಿಗೆ ಹಾನಿ ಉಂಟುಮಾಡುವ ರೀತಿಯಲ್ಲಿ ತನ್ನ ಪಾಡಿಗೆ ತಾನು ನಡೆಯಲು ಬಿಡುವುದು ವಿವೇಕವಾಗುತ್ತದೆಯೇ ಎಂದು ಅವರು ಕೇಳಿದರು.

ಬದಲಾಗುತ್ತಿರುವ ಆಹಾರ ಪದ್ಧತಿ: ಬಿಳಿಗಿರಿರಂಗನ ಬೆಟ್ಟದ ಸೋಲಿಗರ ಕಥೆ

ಸೋಲಿಗರ ಆಹಾರ ಪದ್ಧತಿಗೆ ಸೋಲು?



ವಿಶ್ಲೇಷಣೆ

ಪ್ರೊ. ಶ್ರೀಲತಾ ರಾವ್ ಶೇಷಾದ್ರಿ
ಶೀತಲ್ ಪಾಟೀಲ್

ಚಾಮರಾಜನಗರದ ಬಳಿ ಇರುವ ಬಿಳಿಗಿರಿರಂಗನ ಬೆಟ್ಟವು (ಬಿ.ಆರ್. ಹಿಲ್ಸ್) ಶತ ಶತಮಾನಗಳಿಂದ ಸೋಲಿಗರೆಂಬ ವಿಶಿಷ್ಟ ಆದಿವಾಸಿ ಸಮುದಾಯಕ್ಕೆ ನೆಲೆಯಾಗಿದೆ. ಚಿರತೆ, ಹುಲಿ ಸೇರಿದಂತೆ ಅಸಂಖ್ಯ ಪ್ರಾಣಿಗಳು ಹಾಗೂ ಸುಮಾರು 200ರಷ್ಟು ಪ್ರಭೇದಗಳ ಪಕ್ಷಿಗಳಿಗೆ ಆವಾಸ ಸ್ಥಾನವಾಗಿರುವ ಬಿಳಿಗಿರಿರಂಗನ ಬೆಟ್ಟ, ದಟ್ಟ ಕಾಡುಗಳಿಂದ ಸುತ್ತುವರಿದಿದೆ. ಹಿಂದೆಲ್ಲಾ ಈ ಕಾಡುಗಳಿಂದಲೇ ಬೇಟೆ, ಆಹಾರ ಸಂಗ್ರಹ ಹಾಗೂ ಸ್ಥಳಾಂತರಿತ ಕೃಷಿ ಮೂಲಕ ತಮ್ಮ ಆಹಾರವನ್ನು ಸೋಲಿಗರು ಪಡೆದುಕೊಳ್ಳುತ್ತಿದ್ದರು. ಗೆಡ್ಡೆ ಗೆಣಸು, ಜೇನುತುಪ್ಪ, ವಿವಿಧ ಬಗೆಯ ಹಸಿರುಸೊಪ್ಪು, ತರಕಾರಿಗಳು, ಸೀಬೆ, ಪರಂಗಿ, ಹಲಸು, ನೆಲ್ಲಿಯಂಥ ಹಣ್ಣುಗಳು, ಜೊತೆಗೆ ಆಗಾಗ್ಗೆ ಬೇಟೆಯಾಡಿದ ಕಾಡುಹಂದಿ, ಜಿಂಕೆ ಅಥವಾ ಮೊಲದ ಮಾಂಸ ಅವರ ಆಹಾರ ಪದ್ಧತಿಯ ಅವಿಭಾಜ್ಯ ಭಾಗವಾಗಿದ್ದವು.

ಹುಲ್ಲು ಮತ್ತಿತರ ಸಸ್ಯಗಳು ಉತ್ತಮವಾಗಿ ಮರು ಚಿಗುರೊಡೆಯಲು ಅನುಕೂಲವಾಗುವಂತೆ ಬೆಂಕಿಯ ಸೂಕ್ತ ಬಳಕೆಯಿಂದ ಅರಣ್ಯ ಪ್ರದೇಶಗಳನ್ನು ತೆರವುಗೊಳಿಸಲಾಗುತ್ತಿತ್ತು. ಕಾಲಕ್ರಮೇಣ ಪರಿಸ್ಥಿತಿ ಬಹಳಷ್ಟು ಬದಲಾಗಿದೆ. 1960ರ ದಶಕದಿಂದ ಆರಂಭಿಸಿ, ಸೋಲಿಗರ ಗುಂಪುಗಳನ್ನು ಅವರ ಪೋಡು ಅಥವಾ ಅರಣ್ಯ ಹಾಡಿಗಳಿಂದ ಒಕ್ಕಲೆಬ್ಬಿಸಿ ಅರಣ್ಯದ ಅಂಚಿನಲ್ಲಿ ಸರ್ಕಾರ ಕಟ್ಟಿಸಿರುವ ವಸತಿ ಸಂಕೀರ್ಣಗಳಿಗೆ ಸ್ಥಳಾಂತರಿಸಲಾಗಿದೆ. 1974ರಲ್ಲಿ ಬಿ.ಆರ್. ಹಿಲ್ಸ್ ಅನ್ನು ವನ್ಯಜೀವಿ ಅಭಯಾರಣ್ಯ ಎಂದು ಘೋಷಿಸಲಾಯಿತು. ನಂತರ, ಹುಲಿ ಸಂರಕ್ಷಿತ ಪ್ರದೇಶ ಎಂದು ಘೋಷಿಸಲಾಯಿತು.


ತಮ್ಮ ಪಾರಂಪರಿಕ ಆಹಾರ ಮೂಲಗಳಿಗೆ ಹೆಚ್ಚಿನ ಸಂಪರ್ಕವಿಲ್ಲದಂತಾಗಿ ಅರಣ್ಯದ ಹೊರಗೆ ವಾಸಿಸುತ್ತಾ ಸೋಲಿಗರ ಆಹಾರ ವ್ಯವಸ್ಥೆಯು ಸಂಪೂರ್ಣವಾಗಿ ಬದಲಾಗಿಹೋಯಿತು. ಈ ಬದಲಾವಣೆಯ ಚಾಲಕಶಕ್ತಿಗಳಾವುವು ಹಾಗೂ ಅದರ ಪರಿಣಾಮ ಏನು? ಸುಮಾರು ಎರಡು ವರ್ಷಗಳ ಹಿಂದೆ, ಈ ವಿಚಾರದ ಕುರಿತು ಬೆಂಗಳೂರಿನ ಅಜೀಂ ಪ್ರೇಮ್‌ಜಿ ವಿಶ್ವವಿದ್ಯಾಲಯದ ಸಂಶೋಧಕರ ತಂಡ ಅಧ್ಯಯನವನ್ನು ಆರಂಭಿಸಿತು.

ಆಹಾರ ವ್ಯವಸ್ಥೆಗಳು ಯಾವುವು? ಸರಳವಾಗಿ ಹೇಳುವುದಾದರೆ, ಆಹಾರವನ್ನು ಹೇಗೆ ಉತ್ಪಾದಿಸಲಾಗುತ್ತದೆ ಹಾಗೂ ಬಳಸಲಾಗುತ್ತದೆ, ಆರೋಗ್ಯ ಹಾಗೂ ಪೌಷ್ಟಿಕತೆ ಮೇಲೆ ಅದರ ಪರಿಣಾಮವೇನು ಎಂಬುದರ ಜೊತೆಗೆ, ಅದರ ಸಾಮಾಜಿಕ, ಆರ್ಥಿಕ ಹಾಗೂ ಪರಿಸರಾತ್ಮಕ ಪರಿಣಾಮಗಳನ್ನು ಇವು ಒಳಗೊಳ್ಳುತ್ತವೆ. ಯಾವ ಆಹಾರ ಉತ್ಪಾದಿಸಲಾಗುತ್ತದೆ, ಹೇಗೆ ಅದನ್ನು ಉತ್ಪಾದಿಸಲಾಗುತ್ತದೆ ಅಥವಾ ಸಂಗ್ರಹಿಸಲಾಗುತ್ತದೆ ಎಂಬುದರಲ್ಲಾಗುವ ಬದಲಾವಣೆಯು ಬಳಸುವ ರೀತಿಯ ಮೇಲಷ್ಟೇ ಅಲ್ಲ ಆರೋಗ್ಯ ಹಾಗೂ ಪೌಷ್ಟಿಕತೆ ವಿಚಾರಗಳ ಮೇಲೂ ಪರಿಣಾಮ ಬೀರಬಲ್ಲದು.

ಸೋಲಿಗರು ತಮ್ಮ ಆಹಾರವನ್ನು ಉತ್ಪಾದಿಸುವ ಅಥವಾ ಸಂಗ್ರಹಿಸುವ ವಿಧಾನದಲ್ಲಿ ಈಗ ಮೂರು ರೀತಿಯ ಬದಲಾವಣೆಗಳಾಗಿವೆ: ಮೊದಲನೆಯದು, ಅರಣ್ಯ ಉತ್ಪನ್ನ ಸಂಗ್ರಹಿಸುವುದನ್ನು ತೀವ್ರವಾಗಿ ಕಡಿತಗೊಳಿಸಲಾಗಿದೆ ಹಾಗೂ ಬೇಟೆಯಾಡುವುದನ್ನು ಪೂರ್ಣವಾಗಿ ಸ್ಥಗಿತಗೊಳಿಸಲಾಗಿದೆ. ಅಗತ್ಯ ಸಸ್ಯಗಳು ಉತ್ತಮವಾಗಿ ಮರು ಚಿಗುರೊಡೆಯಲು ಅನುವಾಗುವಂತೆ ಅರಣ್ಯ ಪ್ರದೇಶಗಳನ್ನು ತೆರವುಗೊಳಿಸಲು ಬೆಂಕಿ ಬಳಸುವುದರ ಮೇಲೆ ನಿಷೇಧ ವಿಧಿಸಿದ್ದರ ಭಾಗಶಃ ಪರಿಣಾಮವಾಗಿ ಹಾಗೂ ಲಂಟಾನದಂತಹ ಆಕ್ರಮಣಕಾರಿ ಸಸ್ಯ ಪ್ರಭೇದಗಳು ಅನಿಯಂತ್ರಿತವಾಗಿ ಬೆಳೆದಿದ್ದರಿಂದಾಗಿ ತಿನ್ನಲು ಯೋಗ್ಯವಾದ ಹಲವು ಸಸ್ಯ, ಗೆಡ್ಡೆಗಳ ಬೆಳವಣಿಗೆಗೆ ಗಣನೀಯ ಪ್ರಮಾಣದಲ್ಲಿ ತೊಡಕುಂಟಾಗಿದೆ.

ಎರಡನೆಯದು, ಸ್ಥಿರವಾಗಿ ನೆಲೆ ನಿಂತು ಕೃಷಿ ಮಾಡುವುದು ಕಷ್ಟ ಎಂಬುದು ಸಾಬೀತಾಗಿದೆ. ಕಾಡುಪ್ರಾಣಿಗಳಿಂದ ಬೆಳೆಗಳ ನಿರಂತರ ನಾಶದಿಂದಾಗಿ ಹಲವು ಸೋಲಿಗರು ಕಾಫಿಯಂತಹ, ಹೆಚ್ಚು ತೊಂದರೆಗೆ ಸಿಲುಕದ ಬೆಳೆಗಳನ್ನು ಬೆಳೆಯಲು ಮುಂದಾಗುವಂತೆ ಮಾಡಿದೆ. ಈ ಸ್ಥಿತ್ಯಂತರವು ಪೌಷ್ಟಿಕ ಹಾಗೂ ಸಾಂಪ್ರದಾಯಿಕ ಆಹಾರದ ಅಂತರ್ಗತ ಭಾಗವಾದ ರಾಗಿಯಂತಹ ದಿನನಿತ್ಯದ ಮುಖ್ಯ ಆಹಾರಗಳ ಲಭ್ಯತೆ ಈಗ ಕಡಿಮೆಯಾಗುವುದಕ್ಕೆ ಕಾರಣವಾಗಿದೆ. ಹಾಗೆಯೇ, ಸುಗ್ಗಿಯ ಬೆಳೆಗಳ ಸಾಮುದಾಯಿಕ ಹಂಚಿಕೆಯ ಸಾಂಸ್ಕೃತಿಕ ಪದ್ಧತಿಗಳು ಅಪ್ರಸ್ತುತವಾಗಿವೆ.

ಅಂತಿಮವಾಗಿ, ಸರ್ಕಾರದ ಸಾರ್ವಜನಿಕ ವಿತರಣಾ ವ್ಯವಸ್ಥೆಯು (ಪಿಡಿಎಸ್) ಸೋಲಿಗ ಸಮುದಾಯಕ್ಕೆ ಆಹಾರ ಸಬ್ಸಿಡಿಯನ್ನು ಯಶಸ್ವಿಯಾಗಿ ವಿಸ್ತರಿಸಿದೆ. ಒಂದಿಷ್ಟು ರಾಗಿಯೊಂದಿಗೆ ಹೆಚ್ಚಾಗಿ ಅಕ್ಕಿಯನ್ನು ಅವರೀಗ ಪಡೆದುಕೊಳ್ಳುತ್ತಾರೆ. ಮಳೆಗಾಲದ ಆರು ತಿಂಗಳುಗಳಲ್ಲಿ ಮೊಟ್ಟೆ, ಸಕ್ಕರೆ, ಬೇಳೆಕಾಳುಗಳು ಹಾಗೂ ತುಪ್ಪದ ಪೂರಕ ಪಡಿತರಗಳನ್ನೂ ಅವರು ಪಡೆದುಕೊಳ್ಳುತ್ತಾರೆ. ಇದು ಮುಖ್ಯವಾದ ಪೌಷ್ಟಿಕತೆಯನ್ನು ಒದಗಿಸುತ್ತದೆಯಾದರೂ ಈ ಹಿಂದೆ ಈ ಸಮುದಾಯವು ಒಗ್ಗಿಕೊಂಡಿದ್ದ ವೈವಿಧ್ಯಮಯ ಆಹಾರ ಪದ್ಧತಿಗೆ ಬದಲಿಯಾಗಲಾರದು. ಜೊತೆಗೆ ಇದು ಕಾರ್ಬೊಹೈಡ್ರೇಟ್ ಹೆಚ್ಚಿರುವ ಆಹಾರ ಪದ್ಧತಿಗೆ ದಾರಿ ಮಾಡಿಕೊಡಲಿದೆ.



ಈಗ ಸೋಲಿಗ ಸಮುದಾಯದವರು ತಿನ್ನುವಂಥ ಆಹಾರ ಪದಾರ್ಥಗಳನ್ನು ವಿಶ್ಲೇಷಿಸಿದಲ್ಲಿ ಅದು ಬೆಂಗಳೂರಿಗರು ತಿನ್ನುವ- ಚಿತ್ರಾನ್ನ, ಪುಳಿಯೋಗರೆ, ಇಡ್ಲಿ, ದೋಸೆಗಳಿಗಿಂತ ಭಿನ್ನವಾಗಿರುವುದಿಲ್ಲ ಎಂಬುದನ್ನು ತೋರಿಸುತ್ತದೆ. ಸುಂಡೆಕಾಯಿ, ಅರಗೆಸೊಪ್ಪು, ಬಿದಿರು, ಅರೆಹಣ್ಣು, ಗೆಣಸಿನಿಂದ ಮಾಡಿದ ಯಾವುದೇ ಸಾಂಪ್ರದಾಯಿಕ ಆಹಾರ ಪದಾರ್ಥಗಳ ಪ್ರಸ್ತಾಪವೇ ಇಲ್ಲಿಲ್ಲ. ಇವು ವಿಶೇಷ ಸಂದರ್ಭಗಳಿಗೆ ಮಾತ್ರ ಮೀಸಲು. ಇದಕ್ಕೆ ಮುಖ್ಯ ಕಾರಣ, ಕಾಡಿನ ಹೊರಗೆ ಈ ಉತ್ಪನ್ನಗಳನ್ನು ಸಂಗ್ರಹಿಸುವಲ್ಲಿನ ಕಷ್ಟ. ಮತ್ತೊಂದು ಕಾರಣವೆಂದರೆ, ಪಡಿತರ ವ್ಯವಸ್ಥೆ ಮೂಲಕ ಅಕ್ಕಿಯ ಲಭ್ಯತೆಯು ಅದನ್ನೇ ಮುಖ್ಯ ಆಹಾರವನ್ನಾಗಿಸಿದೆ. ಕಿರುಧಾನ್ಯಗಳು ದುಬಾರಿ, ಜೊತೆಗೆ ಬೇಯಿಸಲು ಹೆಚ್ಚು ಕಷ್ಟಪಡಬೇಕು. ಮೂರನೆಯ ಕಾರಣ, ಮಾಧ್ಯಮ (ಮುಖ್ಯವಾಗಿ ಟೀವಿ) ಅಥವಾ ಪ್ರವಾಸಿಗರು ಹಾಗೂ ಸಂದರ್ಶಕರ ಮೂಲಕ ಹೊಸ ಆಹಾರ ಉತ್ಪನ್ನಗಳಿಗೆ ತೆರೆದುಕೊಳ್ಳುವುದು. 'ಪೋಡು'ಗಳ ಬಳಿ ಪೊದೆಗಳಲ್ಲಿ ಬಿಸಾಕಿರುವ ಖಾಲಿಯಾದ ಚಿಪ್ಸ್, ನೂಡಲ್ಸ್‌ನಂತಹ ಪ್ಯಾಕೆಟ್‌ಗಳು ಕಾಣಸಿಗುವುದು ಮಾಮೂಲು.

ಸಾಮಾನ್ಯ ಜನರಿಗೆ ಸಂಬಂಧಿಸಿದಂತೆ ಆಹಾರ ಭದ್ರತೆ ಹಾಗೂ ಪೌಷ್ಟಿಕತೆ ಪರಿಣಾಮಗಳ ಬಗ್ಗೆ ಅಂಕಿಅಂಶಗಳು ಲಭ್ಯವಿದ್ದರೂ ಆದಿವಾಸಿ ಸಮುದಾಯಗಳ ಬಗ್ಗೆ ಅಂತಹ ಮಾಹಿತಿಯು ವಿರಳ ಹಾಗೂ ಕಂಡುಕೊಳ್ಳುವುದೂ ಕಷ್ಟದಾಯಕ. ಹೀಗಾಗಿ, ಸಾಮಾನ್ಯವಾದ ಪೌಷ್ಟಿಕತೆ ಅಳತೆಗೋಲುಗಳ ಮೇಲೆ- ವಯಸ್ಸಿಗೆ ತಕ್ಕಷ್ಟಿಲ್ಲದ ಎತ್ತರ ಹಾಗೂ ವಯಸ್ಸಿಗೆ ತಕ್ಕ ತೂಕ ಇಲ್ಲದಿರುವುದರ ಮೇಲೆ ದೀರ್ಘಕಾಲೀನ ಪರಿಣಾಮಗಳನ್ನು ಅಳೆಯುವುದು ಕಷ್ಟ; ಹಾಗೆಯೇ ಹೃದಯ ಕಾಯಿಲೆ ಹಾಗೂ ಕ್ಯಾನ್ಸರ್‌ನಂತಹ ತೀವ್ರ ಕಾಯಿಲೆಗಳ ಹರಡುವಿಕೆಯೂ ಕಾಲಕ್ರಮೇಣ ಬದಲಾಗಿದೆಯೇ ಎಂಬುದನ್ನೂ ಅಳೆಯುವುದು ಕಷ್ಟ. ಆದರೆ, ಅಂತಹ ಆಹಾರ ಪದ್ಧತಿಗಳ ಬದಲಾವಣೆಗಳಿಂದ ಆಗುವ ಪರಿಣಾಮಗಳ ಬಗ್ಗೆ ನಮಗೆ ಗೊತ್ತಿರುವ ಅಂಶಗಳಿಂದ ಊಹಿಸುವುದಾದಲ್ಲಿ ಇದು ಹೆಚ್ಚಿನ ಮಟ್ಟಿಗೆ ನಕಾರಾತ್ಮಕವಾಗಿರುತ್ತದೆ ಎನ್ನಬಹುದು. ಸೋಲಿಗರ ಈ ವಿದ್ಯಮಾನವು ರಾಷ್ಟ್ರದಾದ್ಯಂತ ಎಲ್ಲಾ ಆದಿವಾಸಿ ಸಮುದಾಯಗಳಲ್ಲಿ ಅನುರಣಿಸಿದೆ.

ಕಡೆಯದಾಗಿ, ನಾವು ಕಂಡುಕೊಂಡಿರುವುದೇನೆಂದರೆ, ಸರ್ಕಾರದ ನೀತಿಗಳು ಹಾಗೂ ಕಾರ್ಯಕ್ರಮಗಳು ದೂರಗಾಮಿ ಪರಿಣಾಮಗಳನ್ನು ಹೊಂದಿವೆ. ಉದಾಹರಣೆಗೆ, ಬೆಟ್ಟಗಳ ನೈಸರ್ಗಿಕ ಪರಿಸರ ಉಳಿಸಿ ಸಂರಕ್ಷಿಸಿ ಹುಲಿಗೆ ಸುರಕ್ಷಿತ ತಾಣ ಒದಗಿಸ ಬಯಸುವ ನೀತಿಗಳು ಸೋಲಿಗ ಆಹಾರ ಪದ್ಧತಿಯ ವೈವಿಧ್ಯ ಹಾಗೂ ಲಭ್ಯತೆಯ ಮೇಲೆ ಆಳವಾದ ಪರಿಣಾಮಗಳನ್ನು ಬೀರಿವೆ. ಹೀಗಾಗಿ ವಿಸ್ತೃತವಾದ, ಹೆಚ್ಚು ಒಳಗೊಳ್ಳುವ ದೃಷ್ಟಿ ಅಗತ್ಯ. ಸಮುದಾಯ ಹಾಗೂ ಸಮುದಾಯದ ಪ್ರತಿನಿಧಿಗಳಿಗೆ ದನಿ ನೀಡುವುದಲ್ಲದೆ ಬಹುವಲಯಗಳ ಭಾಗೀದಾರರನ್ನು ಒಂದೆಡೆ ತರುವುದರಿಂದ ಸರ್ಕಾರದ ಕ್ರಮಗಳು ಅಪೇಕ್ಷಿತ ಫಲಿತಾಂಶ ನೀಡಬಲ್ಲವು.

ಲೇಖಕಿಯರು: ಶ್ರೀಲತಾ ರಾವ್ ಶೇಷಾದ್ರಿ– ಪ್ರಾಧ್ಯಾಪಕಿ, ರಾಮಲಿಂಗಸ್ವಾಮಿ ಸೆಂಟರ್ ಫಾರ್ ಈಕ್ವಿಟಿ ಆ್ಯಂಡ್ ಸೋಷಿಯಲ್ ಡಿಟರ್ಮಿನೆಂಟ್ಸ್ ಆಫ್ ಹೆಲ್ತ್, ಬೆಂಗಳೂರು. ಶೀತಲ್ ಪಾಟೀಲ್– ಹಿರಿಯ ಸಂಶೋಧಕಿ, ಅಜೀಂ ಪ್ರೇಮ್‌ಜಿ ವಿಶ್ವವಿದ್ಯಾಲಯ, ಬೆಂಗಳೂರು

ಚುರುಮುರಿ



ಉಚಿತ ಪ್ರಯಾಣ

• ಆನಂದ

'ನಾನು ಬಾಂಬೇಲಿ ಇದ್ದಾಗ...' ಎನ್ನುತ್ತಿದ್ದಂತೆ ಹೆಂಡತಿ 'ಶುರುವಾಯಿತಾ ನಿಮ್ಮ '50 ವರ್ಷಗಳ ಹಿಂದೆ ಕಾಲಂ' ಎಂದು ಛೇಡಿಸಿ 'ಸರಿ ಶುರುಮಾಡಿ' ಎಂದಳು.

'ಒಂದಿಷ್ಟು ಜನ ಲೋಕಲ್ ಟ್ರೇನ್‌ನಲ್ಲಿ ಟಿಕೆಟ್ ಇಲ್ಲದೆ ಪ್ರಯಾಣಿಸುತ್ತಿದ್ದರು ಪ್ರತೀ ದಿನ'.

'ಪ್ರತೀ ದಿನ? ಸಿಕ್ಕಿಬೀಳ್ತಿರಲಿಲ್ಲವೇ?'

'ಇಲ್ಲ, ಏಕೆಂದರೆ ಅವರಿಗೆ ಇನ್‌ಶ್ಯೂರೆನ್ಸ್ ಇತ್ತು...'

'ಇನ್‌ಶ್ಯೂರೆನ್ಸ್?!'

'ಮಟ್ಕಾ ತರಹ ಒಬ್ಬ ದಾದ ಆ ಇನ್‌ಶ್ಯೂರೆನ್ಸ್ ದಂಧೆ ನಡೆಸ್ತಿದ್ದ. ಶೇ 100 ಖಾಸಗಿ'.

'ಇಂಟರೆಸ್ಟಿಂಗ್ ಆಗಿದೆ, ಮುಂದುವರಿಸಿ' ಎಂದಳು.

'ಪ್ರತೀ ತಿಂಗಳು ಅವನಿಗೆ 10 ರೂಪಾಯಿ ಶುಲ್ಕ ಕಟ್ಟಿದರೆ ಆಯಿತು. ಫ್ರೀ ಟ್ರಾವೆಲ್ ಗ್ಯಾರಂಟಿ'.

'ಮತ್ತೆ ಸಿಕ್ಕಿಬಿದ್ದರೆ?'

'ದಂಡ ಹಾಕ್ತಾರೆ. ದಂಡ ಕಟ್ಟಿದ ರಸೀದಿ ದಾದಾನಿಗೆ ತೋರಿಸಿದರೆ ಆ ಹಣ ಫುಲ್ ರೀಫಂಡ್'.

'ಅವನಿಗೇನು ಲಾಭ ಇದರಿಂದ?'

'ಸಿಂಪಲ್ ಗಣಿತ ಮೇಡಂ. ದಾದಾನಿಗೆ ಪ್ರತೀ ತಿಂಗಳು 1,000 ಮಂದಿ ಹತ್ತತ್ತು ರೂಪಾಯಿ ಕೊಡ್ತಾರೆ. ಅಂದರೆ ಅವನ ಮಾಸಿಕ ಆದಾಯ 10,000. ಅವರಲ್ಲಿ ಟಿಕೆಟ್ ಇಲ್ಲದೆ ಪ್ರಯಾಣಿಸಿದ್ದಕ್ಕೆ ಸಿಕ್ಕಿ ಬೀಳುವವರು 100 ಮಂದಿ ಸಹ ಇರೋಲ್ಲ. ಅವರೆಲ್ಲರ ದಂಡವನ್ನ ಈ ದಾದ ಕಟ್ತಾನೆ. ಅದು 3-4 ಸಾವಿರ ಅಂತ ಇಟ್ಕೊ. ಉಳಿದ 6-7 ಸಾವಿರ ಅವನಿಗೆ ನೀಟ್ ಪ್ರಾಫಿಟ್'.

'ಅವನು ಸಿಕ್ಕಿ ಬೀಳೊಲ್ಲವೆ?'

'ದಾಖಲೆ ಇರೊಲ್ಲ. ಎಲ್ಲ ಬಾಯಿಮಾತಿನ ವ್ಯವಹಾರ. ಬ್ಲ್ಯಾಕ್‌ಮನಿ ದಂಧೆಯಂತೆ'.

'ಅದನ್ನೀಗ್ಯಾಕೆ ನೆನಪಿಸಿಕೊಂಡಿರಿ?'

'ಅದೇ ಈ ಪಿಎಸ್ಐ ಮತ್ತು ಇತರ ನೇಮಕಾತಿ ಹಗರಣಗಳ ಬಗ್ಗೆ ಓದ್ತಾ ಇದ್ದಾಗ ಅದು ನೆನಪಿಗೆ ಬಂತು ನೋಡು'.

'ಅಂದಹಾಗೆ ನೀವೂ 10 ರೂಪಾಯಿ ಕೊಟ್ಟು ಟಿಕೆಟ್ ಇಲ್ಲದೆ ಪ್ರಯಾಣ ಮಾಡ್ತಿರಲಿಲ್ಲ ತಾನೆ?'

'ಛೆ ಛೇ ಶಾಂತಂ ಪಾಪಂ. ನಾನು ಪ್ರತೀ ದಿನ ಟಿಕೆಟ್ ಕೊಂಡೇ ರೈಲು ಹತ್ತುತ್ತಿದ್ದೆ' ಎಂದೆ.

ಸಂಗತ

ಮುದ್ದು ಮಾಡೋಣ, ಮಾನವೀಯವಾಗೋಣ!

ಷರತ್ತಿಲ್ಲದೆ ನಮ್ಮನ್ನು ಪ್ರೀತಿಸುವ ಸಾಕುಪ್ರಾಣಿಗಳು ನಮ್ಮ ಮನಸ್ಸನ್ನು ನಿರಾಳವಾಗಿ ಇರಿಸುತ್ತವೆ

• ಬಿ.ಎಸ್.ಭಗವಾನ್

ಪಾಳು ಮನೆಯೆಂದು ಹಿಂದೊಮ್ಮೆ ತೊರೆದವರಿಗೆ ಅಲ್ಲಿ ಬೆಕ್ಕಿನ ಮಿಯಾಂವ್ ಧ್ವನಿ ಕೇಳಿಸುತ್ತದೆ. ಒಡನೆಯೆ ಅವರು ಆ ಮನೆಗೆ ವಾಪಸಾಗಲು ನಿರ್ಧರಿಸುತ್ತಾರೆ. ಇದು ಸಾಕುಪ್ರಾಣಿಗಳಿಗೂ ಮನುಷ್ಯರಿಗೂ ಇರುವ ಅವಿನಾಭಾವ ನಂಟನ್ನು ಅನಾವರಣಗೊಳಿಸುವ ಚಿತ್ರಣ. ಸಾಕುಪ್ರಾಣಿಗಳು ಮಾನವೀಯವಲ್ಲ, ನಿಜ. ಆದರೆ ಮನುಷ್ಯನ ಹಲವು ಗುಣಗಳನ್ನು ಮೈಗೂಡಿಸಿಕೊಂಡ ಅವು ದಿಟ್ಟ ವ್ಯಕ್ತಿತ್ವದವು. ಅವುಗಳ ಸಂವೇದನೆಗಳು, ಆದ್ಯತೆಗಳು ಗಾಢವಾದವು.

ಇತರರ ದೃಷ್ಟಿಯಲ್ಲಿ ನಾಯಿ, ಬೆಕ್ಕು, ಮೊಲ, ಗಿಣಿ, ಪಾರಿವಾಳ ಮೊದಲಾದವು ಸಾಕಿದ ಪ್ರಾಣಿಗಳು. ಆದರೆ ಅವನ್ನು ಹೊಂದಿರುವವರಿಗೆ ಅವು ಕುಟುಂಬದ ಸದಸ್ಯರು. ಸಾಕುಪ್ರಾಣಿಗಳು ಷರತ್ತಿಲ್ಲದೆ ಪ್ರೀತಿಸುತ್ತವೆ. ತಮ್ಮನ್ನು ಸಾಕಿದ ಒಡೆಯನಿಗೆ ಪ್ರತಿಫಲಾಪೇಕ್ಷೆಯಿಲ್ಲದೆ ತಮ್ಮ ಸರ್ವಸ್ವವನ್ನೂ ಅರ್ಪಿಸುತ್ತವೆ. ಸಾಕುಪ್ರಾಣಿಗಳು ನಮ್ಮ ಮನಸ್ಸನ್ನು ನಿರಾಳವಾಗಿಯೂ ಇರಿಸುತ್ತವೆ. ತನ್ಮೂಲಕ ನಮ್ಮನ್ನು ಆರೋಗ್ಯವಾಗಿ ಇರಿಸುತ್ತವೆ.

ಮುದ್ದುಪ್ರಾಣಿಗಳೊಂದಿಗೆ ಸಂವಹನ ಕಷ್ಟವೆಂದು ಹಲವರ ಅಂಬೋಣ. ಹಾಗೆ ನೋಡಿದರೆ ಮನುಷ್ಯ-ಮನುಷ್ಯರ ನಡುವೆ ತಾನೆ ಅದೆಷ್ಟು ಸುಗಮ ಸಂವಹನ ಸಾಧ್ಯವಾಗಿದೆ? ನಾಯಿಯು ಮನುಷ್ಯನ ಒಡನಾಡಿಯಾಗಿದೆ. ತನ್ನೊಡೆಯನ ಅಳು, ನಗುವಿನಲ್ಲಿ ಒಂದಾಗುತ್ತದೆ. ಶ್ವಾನಗಳು ತಮ್ಮನ್ನು ಅರ್ಥೈಸಿಕೊಳ್ಳುವುದು ಹೇಗೆಂದು ಮನುಷ್ಯರಿಗೆ ಬೋಧಿಸುತ್ತವೆ.


ಅಮೆರಿಕದ ಪ್ರಸಿದ್ಧ ಕಾದಂಬರಿಕಾರ ಮತ್ತು ಹಾಸ್ಯಪಟು ಕಿಂಕಿ ಫ್ರೈಡ್‌ಮನ್ 'ಹಣ ತೆತ್ತು ಒಳ್ಳೆಯ ನಾಯಿ ಕೊಳ್ಳಬಹುದು. ಆದರೆ ಅದು ಬಾಲ ಅಲ್ಲಾಡಿಸುವುದು ಮನುಷ್ಯ ಅದರ ಮೇಲಿಟ್ಟ ಪ್ರೀತಿ ಮತ್ತು ವಿಶ್ವಾಸದಿಂದಲೇ' ಎನ್ನುತ್ತಾರೆ.

ಎಲ್ಲ ಪ್ರಾಣಿಗಳಿಗೂ ಗೌರವಯುತವಾಗಿ ಬದುಕುವ ಹಕ್ಕಿದೆ. 1959ರಲ್ಲಿ ಸ್ಪೇನ್‌ನಲ್ಲಿ 'ವಿಶ್ವ ಪಶುವೈದ್ಯಕೀಯ ಸಂಘ' (ಡಬ್ಲ್ಯುವಿಎ) ಸ್ಥಾಪಿತವಾಯಿತು. 2000ದಲ್ಲಿ ಸಾಕುಪ್ರಾಣಿಗಳ ಯೋಗಕ್ಷೇಮದ ನಿಗಾ ದೃಷ್ಟಿಯಿಂದ ಪ್ರತೀ ವರ್ಷ ಏಪ್ರಿಲ್ ಕೊನೆಯ ಶನಿವಾರ 'ವಿಶ್ವ ಪಶುವೈದ್ಯಕೀಯ ದಿನ' ಆಚರಿಸಬೇಕೆಂದು ಸಂಘ ನಿರ್ಣಯಿಸಿತು. ಈ ಬಾರಿ ಇಂದು (ಏ.30) ಆ ಸಂಭ್ರಮ. ಪ್ರಾಣಿಗಳ ಆರೋಗ್ಯ ಪಾಲನೆಯಲ್ಲಿ ಮತ್ತು ಪ್ರಾಣಿಗಳ ಮೇಲಿನ ಕ್ರೌರ್ಯ ತಡೆಗಟ್ಟುವಲ್ಲಿ ಶ್ರೀಸಾಮಾನ್ಯರ ಹೊಣೆಗಾರಿಕೆಗಳ ಕುರಿತು ಜಾಗೃತಿ ಮೂಡಿಸುವುದೇ ಈ ಸಂದರ್ಭದ ಧ್ಯೇಯ. 'ಪಶುವೈದ್ಯಕೀಯ ಶುಶ್ರೂಷೆಯ ಸಬಲೀಕರಣ' ಘೋಷಣಾ ವಾಕ್ಯದೊಂದಿಗೆ ಅಭಿಯಾನ. ನಾಯಿಯೊಡನೆ ನಡಿಗೆ, ಮೊಲದೊಂದಿಗೆ ಸೂರ್ಯಸ್ನಾನ, ಬೆಕ್ಕಿನೊಂದಿಗೆ ಆಟ, ಗಿಳಿಯನ್ನು ಹೆಗಲಿಗೇರಿಸಿಕೊಳ್ಳುವುದು ಚೇತೋಹಾರಿ.

ಸಾಕುಪ್ರಾಣಿಗಳನ್ನು ಖರೀದಿಸುವ ಬದಲು ಅನಾಥವಾಗಿ ಅಡ್ಡಾಡುತ್ತಾ ಇರುವ ಪ್ರಾಣಿಗಳನ್ನು ಸಾಕುವುದರಿಂದ ಅವಕ್ಕೆ ಸುರಕ್ಷಿತ ಸ್ಥಳಾವಕಾಶ, ಪೌಷ್ಟಿಕ ಆಹಾರ, ಶುದ್ಧ ನೀರು ಒದಗುವುದು. ಜೊತೆಗೆ ಆರೋಗ್ಯ ಸೇವೆಯೂ ಲಭಿಸೀತು. ಉತ್ಸವ, ವಿಜಯೋತ್ಸವಗಳೇ ಇರಲಿ ಅಥವಾ ಪ್ರತಿಭಟನೆ, ರ‍್ಯಾಲಿಗಳೇ ಇರಲಿ ಪ್ರಾಣಿಗಳನ್ನು ಕೈಬಿಡುವುದೇ ಯುಕ್ತ. ಇಂತಲ್ಲಿ ಅಮಾಯಕ ಪ್ರಾಣಿಗಳ ಸಹಭಾಗಿತ್ವಕ್ಕೆ ಏನಾದರೂ ಅರ್ಥವಿದೆಯೇ? ಅವಕ್ಕೆ ವೃಥಾ ಹಿಂಸೆ, ಶಿಕ್ಷೆಯೇ ಹೌದು.

ಮಕ್ಕಳನ್ನು ಉದ್ಯಾನ, ಪ್ರಾಣಿಧಾಮಗಳಿಗೆ ಕರೆದೊಯ್ಯುವಾಗ ಪೋಷಕರು ಆನೆ, ಕುದುರೆ, ಒಂಟೆ ಮೇಲಿನ ಧಿಮಾಕು ಸವಾರಿ, ಸಫಾರಿಗೆ ಆಕರ್ಷಿತರಾಗಬಾರದು. ಮೃಗಾಲಯ, ಸರ್ಕಸ್ ಮನುಷ್ಯರ ಅರಿವಿಗೆ ವಿನಾ ಮನರಂಜನೆಗಲ್ಲ. ಜನಪದರು ಮನೆಯ ಮುಂಬಾಗಿಲಿನಲ್ಲಿ ಕಾಳು, ಹಣ್ಣಿನ ಸಿಪ್ಪೆ ಚೆಲ್ಲುತ್ತಿದ್ದರು. ನೀರು ತುಂಬಿಸಿದ ಕಲ್ಲುತೊಟ್ಟಿ ಇರಿಸುತ್ತಿದ್ದರು. ಬೀಡಾಡಿ ದನ, ಎಮ್ಮೆಗಳಾದಿಯಾಗಿ ಪ್ರಾಣಿ ಪಕ್ಷಿಗಳು ಅಲ್ಲಿಗೆ ಬಂದು ಅಷ್ಟು ಹಸಿವು, ನೀರಡಿಕೆ ನಿವಾರಿಸಿಕೊಳ್ಳುತ್ತಿದ್ದವು. ಅಪರೂಪಕ್ಕಾದರೂ ಮಹಾನಗರಗಳಲ್ಲೂ ಈ ಪರಿಪಾಟ ಕಾಣಬಹುದು.

ಕೋಗಿಲೆ ಶ್ರೇಷ್ಠ, ಕಾಗೆ ಕನಿಷ್ಠ ಎನ್ನುವ ಭೇದ ಪ್ರಕೃತಿಗಿಲ್ಲ. ಅಂತೆಯೆ ಗೂಬೆ ಅನಿಷ್ಟವಾಗಲು ಸಾಧ್ಯವಿಲ್ಲ. ವಾಸ್ತವವೆಂದರೆ ಗೂಬೆ ಹೊಲಗದ್ದೆಗಳಲ್ಲಿ ವಿಶೇಷವಾಗಿ ಇರುಳಿನಲ್ಲಿ ಅಡ್ಡಾಡುವ ಇಲಿ, ಹೆಗ್ಗಣಗಳನ್ನು ಭಕ್ಷಿಸಿ ಬದುಕುತ್ತದೆ. ಪರಿಸರ ಸಮತೋಲನವನ್ನು ಕಾಪಾಡುವ ಅದು ರೈತನ ಮಿತ್ರ. ಯಾವುದೇ ಸಾಕುಪ್ರಾಣಿಯನ್ನು ಕಳೆದುಕೊಳ್ಳುವುದೆಂದರೆ ಮನೆ ಮಂದಿಯನ್ನು ಕಳೆದುಕೊಂಡಷ್ಟೇ ಯಾತನಾಮಯ. ಏಕೆಂದರೆ ನಾವು ಅವನ್ನು ಪ್ರೀತಿಸುತ್ತಿರುತ್ತೇವೆ, ಪ್ರೀತಿಸುವಂತೆ ನಟಿಸುವುದಿಲ್ಲ!



ಪ್ರಾಣಿನಿಂದನೆ ಬಹುರೂಪಿ. ತಮ್ಮ ಶ್ವಾನವನ್ನು ಅದಕ್ಕೂ ಬಲಿಷ್ಠ ಪ್ರಾಣಿಗಳ ಬೇಟೆ, ನಿಯಂತ್ರಣಕ್ಕೆ ಬಳಸಿದರೂ ನಿಂದನೆಯೆ. 'ಅತ್ತೆ ಮೇಲಿನ ಕೋಪ ಕೊತ್ತಿಯ ಮೇಲೆ' ಎನ್ನುವಂತೆ ಯಾರದೋ ಮೇಲಿನ ದ್ವೇಷಕ್ಕೆ ಸಾಕುಪ್ರಾಣಿಗಳು ವಿನಾಕಾರಣ ಹೊಡೆತ, ಬಡಿತಕ್ಕೆ ಗುರಿಯಾಗುವುದುಂಟು. ಇಂಥ ಯಾವುದೇ ನಿಂದನೆಯು ಮನೆ ಮಕ್ಕಳ ಮನಸ್ಸಿನ ಮೇಲೆ ದುಷ್ಪರಿಣಾಮ ಬೀರುವುದು. ತಮ್ಮ ಶ್ವಾನವೇ ಚುರುಕೆಂಬ ಬೀಗು ಅಸಹಾಯಕ ಬೀದಿ ನಾಯಿಗಳನ್ನು ಹೆದರಿಸುವಲ್ಲಿ ಪರ್ಯಾಪ್ತವಾಗಬೇಕೇ?

ತಾಸಿಗೆ ಸರಾಸರಿ ಮೂರು ಕಿ.ಮೀ. ವೇಗದಲ್ಲಿ ಸಾಗುವ ಸಾಂಪ್ರದಾಯಿಕ ಜೋಡೆತ್ತಿನ ಗಾಡಿಯೊಂದು ಒಂದು ಟನ್ನಿಗಿಂತಲೂ ಹೆಚ್ಚಿನ ಭಾರ ಎಳೆಯಲಾಗದು. ಉಸಿರುಗಟ್ಟಿಸುವಷ್ಟು ಅಧಿಕ ಹೊರೆ ಪೇರಿಸುವುದಲ್ಲದೆ ಹೆಚ್ಚಿನ ತಾಸುಗಳು ಎಳೆತದಲ್ಲಿ ತೊಡಗಿಸುವ ಸಂದರ್ಭಗಳೇ ಹೆಚ್ಚು. ಸಾಗಾಣಿಕೆಗೆ ಬಳಸುವ ಎಲ್ಲ ಪ್ರಾಣಿಗಳ ಕಥೆಯೂ ಇದೇ. ಬಳಕೆ ಮಾನವೀಯವಾದರೆ ನಮಗೇ ಆತ್ಮತೃಪ್ತಿ. ಮರದ ಚಕ್ರಗಳ ಬದಲು ಟಯರ್ ಚಕ್ರಗಳ ಅಳವಡಿಕೆ ಪ್ರಾಣಿದಯೆಯತ್ತ ದಿಟ್ಟ ಹೆಜ್ಜೆ.

ವಾಚಕರ ವಾಣಿ

ಮತ್ತೆ ಬೇಕೇ ಸೀಲ್‌ಡೌನ್?

ಕೊರೊನಾ ನಾಲ್ಕನೇ ಅಲೆ ಬರುತ್ತಿದೆ ಎಂಬ ಸುದ್ದಿ ಕೇಳಿಬರುತ್ತಿದ್ದರೂ ನಮ್ಮ ಜನ ಮಾತ್ರ ಇದಕ್ಕೆ ಎಳ್ಳಷ್ಟೂ ಸೊಪ್ಪು ಹಾಕುತ್ತಿಲ್ಲ. ಎರಡು ವರ್ಷಗಳ ಕಾಲ ನಿಂತುಹೋಗಿದ್ದ ಸಭೆ ಸಮಾರಂಭಗಳು, ಜಾತ್ರಾ ಮಹೋತ್ಸವಗಳು ಎಗ್ಗಿಲ್ಲದೇ ನಡೆಯುತ್ತಿವೆ. ಸಾವಿರಾರು ಜನ ಕೊರೊನಾ ನಿಯಮಗಳನ್ನು ಗಾಳಿಗೆ ತೂರಿ ಒಂದೆಡೆ ಸೇರಿ ಮನಬಂದಂತೆ ವರ್ತಿಸುತ್ತಿದ್ದಾರೆ. ಇದನ್ನು ನೋಡಿದರೆ ದಿಗ್ಭ್ರಮೆಯಾಗುತ್ತದೆ. ಜನರಲ್ಲಿ ಈ ಬಗ್ಗೆ ಅರಿವು ಮೂಡಿಸಬೇಕಿದ್ದ ಜನಪ್ರತಿನಿಧಿಗಳು ಅದನ್ನೆಲ್ಲಾ ಮರೆತು ಚುನಾವಣಾ ತಯಾರಿಯಲ್ಲಿ ಮೈಮರೆತಿದ್ದಾರೆ.

ಕೊರೊನಾ ಎಲ್ಲೆಡೆ ವ್ಯಾಪಿಸುವ ಮೊದಲೇ ನಾವು ಜಾಗರೂಕತೆಯಿಂದ ವರ್ತಿಸಿ ಬರುವ ಗಂಡಾಂತರದಿಂದ ಪಾರಾಗುವುದು ಒಳಿತೋ ಅಥವಾ ಬಂದ ಮೇಲೆ ಲಾಕ್‌ಡೌನ್, ಸೀಲ್‌ಡೌನ್‌ನಂತಹ ಕ್ರಮಗಳನ್ನು ನಮ್ಮ ಮೇಲೆ ನಾವು ಹೇರಿಕೊಂಡು, ಮನೆಯಲ್ಲಿ ಅಡಗಿ ಕುಳಿತುಕೊಳ್ಳುವುದು ಒಳಿತೋ ನಾವೇ ನಿರ್ಧರಿಸಿಕೊಳ್ಳಬೇಕಾಗಿದೆ!

ಚಾವಲ್ಮನೆ ಸುರೇಶ್ ನಾಯಕ್, ಹಾಲ್ಮತ್ತೂರು, ಕೊಪ್ಪ

ಹಿಂದಿ: ವ್ಯವಸ್ಥೆಯ ಶಿಶು ದೇವಗನ್

ಬಾಲಿವುಡ್ ನಟ ಅಜಯ್ ದೇವಗನ್ ಅವರು ಹಿಂದಿಯನ್ನು ರಾಷ್ಟ್ರಭಾಷೆ ಎಂದಿದ್ದಕ್ಕೆ ಪ್ರತಿಯಾಗಿ ಕರ್ನಾಟಕದ ಅನೇಕರು ಟ್ವೀಟ್ ಮೂಲಕ ಪ್ರತ್ಯುತ್ತರ ನೀಡಿದ್ದಾರೆ. ಉತ್ತರ ಭಾರತೀಯರಾದ ಅಜಯ್ ದೇವಗನ್ ಹಿಂದಿ ಪರ ವಕಾಲತ್ತು ವಹಿಸಿದ್ದರಲ್ಲಿ ಅಚ್ಚರಿಯೇನಿಲ್ಲ. ಆದರೆ ದಕ್ಷಿಣದವರೇ ಅನೇಕರು ಹಿಂದಿಯನ್ನು ರಾಷ್ಟ್ರಭಾಷೆಯೆಂದು ಹೇಳಿಕೊಂಡು ಬರುತ್ತಿದ್ದಾರೆ. ಈ ಹಿನ್ನೆಲೆಯಲ್ಲಿ ಅಜಯ್ ದೇವಗನ್ ವ್ಯವಸ್ಥೆಯ ಶಿಶು. ಅದು ಕಲಿಸಿದಂತೆ ಅವರು ಮಾತನಾಡಿದ್ದಾರೆ. ಅವರ ಕಲಿಕೆ ಕೇವಲ ಅವರಿಗಷ್ಟೇ ಸೀಮಿತವಾಗಿರದೆ, ಹಿಂದಿ ರಾಷ್ಟ್ರಭಾಷೆ ಎಂಬ ಭಾವನೆ ಇಡೀ ದೇಶದಲ್ಲಿ ಹಬ್ಬಿದೆ. ಇದಕ್ಕೆ ಕಾರಣ, ಹಿಂದಿನಿಂದಲೂ ಆಳ್ವಿಕೆ ನಡೆಸಿದ ಸರ್ಕಾರಗಳು ಹಿಂದಿಯನ್ನು ಆ ರೀತಿ ಬಿಂಬಿಸುತ್ತಾ ಬಂದಿರುವುದು.

ಭಾಷೆ ಆಧಾರದ ಮೇಲೆ ರಾಜ್ಯಗಳು ವಿಂಗಡಣೆಯಾದ ಮೇಲೆ ಕನ್ನಡ ಭಾಷೆಯು ರಾಜ್ಯ ಭಾಷೆಯಾಗಿ ಗಟ್ಟಿಯಾಗಿ ಬೇರೂರಿಲ್ಲ. 80ರ ದಶಕದಲ್ಲಿ ನಾವು ಪ್ರಾದೇಶಿಕ ವೈವಿಧ್ಯದ ಹಿನ್ನೆಲೆಯಲ್ಲಿ ಸರ್ಕಾರಿ ವಾಹಿನಿಗಳಲ್ಲಿ ಪ್ರಸಾರವಾಗುತ್ತಿದ್ದ ಚಿತ್ರಹಾರ್, ಚಿತ್ರಮಂಜರಿ ನೋಡುತ್ತಾ ಬೆಳೆದೆವು. ಕನ್ನಡದ ರಾಜ್‌ಕುಮಾರ್, ವಿಷ್ಣುವರ್ಧನ್ ಅವರಂತೆ ಹಿಂದಿಯ ಅಮಿತಾಭ್ ಬಚ್ಚನ್, ಧರ್ಮೇಂದ್ರ ಅವರಂತಹ ನಟರು ನಮ್ಮ ಮನಸ್ಸಿನಾಳಕ್ಕೆ ಇಳಿದರು. ಈ ರೀತಿಯ ಮನರಂಜನೆಯ ಜಗತ್ತು ಭಾಷೆಯ ಗಡಿಯನ್ನು ದಾಟಿ ತನ್ನ ನೆಲೆ ವಿಸ್ತರಿಸಿಕೊಂಡಿದೆ. ಹಿಂದಿಯನ್ನು ನಾವೀಗ ರಾಷ್ಟ್ರಭಾಷೆಯಾಗಿ ನಿರಾಕರಿಸಬಹುದು, ಆದರೆ ದೇಶವ್ಯಾಪಿ ಸಂಪರ್ಕಭಾಷೆಯಾಗಿ ನಿರಾಕರಿಸಲು ಸಾಧ್ಯವಿಲ್ಲ. ಏಕೆಂದರೆ ಆ ಬೇರುಗಳು ಈಗಾಗಲೇ ಭೂಮಿಯ ತಳದಾಳಕ್ಕೆ ಇಳಿದುಬಿಟ್ಟಿವೆ.

ಆರ್.ವೆಂಕಟರಾಜು, ಬೆಂಗಳೂರು

ಆಂಬುಲೆನ್ಸ್ ಚಾಲಕರ ಅಕ್ರಮ ಕೂಟ

ಆಂಧ್ರಪ್ರದೇಶದ ತಿರುಪತಿಯ ಆಸ್ಪತ್ರೆಯೊಂದರಿಂದ ಬಾಲಕನ ಶವ ಸಾಗಿಸಲು ಆಂಬುಲೆನ್ಸ್ ಚಾಲಕರು ಹೆಚ್ಚಿನ ಹಣಕ್ಕೆ ಬೇಡಿಕೆ ಇಟ್ಟದ್ದರಿಂದ, ಅದನ್ನು ಭರಿಸಲಾಗದೆ ತಂದೆಯೇ ಶವವನ್ನು ಬೈಕ್ ಮೂಲಕ 90 ಕಿ.ಮೀ. ದೂರದ ಮನೆಗೆ ಸಾಗಿಸಿದ್ದನ್ನು ತಿಳಿದು ತುಂಬಾ ಬೇಸರವಾಯಿತು. ನಮ್ಮ ವ್ಯವಸ್ಥೆಯು ಯಾವ ಮಟ್ಟದಲ್ಲಿದೆ ಎಂಬುದಕ್ಕೆ ಈ ದುರ್ಘಟನೆಯೇ ನಿದರ್ಶನ.

ಆಂಬುಲೆನ್ಸ್ ಚಾಲಕರು ಮನುಷ್ಯತ್ವ ಇಲ್ಲದ ರಾಕ್ಷಸರಂತೆ ನಡೆದುಕೊಂಡಿದ್ದಾರೆ. ದುಡ್ಡಿಗಾಗಿ ಸಿಂಡಿಕೇಟ್ ಮಾಡಿಕೊಂಡಿರುವ ಅವರು ಉಚಿತ ಆಂಬುಲೆನ್ಸ್ ಚಾಲಕನನ್ನು ಥಳಿಸಿ ವಾಪಸ್ ಕಳುಹಿಸಿರುವುದನ್ನು ನೋಡಿದರೆ, ಸೇವಾ ವಲಯ ಲಾಭ ಗಳಿಸುವ ಉದ್ಯಮದಂತೆ ಭಾಸವಾಗುತ್ತದೆ. ಸರ್ಕಾರ ಇನ್ನಾದರೂ ಇಂತಹ ಅಮಾನವೀಯ ಘಟನೆಗಳು ಮರುಕಳಿಸದಂತೆ ಕಠಿಣ ಕ್ರಮ ಕೈಗೊಳ್ಳಲಿ.

ಮಹದೇವಸ್ವಾಮಿ ಎಚ್.ಬಿ., ಹಳೇಪುರ, ನಂಜನಗೂಡು

ರೈತರ ಶ್ರಮ ಗೌರವಿಸಿ

ರಾಗಿ ಖರೀದಿ ನೋಂದಣಿಗೆ ಸರತಿಯಲ್ಲಿ ನಿಂತಿದ್ದ ರೈತರ ಮೇಲೆ ಲಾಠಿಪ್ರಹಾರ ನಡೆಸಿ ಪರಿಸ್ಥಿತಿ ಹದ್ದುಬಸ್ತಿಗೆ ತಂದದ್ದನ್ನು (ಪ್ರ.ವಾ., ಏ. 28) ತಿಳಿದು ಕಸಿವಿಸಿಯಾಯಿತು. ಬೆಳೆಯುವ ರೈತರ ಕಷ್ಟ ಅರಿತ ಯಾವ ಅಧಿಕಾರಿಗಳೂ ಇಂತಹ ಕಿರುಕುಳವನ್ನು ನೀಡಲಾರರು. ದನಕರುಗಳನ್ನು ಬಿಟ್ಟು, ಹಳ್ಳಿಯಿಂದ ತಾಲ್ಲೂಕು ಕೇಂದ್ರಕ್ಕೆ ಬರುವ ರೈತನಿಗೆ ಸಂಜೆಯ ಮುನ್ನ ಹಿಂದಿರುಗುವ ಜರೂರಿರುತ್ತದೆ. ನೋಂದಣಿ ಪ್ರಕ್ರಿಯೆಯನ್ನು ಒಂದು ತಿಂಗಳು ವಿಸ್ತರಿಸಿದರೆ, ಸರ್ಕಾರದ ಉಗ್ರಾಣಗಳು ಎಲ್ಲಿಯಾದರೂ ಓಡಿಹೋಗುವುವೇ? ಒಂದು ಬೆಳೆಯನ್ನು ಕೊಳ್ಳಲು ನೋಂದಣಿ ಅವಶ್ಯಕತೆ ಇರುವುದು ಸರ್ಕಾರದ ಉಗ್ರಾಣವನ್ನು ವ್ಯವಸ್ಥಿತವಾಗಿ ನಿರ್ವಹಿಸುವುದಕ್ಕೇ ವಿನಾ ಇನ್ನಾವ ಘನಕಾರ್ಯಕ್ಕೂ ಅಲ್ಲ. ಅನುಕೂಲದ ದೃಷ್ಟಿಯಿಂದ ನೋಂದಣಿಯನ್ನು ಜನವರಿಯಿಂದಲೇ ಆರಂಭಿಸಬಹುದು. ಇದಕ್ಕೆ ಬೇಕಿರುವುದು ಒಬ್ಬ ಕಂಪ್ಯೂಟರ್ ಆಪರೇಟರ್ ಮಾತ್ರ.

ಎಕರೆಗೆ ಇಂತಿಷ್ಟು ನೀವು ಹೊತ್ತು ತರಬಹುದು, ಇಂತಹ ದಿನ ಬನ್ನಿ ಎನ್ನುವ ಕೇವಲ ಎರಡು ವಾಕ್ಯಗಳ ಮಾಹಿತಿಯಷ್ಟೇ ನೋಂದಣಿಯ ಬಂಡವಾಳ. ಮೊದಲಿಗೆ, ರಾಗಿ ಖರೀದಿ ಈ ವರ್ಷ ಇಲ್ಲ ಎಂಬ ವದಂತಿಯನ್ನು ಅಧಿಕಾರಿಗಳು ಹಬ್ಬಿಸಿದ್ದರು. ನಂತರದಲ್ಲಿ ಅನೇಕ ಸಚಿವರು, ಶಾಸಕರು ಬಹಳಷ್ಟು ಪ್ರಚಾರ ಪಡೆದ ನಂತರ, ರಾಗಿ ಖರೀದಿಯನ್ನು ಇನ್ನೇನು ಪೂರ್ವಮುಂಗಾರಿನ ಹೊಸ್ತಿಲಲ್ಲಿ ಕೊಳ್ಳಲು ಸರ್ಕಾರ ಮುಂದಾಗಿದೆ. ರಾಗಿಬೆಳೆ ಆರ್ಥಿಕವಾಗಿ ಆದಾಯದ ಬೆಳೆಯಲ್ಲ. ಆದರೂ ಬಯಲುಸೀಮೆಯ ಪ್ರಮುಖ ಬೆಳೆ ಅದು. ರಾಗಿಒಕ್ಕಲು ಬಲುತ್ರಾಸದ ಕಸುಬು. ಹುಲ್ಲಿನ ದೃಷ್ಟಿಯಿಂದ ರೈತರು ರಾಗಿಯನ್ನು ನೆಚ್ಚುತ್ತಾರೆ. ಇಷ್ಟೆಲ್ಲಾ ಶ್ರಮವನ್ನು ಗೌರವಿಸಬೇಕಾದದ್ದು ಸರ್ಕಾರದ ಜವಾಬ್ದಾರಿ. ಅದಕ್ಕೆ ಮಾಡಬೇಕಾದ ಮೂಲಕರ್ತವ್ಯ ರೈತರನ್ನು ಗೌರವಯುತವಾಗಿ ನಡೆಸಿಕೊಳ್ಳುವುದು.

ಶಾಂತರಾಜು ಎಸ್. ಮಳವಳ್ಳಿ, ಬೆಂಗಳೂರು

Printed and published by B A Ravi on behalf of The Printers (Mysore) Private Ltd., at The Printers (Mysore) Private Ltd, Plot Nos. 7-12, Kumbalgodu Industrial Area, Bengaluru-560 074. News Editor: Sudesha Doddapalya (Responsible for selection of news under the PRB Act). Editorial Office: 75, Mahatma Gandhi Road, Bengaluru- 560 001. E-mail: editorpv@prajavani.co.in. Phone: 080 - 45557333, Editorial: 080 - 45557251, Circ: 1800-425-8009, Advt: 1800-425-8008. Also printed at Hubballi-Dharwad, Mangaluru, Kalaburagi, Davanagere, Mysuru and Hosapete.

ಆರೋಪಿಗಳ ಆಸ್ತಿ ನೆಲಸಮಗೊಳಿಸುವುದು ಸರಿಯಾದ ಕ್ರಮವೇ?

ದೇಶವನ್ನು ವ್ಯಾಪಿಸಿದ ಬುಲ್ಡೋಜರ್ ಸೋಂಕು



ಉತ್ತರ ಪ್ರದೇಶದಲ್ಲಿ ಕಾಣಿಸಿಕೊಂಡ ಬುಲ್ಡೋಜರ್ ಸೋಂಕು ದೆಹಲಿಯನ್ನು ಆಕ್ರಮಿಸಿಕೊಂಡು ಮಧ್ಯಪ್ರದೇಶವನ್ನೂ ದಾಟಿ ಇಡೀ ದೇಶವನ್ನು ವ್ಯಾಪಿಸುತ್ತಿದೆ. ಹಿಂದೂಗಳ ಪವಿತ್ರವಾದ ರಾಮನವಮಿ ಮತ್ತು ಹನುಮ ಜಯಂತಿ ಹಬ್ಬಗಳನ್ನೇ ಆರಿಸಿಕೊಂಡು ತಮ್ಮ ಬುಲ್ಡೋಜರ್ ರಾಜಕಾರಣಕ್ಕೆ ಭೂಮಿಯನ್ನು ಹದಗೊಳಿಸಿಕೊಳ್ಳುವ ಕ್ರೌರ್ಯದ ಕೆಲಸಕ್ಕೆ ಬಿಜೆಪಿ ಮುಂದಾಗಿದೆ.

• ಸೌಮ್ಯ ರೆಡ್ಡಿ

- ಸೆಂಟರ್ ಫಾರ್ ಮಾನಿಟರಿಂಗ್ ಇಂಡಿಯನ್ ಎಕಾನಮಿ (ಸಿಎಂಐಇ) ಇದೇ ವಾರ ನೀಡಿದ ವರದಿ ಪ್ರಕಾರ ಸುಶಿಕ್ಷಿತ ಉದ್ಯೋಗ ಹುಡುಕಲು ಸಾಧ್ಯವಾಗದೆ ಹತಾಶರಾದ ಉದ್ಯೋಗಾಕಾಂಕ್ಷಿಗಳು ಉದ್ಯೋಗ ಹುಡುಕುವುದನ್ನೇ ನಿಲ್ಲಿಸಿದ್ದಾರೆ. 2017ರಿಂದ 2022ರ ಮಧ್ಯೆ (ನೋಟು ನಿಷೇಧದ ದಾಳಿಯಿಂದ ಬುಲ್ಡೋಜರ್ ದಾಳಿವರೆಗಿನ ಅವಧಿ) ಭಾರತದ ಕಾರ್ಮಿಕರ ಪಾಲ್ಗೊಳ್ಳುವಿಕೆ ದರ ಶೇ 46ರಿಂದ ಶೇ 40ಕ್ಕೆ ಕುಸಿದಿದೆ.
- ಭಾರತೀಯ ರಿಸರ್ವ್ ಬ್ಯಾಂಕಿನ ಹಣಕಾಸು ನೀತಿ ಸಮಿತಿ (ಎಂಪಿಸಿ) ಹೆಚ್ಚುತ್ತಿರುವ ಹಣದುಬ್ಬರಕ್ಕೆ ಏಪ್ರಿಲ್ 22ರಂದು ಆತಂಕ ವ್ಯಕ್ತಪಡಿಸಿದೆ.
- ರಾಷ್ಟ್ರೀಯ ಅಪರಾಧ ದಾಖಲೆಗಳ ಬ್ಯೂರೊ (ಎನ್‌ಸಿಆರ್‌ಬಿ) ವರದಿ ಪ್ರಕಾರ, 11,716 ಉದ್ಯಮಿಗಳು 2020ರಲ್ಲಿ ಆತ್ಮಹತ್ಯೆ ಮಾಡಿಕೊಂಡಿದ್ದಾರೆ. ಈ ಪೈಕಿ ಕರ್ನಾಟಕದಲ್ಲೇ ಅತಿ ಹೆಚ್ಚು ಅಂದರೆ 1,772 ಉದ್ಯಮಿಗಳು ಆತ್ಮಹತ್ಯೆ ಮಾಡಿಕೊಂಡಿದ್ದಾರೆ.
- ನ್ಯಾಷನಲ್ ಸ್ಮಾಲ್ ಇಂಡಸ್ಟ್ರೀಸ್ ಕಾರ್ಪೊರೇಷನ್ ಲಿಮಿಟೆಡ್ ಸಮೀಕ್ಷಾ ವರದಿ ಪ್ರಕಾರ, 2020ರಿಂದ 2022ರ ಮಾರ್ಚ್ 9ರವರೆಗೆ 6 ಸಾವಿರಕ್ಕೂ ಅಧಿಕ ಸಣ್ಣ-ಮಧ್ಯಮ ಮತ್ತು ಬೃಹತ್ ಕೈಗಾರಿಕೆಗಳು ಬಂದ್ ಆಗಿವೆ.
- ಅಂತರಾಷ್ಟ್ರೀಯ ಹಣಕಾಸು ನಿಧಿ (ಐಎಂಎಫ್) ವರದಿಯ ಪ್ರಕಾರ, ಭಾರತದ ತಲಾ ಆದಾಯ ನೆರೆಯ ಬಾಂಗ್ಲಾದೇಶಕ್ಕಿಂತ ಕೆಳಕ್ಕೆ ಕುಸಿದಿದೆ. ಬಾಂಗ್ಲಾ ದೇಶದ ತಲಾ ಆದಾಯ 2,227 ಡಾಲರ್ ಇದ್ದರೆ ಭಾರತದ ತಲಾ ಆದಾಯ 1,947.41 ಡಾಲರ್‌ಗೆ ಕುಸಿದಿದೆ.

ಈ ಅಂಕಿ ಅಂಶಗಳಲ್ಲಿ ಹೆಚ್ಚಿನವು ಕೇಂದ್ರ ಸರ್ಕಾರವೇ ಒದಗಿಸಿದ್ದು ಮತ್ತು ಉಳಿದ ಪ್ರತಿಷ್ಠಿತ ಸಂಸ್ಥೆಗಳ ಅಂಕಿ ಅಂಶಗಳನ್ನು ಕೇಂದ್ರ ಸರ್ಕಾರವೇ ಒಪ್ಪಿಕೊಂಡಿದೆ. ಈಗ, ಸೂಚ್ಯಂಕಗಳ ಕಡೆಗೂ ನೋಡಿ ಬಿಡೋಣ...

- ಹಸಿವು ಮತ್ತು ಅಪೌಷ್ಟಿಕತೆಯನ್ನು ಅಳೆಯುವ ಜಿಎಚ್‌ಐ ಪ್ರಕಾರ, ಜಾಗತಿಕ ಹಸಿವಿನ ಸೂಚ್ಯಂಕದಲ್ಲಿ 116 ದೇಶಗಳಲ್ಲಿ ಭಾರತ 101ನೇ ಸ್ಥಾನದಲ್ಲಿದೆ. ಪಾಕಿಸ್ತಾನ, ಬಾಂಗ್ಲಾದೇಶ, ನೇಪಾಳಕ್ಕಿಂತ ಕೆಳಕ್ಕೆ ಕುಸಿದಿದೆ.
- ಜಾಗತಿಕ ಆಹಾರ ಭದ್ರತೆ (ಜಿಎಫ್‌ಎಸ್) ಸೂಚ್ಯಂಕದಲ್ಲಿ 113 ದೇಶಗಳಲ್ಲಿ ಭಾರತ 71ನೇ ಸ್ಥಾನದಲ್ಲಿದೆ.

ಇವಲ್ಲದೆ ಅಭಿವ್ಯಕ್ತಿ ಹಾಗೂ ಪತ್ರಿಕಾ ಸ್ವಾತಂತ್ರ್ಯ, ಮಹಿಳೆಯರ ಸುರಕ್ಷತೆ ಹೀಗೆ ಇನ್ನೂ ಹತ್ತು ಹಲವು ಸೂಚ್ಯಂಕಗಳಲ್ಲಿ ಭಾರತವು ಶೋಚನೀಯ ಸ್ಥಿತಿ ಕುಸಿಯುತ್ತಿರುವ ಹೊತ್ತಲ್ಲೇ ಕೋಮುಗಲಭೆಗಳು, ಶಾಂತಿ ಕದಡುವ ಯತ್ನಗಳು ಏರಿಕೆ ಆಗುತ್ತಲೇ ಇವೆ.

ಬೆಲೆ ಏರಿಕೆಯಿಂದ ಜನ ಕಂಗಾಲಾಗಿದ್ದಾರೆ. ಕೃಷಿ ಉತ್ಪನ್ನಗಳ ಬೆಲೆ ಕುಸಿದಿದೆ. ವಿವಿಧ ಉದ್ಯಮಗಳು ಭಾರತದಿಂದ ಸಾಲು ಸಾಲಾಗಿ ಕಾಲು ಕೀಳುತ್ತಿದ್ದರೆ, ಭಾರತದ ರಫ್ತು ಕುಸಿದು ಆಮದು ಪ್ರಮಾಣ ದಾಖಲೆ ಮಟ್ಟದಲ್ಲಿ ಹೆಚ್ಚಾಗಿದೆ. ಇವೆಲ್ಲದರ ಒಟ್ಟು ಪರಿಣಾಮವಾಗಿ ಪ್ರತಿಯೊಂದು ಶ್ರಮಿಕ ವರ್ಗವೂ ತನ್ನ ಬೇಡಿಕೆ ಮುಂದಿಟ್ಟು ಬೀದಿಗಿಳಿದಿದೆ.

ಕೇಂದ್ರ ಸರ್ಕಾರವು ತನ್ನ ಕಳಪೆ ಆರ್ಥಿಕ ನೀತಿ ಮತ್ತು ಆಡಳಿತದಿಂದ ದೇಶದ ಶ್ರಮಿಕ ವರ್ಗ ಮತ್ತು ತಳವರ್ಗದ ಬದುಕನ್ನು ನೆಲಸಮ ಮಾಡುತ್ತಿದೆ. ಮಧ್ಯಮವರ್ಗಕ್ಕೆ ಸೇರಿದ್ದ ಸುಮಾರು 8 ಕೋಟಿ ಜನರನ್ನು ಜೆಸಿಬಿಯಲ್ಲಿ ಎತ್ತಿ ಬಡತನದ ರಾಶಿಗೆ ಸುರಿದಿದೆ. ಬಡ ಮತ್ತು ಮಧ್ಯಮವರ್ಗದ ಜನರ ಹೊಟ್ಟೆಯ ಸಿಟ್ಟು ರಟ್ಟೆಗೆ ಏರುತ್ತಿರುವ ಹೊತ್ತಿನಲ್ಲೇ ರಾಜಧಾನಿ ದೆಹಲಿ ಕಡೆಯಿಂದಲೇ ಬುಲ್ಡೋಜರ್ ಆಕ್ರಮಣ ಶುರುವಾಗಿದೆ. ಜನರ ಬದುಕನ್ನು ನೆಲಸಮ ಮಾಡುತ್ತಿರುವ ಬುಲ್ಡೋಜರ್‌ಗಳು ಕಣ್ಣಿಗೆ ಕಾಣುತ್ತಿಲ್ಲ ಅಷ್ಟೇ.



ಉತ್ತರ ಪ್ರದೇಶದಲ್ಲಿ ಕಾಣಿಸಿಕೊಂಡ ಬುಲ್ಡೋಜರ್ ಸೋಂಕು ದೆಹಲಿಯನ್ನು ಆಕ್ರಮಿಸಿಕೊಂಡು ಮಧ್ಯಪ್ರದೇಶವನ್ನೂ ದಾಟಿ ಇಡೀ ದೇಶವನ್ನು ವ್ಯಾಪಿಸುತ್ತಿದೆ. ಹಿಂದೂಗಳ ಪವಿತ್ರವಾದ ರಾಮನವಮಿ ಮತ್ತು ಹನುಮ ಜಯಂತಿ ಹಬ್ಬಗಳನ್ನೇ ಆರಿಸಿಕೊಂಡು ತಮ್ಮ ಬುಲ್ಡೋಜರ್ ರಾಜಕಾರಣಕ್ಕೆ ಭೂಮಿಯನ್ನು ಹದಗೊಳಿಸಿಕೊಳ್ಳುವ ಕ್ರೌರ್ಯದ ಕೆಲಸಕ್ಕೆ ಬಿಜೆಪಿ ಮುಂದಾಗಿದೆ.

ಕಲ್ಲುತೂರಾಟ ನಡೆಸಿ ಕೋಮು ಕೀಟಲೆ ಮಾಡಿದರು ಎಂದು ಬಿಂಬಿಸಿ ದೆಹಲಿಯ ಜಹಾಂಗೀರ್‌ಪುರಿಯಲ್ಲಿ ಬುಲ್ಡೋಜರ್ ದಾಂದಲೆ ನಡೆಸಲಾಯಿತು. ಸುಪ್ರೀಂ ಕೋರ್ಟ್ ತೀವ್ರವಾಗಿ ತರಾಟೆಗೆ ತೆಗೆದುಕೊಂಡ ಬಳಿಕ ಅದುವರೆಗೂ ಹೇಳಿದ್ದ ಕಲ್ಲು ತೂರಾಟದ ನೆಪವನ್ನು ಪಕ್ಕಕ್ಕಿರಿಸಲಾಯಿತು. ಸಾರ್ವಜನಿಕ ಸ್ಥಳ ಒತ್ತುವರಿ ಮಾಡಿ ಬೀದಿ ಬದಿ ವ್ಯಾಪಾರ ಮಾಡಿಕೊಂಡಿದ್ದವರನ್ನು ತೆರವುಗೊಳಿಸುವ ಕಾರ್ಯಾಚರಣೆ ನಡೆಸಲಾಯಿತು ಎಂದು ಬಿಜೆಪಿ ಅಧಿಕಾರ ನಡೆಸುತ್ತಿರುವ ಉತ್ತರ ದೆಹಲಿ ಮಹಾನಗರಪಾಲಿಕೆಯು (ಎನ್‌ಡಿಎಂಸಿ) ಸುಪ್ರೀಂ ಕೋರ್ಟ್‌ಗೂ ಸುಳ್ಳು ಹೇಳಿತು. 'ಬೀದಿ ಬದಿ ಅಂಗಡಿ ತೆರವಿಗೆ ಬುಲ್ಡೋಜರ್ ಬೇಕಾಯಿತೇ' ಎನ್ನುವ ಸುಪ್ರೀಂ ಕೋರ್ಟ್ ಪ್ರಶ್ನೆಗೆ ಎನ್‌ಡಿಎಂಸಿ ಬಳಿ ಉತ್ತರವೇ ಇಲ್ಲ.

ದೆಹಲಿಯಲ್ಲಿ ಸರ್ಕಾರವೇ ಗುರುತಿಸಿದ 781 ಅನಧಿಕೃತ ಕಾಲೊನಿಗಳಿವೆ. ಇವೆಲ್ಲವನ್ನೂ ಬಿಟ್ಟು ಜಹಾಂಗೀರ್‌ಪುರಿಯನ್ನೇ ಆಯ್ಕೆ ಮಾಡಿಕೊಳ್ಳಲು ಏನು ಕಾರಣ ಎನ್ನುವ ಪ್ರಶ್ನೆಯನ್ನು ಸುಪ್ರೀಂ ಕೋರ್ಟ್‌ನಲ್ಲಿ ವಾದಿಸಿದ ವಕೀಲರು ಮುಂದಿಟ್ಟಿದ್ದಾರೆ. ಇದಕ್ಕೂ ಎನ್‌ಡಿಎಂಸಿ ಮತ್ತು ಬಿಜೆಪಿ ಬಳಿ ಉತ್ತರ ಇಲ್ಲ.

ಪ್ರಜಾಪ್ರಭುತ್ವವನ್ನು ರಕ್ಷಿಸುವುದಾಗಿ ಪ್ರಮಾಣ ವಚನ ಸ್ವೀಕರಿಸಿದ ಸರ್ಕಾರವೇ ಸಂವಿಧಾನಬದ್ಧ ಕಾನೂನಿನ ಆಶಯವನ್ನು ನೆಲಸಮ ಮಾಡಿ, ಬುಲ್ಡೋಜರ್ ನ್ಯಾಯಕ್ಕೆ ಮುಂದಾಗಿದೆ. ಆರೋಪ ಸಾಬೀತಾಗುವವರೆಗೆ ಆರೋಪಿಯನ್ನು ಅಪರಾಧಿ ಎಂದು ಪರಿಗಣಿಸಲಾಗದು ಎಂದು ಈ ನೆಲದ ಕಾನೂನು ಹೇಳುತ್ತದೆ. ಆರೋಪಿಯು ಹಂತಕ ಎಂದು ಸಾಬೀತಾದರೂ ಅಪರಾಧಿಗೆ ಸೇರಿದ ಆಸ್ತಿಯನ್ನು ನಾಶ ಮಾಡಲು ನಮ್ಮ ಸಂವಿಧಾನದಲ್ಲಿ ಅವಕಾಶ ಇಲ್ಲ. ಭಾರತೀಯ ದಂಡ ಸಂಹಿತೆ ಅಡಿಯಲ್ಲಿ ಯಾವ ಶಿಕ್ಷೆ ಇದೆಯೋ ಅದನ್ನಷ್ಟೇ ವಿಧಿಸಲು ಮಾತ್ರ ಅವಕಾಶ ಇದೆ. ಜೊತೆಗೆ, ಶಿಕ್ಷೆ ವಿಧಿಸುವ ಅಧಿಕಾರ ಸರ್ಕಾರಕ್ಕೆ ಇಲ್ಲ. ಅದು ಕಾನೂನು ಪ್ರಕ್ರಿಯೆಯ ಮೂಲಕವೇ ನಡೆಯಬೇಕು. ಕಲ್ಲು ತೂರಿದವರು ಒತ್ತುವರಿ ಮಾಡಿಕೊಂಡಿದ್ದರೆ ಅದನ್ನು ಪತ್ತೆ ಮಾಡಿ, ಆಸ್ತಿಯನ್ನು ನೆಲಸಮ ಮಾಡಿ ಎಂದು ದೆಹಲಿ ಬಿಜೆಪಿ ಘಟಕದ ಮುಖ್ಯಸ್ಥ ಆದೇಶ್ ಗುಪ್ತಾ ಬರೆದ ಪತ್ರದ ಆಧಾರದಲ್ಲಿ ಎನ್‌ಡಿಎಂಸಿ ಕೈಗೊಂಡ ಕ್ರಮವೇ ಸಂವಿಧಾನ ವಿರೋಧಿ ಕ್ರಮ. ಆರೋಪಿಗಳಿಗೆ ಆಸ್ತಿ ನೆಲಸಮದ ಶಿಕ್ಷೆ ವಿಧಿಸುವ ಮೂಲಕ ಉತ್ತರ ಪ್ರದೇಶ, ಮಧ್ಯಪ್ರದೇಶದ ಸರ್ಕಾರಗಳು, ಎನ್‌ಡಿಎಂಸಿ ಮತ್ತು ಅಲ್ಲಿ ಆಳ್ವಿಕೆ ನಡೆಸುತ್ತಿರುವ ಬಿಜೆಪಿ ಸಂವಿಧಾನವನ್ನೇ ಉಲ್ಲಂಘಿಸಿವೆ.

ತೆರವು ಕಾರ್ಯಾಚರಣೆಯನ್ನು ತಕ್ಷಣ ನಿಲ್ಲಿಸುವಂತೆ ಸುಪ್ರೀಂ ಕೋರ್ಟ್ ಸೂಚನೆ ನೀಡಿದ ಬಳಿಕವೂ ಕಟ್ಟಡ ಧ್ವಂಸ ಕಾರ್ಯಾಚರಣೆಯನ್ನು ಮುಂದುವರಿಸಿದ ಕ್ರಮ, ಸಂವಿಧಾನ ಮತ್ತು ನ್ಯಾಯಾಂಗ ವ್ಯವಸ್ಥೆಯಲ್ಲಿ ಬಿಜೆಪಿಗೆ ನಂಬಿಕೆಯೇ ಇಲ್ಲ ಎಂಬುದನ್ನು ತೋರಿಸುತ್ತದೆ.

ರಾಮನವಮಿ, ಹನುಮ ಜಯಂತಿಯಂದು ಕತ್ತಿ, ತಲವಾರು, ಪಿಸ್ತೂಲಿನ ವಿಕೃತ ಪ್ರದರ್ಶನವನ್ನು ಈ ದೇಶದ ಶ್ರದ್ಧಾಭಕ್ತಿಯ ಹಿಂದೂಗಳು ಯಾವತ್ತೂ ಬೆಂಬಲಿಸುವುದಿಲ್ಲ. ಇದು ಹಿಂದೂ ಧರ್ಮಕ್ಕೆ ಮತ್ತು ಹಿಂದೂ ಧರ್ಮವನ್ನು ನಿಜ ಅರ್ಥದಲ್ಲಿ ಪಾಲಿಸುತ್ತಿರುವವರಿಗೆ ಮಾಡಿದ ಅವಮಾನ. ಧರ್ಮದ ಹೆಸರಿನಲ್ಲಿ ರಕ್ತ ಹರಿಸುವುದು, ದ್ವೇಷ ಬಿತ್ತುವುದು ಹಿಂದೂ ಧರ್ಮದ ಶ್ರೇಷ್ಠ ಪರಂಪರೆಯ ಅವಹೇಳನ.

ಲೇಖಕಿ: ಕಾಂಗ್ರೆಸ್ ಶಾಸಕಿ

ಪ್ರಜಾವಾಣಿ ಚರ್ಚೆ

ಈ ದಶಕದ ಅತಿ ಶಕ್ತ ರಾಜಕೀಯ ಸಂಕಥನ

• ವಿ. ಸುನಿಲ್ ಕುಮಾರ್



ದೇಶದ ಕಾನೂನು ಹಾಗೂ ಸಂವಿಧಾನಕ್ಕೆ ಗೌರವ ಕೊಡದ ವ್ಯಕ್ತಿ, ಸಂಘಟನೆ, ಸಮುದಾಯ ಯಾವುದೇ ಆಗಿರಲಿ, ಅವರಿಗೆ ನಾವು ಕೊಡುವ ಆಯ್ಕೆ ಬುಲ್ಡೋಜರ್. ನೆಲದ ಕಾನೂನು ಪಾಲನೆ ಮಾಡದೇ ಬೀದಿಗೆ ಇಳಿಯುವುದನ್ನು ಯಾವ ಸರ್ಕಾರವೂ ಸಹಿಸಿಕೊಳ್ಳುವುದಿಲ್ಲ. ಕಾನೂನು-ಸುವ್ಯವಸ್ಥೆಯ ದೃಷ್ಟಿಯಿಂದ ಆಯಾ ರಾಜ್ಯದ ಜನರಿಂದಲೂ ಬುಲ್ಡೋಜರ್ ಸರ್ಕಾರ ವ್ಯವಸ್ಥೆಗೆ ವ್ಯಾಪಕ ಮೆಚ್ಚುಗೆ ವ್ಯಕ್ತವಾಗಿದೆ

ಹಿಂದೊಂದು ಮಾತಿತ್ತು; 'ದಂಡಂ ದಶಗುಣಂ'. ವ್ಯವಸ್ಥೆಯ ಶಿಸ್ತಿಗೆ ಒಳಪಡದೇ ಇರುವವರನ್ನು ಸರಿದಾರಿಗೆ ತರುವುದಕ್ಕೆ ಬೇಕಾದ ಅನಿವಾರ್ಯ ಅಸ್ತ್ರವಾಗಿ ದಂಡ ಪ್ರಯೋಗ ಮಾಡುವುದು ಭಾರತೀಯ ರಾಜಕೀಯ ವ್ಯವಸ್ಥೆಯಲ್ಲಿ ರಾಜರ ಆಡಳಿತ ಕಾಲದಿಂದಲೂ ನಡೆದುಕೊಂಡು ಬಂದಿದೆ. ಆದರೆ ನಮ್ಮವರು ಅದನ್ನು ಸಾಮ, ದಾನ, ಭೇದ ನೀತಿಯ ಪ್ರಯೋಗದ ನಂತರ ಅಂತಿಮವಾಗಿ ಬಳಕೆ ಮಾಡುತ್ತಿದ್ದರು. ಯಾರಿಗೂ ಬಗ್ಗದವರು ದಂಡನೀತಿಯ ಎದುರು ಮಂಡಿಯೂರಲೇಬೇಕಲ್ಲವೇ?

ಭಾರತೀಯ ರಾಜಕೀಯ ವ್ಯವಸ್ಥೆಯಲ್ಲಿ ಕಳೆದ ಐದಾರು ವರ್ಷದಿಂದ ಜಾರಿಯಲ್ಲಿರುವ 'ಬುಲ್ಡೋಜರ್ ಸರ್ಕಾರ' ಕೂಡಾ ಯಾರಿಗೂ ಬಗ್ಗದೇ ಇರುವವರನ್ನು ಮಂಡಿಯೂರಿಸುವುದಕ್ಕಾಗಿಯೇ ಸೃಷ್ಟಿಗೊಂಡ ಪದ. ರಾಜಕೀಯ ಪಂಡಿತರ ಲೆಕ್ಕಾಚಾರ, ಜಾಲತಾಣದಲ್ಲಿ ವ್ಯಾಪಕವಾಗಿ ನಡೆದ ನಕಾರಾತ್ಮಕ ಕಾರ್ಯಸೂಚಿ ಹಾಗೂ ಸಂಕಥನ ಸೃಷ್ಟಿಯ ಹೊರತಾಗಿಯೂ ಉತ್ತರ ಪ್ರದೇಶದಲ್ಲಿ ಯೋಗಿ ಆದಿತ್ಯನಾಥ ಅವರು ಸತತ ಎರಡನೇ ಅವಧಿಗೆ ಮುಖ್ಯಮಂತ್ರಿಯಾಗಿ ಆಯ್ಕೆಗೊಂಡ ಬಳಿಕವಂತೂ 'ಬುಲ್ಡೋಜರ್ ಸರ್ಕಾರ'ದ ವ್ಯಾಪ್ತಿ-ವಿಸ್ತಾರ ಹೆಚ್ಚಾಗಿದೆ. ಬಿಜೆಪಿಯ ಸೈದ್ಧಾಂತಿಕ ವಿರೋಧಿಗಳಿಂದ ಯಥೇಚ್ಛವಾಗಿ ಟೀಕೆಗೆ ಒಳಗಾದರೂ ನನ್ನ ಪ್ರಕಾರ ರಾಜಕೀಯ ಪರಿಭಾಷೆಯಲ್ಲಿ ಬುಲ್ಡೋಜರ್ ಎಂಬ ಪದ ಈ ದಶಕದ ಶಕ್ತ ಸಂಕಥನ ಎಂಬುದನ್ನು ಒಪ್ಪಿಕೊಳ್ಳಲೇಬೇಕು. ವಿಷಯಾಧಾರಿತವಾಗಿ ನಾನು ಕೂಡಾ ಅದರ ಪ್ರತಿಪಾದಕ.

ನಿಮಗೆಲ್ಲ ತಿಳಿದಿರುವಂತೆ ಈ ಬುಲ್ಡೋಜರ್ ಸರ್ಕಾರ ವ್ಯವಸ್ಥೆಯನ್ನು ಜಾರಿಗೆ ತಂದವರು ಉತ್ತರ ಪ್ರದೇಶದ ಮುಖ್ಯಮಂತ್ರಿ ಯೋಗಿ ಆದಿತ್ಯನಾಥ. 2017ರಲ್ಲಿ ಮೊದಲ ಬಾರಿಗೆ ಅವರು ಮುಖ್ಯಮಂತ್ರಿಯಾಗಿ ಅಧಿಕಾರ ಸ್ವೀಕರಿಸುತ್ತಿದ್ದಂತೆಯೇ ಕಾನೂನು ವ್ಯಾಪ್ತಿಯಲ್ಲೇ ಬುಲ್ಡೋಜರ್ ಅನ್ನು ಅಖಾಡಕ್ಕೆ ಇಳಿಸಿದರು. ಸರ್ಕಾರಿ ಜಮೀನಿನಲ್ಲಿ ಮಾಫಿಯಾಗಳು ಮಾಡಿಕೊಂಡ ಕಾನೂನುಬಾಹಿರ ನಿರ್ಮಾಣಗಳು, ಕೋಮು ದಳ್ಳುರಿಯ ಸೃಷ್ಟಿಕರ್ತರು, ಘೋಷಿತ ಅಪರಾಧಿಗಳು, ಸ್ತ್ರೀಪೀಡಕರು, ಕಾನೂನು-ಸುವ್ಯವಸ್ಥೆಗೆ ಭಂಗ ತರುವ ರೌಡಿ ಪಡೆಗಳ ವಿರುದ್ಧ ಆದಿತ್ಯನಾಥ ಬುಲ್ಡೋಜರ್ ಅನ್ನು ಹುರಿಗಟ್ಟಿ ಆಕ್ರಮಣ ನಡೆಸಿಯೇಬಿಟ್ಟರು. ಆದರೆ, ಅದು ಸದುದ್ದೇಶದ ಆಕ್ರಮಣವಾಗಿತ್ತು.

ಉತ್ತರ ಪ್ರದೇಶದ ರಾಜಕೀಯ ಕೋಟೆಯೊಳಗೆ ಗಟ್ಟಿಯಾಗಿ ನೆಲೆಯೂರಿದ್ದ ವಿವೇಕ್ ದುಬೆಯಂಥವರನ್ನು ಮಟ್ಟ ಹಾಕುವುದಕ್ಕೆ ಬಳಕೆಯಾಗಿದ್ದು ಕೂಡಾ ಬುಲ್ಡೋಜರ್. ಅಲ್ಲಿಂದಲೇ ಈ ಪದಕ್ಕೆ 'ರಾಜಕೀಯ ಮಾನ್ಯತೆ' ಲಭಿಸಿಬಿಟ್ಟಿತು. ಉತ್ತರ ಪ್ರದೇಶದಲ್ಲಿ ಸುಮಾರು 67,000 ಎಕರೆ ಸರ್ಕಾರಿ ಭೂಮಿಯನ್ನು ಮಾಫಿಯಾ ಹಿಡಿತದಿಂದ ಬಿಡಿಸಿಕೊಂಡಿದ್ದು ಕೂಡಾ ಇದೇ ಬುಲ್ಡೋಜರ್. ಅಷ್ಟರ ಮಟ್ಟಿಗೆ ಸಮಾಜ ವಿರೋಧಿಗಳು ಮಂಡಿಯೂರುವಂತೆ ಮಾಡುವುದಕ್ಕೆ ಬುಲ್ಡೋಜರ್ ಅನ್ನು ಆದಿತ್ಯನಾಥ ಅಸ್ತ್ರವಾಗಿ ಬಳಸಿಕೊಂಡರು. ಈ ಅಸ್ತ್ರ ಈಗ ಉತ್ತರಪ್ರದೇಶವನ್ನು ದಾಟಿ ಬೇರೆ ಬೇರೆ ರಾಜ್ಯಗಳಿಗೂ ಮಾದರಿಯಾಗಿದೆ. ಮಧ್ಯ ಪ್ರದೇಶದಲ್ಲಿ ಸ್ತ್ರೀಪೀಡಕರ ವಿರುದ್ಧ ಅಲ್ಲಿನ ಮುಖ್ಯಮಂತ್ರಿ ಶಿವರಾಜ್ ಸಿಂಗ್ ಚೌಹಾಣ್ ಬುಲ್ಡೋಜರ್ ಬಳಕೆ ಮಾಡುತ್ತಿದ್ದಾರೆ.

ಹನುಮ ಜಯಂತಿಯ ದಿನ ಶೋಭಾಯಾತ್ರೆಯ ಮೇಲೆ ಕಲ್ಲು ತೂರುವ ಪ್ರಕರಣ ನಡೆಯಬಹುದೆಂದು ಮೊದಲೇ ಗ್ರಹಿಸಿದ್ದ ಉತ್ತರಾಖಂಡ ಸರ್ಕಾರ ಬುಲ್ಡೋಜರ್ ಅನ್ನು ಸನ್ನದ್ಧ ಸ್ಥಿತಿಯಲ್ಲಿ ಇಟ್ಟಿತ್ತು. ಅದೇ ರೀತಿ ಗುಜರಾತ್ ಹಾಗೂ ದೆಹಲಿಯ ಸ್ಥಳೀಯ ಸರ್ಕಾರಗಳೂ ಬುಲ್ಡೋಜರ್ ಪ್ರಯೋಗಕ್ಕೆ ಮುಂದಾಗಿವೆ. ಕಾನೂನು-ಸುವ್ಯವಸ್ಥೆಯ ದೃಷ್ಟಿಯಿಂದ ಆಯಾ ರಾಜ್ಯದ ಜನರಿಂದಲೂ ಬುಲ್ಡೋಜರ್ ಸರ್ಕಾರ ವ್ಯವಸ್ಥೆಗೆ ವ್ಯಾಪಕ ಮೆಚ್ಚುಗೆ ವ್ಯಕ್ತವಾಗಿದೆ. ಚುನಾವಣಾ ಸಂದರ್ಭದಲ್ಲಿ ತಮ್ಮನ್ನು 'ಬುಲ್ಡೋಜರ್ ಬಾಬಾ' ಎಂದು ಟೀಕಿಸಿದ್ದ ಅಖಿಲೇಶ್ ಯಾದವ್ ಅವರಿಗೆ ತಿರುಗೇಟು ಕೊಟ್ಟ ಯೋಗಿಯವರ ಮಾತಿನಲ್ಲೇ ಹೇಳುವುದಾದರೆ 'ಬುಲ್ಡೋಜರ್ ಹೆದ್ದಾರಿಯನ್ನೂ ನಿರ್ಮಿಸುತ್ತದೆ, ಮಾಫಿಯಾವನ್ನು ಬುಡಮೇಲೂ ಮಾಡುತ್ತದೆ'.

ಇನ್ನು ನಮ್ಮ ರಾಜ್ಯದ ವಿಚಾರಕ್ಕೆ ಬರುವುದಾದರೆ, ರಾಜ್ಯದ ಸಚಿವನಾಗಿ ನಾನು ಮೊದಲ ಬಾರಿಗೆ 'ಬುಲ್ಡೋಜರ್' ವಿಚಾರ ಪ್ರಸ್ತಾಪಿಸಿದ್ದೆ. ಹುಬ್ಬಳ್ಳಿಯಲ್ಲಿ ಪೊಲೀಸ್ ಠಾಣೆಗೆ ನುಗ್ಗಿದ ಒಂದು ಸಮುದಾಯದ ಜನರು ದಾಂದಲೆ ನಡೆಸಿದಾಗ 'ನಿಮಗೆ ಶಾಂತಿ ಬೇಕೋ ಅಥವಾ ಬುಲ್ಡೋಜರ್ ಸರ್ಕಾರ ಬೇಕೋ' ಎಂದು ಆಯ್ಕೆಯ ಸ್ವಾತಂತ್ರ್ಯವನ್ನು ಗಲಭೆಕೋರರಿಗೆ ನೀಡಿದ್ದು ಸತ್ಯ. ನಾನು ಆ ಹೇಳಿಕೆ ಕೊಟ್ಟಿದ್ದರ ಹಿಂದಿನ ಔಚಿತ್ಯವನ್ನು ಮೊದಲು ಅರ್ಥ ಮಾಡಿಕೊಳ್ಳಬೇಕು. ಪೌರತ್ವ ಕಾಯ್ದೆ ಜಾರಿಗೆ ತರಲು ಕೇಂದ್ರ ಸರ್ಕಾರ ಮುಂದಾದ ದಿನದಿಂದಲೂ ಒಂದು ವರ್ಗದ ಜನರು ಸಾಮಾಜಿಕವಾಗಿ ನಡೆದುಕೊಳ್ಳುತ್ತಿರುವ ರೀತಿ ಎಲ್ಲರಿಗೂ ಗೊತ್ತು. ಮಂಗಳೂರಿನಲ್ಲಿ ವಿನಾಕಾರಣ ಗಲಭೆ ಸೃಷ್ಟಿಸಿದ ಈ ವ್ಯಕ್ತಿಗಳು ಕೋವಿಡ್ ಸೋಂಕು ವ್ಯಾಪಕವಾಗಿದ್ದಾಗ ಹೇಗೆ ನಡೆದುಕೊಂಡರು ಎಂದು ಪ್ರತ್ಯೇಕವಾಗಿ ವಿವರಿಸಬೇಕಿಲ್ಲ. ಇದಕ್ಕೂ ಮುನ್ನ ರಾಜ್ಯದಲ್ಲಿ ಸಿದ್ದರಾಮಯ್ಯ ಸರ್ಕಾರ ಅಧಿಕಾರದಲ್ಲಿದ್ದಾಗ ನಡೆದ ಹಿಂದೂ ಕಾರ್ಯಕರ್ತರ ಸರಣಿ ಹತ್ಯೆಯನ್ನು ಯಾರಾದರೂ ಮರೆಯಲು ಸಾಧ್ಯವೇ? ಅದರ ಹಿಂದೆ ಇರುವ ಭಯೋತ್ಪಾದಕ ಮನಸ್ಥಿತಿ ಯಾರದ್ದು ಎಂದು ಪ್ರತ್ಯೇಕವಾಗಿ ವಿವರಿಸಬೇಕೇ?

ಅಷ್ಟೇ ಏಕೆ? ಇತ್ತೀಚೆಗೆ ನಡೆದ ಹಿಜಾಬ್ ವಿವಾದದಲ್ಲಿ ನ್ಯಾಯಾಲಯದ ತೀರ್ಪಿನ ಬಳಿಕವೂ ಕೆಲವರು ನಡೆದುಕೊಂಡ ರೀತಿ, ಶಿವಮೊಗ್ಗದ ಹರ್ಷ ಕೊಲೆ, ಬೆಂಗಳೂರಿನಲ್ಲಿ ಚಂದ್ರು ಹತ್ಯೆ, ನಂತರ ನಡೆದ ಹುಬ್ಬಳ್ಳಿ ಗಲಾಟೆ ಇದೆಲ್ಲದರ ಹಿಂದೆಯೂ ಇರುವುದು ಒಂದೇ ಮನಸ್ಥಿತಿ. ದೇಶದ ಕಾನೂನಿಗೆ ಹಾಗೂ ಸಂವಿಧಾನಕ್ಕೆ ಗೌರವ ಕೊಡದ ವ್ಯಕ್ತಿ, ಸಂಘಟನೆ, ಸಮುದಾಯ ಯಾವುದೇ ಆಗಿರಲಿ, ಅವರಿಗೆ ನಾವು ಕೊಡುವ ಆಯ್ಕೆ ಬುಲ್ಡೋಜರ್. ನನ್ನ ಈ ಹೇಳಿಕೆಯನ್ನು ಕೆಲವರು ತಪ್ಪಾಗಿ ವ್ಯಾಖ್ಯಾನಿಸಿದ್ದಲ್ಲದೇ, ಟೀಕಿಸಿದರು. ಏನೇ ಆಗಲಿ ನಿಂದಕರಿರಬೇಕಲ್ಲವೇ? ಆದರೆ ಒಂದಂತೂ ಸತ್ಯ ಸರ್ಕಾರದ ಭಾಗವಾಗಿ ಅತ್ಯಂತ ಪ್ರಜ್ಞಾಪೂರ್ವಕವಾಗಿಯೇ ನಾನು ಬುಲ್ಡೋಜರ್ ಸರ್ಕಾರದ ಪ್ರತಿಪಾದನೆ ಮಾಡಿದ್ದು. ನೆಲದ ಕಾನೂನು ಪಾಲನೆ ಮಾಡದೇ ಬೀದಿಗೆ ಇಳಿಯುವುದನ್ನು ಯಾವ ಸರ್ಕಾರವೂ ಸಹಿಸಿಕೊಳ್ಳುವುದಿಲ್ಲ. ಕಾನೂನು ವ್ಯಾಪ್ತಿಯಲ್ಲೇ ತೆಗೆದುಕೊಳ್ಳಬಹುದಾದ ಅನಿವಾರ್ಯ ಕ್ರಮದ ಬಗ್ಗೆಯಷ್ಟೇ ನಾನು ಪ್ರತಿಪಾದಿಸಿದ್ದೇನೆ ಮತ್ತು ನಾನದಕ್ಕೆ ಬದ್ಧವಾಗಿಯೂ ಇದ್ದೇನೆ.

ಬುಲ್ಡೋಜರ್ ಸರ್ಕಾರದ ಪ್ರತಿಪಾದಕರಿಗೆ ಕೋಮುವಾದಿಗಳು ಎಂದು ಪಟ್ಟಕಟ್ಟುವ ಪ್ರಯತ್ನ ದೊಡ್ಡ ಪ್ರಮಾಣದಲ್ಲಿ ನಡೆಯುತ್ತಿದೆ. ಆದರೆ ಈ ರೀತಿ ವಾದ ಮಾಡುವವರಿಗೆ ಯೋಗಿಯವರ ಬುಲ್ಡೋಜರ್ ಜಾತಿ-ಧರ್ಮ ನೋಡಿ ಅಬ್ಬರಿಸಿದ್ದಲ್ಲ ಎಂಬುದು ಗೊತ್ತಿರಲಿ. ಯೋಗಿಯವರ ದೃಷ್ಟಿಯಲ್ಲಿ ವಿವೇಕ್ ದುಬೆ, ಮುಕ್ತಾರ್ ಅನ್ಸಾರಿ, ಅತೀಕ್ ಅಹ್ಮದ್, ಶರ್ಮಾ ಸೇರಿದಂತೆ ಕಾನೂನು ಭಂಜಕರ ನಡುವೆ ವ್ಯತ್ಯಾಸವಿಲ್ಲ. ಕಾನೂನು- ಸುವ್ಯವಸ್ಥೆಗೆ ಭಂಗ ತಂದವರನ್ನು ಅವರು ಒಂದೇ ದೃಷ್ಟಿಯಲ್ಲಿ ನೋಡಿದ್ದಾರೆ. ನಮಗೂ ಅಷ್ಟೇ, ಹುಬ್ಬಳ್ಳಿಯಲ್ಲಿ ಪೊಲೀಸ್ ಠಾಣೆ ಧ್ವಂಸಗೊಳಿಸಿದವರು, ಬೆಂಗಳೂರಿನ ಕೆ.ಜಿ.ಹಳ್ಳಿಯಲ್ಲಿ ಪೊಲೀಸ್ ಠಾಣೆಗೆ ಬೆಂಕಿ ಇಟ್ಟವರು ಎಲ್ಲ ಒಂದೇ. ಈ ಎಲ್ಲ ವಿಚಾರಗಳನ್ನು ರಾಜ್ಯದ ಮುಖ್ಯಮಂತ್ರಿ ಬಸವರಾಜ ಬೊಮ್ಮಾಯಿ ಅತ್ಯಂತ ಸಂಯಮದಿಂದ ನಿಭಾಯಿಸಿದ್ದಾರೆ. ಸಮಾಜದ ಸ್ವಾಸ್ಥ್ಯ ಕೆಡಿಸುವವರ ವಿರುದ್ಧ ಬುಲ್ಡೋಜರ್ ಬಳಕೆಯನ್ನು ನಾವು ಪ್ರತಿಪಾದಿಸುತ್ತೇವೆಯೇ ಹೊರತು, ಶಾಂತಿಪ್ರಿಯರ ಮೇಲಲ್ಲ. 'ಸಾಧುಂಗೆ ಸಾಧು, ಮಾಧುರ್ಯಂಗೆ ಮಾಧುರ್ಯಂ. ಭಾದಿರ್ಪ ಕಲಿಗೆ ಕಲಿಯುಗ ವಿಪರೀತನ್. ಮಾಧವನೀತನ್ ಪೆರನಲ್ಲ' ಎಂದು ಬಾದಾಮಿಯ ಕಪ್ಪೆ ಅರಭಟ್ಟನ ಶಾಸನದಲ್ಲಿ ಹೇಳಿದ್ದು ಕೂಡಾ ಇದೇ ಅರ್ಥದಲ್ಲಿ. ನಮ್ಮ ಸರ್ಕಾರ ಆಯ್ಕೆ ಮುಂದಿಟ್ಟಿದೆ ಅಷ್ಟೇ.

ಲೇಖಕ: ಕನ್ನಡ ಮತ್ತು ಸಂಸ್ಕೃತಿ, ಇಂಧನ ಸಚಿವ



ವೇದವ್ಯಾಸರ ಶಿವಪುರಾಣಸಾರ



ಶ್ರೀ ಗಣಪತಿ ಸಚ್ಚಿದಾನಂದ ಸ್ವಾಮೀಜಿ 108

ಮನುವಿನಿಂದ ಮಾನವಸೃಷ್ಟಿ

ಸೃಷ್ಟಿಖಂಡದಲ್ಲಿ ಸೃಷ್ಟಿವರ್ಣನ ಎಂಬ ಹದಿನಾರನೆ ಅಧ್ಯಾಯವಿದೆ. ಇದರಲ್ಲಿ ಬ್ರಹ್ಮನು ನಾರದನಿಗೆ 'ತಾನು ಸೂಕ್ಷ್ಮವಾದ ಶಬ್ದಾದಿ ಪಂಚತನ್ಮಾತ್ರಗಳನ್ನು ಪಂಚೀಕರಿಸಿದೆ. ನಂತರ ಅವುಗಳಿಂದ ಸ್ಥೂಲವಾದ ಆಕಾಶವನ್ನೂ ವಾಯುವನ್ನೂ ತೇಜಸ್ಸನ್ನೂ ಜಲವನ್ನೂ ಪೃಥ್ವಿಯನ್ನೂ ಸೃಷ್ಟಿಸಿದೆ. ಜೊತೆಗೆ ಪರ್ವತಗಳನ್ನೂ ಸಮುದ್ರಗಳನ್ನೂ ಮರಗಿಡಗಳನ್ನೂ ಕಲಾ ಕಾಷ್ಠಾ ಮುಹೂರ್ತಗಳು ಸೇರಿದಂತೆ ಚತುರ್ಯುಗಗಳವರೆಗೆ ಕಾಲಗಳನ್ನೂ ಸೃಷ್ಟಿಸಿದೆ' ಎಂದು ತಿಳಿಸುತ್ತಾನೆ.

ಹಾಗೇ ಇನ್ನೂ ಕೆಲವನ್ನು ಸೃಷ್ಟಿಸುತ್ತಿದ್ದರೂ ತನಗೆ ಸಂತೋಷವಾಗಲಿಲ್ಲ. ಆಗ ಪಾರ್ವತೀ ಸಮೇತನಾದ ಶಿವನನ್ನು ನೆನೆದು ಈ ಸೃಷ್ಟಿಗೆ ಸಾಧಕರಾದ ಮರೀಚಿ ಮುಂತಾದವರನ್ನು ಸೃಷ್ಟಿಸಿದ ವಿವರವನ್ನು ನಾರದನಿಗೆ ಹೇಳುತ್ತಾನೆ. 'ನನ್ನ ಕಣ್ಣುಗಳಿಂದ ಮರೀಚಿಯನ್ನೂ, ಹೃದಯದಿಂದ ಭೃಗುವನ್ನೂ, ಶಿರಸ್ಸಿನಿಂದ ಅಂಗೀರಸನನ್ನೂ, ವ್ಯಾನವೆಂಬ ವಾಯುವಿನಿಂದ ಮುನಿಶ್ರೇಷ್ಠನಾದ ಪುಲಹನನ್ನೂ, ಉದಾನ ವಾಯುವಿನಿಂದ ಪುಲಸ್ತ್ಯನನ್ನೂ, ಸಮಾನ ವಾಯುವಿನಿಂದ ವಸಿಷ್ಠನನ್ನೂ, ಅಪಾನ ವಾಯುವಿನಿಂದ ಕ್ರತುವನ್ನೂ ಸೃಷ್ಟಿಸಿದೆ. ಕಿವಿಗಳಿಂದ ಅತ್ರಿಯನ್ನೂ, ಪ್ರಾಣಾಯುವಿನಿಂದ ದಕ್ಷನನ್ನೂ, ತೊಡೆಯಿಂದ ನಿನ್ನನ್ನೂ (ನಾರದ), ನೆರಳಿನಿಂದ ಕರ್ದಮನನ್ನೂ, ಇಚ್ಛಾಮಾತ್ರದಿಂದ ಸರ್ವಸಾಧನಗಳಿಗೂ ಸಾಧನವಾದ ಧರ್ಮಪುರುಷನನ್ನೂ ಸೃಷ್ಟಿಸಿದೆ. ಈ ರೀತಿ ಸೃಷ್ಟಿಗೆ ಸಾಧಕರಾದವರನ್ನು ಸೃಷ್ಟಿಸಿ ಆ ಮಹಾದೇವನ ಅನುಗ್ರಹದಿಂದ ಕೃತಕೃತ್ಯನಾದೆ' ಅಂತ ಬ್ರಹ್ಮ ಧನ್ಯತಾಭಾವ ಪ್ರಕಟಿಸುತ್ತಾನೆ.


'ನನ್ನ ಅಪ್ಪಣೆಯಂತೆ ಸೃಷ್ಟಿಸಾಧಕರಾದ ಮರೀಚ್ಯಾದಿಗಳು, ನನ್ನ ಸಂಕಲ್ಪಸಂಭವನಾದ ಮನುಷ್ಯರೂಪ ಧಾರಿಯಾದ ಧರ್ಮಪುರುಷನನ್ನು ಬೆಳೆಸಿಕೊಂಡು ಬಂದರು. ನನ್ನ ವಿವಿಧ ಅಂಗಗಳಿಂದ ಲೆಕ್ಕವಿಲ್ಲದಷ್ಟು ದೇವತೆಗಳನ್ನೂ ರಾಕ್ಷಸರನ್ನೂ ಸೃಷ್ಟಿಸಿದೆ. ಬಳಿಕ ನನ್ನ ಅಂತರಂಗದಲ್ಲಿಯೇ ನೆಲಸಿರುವ ಶಂಕರನಿಂದ ಪ್ರೇರಿತನಾಗಿ ನನ್ನ ದೇಹವನ್ನೇ ಎರಡಾಗಿ ಭಾಗಿಸಿಕೊಂಡು, ಎರಡು ರೂಪವನ್ನು ಧರಿಸಿದೆ. ಇದರಿಂದ ನನ್ನ ದೇಹದ ಅರ್ಧಭಾಗವು ಸ್ತ್ರೀರೂಪವಾಗಿ, ಇನ್ನೊಂದರ್ಧ ಭಾಗವು ಪುರುಷರೂಪವಾಗಿಯೂ ಪರಿಣಮಿಸಿತು. ಆ ಸ್ತ್ರೀಪುರುಷರಿಬ್ಬರೂ ಕಲೆತು ಈ ಸೃಷ್ಟಿಗೆ ಶ್ರೇಷ್ಠ ಕಾರಣವಾದ ಮಿಥುನವೊಂದನ್ನು ಸೃಷ್ಟಿಸಿದರು.

'ಸ್ತ್ರೀ-ಪುರುಷರಲ್ಲಿ ಮಾನವಸೃಷ್ಟಿಗೆ ಮುಖ್ಯ ಕಾರಣನಾದ ಸ್ವಾಯಂಭುವ ಮನು ಪುರುಷನಾಗಿದ್ದರೆ, ಯೋಗನಿಷ್ಠಳೂ ಮಹಾತಪಸ್ವಿನಿಯೂ ಆದ ಶತರೂಪೆ ಸ್ತ್ರೀಯಾಗಿದ್ದಳು. ಸೊಗಸಾದ ಲಾವಣ್ಯದಿಂದ ಶೋಭಿಸುತ್ತಿರುವ ಶತರೂಪೆಯನ್ನು ಸ್ವಾಯಂಭುವ ಮನುವು ವಿವಾಹವಿಧಿಯಿಂದ ಪರಿಗ್ರಹಿಸಿ, ಸೃಷ್ಟಿಕಾರ್ಯದಲ್ಲಿ ತೊಡಗಿದ. ಅಂದಿನಿಂದ ಸೃಷ್ಟಿಯು ಸ್ತ್ರೀ-ಪುರುಷ ಸಂಯೋಗಕ್ರಮದಿಂದ ಆರಂಭವಾಯಿತು. ಆ ಸ್ವಾಯಂಭುವ ಮನು ಮತ್ತು ಶತರೂಪೆ ದಂಪತಿಗೆ ಪ್ರಿಯವ್ರತ, ಉತ್ತಾನಪಾದರೆಂಬ ಇಬ್ಬರು ಗಂಡುಮಕ್ಕಳು. ಆಕೂತಿ, ದೇವಹೂತಿ, ಪ್ರಸೂತಿ ಎಂದು ಪ್ರಖ್ಯಾತರಾದ ಮೂರು ಹೆಣ್ಣುಮಕ್ಕಳು ಹುಟ್ಟಿದರು. ಅವರಲ್ಲಿ ಆಕೂತಿಯನ್ನು ರುಚಿಯೆಂಬುವನಿಗೂ, ಮಧ್ಯಮಳಾದ ದೇವಹೂತಿಯನ್ನು ಕರ್ದಮಪ್ರಜಾಪತಿಗೂ, ಉತ್ತಾನಪಾದನ ಕೊನೆಯ ತಂಗಿಯಾದ ಪ್ರಸೂತಿಯನ್ನು ದಕ್ಷನಿಗೂ, ಮನುವು ಮದುವೆ ಮಾಡಿಕೊಟ್ಟ. ಅವರಲ್ಲಿ ಪ್ರಸೂತಿಯ ಸಂತಾನದಿಂದಲೇ ಸ್ಥಾವರ-ಜಂಗಮಾತ್ಮಕವಾದ ಈ ಪ್ರಪಂಚವೆಲ್ಲವೂ ಬೆಳೆಯಿತು.

'ರುಚಿ ಮತ್ತು ಆಕೂತಿ ದಂಪತಿಯಲ್ಲಿ ಯಜ್ಞ ಮತ್ತು ದಕ್ಷಿಣೆ ಎಂಬ ಅವಳಿ-ಜವಳಿ ಮಕ್ಕಳು ಹುಟ್ಟಿದರು. ಆ ಯಜ್ಞನು ದಕ್ಷಿಣೆಯನ್ನು ಕೈಹಿಡಿದು ಹನ್ನೆರಡು ಮಂದಿ ಗಂಡುಮಕ್ಕಳನ್ನು ಪಡೆದ. ದೇವಹೂತಿಯೆಂಬುವಳಲ್ಲಿ ಕರ್ದಮಪ್ರಜಾಪತಿಗೆ ಅನೇಕ ಹೆಣ್ಣುಮಕ್ಕಳಾಯಿತು. ದಕ್ಷನಿಗೂ ಪ್ರಸೂತಿಯಲ್ಲಿ ಇಪ್ಪತ್ತನಾಲ್ಕು ಹೆಣ್ಣುಮಕ್ಕಳು ಹುಟ್ಟಿದರು. ದಕ್ಷಪ್ರಜಾಪತಿಯು ತನ್ನ ಹೆಣ್ಣುಮಕ್ಕಳಾದ ಶ್ರದ್ಧೆ, ಲಕ್ಷ್ಮಿ, ಧೃತಿ, ತುಷ್ಟಿ, ಪುಷ್ಟಿ, ಮೇಧ, ಕ್ರಿಯೆ, ಬುದ್ಧಿ, ಲಜ್ಜೆ, ವಸು, ಶಾಂತಿ, ಸಿದ್ಧಿ, ಕೀರ್ತಿ ಎಂಬ ಹದಿಮೂರು ಹೆಣ್ಣುಮಕ್ಕಳನ್ನು ನನ್ನ ಸಂಕಲ್ಪಮಾತ್ರದಿಂದ ಹುಟ್ಟಿದ ಧರ್ಮನಿಗೆ ಧಾರೆಯೆರೆದು ಕೊಟ್ಟ. ಇವರಿಗಿಂತಲೂ ಚಿಕ್ಕವರಾದ ಮನೋಹರವಾದ ಕಂಗಳಿಂದ ಕಂಗೊಳಿಸುತ್ತಿದ್ದ ಖ್ಯಾತಿ, ಸತ್ಪಥಸಂಭೂತಿ, ಸ್ಮೃತಿ, ಪ್ರೀತಿ, ಕ್ಷಮೆ, ಸನ್ನತಿ, ಅನುರೂಪೆ, ಊರ್ಜೆ, ಸ್ವಾಹೆ, ಸ್ವಧೆ ಎಂಬ ಉಳಿದ ಕನ್ಯೆಯರನ್ನು ಕ್ರಮವಾಗಿ ಭೃಗು, ಭವ, ಮರೀಚಿ, ಅಂಗಿರಸ್ಸು, ಪುಲಸ್ತ್ಯ, ಪುಲಹ, ಋಷಿಶ್ರೇಷ್ಠನಾದ ಕ್ರತು, ಅತ್ರಿ, ವಸಿಷ್ಠ, ಅಗ್ನಿ, ಪಿತೃಗಳು ಎಂಬ ಸೃಷ್ಟಿಯ ಮೂಲಪುರುಷರು ವಿವಾಹವಾದರು. ಇದರಿಂದ ಚರಾಚರವಸ್ತುಗಳಿಂದ ನಿಬಿಡವಾದ ಮೂರು ಲೋಕಗಳೆಲ್ಲವೂ ಇವರ ಸಂತತಿಯವರಿಂದಲೇ ತುಂಬಿಹೋದವು.'

ಪದಬಂಧ 4943

– ವಿದ್ಯಾ ವಿನಯ್



ಎಡದಿಂದ ಬಲಕ್ಕೆ

3.ಭತ್ತದ ಹೊಟ್ಟು ತೆಗೆದ ಮೇಲೆ ಉಳಿವ ಕಾಳು (2)
4.ದಿಗಂಬರನಾಗಿರುವವನು (2)
6.ಬೆಲೆಬಾಳುವ ಮಣಿಗಳನ್ನೊಳಗೊಂಡಿರುವ ಸಮುದ್ರ (4)
7.ತರುಣ ಇಲ್ಲಿದ್ದಾನೆ (3)
9.ಒಳ್ಳೆಯ ಅವಕಾಶವಿದು (3)
10.ಅಸಲಿ ಪದದ ವಿರುದ್ಧ ಪದ (3)
12.ಚಾರನೊಳಗೆ ಪಿಸುಣ ನುಸುಳಿದಾನಲ್ಲಾ! (4)
13.ಮಧುರ ಫಲ ನೀಡುವ ವೃಕ್ಷ (2)
14.ಹಾವುಗೆಯೊಳಗೆ ಪ್ರತ್ಯಕ್ಷವಾದ ಸರ್ಪ (2)

ಮೇಲಿಂದ ಕೆಳಕ್ಕೆ

1.ನಕ್ಷತ್ರ ಇಲ್ಲಿದೆ (2)
2.ಮಗ ಹೀಗೆ ತಲ್ಲೀನ (2)
3.ಈತ ಕಡಿಮೆ ಆಯುಸ್ಸುಳ್ಳವನು (3)
4.ಮನುಷ್ಯರನ್ನು ತಿನ್ನುವ ಪ್ರಾಣಿ (5)
5.ನಾಲ್ಕು ಮೂಲೆಗಳುಳ್ಳದ್ದು (2)
6.ನೆತ್ತರು ಪ್ರವಹಿಸುವಿಕೆ (5)
8.ಲಗ್ನದಲ್ಲಿ ಹೆಣ್ಣಿನ ತಂದೆ ವರನಿಗೆ ಕೊಡುವ ಉಡುಗೊರೆ (5)
10.ಸತ್ಯ ಸಂಧತೆಯಿದು (2)
11.ಲೀಲಾಜಾಲವಾಗಿ ನಡೆದ ಏಲಂ (3)
13.ಸಾಧಾರಣವಾದ ಬಟ್ಟೆ ಧರಿಸಿದವ (2)
14.ದೋಣಿಯ ಕಂಬಕ್ಕೆ ಕಟ್ಟುವ ಪಟ (2)

4942ನೇ ಪದಬಂಧದ ಉತ್ತರ

ಎಡದಿಂದ ಬಲಕ್ಕೆ:
1.ಅವಿಶ್ವಾಸ
3.ಮಹಾಕಾವ್ಯ 5.ರಸನ
6.ವ್ಯವಹಾರ 7.ಪಶ್ಚಾತ್ತಾಪ
9.ನಪುಂಸಕ
11.ತರಬೇತಿ 13.ನಾಪಿತ
15.ಸುಡುಗಾಡು
16.ಮಧುಚಂದ್ರ

ಮೇಲಿಂದ ಕೆಳಕ್ಕೆ:
1.ಅಹಂ 2.ಸರದಾರ
3.ಮನಸ್ತಾಪ 4.ವ್ಯಕ್ತಿ
6.ವ್ಯಸನ 8.ಪದಾತಿ
10.ಕರುನಾಡು
11.ತರತಮ 12.ಮಾಸು
14.ಇಂದ್ರ

ಸುಡೊಕು 5329

	7			9	8		6	
1		9	6			5		3
	6		5		2		9	
9		2				3		6
	4			5			7	
8		7	2		4	1		9
		6	4		5		2	
				2		7		4
2		4	1		9		3	


5328 ಸುಡೊಕು

6	4	2	9	5	7	1	8	3
8	9	5	1	3	6	2	4	7
7	1	3	2	8	4	6	5	9
3	2	6	5	4	9	7	1	8
9	8	7	6	1	2	4	3	5
1	5	4	3	7	8	9	6	2
5	7	9	8	6	1	3	2	4
2	6	8	4	9	3	5	7	1
4	3	1	7	2	5	8	9	6

ಆಡುವುದು ಹೇಗೆ?

ಮನೆಗಳನ್ನು 1ರಿಂದ 9ರವರೆಗಿನ ಅಂಕಿಗಳಿಂದ ತುಂಬಿ. ಮೇಲಿನಿಂದ ಕೆಳಕ್ಕೆ, ಎಡದಿಂದ ಬಲಕ್ಕೆ ಪ್ರತಿ ಸಾಲಿಗೂ ಇದೇ ನಿಯಮ. ದೊಡ್ಡ ಚೌಕದ ಒಳಗಿನ ಮಧ್ಯಮ ಚೌಕದ ಮನೆಗಳನ್ನೂ ತುಂಬಬೇಕು. ಯಾವ ಅಂಕಿಯೂ ಯಾವುದೇ ಸಾಲು, ಮಧ್ಯಮ ಚೌಕದಲ್ಲಿ ಪುನರಾವರ್ತನೆ ಆಗಬಾರದು.

ಗುಂಡಣ್ಣ



ದಿನ ಭವಿಷ್ಯ

ವಿದ್ಯಾಶಂಕರ ಸೋಮಯಾಜಿ. ಕಮ್ಮರಡಿ

ಶನಿವಾರ ಏಪ್ರಿಲ್ 30, 2022

ಶ್ರೀ ಶುಭಕೃತ್ ನಾಮ ಸಂವತ್ಸರ ಉತ್ತರಾಯಣ - ವಸಂತ ಋತು ತಿಥಿ: ಚೈತ್ರ ಕೃಷ್ಣ ಅಮಾವಾಸ್ಯೆ ಗಂ. 25-58 ನಕ್ಷತ್ರ: ಅಶ್ವಿನಿ ಗಂ 20-13 ಯೋಗ: ಪ್ರೀತಿ ಗಂ 15-19, ಕರಣ: ಚತುಷ್ಪಾದ ಗಂ. 13-25, ಮೇಷ ಮಾಸದ 16 ನೇ ದಿನ. ರಾಹುಕಾಲ : ಬೆಳಿಗ್ಗೆ 09:00 - 10:30 ಸೂರ್ಯೋದಯ : 06-13 ಸೂರ್ಯಾಸ್ತ : 06-42 ಮುಸ್ಲಿಂ ದಿನಾಂಕ : 28 ರಂಜಾನ್ ದಿನ ವಿಶೇಷ: ಭಾಗಶಃ ಸೂರ್ಯಗ್ರಹಣ (ಭಾರತದಲ್ಲಿ ಗೋಚರಿಸುವುದಿಲ್ಲ) ಅದೃಷ್ಟ ಸಂಖ್ಯೆ: 7, 11

ಮೇಷ: ಶಸ್ತ್ರ ಚಿಕಿತ್ಸಾ ವೈದ್ಯರಿಗೆ ಪ್ರಶಂಸೆಯ ಮಾತು ಕೇಳಿ ಬರುವುದು. ಉನ್ನತ ಶಿಕ್ಷಣದ ವಿದ್ಯಾರ್ಥಿಗಳಿಗೆ ಆಸಕ್ತಿ ಹೆಚ್ಚುವುದು. ವೃತ್ತಿಜೀವನಕ್ಕೆ ಸಂಬಂಧಪಟ್ಟಂತಹ ವಿಚಾರದಲ್ಲಿ ನಿರ್ಣಯ ಕೈಗೊಳ್ಳಲು ಆಪ್ತರೊಬ್ಬರ ಸಲಹೆ ಕೇಳುವಿರಿ.

ವೃಷಭ: ವೃತ್ತಿರಂಗದ ಕೆಲವೊಂದು ಸೂಕ್ಷ್ಮ ವಿಚಾರಗಳನ್ನು ಅರ್ಥಮಾಡಿಕೊಂಡರೆ ಉತ್ತಮ. ಹಣದ ಹರಿವು ನಿಧಾನವಾಗಿ ಅನುಭವಕ್ಕೆ ಬರಲಿದೆ. ತಾಂತ್ರಿಕ ಕ್ಷೇತ್ರದಲ್ಲಿ ಪರಿಣತಿ ಹೊಂದಿರುವವರಿಗೆ ಅವಕಾಶಗಳು ಅರಸಿ ಬರಲಿವೆ.

ಮಿಥುನ: ಗಣ್ಯ ವ್ಯಕ್ತಿಗಳ ಸಹಾಯದಿಂದ ಸಮಸ್ಯೆಗಳನ್ನು ಉತ್ತಮವಾಗಿ ಜಯಿಸುವಿರಿ. ವೃತ್ತಿಪರವಾದ ಕೆಲಸ ಕಾರ್ಯದಲ್ಲಿ ನಿರ್ದಾಕ್ಷಿಣ್ಯವಾಗಿ ವ್ಯವಹರಿಸುವುದನ್ನು ಅಭ್ಯಸಿಸಿ. ನಿವೇಶನ ಖರೀದಿಸುವ ಯೋಜನೆ ಹಾಕಿಕೊಳ್ಳಬಹುದು.

ಕರ್ಕಾಟಕ: ಯಾವುದೇ ಮುಜುಗರ ಅಥವಾ ಹೆದರಿಕೆ ಇಲ್ಲದೆ ಸಮಯವನ್ನು ಸತ್ಕಾರ್ಯಗಳಿಗೆ ಬಳಸಿಕೊಳ್ಳಲು ಸಿದ್ಧರಾಗಿರುವ ಪ್ರಯತ್ನವನ್ನು ಮಾಡಿ. ಸೃಜನಶೀಲ ಯೋಜನೆಗಳಲ್ಲಿ ನಿಮ್ಮನ್ನು ಸಂಪೂರ್ಣವಾಗಿ ತೊಡಗಿಸಿಕೊಳ್ಳುವಿರಿ.

ಸಿಂಹ: ಅಧಿಕಾರಿ ವರ್ಗದವರಲ್ಲಿ ಹಾಗೂ ಸಹಚರರಲ್ಲಿ ವೈಮನಸ್ಯವನ್ನು ದೂರಪಡಿಸಿಕೊಂಡು ಉತ್ತಮ ಕೆಲಸಗಳನ್ನು ನಿರ್ವಹಿಸುವುದರಲ್ಲಿ ತಲೆತಗ್ಗಿಸುವಂತಾಗಬಹುದು. ತಾರತಮ್ಯದ ಮಾತುಗಳು ಆಡುವುದನ್ನು ಕಡಿಮೆ ಮಾಡಿ.

ಕನ್ಯಾ: ಎಂಜಿನಿಯರಿಂಗ್ ಕ್ಷೇತ್ರದಲ್ಲಿಯವರಿಗೆ ಹೆಚ್ಚಿನ ಅವಕಾಶಗಳ ಜೊತೆಯಲ್ಲಿ ಬಯಸಿದ ಕಂಪನಿಯಲ್ಲಿ ಕೆಲಸ ಸಿಗುವ ಸಾಧ್ಯತೆ. ಪುಣ್ಯ ಕ್ಷೇತ್ರಗಳಿಗೆ ಭೇಟಿ ನೀಡುವ ಬಗ್ಗೆ ಯೋಚಿಸಿ. ಅಧಿಕ ಸುತ್ತಾಟದಿಂದ ಆಯಾಸ.

ತುಲಾ: ಅಣ್ಣ-ತಮ್ಮಂದಿರ ವರ್ಗದವರ ಮನೆಯಲ್ಲಿನ ಶುಭಕಾರ್ಯಗಳಲ್ಲಿ ಜವಾಬ್ದಾರಿ ವಹಿಸುವಿರಿ. ಅಗತ್ಯ ವಸ್ತುಗಳ ಖರೀದಿಗೆ ಹಣ ವಿನಿಯೋಗ ಆಗುವುದು. ಷೇರು ಮಾರಾಟಗಳಿಂದ ಲಾಭ. ಬಿಳಿ ಬಣ್ಣದಿಂದ ಶುಭ.

ವೃಶ್ಚಿಕ: ರಾಜಕಾರಣಿಗಳೊಂದಿಗೆ ಅಧಿಕವಾಗಿ ಬೆಳೆಸಿಕೊಂಡ ಒಡನಾಟವು ಕಾರಾಗೃಹ ವಾಸದಂತಹ ಅಪಾಯದ ಪರಿಸ್ಥಿತಿಯನ್ನು ತಂದೊಡ್ಡಲಿದೆ. ಎಚ್ಚರವಹಿಸಿ. ಉದ್ಯೋಗದಲ್ಲಿನ ಸಮಸ್ಯೆಯಿಂದಾಗಿ ಬದಲಾವಣೆಯ ಮನಸ್ಸು.

ಧನು: ಹಿರಿಯರ ಮಾರ್ಗದರ್ಶನದಂತೆ ನಡೆದು ಕೆಲಸಗಳನ್ನು ಮಾಡುವುದರಿಂದ ಅಡೆತಡೆಗಳು ಇರುವುದಿಲ್ಲ. ಅನಿರೀಕ್ಷಿತವಾಗಿ ಸಂಘ-ಸಂಸ್ಥೆಗಳ ಜವಾಬ್ದಾರಿಯ ಅಧಿಕಾರ ವಹಿಸಬೇಕಾಗುವುದು.

ಮಕರ: ಕಾರ್ಯಕ್ಷೇತ್ರದಲ್ಲಿ ಸ್ಥಾನಮಾನ, ಗೌರವ ತೋರಿಬಂದರೂ ಕೆಲಸದ ಒತ್ತಡದಿಂದ ದೇಹಾಯಾಸ. ಇದು ಆರೋಗ್ಯದ ಮೇಲೂ ದುಷ್ಪರಿಣಾಮ ಬೀರಲಿದೆ. ಮನೆಯಲ್ಲಿ ಆಗಾಗ ಅಶಾಂತಿಯ ವಾತಾವರಣ ಸೃಷ್ಟಿಯಾಗುವುದು.

ಕುಂಭ: ಆತ್ಮವಿಶ್ವಾಸವನ್ನು ಹೆಚ್ಚಿಸಿಕೊಂಡು ಪರಿಶ್ರಮದಿಂದ ಪ್ರಗತಿಯ ಹಾದಿಗೆ ಹೋಗುವಿರಿ. ರಕ್ತದೊತ್ತಡವನ್ನು ನಿಯಂತ್ರಣದಲ್ಲಿರಿಸಲು ಯೋಗಾಭ್ಯಾಸ ಅಥವಾ ಧ್ಯಾನ ಮಾಡುವುದನ್ನು ಅಭ್ಯಾಸಿಸಿ. ಪುಣ್ಯಕ್ಷೇತ್ರ ದರ್ಶನ ಸಾಧ್ಯತೆ.

ಮೀನ: ರಫ್ತು ಮಾರಾಟದಲ್ಲಿ ಸ್ವಲ್ಪ ಮಟ್ಟಿನ ಹಿನ್ನಡೆಯಾದರೂ, ಆದಾಯಕ್ಕೆ ತೊಂದರೆಯಿಲ್ಲ. ವಿದೇಶಿ ಬಂಡವಾಳಗಳಿಂದ ಲಾಭ ಗಳಿಸುವ ಅವಕಾಶ. ಉತ್ತಮ ಸಂತಾನ ಪ್ರಾಪ್ತಿ. ಸಂಸಾರದಲ್ಲಿ ಸಂತೃಪ್ತ ಜೀವನ ನಡೆಸುವಿರಿ.



ಮಹಿಳೆಯರ ಫೆನ್ಸಿಂಗ್‌ನಲ್ಲಿ ಚಿನ್ನದ ಪದಕ ಗೆದ್ದ ಪಂಜಾಬ್ ವಿವಿಯ ಸನ್ಯಾ ಸಂಭ್ರಮ –ಪ್ರಜಾವಾಣಿ ಚಿತ್ರ

ಮೊದಲ ದಿನದ ಸ್ಪರ್ಧೆಗಳು



ಪುರುಷರ 10000 ಮೀಟರ್ಸ್ ಓಟ, ಫೈನಲ್	ಬೆಳಿಗ್ಗೆ 6.15
ಮಹಿಳೆಯರ 10000 ಮೀಟರ್ಸ್ ಓಟ, ಫೈನಲ್	ಬೆಳಿಗ್ಗೆ 7.00
ಪುರುಷರ 100 ಮೀ ಓಟ, ಡೆಕಾಥ್ಲಾನ್	ಬೆಳಿಗ್ಗೆ 8.00
ಪುರುಷರ ಲಾಂಗ್‌ಜಂಪ್, ಡೆಕಾಥ್ಲಾನ್	ಬೆಳಿಗ್ಗೆ 8.40
ಪುರುಷರ ಶಾಟ್‌ಪಟ್ (7.260 ಕೆಜಿ), ಡೆಕಾಥ್ಲಾನ್	ಬೆಳಿಗ್ಗೆ 9.30
ಪುರುಷರ ಹೈಜಂಪ್, ಡೆಕಾಥ್ಲಾನ್	ಸಂಜೆ 4.30
ಮಹಿಳೆಯರ ಪೋಲ್‌ವಾಲ್ಟ್, ಫೈನಲ್	ಸಂಜೆ 4.30
ಪುರುಷರ ಡಿಸ್ಕಸ್ ಥ್ರೋ, ಫೈನಲ್	ಸಂಜೆ 5.00
ಪುರುಷರ 400 ಮೀ ಹರ್ಡಲ್ಸ್, ಫೈನಲ್	ಸಂಜೆ 6.00
ಪುರುಷರ ಲಾಂಗ್‌ಜಂಪ್, ಫೈನಲ್	ಸಂಜೆ 6.10
ಮಹಿಳೆಯರ 400 ಮೀ ಹರ್ಡಲ್ಸ್, ಫೈನಲ್	ಸಂಜೆ 6.20
ಪುರುಷರ 400 ಮೀ ಓಟ, ಡೆಕಾಥ್ಲಾನ್	ಸಂಜೆ 6.35

ಕಬಡ್ಡಿ ಫೈನಲ್ ಕಂಠೀರವದಲ್ಲಿ

ಕಬಡ್ಡಿ ಸ್ಪರ್ಧೆಗಳ ಫೈನಲ್ ಪಂದ್ಯಗಳು ಕಂಠೀರವ ಕ್ರೀಡಾಂಗಣದಲ್ಲಿ ನಡೆಯಲಿದೆ. ಕ್ರೀಡಾಕೂಟದ ಕೊನೆಯ ದಿನವಾದ ಮೇ 3ರಂದು ಈ ಪಂದ್ಯಗಳನ್ನು ಆಯೋಜಿಸಲಾಗಿದೆ. ಮಹಿಳೆಯರ ಫೈನಲ್ ಮಧ್ಯಾಹ್ನ ಒಂದು ಗಂಟೆಗೆ ನಡೆಯಲಿದ್ದು ನಂತರ ಪುರುಷರ ವಿಭಾಗದ ಫೈನಲ್ ನಡೆಯಲಿದೆ.

ಯುವತಾರೆಗಳ ‘ಹೊಸ’ ನಿರೀಕ್ಷೆ

ಖೇಲೊ ಇಂಡಿಯಾ: ಅಥ್ಲೆಟಿಕ್ಸ್ ಇಂದಿನಿಂದ; ದ್ಯುತಿ, ಪ್ರಿಯಾ ಮೇಲೆ ಕಣ್ಣು

• ವಿಕ್ರಂ ಕಾಂತಿಕೆರೆ

ಬೆಂಗಳೂರು: ಎರಡು ವರ್ಷಗಳ ಕಾಮಗಾರಿಯ ನಂತರ ಕಂಠೀರವ ಕ್ರೀಡಾಂಗಣದ ಅಥ್ಲೆಟಿಕ್ ಟ್ರ್ಯಾಕ್ ಹೊಸತನದೊಂದಿಗೆ ಕಂಗೊಳಿಸುತಿದೆ. ಅತ್ಯಾಧುನಿಕ ಸಿಂಥೆಟಿಕ್ ಹಾಸು ಅಳವಡಿಸಿರುವ ಟ್ರ್ಯಾಕ್‌ನಲ್ಲಿ ಹೊಸ ಕನಸುಗಳೊಂದಿಗೆ ಯುವತಾರೆಗಳು ಕಣಕ್ಕೆ ಇಳಿಯಲಿದ್ದಾರೆ.

ಖೇಲೊ ಇಂಡಿಯಾ ವಿಶ್ವವಿದ್ಯಾಲಯಗಳ ಕ್ರೀಡಾಕೂಟದ ಅಥ್ಲೆಟಿಕ್ಸ್ ಶನಿವಾರ ಆರಂಭಗೊಳ್ಳಲಿದ್ದು ಕಳೆದ ಬಾರಿಯ ಚಾಂಪಿಯನ್ ಮಂಗಳೂರು ವಿವಿ, ಈ ಬಾರಿಯ ವಾರ್ಸಿಟಿ ಕೂಟದ ರನ್ನರ್ ಅಪ್ ಕ್ಯಾಲಿಕಟ್ ವಿವಿ, ಆತಿಥೇಯ ಜೈನ್ ವಿವಿ, ರೋಹ್ಟಕ್‌ನ ಮಹರ್ಷಿ ದಯಾನಂದ ವಿವಿ ಮತ್ತು ಪಂಜಾಬ್‌ನ ಲವ್ಲಿ ಪ್ರೊಫೆಷನಲ್ ವಿವಿಗಳು ಭರವಸೆಯಲ್ಲಿವೆ.

ಕ್ರೀಡಾಕೂಟದ ಮೊದಲ ಆವೃತ್ತಿಯ ಅಥ್ಲೆಟಿಕ್ಸ್‌ನಲ್ಲಿ ಮಂಗಳೂರು ವಿವಿ ಮತ್ತು ಕೋಟಯಂನ ಮಹಾತ್ಮ ಗಾಂಧಿ ವಿವಿಗಳು ಜಿದ್ದಾಜಿದ್ದಿಯ ಪೈಪೋಟಿ ಒಡ್ಡಿದ್ದವು. ಈ ಬಾರಿ ಅಖಿಲ ಭಾರತ ಅಂತರ ವಾರ್ಸಿಟಿ ವಿವಿ ಕೂಟದಲ್ಲಿ ಮಂಗಳೂರು ವಿವಿ ಚಾಂಪಿಯನ್ ಆಗಿತ್ತು.

ಪುರುಷರ 400 ಮೀಟರ್ಸ್ ಮತ್ತು 800 ಮೀಟರ್ಸ್ ಓಟದಲ್ಲಿ ಕ್ರಮವಾಗಿ ನಿಹಾಲ್ ಜೋಯಲ್ ಮತ್ತು ದೇವಯ್ಯ ಕಣದಲ್ಲಿದ್ದಾರೆ. ಅಂತರ ವಾರ್ಸಿಟಿ ಕೂಟದ ಪುರುಷರ ಶಾಟ್‌ಪಟ್‌ನಲ್ಲಿ ಚಿನ್ನ ಗೆದ್ದ ವನಂ ಶರ್ಮಾ ಮತ್ತು ಮಹಿಳೆಯರ ವಿಭಾಗದಲ್ಲಿ ಕಂಚು ಗೆದ್ದ ರೇಖಾ, ಲಾಂಗ್‌ಜಂಪ್‌ನಲ್ಲಿ ಬೆಳ್ಳಿ ಗೆದ್ದಿರುವ ಶ್ರುತಿಲಕ್ಷ್ಮಿ ನಿರೀಕ್ಷೆ ಮೂಡಿಸಿದ್ದಾರೆ.

‘ಪುರುಷರ 4x100 ಮತ್ತು 4x400 ಮೀ, ಮಹಿಳೆಯರ 4x100 ಮೀ ರಿಲೆಯಲ್ಲೂ ಪದಕಗಳನ್ನು ಗೆಲ್ಲುವ ನಿರೀಕ್ಷೆ ಇದೆ’ ಎಂದು ‘ಪ್ರಜಾವಾಣಿ’ ಜೊತೆ ಮಾತನಾಡಿದ ವಿವಿ ಕ್ರೀಡಾ ವಿಭಾಗದ ನಿರ್ದೇಶಕ ಅವಿನ್ ಕುಮಾರ್ ಕೆ ಹೇಳಿದರು.

ದ್ಯುತಿ ಚಾಂದ್, ಪ್ರಿಯಾ ಮೋಹನ್ ಮಿಂಚುವ ನಿರೀಕ್ಷೆ: ಒಲಿಂಪಿಯನ್ ದ್ಯುತಿ ಚಾಂದ್ ಮತ್ತು ಆತಿಥೇಯ ಜೈನ್ ವಿವಿಯ ಪ್ರಿಯಾ ಮೋಹನ್ ಮಹಿಳೆಯರ ಸ್ಪ್ರಿಂಟ್‌ನಲ್ಲಿ ಕುತೂಹಲ ಮೂಡಿಸಿದ್ದಾರೆ. 200 ಮೀಟರ್ಸ್ ಸ್ಪರ್ಧೆಯಲ್ಲಿ ಇವರಿಬ್ಬರ ನಡುವೆ ಮೇ 2ರಂದು ಸ್ಪರ್ಧೆ ನಡೆಯಲಿದೆ.

ಪ್ರಿಯಾ, ಅಂತರ ವಿವಿ ಕೂಟದ 200 ಮತ್ತು 400 ಮೀಟರ್ಸ್ ಟ್ರ್ಯಾಕ್‌ನಲ್ಲಿ ಚಿನ್ನದ ಸಾಧನೆ ಮಾಡಿದ್ದರು. 200 ಮೀಟರ್ಸ್ ಓಟದಲ್ಲಿ 24 ಸೆಕೆಂಡುಗಳಲ್ಲಿ ಗುರಿಮುಟ್ಟಿದ್ದರು. ತವರಿನಲ್ಲಿ, ವೈಯಕ್ತಿಕ ಸಾಧನೆ (23.96 ಸೆ) ಉತ್ತಮಪಡಿಸುವ ನಿರೀಕ್ಷೆಯಲ್ಲಿದ್ದಾರೆ.

400 ಮೀಟರ್ಸ್‌ನಲ್ಲೂ ಅವರು ಸಾಧನೆ ಉತ್ತಮಪಡಿಸುವ ನಿರೀಕ್ಷೆಯಲ್ಲಿದ್ದಾರೆ. 52.77 ಸೆಕೆಂಡುಗಳ ಸಾಧನೆಯನ್ನು ವಾರ್ಸಿಟಿ ಕೂಟದಲ್ಲಿ (52.58 ಸೆ) ಅವರು ಉತ್ತಮಪಡಿಸಿಕೊಂಡಿದ್ದರು. ಕೂಟ ದಾಖಲೆಯನ್ನೂ ಬರೆದಿದ್ದರು.

ವಾರ್ಸಿಟಿ ಕೂಟದಲ್ಲಿ ದಾಖಲೆಯೊಂದಿಗೆ (11.44 ಸೆ) 100 ಮೀಟರ್ಸ್ ಓಟದ ಚಿನ್ನ ಗೆದ್ದಿದ್ದ ಕಳಿಂಗ ಇನ್‌ಸ್ಟಿಟ್ಯೂಟ್ ಆಫ್ ಇಂಡಸ್ಟ್ರಿಯಲ್ ಟೆಕ್ನಾಲಜಿಯ ದ್ಯುತಿ ಸ್ನಾಯು ಸೆಳೆತದಿಂದಾಗಿ 200 ಮೀಟರ್ಸ್ ಓಟದ ಫೈನಲ್‌ನಲ್ಲಿ ಸ್ಪರ್ಧಿಸಿರಲಿಲ್ಲ. ಆದರೆ ಹೀಟ್ಸ್‌ನಲ್ಲಿ ಉತ್ತಮ ಸಾಧನೆ ಮಾಡಿದ್ದರಿಂದ ಖೇಲೊ ಇಂಡಿಯಾ ಕೂಟಕ್ಕೆ ಆಯ್ಕೆಯಾಗಿದ್ದಾರೆ. 2019ರ ವಿಶ್ವ ವಾರ್ಸಿಟಿ ಗೇಮ್ಸ್‌ನ ಚಿನ್ನದ ಪದಕ ವಿಜೇತೆ ದ್ಯುತಿ ಅವರಿಗೆ 100 ಮೀಟರ್ಸ್‌ನಲ್ಲಿ ಗುರುಜಂಬೇಶ್ವರ್ ವಿವಿಯ ಪ್ರೀತಿ ಮತ್ತು ಪುಣೆ ವಿವಿಯ ಅವಂತಿಕಾ ಪೈಪೋಟಿ ಒಡ್ಡಲಿದ್ದಾರೆ.

ಕಳೆದ ಬಾರಿ ಅಥ್ಲೆಟಿಕ್ಸ್‌ನಲ್ಲಿ ಅಗ್ರ 5 ಸ್ಥಾನ

ವಿಶ್ವವಿದ್ಯಾಲಯ	ಚಿನ್ನ	ಬೆಳ್ಳಿ	ಕಂಚು	ಒಟ್ಟು
ಮಂಗಳೂರು	7	6	5	18
ಕೋಟಯಂ	6	3	2	11
ಪಂಜಾಬಿ	4	0	2	6
ಮದ್ರಾಸ್	3	5	2	10
ರಾಜಸ್ಥಾನ	3	1	0	4

ಕಳೆದ ಬಾರಿ ಕರ್ನಾಟಕದ ಇತರ ವಿವಿಗಳ ಸಾಧನೆ

ವಿಶ್ವವಿದ್ಯಾಲಯ	ಚಿನ್ನ	ಬೆಳ್ಳಿ	ಕಂಚು	ಒಟ್ಟು	ಸ್ಥಾನ
ರಾಜೀವಗಾಂಧಿ	1	1	1	3	11
ರಾಣಿ ಚೆನ್ನಮ್ಮ	1	-	-	1	16
ಮೈಸೂರು	-	1	-	1	26
ಗುಲ್ಬರ್ಗ	-	-	1	1	32
ಕಾನೂನು	-	-	1	1	32



ಕಂಠೀರವ ಕ್ರೀಡಾಂಗಣದ ಟ್ರ್ಯಾಕ್‌ನಲ್ಲಿ ಶುಕ್ರವಾರ ಸ್ಟಾರ್ಟಿಂಗ್ ಬ್ಲಾಕ್‌ಗಳನ್ನು ಅಳವಡಿಸಲಾಯಿತು –ಪ್ರಜಾವಾಣಿ ಚಿತ್ರ/ರಂಜು ಪಿ



ದ್ಯುತಿ ಚಾಂದ್



ಪ್ರಿಯಾ ಮೋಹನ್


‘ಲವ್ಲಿ’ ಗುರಿಯಿಟ್ಟ ಸರ್ತಾಜ್ ಸಿಂಗ್

ಪ್ರಜಾವಾಣಿ ವಾರ್ತೆ

ಬೆಂಗಳೂರು: ಪಂಜಾಬ್‌ನ ಲವ್ಲಿ ಪ್ರೊಫೆಷನಲ್ ವಿಶ್ವವಿದ್ಯಾಲಯದ ಸರ್ತಾಜ್ ಸಿಂಗ್ ತಿವಾನ ಅವರು ಖೇಲೊ ಇಂಡಿಯಾ ವಿಶ್ವವಿದ್ಯಾಲಯಗಳ ಕ್ರೀಡಾಕೂಟದ ಶೂಟಿಂಗ್ ರೇಂಜ್‌ನಲ್ಲಿ ಗಮನ ಸೆಳೆದರು. ಭಾರತ ಕ್ರೀಡಾ ಪ್ರಾಧಿಕಾರದ (ಸಾಯ್) ಆವರಣದಲ್ಲಿ ಶುಕ್ರವಾರ ನಡೆದ 50 ಮೀಟರ್ಸ್ ಪೊಸಿಷನ್–3 ವಿಭಾಗದ ಫೈನಲ್‌ನಲ್ಲಿ ಅವರು ಒಲಿಂಪಿಯನ್ ಐಶ್ವರ್ಯ ಪ್ರತಾಪ್ ಸಿಂಗ್ ತೋಮರ್ ವಿರುದ್ಧ ಗೆದ್ದು ಚಿನ್ನ ಗೆದ್ದರು.

ಗುರುನಾನಕ್ ದೇವ್ ವಿವಿಯನ್ನು ಪ್ರತಿನಿಧಿಸುತ್ತಿರುವ ತೋಮರ್ ಅರ್ಹತಾ ಸುತ್ತಿನಲ್ಲಿ ಅಗ್ರ ಸ್ಥಾನ ಗಳಿಸಿದ್ದರು. ಆದರೆ ಫೈನಲ್‌ನಲ್ಲಿ ಸೋತು ಬೆಳ್ಳಿ ಪದಕಕ್ಕೆ ಸಮಾಧಾನಪಟ್ಟುಕೊಂಡರು. ಜೈನ್ ವಿವಿಯಲ್ಲಿ ನಡೆದ ಫೆನ್ಸಿಂಗ್‌ನ ಫೈನಲ್‌ನಲ್ಲಿ ಗುರುನಾನಕ್ ದೇವ್ ವಿವಿಯ ಚಿಂಗಖಮ್ ಜೆಟ್ಲಿ ಸಿಂಗ್ ತಮ್ಮದೇ ವಿವಿಯ ಶುಭಂ ವಿರುದ್ಧ ಗೆದ್ದು ಚಿನ್ನಕ್ಕೆ ಮುತ್ತಿಕ್ಕಿದರು.

ಆರನೇ ದಿನದ ಫಲಿತಾಂಶಗಳು: ಪುರುಷರ ಫೆನ್ಸಿಂಗ್, ಎಪಿ: ಚಿಂಗಖಮ್ ಜೆಟ್ಲಿ ಸಿಂಗ್ (ಗುರುನಾನಕ್ ದೇವ್ ವಿವಿ)–1, ಶುಭಂ (ಗುರುನಾನಕ್)–2, ಸಚಿನ್ (ಮೈಸೂರು ವಿವಿ), ರೋಹಿತ್ ಸೋಮನ್ (ಮಹಾತ್ಮ ಗಾಂಧಿ)–3; ಮಹಿಳೆಯರ ಸಬ್ರೆ: ಸಾನ್ಯ (ಪಂಜಾಬ್)–1, ಜಗಮೀತ್ ಕೌರ್ (ಗುರುನಾನಕ್)–2, ಹುಸನ್‌ಪ್ರೀತ್ ಕೌರ್ (ಗುರುನಾನಕ್), ಅಲಕಾ ಸನ್ನಿ (ಕಣ್ಣೂರು)–3. ಜೂಡೊ, ಪುರುಷರ 73 ಕೆಜಿ: ಹರ್ಷ ಟೋಕಸ್ (ಡೆಲ್ಲಿ)–1, ಮಹಕ್‌ಪ್ರೀತ್ (ಅಮರಾವತಿ)–2, ಗುರುಪ್ರೀತ್ ಸಿಂಗ್ (ಗುರುನಾನಕ್), ಶೌರ್ಯವೀರ್ ಗಿಲ್ (ಪಂಜಾಬ್)–3; 81 ಕೆಜಿ: ದೀಪಕ್ ಮಿಶ್ರಾ (ಲವ್ಲಿ)–1, ಆದಿತ್ಯ (ಪುಣೆ)–2, ಸಮೀರ್ ಪಠಾಣ್ (ಗುಜರಾತ್), ಹರ್ಷಪ್ರೀತ್ ಸಿಂಗ್ (ಪಂಜಾಜಿ); 90 ಕೆಜಿ: ಅತುಲ್ ಕುಮಾರ್ (ಅಮರಾವತಿ)–1, ದಿವೇಶ್ (ಕುರುಕ್ಷೇತ್ರ)–2, ಜಗತಾರ್ (ಲವ್ಲಿ), ಪ್ರದೀಪ್ ಗಾಯಕವಾಡ್ (ಮರಾಠವಾಡ)–3. ಮಹಿಳೆಯರ 57 ಕೆಜಿ: ಜ್ಯೋತಿ (ಚೌಧರಿ ದೇವಿ ಲಾಲ್)–1, ಅಂಕಿತಾ (ಮಹರ್ಷಿ ದಯಾನಂದ್)–2, ಶುಭಾಂಗಿ ರಾವತ್ (ನಾಗಪುರ), ಮಾತೋಲಿ ದೇವಿ (ಗುರುನಾನಕ್); 63 ಕೆಜಿ: ಪ್ರೀತಿ (ಮಹರ್ಷಿ ದಯಾನಂದ್)–1, ಉನ್ನತಿ (ಲವ್ಲಿ)–2, ಸೀನು (ಚೌಧರಿ ಬನ್ಸಿ ಲಾಲ್), ಶ್ರೇಯಾಂಸಿ (ಸರ್ದಾರ್ ಪಟೇಲ್)–3; 70 ಕೆಜಿ: ಇನುಗಂಬಿ (ಲವ್ಲಿ)–1, ರಬಿನಾ ದೇವಿ (ಗುರುನಾನಕ್)–2, ಪ್ರೇರಣಾ (ಡೆಲ್ಲಿ), ರೀತು (ಮಹರ್ಷಿ ದಯಾನಂದ)–3. ಶೂಟಿಂಗ್: ಪುರುಷರ 10 ಮೀ ಏರ್ ಪಿಸ್ತೂಲು ವರುಣ್ ತೋಮರ್ (ಚೌಧರಿ ಚರಣ್ ಸಿಂಗ್)–1, ಸುರಿಂದರ್ ಸಿಂಗ್ (ಪಂಜಾಬಿ)–2, ಅನ್ಮೋಲ್ ಜೈನ್ (ಮಹರ್ಷಿ)–3; ಪುರುಷರ 10 ಮೀ ಏರ್‌ಪಿಸ್ತೂಲು ತಂಡ: ಡೆಲ್ಲಿ (1722 ಪಾಯಿಂಟ್ಸ್)–1, ಪಂಜಾಬಿ–2, ಚೌಧರಿ ಚರಣ್ ಸಿಂಗ್–3; ಪುರಷರ 50 ಮೀ ಪೊಸಿಷನ್–3: ಸರ್ತಾಜ್ ಸಿಂಗ್ ತಿವಾನ (ಲವ್ಲಿ)–1, ಐಶ್ವರ್ಯ ಪ್ರತಾಪ್ ಸಿಂಗ್ ತೋಮರ್ (ಗುರುನಾನಕ್)–2, ಸೂರ್ಯಪ್ರತಾಪ್ (ಪಂಜಾಬ್)–3; ಪುರುಷರ 50 ಮೀ ಪೊಸಿಷನ್–3: ಪಂಜಾಬ್ (1706 ಪಾಯಿಂಟ್ಸ್)–1, ಗುರುನಾನಕ್–2, ಕುರುಕ್ಷೇತ್ರ–3.



ಕೂಟದಲ್ಲಿ ಇದೇ ಮೊದಲ ಬಾರಿ ಸೇರಿಸಿರುವ ಯೋಗ ಸ್ಪರ್ಧೆಯಲ್ಲಿ ಸ್ವಾಮಿ ವಿವೇಕಾನಂದ ಯೋಗ ಅನುಸಂಧಾನ ಸಂಸ್ಥೆಯ ಸ್ಪರ್ಧಿಗಳು ಆಸನ ಪ್ರದರ್ಶಿಸಿದರು –ಪ್ರಜಾವಾಣಿ ಚಿತ್ರ/ಕೃಷ್ಣಕುಮಾರ್ ಪಿ.ಎಸ್

‘ಪ್ರಧಾನಿ ಪದಚ್ಯುತಿಗೆ ಗೋಟಬಯ ಸಮ್ಮತಿ’

ಕೊಲಂಬೊ (ಎ.ಪಿ): ದೇಶದ ಆರ್ಥಿಕ ಬಿಕ್ಕಟ್ಟಿನ ಹಿನ್ನೆಲೆಯಲ್ಲಿ ಜನಾಕ್ರೋಶಕ್ಕೆ ಮಣಿದಿರುವ ಅಧ್ಯಕ್ಷ ಗೋಟಬಯ ರಾಜಪಕ್ಸ ಅವರು ಪ್ರಧಾನಿ ಸ್ಥಾನದಿಂದ ತನ್ನ ಅಣ್ಣ ಮಹಿಂದಾ ರಾಜಪಕ್ಸ ಅವರ ಪದಚ್ಯುತಿಗೆ ಒಪ್ಪಿದ್ದಾರೆ.

ಪ್ರಧಾನಿ ಸ್ಥಾನಕ್ಕೆ ಹೊಸ ಅಭ್ಯರ್ಥಿ ಹಾಗೂ ಸರ್ವಪಕ್ಷಗಳ ಸದಸ್ಯರನ್ನು ಒಳಗೊಂಡ ಹೊಸ ಸಂಪುಟದ ಆಯ್ಕೆಗಾಗಿ ರಾಷ್ಟ್ರೀಯ ಸಮಿತಿಯನ್ನು ರಚಿಸಲೂ ತೀರ್ಮಾನಿಸಿದ್ದಾರೆ.

ಅಧ್ಯಕ್ಷರ ಜೊತೆಗಿನ ಸಭೆಯ ನಂತರ ಸಂಸದ ಮೈತ್ರಿಪಾಲ ಸಿರಿಸೇನಾ ಅವರು ಈ ವಿಷಯ ತಿಳಿಸಿದರು. ಸಿರಿಸೇನಾ ಅವರು ರಾಜಪಕ್ಸಗೂ ಮೊದಲು ಶ್ರೀಲಂಕಾದ ಅಧ್ಯಕ್ಷರಾಗಿದ್ದರು.

ಅಧ್ಯಕ್ಷ ಗೋಟಬಯ, ಪ್ರಧಾನಿ ಮಹಿಂದಾ ಒಳಗೊಂಡಂತೆ ರಾಜಪಕ್ಸ ಕುಟುಂಬವು ಶ್ರೀಲಂಕಾದ ರಾಜಕಾರಣದಲ್ಲಿ ಕಳೆದ 20 ವರ್ಷಗಳಿಂದ ಪ್ರಾಬಲ್ಯ ಹೊಂದಿದೆ. ಈ ಕುಟುಂಬದ ವಿರುದ್ಧ ಈಗ ಜನಾಕ್ರೋಶ ವ್ಯಕ್ತವಾಗಿದೆ. ಅಧ್ಯಕ್ಷ ಮತ್ತು ಪ್ರಧಾನಿ ನಿವಾಸದ ಎದುರು ಹಲವು ದಿನಗಳಿಂದ ಜನರು ಭಾರಿ ಪ್ರತಿಭಟನೆಯಲ್ಲಿ ತೊಡಗಿದ್ದಾರೆ.

ಬಹುಮತ ಸಾಬೀತುಪಡಿಸಿ: ಮಧ್ಯಂತರ ಸರ್ಕಾರ ರಚಿಸಲು 225 ಸದಸ್ಯ ಬಲದ ಸಂಸತ್ತಿನಲ್ಲಿ 113 ಸದಸ್ಯ ಬಲ ಅಗತ್ಯವಿದೆ. ರಾಜಕೀಯ ಪಕ್ಷಗಳು ಇಷ್ಟು ಸದಸ್ಯ ಬಲ ಇರುವುದನ್ನು ಸಾಬೀತು ಪಡಿಸಬೇಕು ಎಂದು ಅಧ್ಯಕ್ಷ ಗೋಟಬಯ ರಾಜಪಕ್ಸ ತಿಳಿಸಿದ್ದಾರೆ.

ಆಡಳಿತರೂಢ ಎಸ್‌ಎಲ್‌ಪಿಪಿ ಮೈತ್ರಿಕೂಟದ ಭಿನ್ನಮತೀಯ ಸಂಸದರಿಂದ ಅಗತ್ಯ ಸದಸ್ಯ ಬಲ ಕ್ರೋಡಿಕರಿಸಲು ವಿರೋಧಪಕ್ಷಗಳ ಜೊತೆಗೆ ಚರ್ಚೆ ಆರಂಭಿಸಬೇಕು ಎಂದು ಸಲಹೆ ಮಾಡಿದ್ದಾರೆ.

ಭಾರತೀಯ ಹೈಕಮಿಷನರ್ ಭೇಟಿ ಪರಿಸ್ಥಿತಿ ವಿವರಿಸಿದ ನಿಯೋಗ

ಕೊಲಂಬೊ (ಪಿಟಿಐ): ಶ್ರೀಲಂಕಾದ ಆಡಳಿತಾರೂಢ ಎಸ್‌ಎಲ್‌ಪಿಪಿ ಮೈತ್ರಿ ಪಕ್ಷದ ನಿಯೋಗವು ಭಾರತೀಯ ಹೈಕಮಿಷನರ್ ಅವರನ್ನು ಭೇಟಿಯಾಗಿ ಪ್ರಸಕ್ತ ರಾಜಕೀಯ ಬಿಕ್ಕಟ್ಟಿನ ಕುರಿತು ವಿವರಣೆ ನೀಡಿದೆ.

ಮಾಜಿ ಅಧ್ಯಕ್ಷ ಮೈತ್ರಿಪಾಲ ಸಿರಿಸೇನಾ ನೇತೃತ್ವದ ನಿಯೋಗ ಹೈಕಮಿಷನರ್ ಗೋಪಾಲ ಬಾಗಲಯ ಅವರನ್ನು ಭೇಟಿಯಾಗಿತ್ತು ಎಂದು ಎಸ್‌ಎಲ್‌ಎಫ್‌ಪಿ ಮೈತ್ರಿಯ ಪ್ರಧಾನ ಕಾರ್ಯದರ್ಶಿ ದಯಸಿರಿ ಜಯಶೇಖರ ತಿಳಿಸಿದರು.

‘ಮಧ್ಯಂತರ ಸರ್ಕಾರ ರಚಿಸುವ ಚಿಂತನೆ ಇದೆ. ಇದು ಅಧಿಕಾರವನ್ನು ಹಂಚಿಕೊಳ್ಳುವ ಉದ್ದೇಶದಿಂದಲ್ಲ, ಬದಲಿಗೆ ದೇಶವನ್ನು ಈಗಿನ ಆರ್ಥಿಕ ಬಿಕ್ಕಟ್ಟಿನಿಂದ ಹೊರತರುವ ಗುರಿಯನ್ನು ಹೊಂದಿದೆ’ ಎಂದು ಹೇಳಿದರು.

ಚೀನಾಕ್ಕೆ ಮರಳಲು ವಿದ್ಯಾರ್ಥಿಗಳಿಗೆ ಅನುಮತಿ

ಬೀಜಿಂಗ್(ಪಿಟಿಐ): ಚೀನಾದ ವಿಶ್ವವಿದ್ಯಾಲಯಗಳಲ್ಲಿ ವ್ಯಾಸಂಗ ಮಾಡುತ್ತಿರುವ ಭಾರತದ ಕೆಲ ವಿದ್ಯಾರ್ಥಿಗಳಿಗೆ ದೇಶಕ್ಕೆ ಮರಳಲು ಅನುಮತಿ ನೀಡಿರುವುದಾಗಿ ಚೀನಾ ಘೋಷಿಸಿದೆ.

ಕೋವಿಡ್ ಹಿನ್ನೆಲೆಯಲ್ಲಿ ಕಳೆದ ಎರಡು ವರ್ಷದಿಂದ ಚೀನಾ ವಿಮಾನಯಾನ ಮತ್ತು ವೀಸಾ ಮೇಲೆ ನಿರ್ಬಂಧ ವಿಧಿಸಿತ್ತು.ಚೀನಾವು ಭಾರತದ ವಿದ್ಯಾರ್ಥಿಗಳಿಗೆ ಹೆಚ್ಚಿನ ಪ್ರಾಮುಖ್ಯತೆ ನೀಡುತ್ತದೆ. ಅವರು ವ್ಯಾಸಂಗಕ್ಕಾಗಿ ದೇಶಕ್ಕೆ ಹಿಂದಿರು ಗಲು ಕಾಳಜಿ ವಹಿಸುತ್ತದೆ ಎಂದು ವಿದೇಶಾಂಗ ಸಚಿವಾಲಯದ ವಕ್ತಾರ ಝೂಹೋ ಲಿಜಿನ್ ಮಾಧ್ಯ ಮಗಳಿಗೆ ತಿಳಿಸಿದ್ದಾರೆ.

ಭಾರತದ ವಿದ್ಯಾರ್ಥಿಗಳು ಇಲ್ಲಿಗೆ ವಾಪಸಾಗುವ ಪ್ರಕ್ರಿಯೆ ಈಗಾಗಲೇ ಆರಂಭವಾಗಿದೆ. ಚೀನಾಕ್ಕೆ ಬರಲು ಬಯಸುವ ವಿದ್ಯಾರ್ಥಿಗಳ ಪಟ್ಟಿಯನ್ನು ಭಾರತ ನೀಡಬೇಕಿದೆ ಎಂದು ಹೇಳಿದ್ದಾರೆ.ಭಾರತದ 23,000 ವಿದ್ಯಾರ್ಥಿಗಳು ಚೀನಾದ ವಿವಿಧ ವೈದ್ಯಕೀಯ ಕಾಲೇಜು ಗಳಲ್ಲಿ ವ್ಯಾಸಂಗ ಮಾಡುತ್ತಿದ್ದರು.

ಸಂಕ್ಷಿಪ್ತ ಸುದ್ದಿ

ಮಸೀದಿಯಲ್ಲಿ ಸ್ಫೋಟ:10 ಸಾವು

ಕಾಬೂಲ್(ರಾಯಿಟರ್ಸ್): ಅಫ್ಗಾನಿಸ್ತಾನದ ಮಸೀದಿಯೊಂದರಲ್ಲಿ ಶುಕ್ರವಾರ ಪ್ರಾರ್ಥನೆ ವೇಳೆ ಸಂಭವಿಸಿದ ಪ್ರಬಲ ಬಾಂಬ್ ಸ್ಫೋಟದಲ್ಲಿ ಹತ್ತು ಮಂದಿ ಮೃತಪಟ್ಟಿದ್ದು, 15 ಮಂದಿ ಗಾಯಗೊಂಡಿದ್ದಾರೆ ಎಂದು ಅಧಿಕಾರಿಗಳು ತಿಳಿಸಿದ್ದಾರೆ.

ಪವಿತ್ರ ರಂಜಾನ್ ಮಾಸದಲ್ಲಿ ಅಫ್ಗಾನಿಸ್ತಾನದ ಧಾರ್ಮಿಕ ಸ್ಥಳ ಮತ್ತು ನಾಗರಿಕರ ಮೇಲೆ ದಾಳಿ ಮುಂದುವರಿದಿದೆ.

ಪಶ್ಚಿಮ ಕಾಬೂಲ್‌ನಲ್ಲಿರುವ ಖಾಲಿಫಾ ಸಾಹಿಬ್ ಮಸೀದಿಯಲ್ಲಿ ಮಧ್ಯಾಹ್ನ 2 ಗಂಟೆಯ ಸುಮಾರಿಗೆ ಈ ದುರ್ಘಟನೆ ನಡೆದಿದೆ ಎಂದು ಗೃಹ ಸಚಿವಾಲಯದ ವಕ್ತಾರ ಬಿಸ್ಮಿಲ್ಲಾ ಹಬೀಬ್ ತಿಳಿಸಿದ್ದಾರೆ.

ಇತ್ತೀಚೆಗೆ ನಡೆದ ಹಲವು ದಾಳಿಗಳ ಹೊಣೆಯನ್ನು ಇಸ್ಲಾಮಿಕ್ ಸ್ಟೇಟ್ಸ್ (ಐಎಸ್) ಹೊತ್ತುಕೊಂಡಿದೆ. ಶಿಯಾ ಪಂಗಡವನ್ನು ಗುರಿಯಾಗಿಸಿಕೊಂಡು ಕೆಲವು ದಾಳಿಗಳು ನಡೆಯುತ್ತಿವೆ. ಅಲ್ಲದೆ ಸುನ್ನಿ ಮಸೀದಿಗಳ ಮೇಲೂ ದಾಳಿಗಳು ನಡೆಯುತ್ತಿವೆ.

ಇದೇ ರೀತಿಯ ದಾಳಿಯಲ್ಲಿ ಕಳೆದ ಗುರುವಾರ ಒಂಬತ್ತು ಮಂದಿ ಸಾವನ್ನಪ್ಪಿದ್ದರು. ಕುಂಡ್ಜುನಲ್ಲಿರುವ ಸುನ್ನಿ ಮಸೀದಿಯಲ್ಲಿ ಕಳೆದ ಶುಕ್ರವಾರ ಪ್ರಾರ್ಥನೆ ವೇಳೆ ಸಂಭವಿಸಿದ ಬಾಂಬ್ ಸ್ಫೋಟದಲ್ಲಿ 33 ಜನ ಮೃತಪಟ್ಟಿದ್ದರು.

ಮೂರು ಸಾವಿರ ವಲಸಿಗರ ನಾಪತ್ತೆ

ಜಿನಿವಾ (ರಾಯಿಟರ್ಸ್): ಮೆಡಿಟರೇನಿಯನ್ ಮತ್ತು ಅಟ್ಲಾಂಟಿಕಾ ಸಮುದ್ರ ಮಾರ್ಗದ ಮೂಲಕ ಯೂರೋಪ್‌ಗೆ ವಲಸೆ ಹೋಗುವ ಯತ್ನದಲ್ಲಿ ಕಳೆದ ವರ್ಷ 3,000ಕ್ಕೂ ಅಧಿಕ ಜನರು ನಾಪತ್ತೆಯಾಗಿದ್ದಾರೆ.

ವಿಶ್ವಸಂಸ್ಥೆಯ ವಲಸಿಗರ ಸಂಸ್ಥೆಯ ವರದಿಯು ಈ ಅಂಶವನ್ನು ಉಲ್ಲೇಖಿಸಿದೆ.

ಯುಎನ್‌ಎಚ್‌ಸಿಆರ್‌ನ ವಕ್ತಾರ ಶಾಬಿಯಾ ಮಂಟೂ, ‘2021ರಲ್ಲಿ ನಾಪತ್ತೆ ಆದವರ ಸಂಖ್ಯೆ, ಹಿಂದಿನ ವರ್ಷಕ್ಕೆ ಹೋಲಿಸಿದರೆ ದುಪ್ಪಟ್ಟಾಗಿದೆ’ ಎಂದರು.

‘ನಾಪತ್ತೆ ಆಗುವ ವಲಸಿಗರ ಸಂಖ್ಯೆಯು ಗಣನೀಯವಾಗಿ ಏರಿಕೆಯಾಗುತ್ತಿದೆ. ಇದು ಆತಂಕಕಾರಿ ಬೆಳವಣಿಗೆಯಾಗಿದೆ’ ಎಂದು ಅಭಿಪ್ರಾಯಪಟ್ಟರು.

ಅಮೆರಿಕದ ವ್ಯಕ್ತಿಗೆ ಹಕ್ಕಿಜ್ವರ

ಕೊಲೊರಾಡೊ (ರಾಯಿಟರ್ಸ್): ಇದೇ ಮೊದಲ ಬಾರಿಗೆ ಅಮೆರಿಕದ ವ್ಯಕ್ತಿಯೊಬ್ಬರಲ್ಲಿ ಹಕ್ಕಿಜ್ವರ(ಎಚ್‌-5) ಕಾಣಿಸಿಕೊಂಡಿದೆ ಎಂದು ಸೋಂಕು ನಿಯಂತ್ರಣ ಮತ್ತು ತಡೆ ಕೇಂದ್ರ(ಸಿಡಿಸಿ) ತಿಳಿಸಿದೆ. ಹಕ್ಕಿಜ್ವರಕ್ಕೆ ತುತ್ತಾದ ಕೋಳಿಗಳನ್ನು ಗುರುತಿಸಿ, ಅವುಗಳನ್ನು ಕೊಲ್ಲುವಾಗ ಕೊಲೊರಾಡೊ ಮೂಲದ ವ್ಯಕ್ತಿ ಹಕ್ಕಿಜ್ವರದ ಸೋಂಕಿಗೆ ತುತ್ತಾಗಿದ್ದಾರೆ.

ಕಳೆದ ಕೆಲವು ದಿನಗಳಿಂದ ಸುಸ್ತಿನಿಂದ ಇದ್ದ ವ್ಯಕ್ತಿಯನ್ನು ಪರೀಕ್ಷೆಗೊಳಪಡಿಸಿದಾಗ, ಸೋಂಕು ಪತ್ತೆಯಾಗಿದೆ. ಅಲ್ಲದೆ ಸೋಂಕಿತ ಕೋಳಿಗಳ ಸಂಪರ್ಕಕ್ಕೆ ಬಂದಿರಬಹುದಾದ 2500ಕ್ಕೂ ಹೆಚ್ಚು ಮಂದಿಯನ್ನು ಪರೀಕ್ಷೆಗೊಳಪಡಿಸಲಾಗಿದ್ದು, ಒಬ್ಬ ವ್ಯಕ್ತಿಯನ್ನು ಬಿಟ್ಟು, ಉಳಿದವರ ವರದಿ ನೆಗೆಟಿವ್ ಇದೆ ಎಂದು ಅಧಿಕಾರಿಗಳು ತಿಳಿಸಿದ್ದಾರೆ.





ಜಯದ ಹಾದಿಗೆ ಮರಳುವುದೇ ಬೆಂಗಳೂರು?

ಮುಂಬೈ: ಸತತ ಎರಡು ಪಂದ್ಯಗಳಲ್ಲಿ ಸೋತಿರುವ ರಾಯಲ್ ಚಾಲೆಂಜರ್ಸ್ ಬೆಂಗಳೂರು ತಂಡವು ಶನಿವಾರ ಬಲಿಷ್ಠ ಗುಜರಾತ್ ಟೈಟನ್ಸ್ ಎದುರು ಸೆಣಸಲಿದೆ.

ಬ್ರೆಬೋರ್ನ್ ಕ್ರೀಡಾಂಗಣದಲ್ಲಿ ಈ ಪಂದ್ಯ ನಡೆಯಲಿದೆ. ಆರ್‌ಸಿಬಿ ತಂಡದಲ್ಲಿ ಆರಂಭಿಕ ಜೋಡಿ ಫಫ್ ಡುಪ್ಲೆಸಿ ಮತ್ತು ಅನುಜ್ ರಾವತ್ ಅವರ ಪ್ರದರ್ಶನ ಸ್ಥಿರವಾಗಿಲ್ಲ. ವಿರಾಟ್ ಕೊಹ್ಲಿ ಲಯ ಕಳೆದುಕೊಂಡಿದ್ದಾರೆ. ಆದ್ದರಿಂದ ಗ್ಲೆನ್ ಮ್ಯಾಕ್ಸ್‌ವೆಲ್, ದಿನೇಶ್ ಕಾರ್ತಿಕ್ ಮತ್ತು ಶಾಬಾಜ್ ಅಹಮದ್ ಮೇಲೆಯೇ ಹೆಚ್ಚು ಅವಲಂಬಿತವಾಗಿದೆ. ಬೌಲಿಂಗ್‌ನಲ್ಲಿ ಹರ್ಷಲ್ ಪಟೇಲ್ ಮತ್ತು ಮೊಹಮ್ಮದ್ ಸಿರಾಜ್ ಪ್ರಮುಖರಾಗಿದ್ದಾರೆ. ಆದರೆ ಹಾರ್ದಿಕ್ ಪಾಂಡ್ಯ ನಾಯಕತ್ವದ ಬಳಗವು ಎಲ್ಲ ವಿಭಾಗಗಳಲ್ಲಿಯೂ ಉತ್ತಮವಾಗಿದೆ. ಈಗಾಗಲೇ ಒಟ್ಟು 14 ಅಂಕ ಗಳಿಸಿ ಅಂಕಪಟ್ಟಿಯ ಅಗ್ರಸ್ಥಾನದಲ್ಲಿದೆ.

ಪಂದ್ಯ ಆರಂಭ: ಮಧ್ಯಾಹ್ನ 3.30

ರಾಜಸ್ಥಾನ ರಾಯಲ್ಸ್–ಮುಂಬೈ ಇಂಡಿಯನ್ಸ್

ಪಂದ್ಯ ಆರಂಭ: ರಾತ್ರಿ 7.30

ನೇರಪ್ರಸಾರ: ಸ್ಟಾರ್ ಸ್ಪೋರ್ಟ್ಸ್ ನೆಟ್‌ವರ್ಕ್, ಹಾಟ್‌ಸ್ಟಾರ್


ಬೋರಿಸ್ ಬೇಕರ್ –ಎಎಫ್‌ಪಿ ಚಿತ್ರ

ಸುಳ್ಳು ಮಾಹಿತಿ: ಬೋರಿಸ್ ಬೇಕರ್‌ಗೆ ಜೈಲು

ಲಂಡನ್: ಅಕ್ರಮವಾಗಿ ಭಾರಿ ಮೊತ್ತವನ್ನು ವರ್ಗಾವಣೆ ಮಾಡಿದ ಮತ್ತು ಆಸ್ತಿ ವಿವರ ಮುಚ್ಚಿಟ್ಟು ದಿವಾಳಿಯಾಗಿರುವುದಾಗಿ ಸುಳ್ಳು ಮಾಹಿತಿ ನೀಡಿದ ಮಾಜಿ ಟೆನಿಸ್ ಆಟಗಾರ ಬೋರಿಸ್ ಬೇಕರ್ ಅವರಿಗೆ ಎರಡೂವರೆ ವರ್ಷ ಜೈಲು ಶಿಕ್ಷೆ ವಿಧಿಸಲಾಗಿದೆ.

ವಿಂಬಲ್ಡನ್‌ನಲ್ಲಿ ಮೂರು ಬಾರಿ ಚಾಂಪಿಯನ್ ಆಗಿದ್ದ ಬೇಕರ್ ವಿರುದ್ಧ 2017ರಲ್ಲಿ ದೂರು ದಾಖಲಾಗಿತ್ತು. ವಿಚಾರಣೆ ನಡೆಸಿದ ಲಂಡನ್ ನ್ಯಾಯಾಲಯ ಅವರು ತಪ್ಪಿತಸ್ಥ ಎಂದು ಈ ವಾರದ ಮೊದಲ ವಾರದಲ್ಲಿ ಘೋಷಿಸಿತ್ತು. ಶುಕ್ರವಾರ ಪ್ರಾಸಿಕ್ಯೂಟರ್ ಮತ್ತು ಬೇಕರ್ ಅವರ ವಕೀಲರ ವಾದವನ್ನು ಆಲಿಸಿದ ನ್ಯಾಯಾಧೀಶ ದೆಬೋರ ಟೇಲರ್ ಶಿಕ್ಷೆಯನ್ನು ಪ್ರಕಟಿಸಿದರು.

54 ವರ್ಷದ ಬೇಕರ್ ವಿಂಬಲ್ಡನ್‌ನಲ್ಲಿ ಗೆದ್ದ ಎರಡು ಟ್ರೋಫಿ ಸೇರಿದಂತೆ ಕೋಟಿಗಟ್ಟಲೆ ಮೌಲ್ಯದ ಆಸ್ತಿಯ ವಿವರ ಬಚ್ಚಿಟ್ಟಿದ್ದರು. ಪರಿತ್ಯಕ್ತೆ ಪತ್ನಿ ಲಿಲ್ಲಿ ಬೇಕರ್ ಮತ್ತು ಮಾಜಿ ಪತ್ನಿ ಬಾರ್ಬರಾ ಅವರ ಖಾತೆ ಸೇರಿದಂತೆ ವಿವಿಧ ಖಾತೆಗಳಿಗೆ ಕೋಟ್ಯಂತರ ಮೊತ್ತವನ್ನು ಜಮೆ ಮಾಡಿದ್ದರು. ಸಾಲ ಮರುಪಾವತಿ ಮಾಡುವುದನ್ನು ತಪ್ಪಿಸಿಕೊಳ್ಳಲು ಈ ರೀತಿ ಮಾಡಿದ್ದರು.

ಜರ್ಮನಿಯ ಆಟಗಾರ ಬೋರಿಸ್ ಬೇಕರ್ 2012ರಿಂದ ಬ್ರಿಟನ್‌ನಲ್ಲಿ ವಾಸವಾಗಿದ್ದಾರೆ. ವಿಶ್ವದ ಅಗ್ರ ಕ್ರಮಾಂಕದ ಆಟಗಾರ ನೊವಾಕ್ ಜೊಕೊವಿಚ್ ಅವರಿಗೆ ಸ್ವಲ್ಪ ಕಾಲ ತರಬೇತಿ ನೀಡಿದ್ದ ಬೋರಿಸ್ ಬೇಕರ್ 1999ರಲ್ಲಿ ನಿವೃತ್ತಿ ಹೊಂದಿದ ನಂತರ ಆಸ್ತಿಯಲ್ಲಿ ಗಣನೀಯ ಪ್ರಮಾಣದ ಕೊರತೆಯಾಗಿದೆ ಎಂದು ನ್ಯಾಯಾಲಯಕ್ಕೆ ತಿಳಿಸಿದ್ದಾರೆ. ನ್ಯಾಯಾಲಯವು ನಾಲ್ಕು ಪ್ರಕರಣಗಳಲ್ಲಿ ಅವರು ತಪ್ಪಿತಸ್ಥ ಎಂದು ಹೇಳಿದೆ. 20 ಪ್ರಕರಣಗಳಿಂದ ಅವರನ್ನು ಮುಕ್ತಗೊಳಿಸಿದೆ.


ಕ್ರಿಸ್ಟಿಯಾನೊ ರೊನಾಲ್ಡೊ – ಎಎಫ್‌ಪಿ

ಡ್ರಾ ಪಂದ್ಯದಲ್ಲಿ ಮ್ಯಾಂಚೆಸ್ಟರ್ ಯುನೈಟೆಡ್

ಮ್ಯಾಂಚೆಸ್ಟರ್ (ಎಪಿ): ಕ್ರಿಸ್ಟಿಯಾನೊ ರೊನಾಲ್ಡೊ ಅವರು ಗಳಿಸಿದ ಗೋಲಿನ ಬಲದಿಂದ ಮ್ಯಾಂಚೆಸ್ಟರ್ ಯುನೈಟೆಡ್ ತಂಡವು ಪ್ರೀಮಿಯರ್ ಲೀಗ್ ಫುಟ್‌ಬಾಲ್ ಟೂರ್ನಿಯಲ್ಲಿ ಚೆಲ್ಸಿ ವಿರುದ್ಧ ಡ್ರಾ ಸಾಧಿಸಿತು.

ಶುಕ್ರವಾರ ಇಲ್ಲಿ ನಡೆದ ಪಂದ್ಯದಲ್ಲಿ ರೊನಾಲ್ಡೊ 62ನೇ ನಿಮಿಷದಲ್ಲಿ ಕಾಲ್ಚಳಕ ತೋರಿದರು. ಚೆಲ್ಸಿ ಡಿಫೆಂಡರ್ ನೆಮಾಂಜಾ ಮ್ಯಾಟಿಕ್ ಅವರಿಂದ ಚೆಂಡು ಕಸಿದುಕೊಂಡ ಅವರು ಸೊಗಸಾದ ಫೀಲ್ಡ್ ಗೋಲು ಹೊಡೆದರು. ಆಡಿದ ಮೂರು ಪಂದ್ಯಗಳಲ್ಲಿ ಅವರಿಗೆ ಇದು ಐದನೇ ಗೋಲಾಗಿತ್ತು.

60ನೇ ನಿಮಿಷದಲ್ಲಿ ಮಾರ್ಕೊಸ್ ಅಲೊನ್ಸೊ ಗಳಿಸಿದ ಗೋಲಿನ ಬಲದಿಂದ ಪ್ರವಾಸಿ ಚೆಲ್ಸಿ ತಂಡವು ಮುನ್ನಡೆ ಸಾಧಿಸಿತ್ತು.

ಮೊಹಸಿನ್ ಖಾನ್‌ಗೆ 3, ಚಮೀರಗೆ 2 ವಿಕೆಟ್: ಕ್ವಿಂಟನ್ ಡಿಕಾಕ್ ಉತ್ತಮ ಬ್ಯಾಟಿಂಗ್

ರಾಹುಲ್ ಪಡೆಗೆ ಮಣಿದ ಮಯಂಕ್ ಬಳಗ

ಪುಣೆ: ಮೊಹಸಿನ್ ಖಾನ್ ಮತ್ತು ದುಷ್ಮಂತ ಚಮೀರಾ ಅವರ ಉತ್ತಮ ಬೌಲಿಂಗ್ ಬಲದಿಂದ ಲಖನೌ ಸೂಪರ್ ಜೈಂಟ್ಸ್ ತಂಡವು ಶುಕ್ರವಾರ ಜಯಭೇರಿ ಬಾರಿಸಿತು.

ಮಹಾರಾಷ್ಟ್ರ ಕ್ರಿಕೆಟ್ ಸಂಸ್ಥೆಯ ಕ್ರೀಡಾಂಗಣದಲ್ಲಿ ನಡೆದ ಪಂದ್ಯದಲ್ಲಿ ಕೆ.ಎಲ್. ರಾಹುಲ್ ನಾಯಕತ್ವದ ಲಖನೌ ತಂಡವು ಮಯಂಕ್ ಅಗರವಾಲ್ ನೇತೃತ್ವದ ಪಂಜಾಬ್ ಕಿಂಗ್ಸ್ ಎದುರು 20 ರನ್‌ಗಳಿಂದ ಗೆದ್ದಿತು. ಇದರಿಂದಾಗಿ ಪಂಜಾಬ್ ತಂಡದ ವೇಗಿ ಕಗಿಸೊ ರಬಾಡ (38ಕ್ಕೆ4) ಶ್ರಮ ವ್ಯರ್ಥವಾಯಿತು.

ಟಾಸ್ ಗೆದ್ದ ಪಂಜಾಬ್ ಕಿಂಗ್ಸ್ ನಾಯಕ ಮಯಂಕ್ ಅಗರವಾಲ್ ಫೀಲ್ಡಿಂಗ್ ಆಯ್ಕೆ ಮಾಡಿಕೊಂಡರು. ಟೂರ್ನಿಯಲ್ಲಿ ಎರಡು ಶತಕ ಗಳಿಸಿರುವ ಲಖನೌ ತಂಡದ ನಾಯಕ ಕೆ.ಎಲ್. ರಾಹುಲ್ (6 ರನ್), ಆಲ್‌ರೌಂಡರ್ ಕೃಣಾಲ್ ಪಾಂಡ್ಯ (7 ರನ್), ಯುವಪ್ರತಿಭೆ ಆಯುಷ್ ಬದೋನಿ (4 ರನ್) ಮತ್ತು ದುಷ್ಮಂತ ಚಮೀರ (17 ರನ್) ಅವರ ವಿಕೆಟ್‌ಗಳನ್ನು ಕಬಳಿಸಿದ ಕಗಿಸೊ ರಬಾಡ ತಂಡಕ್ಕೆ ಪೆಟ್ಟುಕೊಟ್ಟರು.

ಇದರಿಂದಾಗಿ ಲಖನೌ ತಂಡವು 20 ಓವರ್‌ಗಳಲ್ಲಿ 8 ವಿಕೆಟ್‌ಗಳಿಗೆ 153 ರನ್ ಗಳಿಸಿತು. ಇದಕ್ಕುತ್ತರವಾಗಿ ಪಂಜಾಬ್ ತಂಡವು 20 ಓವರ್‌ಗಳಲ್ಲಿ 8 ವಿಕೆಟ್‌ಗಳಿಗೆ 133 ರನ್ ಗಳಿಸಲಷ್ಟೇ ಶಕ್ತವಾಯಿತು. ಮೊಹಸೀನ್ ಖಾನ್ (24ಕ್ಕೆ3) ಮತ್ತು ಚಮೀರಾ (17ಕ್ಕೆ2) ಬೌಲಿಂಗ್ ದಾಳಿಗೆ ಮಯಂಕ್ ಬಳಗ ಕುಸಿಯಿತು.

ಇನಿಂಗ್ಸ್‌ಗೆ ಉತ್ತಮ ಆರಂಭ ನೀಡಿದ ನಾಯಕ ಮಯಂಕ್ (25;17ಎ) ಐದನೇ ಓವರ್‌ನಲ್ಲಿ ಚಮೀರಾ ಎಸೆತದಲ್ಲಿ ಔಟಾದರು.


ವಿಕೆಟ್ ಗಳಿಸಿದ ಮೊಹಸಿನ್ ಖಾನ್ (ಮಧ್ಯ) ಅವರನ್ನು ಅಭಿನಂದಿಸಿದ ದುಷ್ಮಂತ ಚಮೀರ ಮತ್ತು ಕ್ವಿಂಟನ್ ಡಿಕಾಕ್– ಪಿಟಿಐ ಚಿತ್ರ

ಅನುಭವಿ ಶಿಖರ್ ಧವನ್ (5; 15ಎ) ಸ್ಪಿನ್ನರ್ ರವಿ ಬಿಷ್ಣೋಯಿ ಬೌಲಿಂಗ್‌ನಲ್ಲಿ ಕ್ಲೀನ್‌ಬೌಲ್ಡ್ ಆದರು. ಮತ್ತೊಮ್ಮೆ ತಮ್ಮ ಲಯ ಕಂಡುಕೊಳ್ಳುವಲ್ಲಿ ಶಿಖರ್ ವಿಫಲರಾದರು.

ಕ್ರೀಸ್‌ನಲ್ಲಿದ್ದ ಜಾನಿ ಬೆಸ್ಟೊ (32; 28ಎ) ಮತ್ತು ಲಿಯಾಮ್ ಲಿವಿಂಗ್‌ಸ್ಟೋನ್ (18; 16ಎ) ನಾಲ್ಕನೇ ವಿಕೆಟ್ ಜೊತೆಯಾಟದಲ್ಲಿ 30 ರನ್ ಸೇರಿಸಿದರು. ಲಿಯಾಮ್ ವಿಕೆಟ್ ಗಳಿಸಿದ ಮೊಹಸಿನ್ ಖಾನ್ ಅವರು ಜೊತೆಯಾಟವನ್ನು ಮುರಿದರು. ಚಮೀರಾ ಎಸೆತದಲ್ಲಿ ಜಾನಿ ಬೆಸ್ಟೊ ಕೂಡ ಔಟಾದರು. ದೀರ್ಘ ಕಾಲದ ನಂತರ ಐಪಿಎಲ್‌ಗೆ ಮರಳಿರುವ ರಿಷಿ ಧವನ್ (21; 22ಎ) ಏಕಾಂಗಿ ಹೋರಾಟ ಮಾಡಿದರು. ಮೂರು ಬೌಂಡರಿ, ಒಂದು ಸಿಕ್ಸರ್ ಸಿಡಿಸಿದರು.

ಕ್ವಿಂಟನ್-ಹೂಡಾ ಜೊತೆಯಾಟ: ಆರಂಭದಲ್ಲಿಯೇ ಪೆಟ್ಟು ತಿಂದ ಲಖನೌ ತಂಡಕ್ಕೆ ಕ್ವಿಂಟನ್ ಡಿ ಕಾಕ್ (46; 37ಎ) ಮತ್ತು ದೀಪಕ್ ಹೂಡಾ (34; 28ಎ) ಇನಿಂಗ್ಸ್‌ಗೆ ಸ್ಥಿರತೆ ಒದಗಿಸುವ ಪ್ರಯತ್ನ ಮಾಡಿದರು. ಎರಡನೇ ವಿಕೆಟ್ ಜೊತೆಯಾಟದಲ್ಲಿ 85 ರನ್ ಸೇರಿಸಿದರು. ಸ್ಪಿನ್ನರ್ ರಾಹುಲ್ ಚಾಹರ್ ಹಾಕಿದ 12ನೇ ಓವರ್‌ನಲ್ಲಿ ಕ್ವಿಂಟನ್‌ಗೆ ಜೀವದಾನ ಲಭಿಸಿತು. ಕ್ವಿಂಟನ್ 13ನೇ ಓವರ್‌ನಲ್ಲಿ ಔಟಾದರು. ಜೊತೆಯಾಟ ಮುರಿದುಬಿತ್ತು.

ಸ್ಕೋರ್ ಕಾರ್ಡ್

ಲಖನೌ ಸೂಪರ್ ಜೈಂಟ್ಸ್ 8ಕ್ಕೆ 153 (20 ಓವರ್)

ಕ್ವಿಂಟನ್ ಸಿ ಜಿತೇಶ್ ಬಿ ಸಂದೀಪ್ 46 (37 ಎ, 4x4, 6x2), ರಾಹುಲ್ ಸಿ ಜಿತೇಶ್ ಬಿ ರಬಾಡ 6 (11 ಎ, 4x1), ದೀಪಕ್ ರನ್ ಔಟ್ (ಬೇಸ್ಟೊ) 34 (28 ಎ, 4x1, 6x2), ಕೃಣಾಲ್ ಸಿ ಶಿಖರ್ ಬಿ ರಬಾಡ 7 (7 ಎ, 4x1), ಸ್ಟೋಯಿನಿಸ್ ಸಿ ಮತ್ತು ಬಿ ಚಾಹರ್ 1 (4 ಎ), ಆಯುಷ್ ಸಿ ಲಿವಿಂಗ್‌ಸ್ಟೋನ್ ಬಿ ರಬಾಡ 4 (4 ಎ), ಜೇಸನ್ ಸಿ ಸಂದೀಪ್ ಬಿ ಚಾಹರ್ 11 (8 ಎ), ದುಷ್ಮಂತ ಸಿ ಚಾಹರ್ ಬಿ ರಬಾಡ 17 (10 ಎ, 6x2), ಮೊಹಸಿನ್ ಔಟಾಗದೆ 13 (6 ಎ, 4x1, 6x1), ಆವೇಶ್ ಔಟಾಗದೆ 2 (5 ಎ)

ಇತರೆ (ಲೆಗ್‌ಬೈ 8, ವೈಡ್ 4) 12

ವಿಕೆಟ್ ಪತನ: 1-13 (ಕೆ.ಎಲ್. ರಾಹುಲ್, 2.5), 2-98 (ಕ್ವಿಂಟನ್ ಡಿ ಕಾಕ್, 12.4), 3-104 (ದೀಪಕ್ ಹೂಡಾ, 13.3), 4-105 (ಕೃಣಾಲ್ ಪಾಂಡ್ಯ, 14.1), 5-109 (ಆಯುಷ್ ಬದೋನಿ, 14.5), 6-111 (ಮಾರ್ಕಸ್ ಸ್ಟೋಯಿನಿಸ್, 15.3), 7-126 (ಜೇಸನ್ ಹೋಲ್ಡರ್, 17.4), 8-144 (ದುಷ್ಮಂತ್ ಚಮೀರ, 18.3)

ಬೌಲಿಂಗ್: ಅರ್ಷದೀಪ್ ಸಿಂಗ್ 4-0-23-0, ಸಂದೀಪ್ ಶರ್ಮಾ 4-0-18-1, ಕಗಿಸೊ ರಬಾಡ 4-0-38-4, ರಿಷಿ ಧವನ್ 2-0-13-0, ಲಿಯಾಮ್ ಲಿವಿಂಗ್‌ಸ್ಟೋನ್ 2-0-23-0, ರಾಹುಲ್ ಚಾಹರ್ 4-0-30-2

ಪಂಜಾಬ್ ಕಿಂಗ್ಸ್ 8ಕ್ಕೆ 133 (20 ಓವರ್)

ಮಯಂಕ್ ಸಿ ರಾಹುಲ್ ಬಿ ಚಮೀರ 25 (17ಎ, 4X2, 6X2), ಶಿಖರ್ ಬಿ ರವಿ 5 (15ಎ), ಬೆಸ್ಟೊ ಸಿ ಕೃಣಾಲ್ ಬಿ ಚಮೀರ 32 (28ಎ, 4X5), ಭಾನುಕ ಸಿ ರಾಹುಲ್ ಬಿ ಕೃಣಾಲ್ 9 (7ಎ, 4X1), ಲಿವಿಂಗ್‌ಸ್ಟೋನ್ ಸಿ ಡಿಕಾಕ್ ಬಿ ಮೊಹಸಿನ್ 18 (16ಎ, 6X2), ಜಿತೇಶ್ ಎಲ್‌ಬಿಡಬ್ಲ್ಯು ಕೃಣಾಲ್ 2 (5ಎ), ರಿಷಿ ಔಟಾಗದೆ 21 (22ಎ, 4X3, 6X1), ರಬಾಡ ಬಿ ಆಯುಷ್ ಬಿ ಮೊಹಸಿನ್ 2 (5ಎ), ಚಾಹರ್ ಸಿ ಆಯುಷ್ ಬಿ ಮೊಹಸಿನ್ 4 (4ಎ, 4X1), ಅರ್ಷದೀಪ್ ಔಟಾಗದೆ 0 (2ಎ)

ಇತರೆ (ಬೈ 4, ಲೆಗ್‌ಬೈ 2, ನೋಬಾಲ್ 1, ವೈಡ್ 8) 15

ವಿಕೆಟ್ ಪತನ: 1-35 (ಮಯಂಕ್ ಅಗರವಾಲ್, 4.4), 2-46 (ಶಿಖರ್, 6.3), 3-58 (ಭಾನುಕ ರಾಜಪಕ್ಷ, 7.6), 4-88 (ಲಿವಿಂಗ್‌ಸ್ಟೋನ್, 12.1), 5-92 (ಜಿತೇಶ್ ಶರ್ಮಾ, 13.2), 6-103 (ಜಾನಿ ಬೆಸ್ಟೊ, 15.2), 7-112 (ಕಗಿಸೊ ರಬಾಡ, 17.2), 8-117 (ರಾಹುಲ್ ಚಾಹರ್, 17.6)

ಬೌಲಿಂಗ್: ಮೊಹಸಿನ್ ಖಾನ್ 4-1-24-3, ದುಷ್ಮಂತ ಚಮೀರ 4-0-17-2, ಜೇಸನ್ ಹೋಲ್ಡರ್ 1-0-8-0, ಆವೇಶ್ ಖಾನ್ 3-0-26-0, ರವಿ ಬಿಷ್ಣೋಯಿ 4-0-41-1, ಕೃಣಾಲ್ ಪಾಂಡ್ಯ 4-1-11-2

ಫಲಿತಾಂಶ: ಲಖನೌ ಸೂಪರ್ ಜೈಂಟ್ಸ್‌ಗೆ 20 ರನ್‌ಗಳ ಜಯ

ಪರ್ಪಲ್ ಕ್ಯಾಪ್ (ಹೆಚ್ಚು ವಿಕೆಟ್ ಗಳಿಸಿದವರು)

ಆಟಗಾರ	ತಂಡ	ವಿಕೆಟ್
ಯಜುವೇಂದ್ರ	ರಾಜಸ್ಥಾನ	18
ಕುಲದೀಪ್	ಡೆಲ್ಲಿ	17
ಉಮ್ರಾನ್	ಹೈದರಾಬಾದ್	15

ಆರೆಂಜ್ ಕ್ಯಾಪ್ (ಹೆಚ್ಚು ರನ್ ಗಳಿಸಿದವರು)

ಆಟಗಾರ	ತಂಡ	ರನ್
ಜೋಸ್ ಬಟ್ಲರ್	ರಾಜಸ್ಥಾನ	499
ರಾಹುಲ್	ಲಖನೌ	374
ಶಿಖರ್	ಪಂಜಾಬ್	307

ಪಾಯಿಂಟ್ ಪಟ್ಟಿ

ತಂಡ	ಪಂದ್ಯ	ಗೆಲುವು	ಸೋಲು	ರದ್ದು	ಟೈ	ಅಂಕ	ರನ್‌ರೇಟ್
ಗುಜರಾತ್	8	7	1	0	0	14	0.371
ರಾಜಸ್ಥಾನ	8	6	2	0	0	12	0.561
ಲಖನೌ	9	6	3	0	0	12	0.408
ಹೈದರಾಬಾದ್	8	5	3	0	0	10	0.600
ಬೆಂಗಳೂರು	9	5	4	0	0	10	-0.572
ಡೆಲ್ಲಿ	8	4	4	0	0	8	0.695
ಪಂಜಾಬ್	9	4	5	0	0	8	-0.470
ಕೋಲ್ಕತ್ತ	9	3	6	0	0	6	-0.006
ಚೆನ್ನೈ	8	2	6	0	0	4	-0.538
ಮುಂಬೈ	8	0	8	0	0	0	-1.000

*ಶುಕ್ರವಾರದ ಪಂದ್ಯದ ಅಂತ್ಯಕ್ಕೆ

ಐಪಿಎಲ್ ಮತ್ತು ಕ್ರೀಡಾ ಸುದ್ದಿಗಳ ವಿಸ್ತೃತ ವರದಿ, ಮಾಹಿತಿಗಾಗಿ ಭೇಟಿ ನೀಡಿ https://www.prajavani.net/cricket



ಪ್ರಶಸ್ತಿಯೊಂದಿಗೆ ಶ್ರೀನಿತಿ ಚೌಧರಿ ಮತ್ತು ಕರಣ್ ಥಾಪಾ

ಟೆನಿಸ್: ಕರಣ್, ಶ್ರೀನಿತಿಗೆ ಪ್ರಶಸ್ತಿ

ಬೆಂಗಳೂರು: ಕರ್ನಾಟಕದ ಶ್ರೀನಿತಿ ಚೌಧರಿ ಮತ್ತು ಕೇರಳದ ಕರಣ್ ಥಾಪಾ ಅವರು ಇಲ್ಲಿ ನಡೆದ ಎಐಟಿಎ 14 ವರ್ಷದೊಳಗಿನವರ ಟೆನಿಸ್ ಟೂರ್ನಿಯಲ್ಲಿ ಕ್ರಮವಾಗಿ ಬಾಲಕ ಮತ್ತು ಬಾಲಕಿಯರ ವಿಭಾಗಗಳಲ್ಲಿ ಚಾಂಪಿಯನ್ ಆಗಿ ಹೊರಹೊಮ್ಮಿದ್ದಾರೆ.

ಶುಕ್ರವಾರ ಕೊನೆಗೊಂಡ ಟೂರ್ನಿಯ ಬಾಲಕರ ಫೈನಲ್ ಪಂದ್ಯದಲ್ಲಿ ಕರಣ್ 7-6 (2), 6-2ರಿಂದ ಕರ್ನಾಟಕದ ಶ್ರೀಕಾಂತ್ ಮೆನನ್ ಅವರನ್ನು ಮಣಿಸಿದರು. ಬಾಲಕಿಯರ ಫೈನಲ್‌ನಲ್ಲಿ ಜಿಯಾ ಸಿಂಗ್ 6-0, 6-0 ರಿಂದ ಜಿಯಾ ಸಿಂಗ್ ವಿರುದ್ಧ ಗೆದ್ದರು.

ಏಷ್ಯಾ ಬ್ಯಾಡ್ಮಿಂಟನ್ ಚಾಂಪಿಯನ್‌ಷಿಪ್ ಸೆಮಿಗೆ ಲಗ್ಗೆ

ಬಿಂಗ್ ಸವಾಲು ಮೀರಿದ ಸಿಂಧು

ಮನಿಲಾ, ಪಿಲಿಪ್ಪೀನ್ಸ್ (ಪಿಟಿಐ): ರೋಚಕ ಹಣಾಹಣಿಯಲ್ಲಿ ಎದುರಾಳಿಯನ್ನು ಮಣಿಸಿದ ಭಾರತದ ಪಿ.ವಿ. ಸಿಂಧು ಏಷ್ಯಾ ಬ್ಯಾಡ್ಮಿಂಟನ್ ಚಾಂಪಿಯನ್‌ಷಿಪ್‌ನ ಸೆಮಿಫೈನಲ್‌ಗೆ ಲಗ್ಗೆಯಿಟ್ಟಿದ್ದಾರೆ.

ಇಲ್ಲಿ ನಡೆಯುತ್ತಿರುವ ಟೂರ್ನಿಯಲ್ಲಿ ಶುಕ್ರವಾರ ಮಹಿಳಾ ಸಿಂಗಲ್ಸ್ ವಿಭಾಗದ ಎಂಟರಘಟ್ಟದ ಪಂದ್ಯದಲ್ಲಿ ನಾಲ್ಕನೇ ಶ್ರೇಯಾಂಕದ ಸಿಂಧು 21-9, 13-21, 21-19ರಿಂದ ಚೀನಾದ ಹೆ ಬಿಂಗ್ ಜಿಯಾವೊ ಎದುರು ಗೆದ್ದರು. ಭಾರತದ ಆಟಗಾರ್ತಿ ಒಂದು ತಾಸು 16 ನಿಮಿಷಗಳಲ್ಲಿ ಪಂದ್ಯ ಜಯಿಸಿ ಪದಕ ಖಚಿತಪಡಿಸಿದ್ದಾರೆ.

ಎರಡು ಬಾರಿಯ ಒಲಿಂಪಿಕ್ಸ್ ಪದಕ ವಿಜೇತೆ ಸಿಂಧು, ನಾಲ್ಕರ ಘಟ್ಟದ ಪಂದ್ಯದಲ್ಲಿ ಅಗ್ರಶ್ರೇಯಾಂಕದ, ಜಪಾನ್ ಆಟಗಾರ್ತಿ ಅಕಾನೆ ಯಾಮಗುಚಿ ಅವರನ್ನು ಎದುರಿಸುವರು.

ಕ್ವಾರ್ಟರ್‌ಫೈನಲ್ ಮೊದಲ ಗೇಮ್‌ನ ಆರಂಭದಲ್ಲಿ 11–2ರಿಂದ ಮುನ್ನಡೆದ ಬಳಿಕ ಸಿಂಧು ಅದೇ ಲಯದಲ್ಲಿ ಮುಂದುವರಿದು ಗೇಮ್ ವಶಪಡಿಸಿಕೊಂಡರು. 2ನೇ ಗೇಮ್‌ನಲ್ಲಿ ಸಿಂಧು ಎಸಗಿದ ಲೋಪಗಳ ಲಾಭ ಪಡೆದ ಬಿಂಗ್ ಚುರುಕಿನ ರಿಟರ್ನ್‌ಗಳ ಮೂಲಕ ವಿರಾಮದ ಹೊತ್ತಿಗೆ 19–12ರಿಂದ ಮುನ್ನಡೆ ಗಳಿಸಿದರು. ಗೇಮ್ ಗೆದ್ದುಕೊಂಡರು. ನಿರ್ಣಾಯಕ ಮತ್ತು ಮೂರನೇ ಗೇಮ್ ಇನ್ನಷ್ಟು ರಂಗೇರಿತು. ಉಭಯ ಆಟಗಾರ್ತಿಯರ ನಡುವೆ ಆರಂಭದಲ್ಲಿ ಸಮಬಲದ ಹೋರಾಟ ಕಂಡುಬಂದಿತು. ಕ್ರಾಸ್‌ಕೋರ್ಟ್ ಹೊಡೆತಗಳ ಮೂಲಕ ಪಾಯಿಂಟ್ಸ್ ಕಲೆಹಾಕಿದ ಸಿಂಧು, ವಿರಾಮದ ವೇಳೆಗೆ 11–5ರಿಂದ ಮೇಲುಗೈ ಸಾಧಿಸಿದ್ದರು. ಆದರೆ ಚೇತರಿಸಿಕೊಂಡ ಬಿಂಗ್ ಹಿನ್ನಡೆಯನ್ನು 15–16ಕ್ಕೆ ತಗ್ಗಿಸಿದರು. ಬಳಿಕ 18–16ಕ್ಕೆ ಮುನ್ನಡೆದ ಸಿಂಧು, ಸತತ ನಾಲ್ಕು ಪಾಯಿಂಟ್ಸ್ ಬಲದಿಂದ ಗೇಮ್ ಹಾಗೂ ಪಂದ್ಯ ಗೆದ್ದ ಸಂಭ್ರಮದಲ್ಲಿ ಮಿಂದೆದ್ದರು.



ಪಂದ್ಯ ಜಯಿಸಿದ ಸಂಭ್ರಮದಲ್ಲಿ ಪಿ.ವಿ.ಸಿಂಧು– ಪಿಟಿಐ ಚಿತ್ರ

ಈಜು: ಆರ್ಮ್‌ಸ್ಟ್ರಾಂಗ್ ವಿಶ್ವದಾಖಲೆ

ಗ್ರೀನ್ಸ್‌ಬೊರೊ, ಅಮೆರಿಕ (ಎಪಿ): ಅಮೆರಿಕದ ಈಜುಪಟು ಹಂಟರ್ ಆರ್ಮ್‌ಸ್ಟ್ರಾಂಗ್, ಪುರುಷರ 50 ಮೀಟರ್ಸ್ ಬ್ಯಾಕ್‌ಸ್ಟ್ರೋಕ್ ವಿಭಾಗದಲ್ಲಿ ವಿಶ್ವದಾಖಲೆ ನಿರ್ಮಿಸಿದ್ದಾರೆ.

ಇಲ್ಲಿ ಗುರುವಾರ ರಾತ್ರಿ ನಡೆದ ಇಂಟರ್‌ನ್ಯಾಷನಲ್ ಟೀಮ್ ಟ್ರಯಲ್ಸ್ ಕೂಟದಲ್ಲಿ ಅವರು 23.71 ಸೆಕೆಂಡುಗಳಲ್ಲಿ ಗುರಿ ಮುಟ್ಟಿದರು. ಇದು ನಾನ್– ಒಲಿಂಪಿಕ್ ಸ್ಪರ್ಧೆಯಾಗಿತ್ತು. ಈ ಹಿಂದಿನ ದಾಖಲೆ ರಷ್ಯಾದ ಕ್ಲಿಮೆಂಟ್ ಕೊಲೆಸ್ನಿಕೊವ್ ಅವರ ಹೆಸರಿನಲ್ಲಿತ್ತು. 2021ರಲ್ಲಿ ಅವರು 23.80 ಸೆಕೆಂಡುಗಳಲ್ಲಿ ಗೆರೆ ಮುಟ್ಟಿದ್ದರು.


ಆರ್ಮ್‌ಸ್ಟ್ರಾಂಗ್– ಎಎಫ್‌ಪಿ ಚಿತ್ರ

ಬಂಗಾಳ–ಕೇರಳ ಫೈನಲ್ ಹಣಾಹಣಿ

ಮಲ್ಲಪ್ಪುರಂ, ಕೇರಳ (ಪಿಟಿಐ): ಬಂಗಾಳ ತಂಡವು ಮಣಿಪುರವನ್ನು ಮಣಿಸಿ ಸಂತೋಷ್ ಟ್ರೋಫಿ ಫುಟ್‌ಬಾಲ್ ಟೂರ್ನಿಯ ಫೈನಲ್ ಪ್ರವೇಶಿಸಿದೆ. ಶುಕ್ರವಾರ ನಡೆದ ನಾಲ್ಕರ ಘಟ್ಟದ ಹಣಾಹಣಿಯಲ್ಲಿ ಬಂಗಾಳ ತಂಡದ ಪರ ಸುಜಿತ್ ಸಿಂಗ್ (2ನೇ ನಿಮಿಷ), ಮೊಹಮ್ಮದ್ ಫರ್ದೀನ್ ಅಲಿ ಮೊಲ್ಲಾ (7ನೇ ನಿ.) ಮತ್ತು ದಿಲೀಪ್ ಒರಾವನ್ (74ನೇ ನಿ.) ಗೋಲು ಹೊಡೆದರು. ಸೋಮವಾರ ಫೈನಲ್‌ನಲ್ಲಿ ಕೇರಳ ತಂಡವನ್ನು ಬಂಗಾಳ ಎದುರಿಸಲಿದೆ.

ಕೇರಳ 7–3ರಿಂದ ಕರ್ನಾಟಕ ತಂಡವನ್ನು ಸೋಲಿಸಿ ಪ್ರಶಸ್ತಿ ಸುತ್ತು ತಲುಪಿತ್ತು.

ಸಂತಸದ ಬದುಕಿಗಿದೆ ಹಲವು ಸೂತ್ರ 1



ನಗುವ ಕೈತೋಟ ಬಾಡದಿರಲಿ

ಆತ್ರೇಯ

ಬೇಸಿಗೆ ಕಾಲ ಮುಗಿಯುವ ಹೊತ್ತಿಗೆ ಅದೆಷ್ಟು ಗಿಡಗಳು ಬಾಡಿ ನೆಲಕಚ್ಚುತ್ತವೋ ಲೆಕ್ಕವಿಲ್ಲ. ಆದರೆ, ಸ್ವಲ್ಪ ಮುತುವರ್ಜಿ ವಹಿಸಿ, ಒಂದಷ್ಟು ರಕ್ಷಣಾತ್ಮಕ ಕ್ರಮಗಳನ್ನು ಅನುಸರಿಸಿದರೆ, ಗಿಡಗಳನ್ನು ಕಳೆದುಕೊಳ್ಳುವಂತಹ ಅಪಾಯದಿಂದ ಪಾರಾಗಬಹುದು, ತೋಟವನ್ನು ಹಸಿರಾಗಿಟ್ಟುಕೊಳ್ಳಬಹುದು.

1. ಗಿಡಗಳ ರಕ್ಷಣೆಗೆ ಆದ್ಯತೆ

ಬೆಳಿಗ್ಗೆ ಅಥವಾ ಸಂಜೆ (ತಂಪು ಹೊತ್ತಿನಲ್ಲಿ) ಮಾತ್ರ ಗಿಡಗಳನ್ನು ಆರೈಕೆ ಮಾಡಿ. ಕುಂಡದಲ್ಲಿರಲಿ, ಕಂಟೇನರ್‌ಗಳಲ್ಲಿರಲಿ ಅಥವಾ ನೆಲದಲ್ಲಿರಲಿ (ಸಣ್ಣ ಹಾಗೂ ಸೂಕ್ಷ್ಮ ಗಿಡಗಳಿಗೆ) ಅವುಗಳಿಗೆ ತೀಕ್ಷ್ಣ ಬಿಸಿಲು ತಾಗದಂತೆ ನೆರಳು ಮಾಡಿ. ನೆರಳು ಮಾಡಲು ತೆಳುವಾದ ತಿಳಿ ಬಣ್ಣದ ಬಟ್ಟೆಗಳನ್ನು ಬಳಸಬಹುದು. ನಿಮ್ಮಲ್ಲಿ ಶೇಡ್‌ನೆಟ್‌ಗಳಿದ್ದರೆ, ಅವುಗಳನ್ನು ಬಳಸಿ ನೆರಳು ಮಾಡಿ. ಇದರಿಂದ, ಮಧ್ಯಾಹ್ನದ ಉರಿ ಬಿಸಿಲು ನೇರವಾಗಿ ಗಿಡಗಳ ಮೇಲೆ ಬೀಳುವುದನ್ನು ತಪ್ಪಿಸಬಹುದು. ಇದು ಬೇಸಿಗೆಯ ಆರಂಭದಿಂದಲೂ ಕೈಗೊಳ್ಳಬೇಕಾದ ಪ್ರಕ್ರಿಯೆ.

> ಅಕ್ಕರೆಯಿಂದ ಕಾಪಾಡಿಕೊಂಡಿರುವ ಕೈತೋಟದ ಗಿಡಗಳನ್ನು ಮೂರು ತಿಂಗಳ ಬೇಸಿಗೆ ಕಾಲದಲ್ಲಿ ಕಾಪಾಡುವುದೇ ದೊಡ್ಡ ಸವಾಲು. ಎಷ್ಟೇ ನೀರು ಹನಿಸಿದರೂ, ಎಷ್ಟೇ ಆರೈಕೆ ಮಾಡಿದರೂ, ಗಿಡಗಳು ಬಾಡಿ ಹೋಗುತ್ತವೆ. ಸೂಕ್ಷ್ಮವಾಗಿರುವ ಗಿಡಗಳು ಸಂಪೂರ್ಣ ಒಣಗಿ ಹೋಗುತ್ತವೆ. ಈ ಕಾಲದಲ್ಲಿ ಗಿಡಗಳನ್ನು ರಕ್ಷಿಸಿಕೊಳ್ಳುವುದು ಹೇಗೆ? ಇಲ್ಲಿದೆ ಟಿಪ್ಸ್..





2. ಮಣ್ಣಿನ ಫಲವತ್ತತೆ ಹೆಚ್ಚಿಸಿ

ಬೇಸಿಗೆ ಆರಂಭವಾಗುತ್ತಲೇ ಕೈತೋಟದ (ಕುಂಡ/ನೆಲ/ಕಂಟೇನರ್‌ನಲ್ಲಿರುವ) ಮಣ್ಣನ್ನು ಸಡಿಲ ಮಾಡಿ. ಆಗ ಬೇರುಗಳಿಗೆ ಗಾಳಿಯಾಡುತ್ತದೆ. ಮಣ್ಣಿಗೆ ಸಾವಯವ ಗೊಬ್ಬರ (ಎರೆಹುಳು ಗೊಬ್ಬರ, ಮನೆಯ ತ್ಯಾಜ್ಯದಿಂದ ತಯಾರಿಸಿದ ಗೊಬ್ಬರ, ಸಗಣಿಗೊಬ್ಬರ)ವನ್ನು ಸೇರಿಸಿ. ಇದರಿಂದ ಮಣ್ಣಿನಲ್ಲಿ ಸೂಕ್ಷ್ಮಾಣು ಜೀವಿಗಳು ಹೆಚ್ಚಾಗಿ, ಮಣ್ಣಿನ ಫಲವತ್ತತೆಯೂ ಹೆಚ್ಚುತ್ತದೆ. ಹನಿಸಿದ ನೀರು ಬೇರಿಗೆ ಇಳಿಯುತ್ತದೆ. ಬೇರಿಗೆ ತೇವಾಂಶ, ಪೂರಕ ಪೋಷಕಾಂಶ ಲಭ್ಯವಾಗುವುದರಿಂದ ಗಿಡಗಳು ಹಸಿರಿನಿಂದ ನಳನಳಿಸುತ್ತಿರುತ್ತವೆ.

3. ದಿನಕ್ಕೆರಡು ಬಾರಿ ನೀರುಣಿಸಿ

ವಾತಾವರಣ ತಂಪಾಗಿದ್ದ ಸಮಯದಲ್ಲಿ ಅಂದರೆ, ಬೆಳಿಗ್ಗೆ ಮತ್ತು ಸಂಜೆ ಮಾತ್ರ ಗಿಡಗಳಿಗೆ ನೀರುಣಿಸಿ. ಮಧ್ಯಾಹ್ನ ಬಿಸಿಲಿದ್ದಾಗ ನೀರು ಹಾಕಿದರೆ, ಇದು ಗಿಡಗಳಿಗೆ ಉಪಯೋಗಕ್ಕಿಂತ ಅಪಾಯವೇ ಹೆಚ್ಚು. ಕುಂಡಗಳಿಗೆ ಹಾಕಿದ ನೀರು ಬೇಗನೆ ಆವಿಯಾಗುವುದರಿಂದ, ಆಗಾಗ್ಗೆ ನೀರು ಹಾಕುತ್ತಿರಬೇಕು. ಕುಂಡಗಳ ಕೆಳಗೆ ತಟ್ಟೆಗಳನ್ನು ಇಟ್ಟು, ಬಸಿದು ತಟ್ಟೆಗಳಲ್ಲಿ ಸಂಗ್ರಹವಾದ ನೀರನ್ನು ಮರುಬಳಕೆ ಮಾಡಬಹುದು.



4. ಮುಚ್ಚಿಗೆ ಬಹಳ ಮುಖ್ಯ

ಬೇಸಿಗೆಯಲ್ಲಿ ಗಿಡಗಳಿಗೆ ಎಷ್ಟೇ ನೀರು ಹಾಕಿದರೂ ಬೇಗ ಆವಿಯಾಗುತ್ತದೆ. ಆದರಿಂದ, ಗಿಡಗಳ ಪಾತಿಗೆ ಸಾವಯವ ತ್ಯಾಜ್ಯದಿಂದ ಮುಚ್ಚಿಗೆ ಮಾಡಿ(Mulching). ಒಣ ಎಲೆ, ಹಸಿ ಎಲೆ, ಗಿಡದಿಂದ ಕೆಳಗುದುರಿದ ಹೂವುಗಳು, ನಿಮ್ಮ ಮನೆಯಲ್ಲಿ ಬಳಸಿದ ತೆಂಗಿನ ಕಾಯಿಯ ಗುಂಜು(ಜುಂಗು), ಸೊಪ್ಪು- ತರಕಾರಿ ಸಿಪ್ಪೆ ಇಂಥವನ್ನು ಕುಂಡಗಳಿಗೆ/ಗಿಡಗಳ ಬುಡಕ್ಕೆ ಹಾಕಿ ಮುಚ್ಚಿಗೆ ಮಾಡಿ. ಇದರಿಂದ ಮಣ್ಣಿನಲ್ಲಿರುವ ತೇವಾಂಶ ಆವಿಯಾಗುವುದು ತಪ್ಪುತ್ತದೆ. ಮುಚ್ಚಿಗೆ ಮಾಡಿರುವ ಸಾವಯವ ವಸ್ತುಗಳು ಕರಗಿ ಗಿಡಕ್ಕೆ ಗೊಬ್ಬರವಾಗುತ್ತದೆ.

5. ಬರ್ಡ್ ಬಾತ್...

ಕೈತೋಟ/ತಾರಸಿ ತೋಟದ ನಡುವೆ ಅಲ್ಲಲ್ಲಿ ಅಗಲವಾದ ಪಾತ್ರೆಯಲ್ಲಿ ನೀರು ತುಂಬಿಸಿಡಿ. ಬಾಯಾರಿದ ಪಕ್ಷಿಗಳು ಬಂದು ನೀರು ಕುಡಿಯಲು ಇದು ನೆರವಾಗುತ್ತದೆ. ಅಷ್ಟೇ ಅಲ್ಲ ಸಣ್ಣ ಪಕ್ಷಿಗಳು, ಪಾತ್ರೆಯ ನೀರಿನಲ್ಲಿ ಮುಳುಗೇಳುತ್ತಾ(ಬರ್ಡ್ ಬಾತ್) ತಾಪವನ್ನು ತಣಿಸಿಕೊಳ್ಳುತ್ತವೆ. ಮನೆಯ ಅಂಗಳ, ತಾರಸಿಯಲ್ಲಿ ಪಕ್ಷಿಗಳು ಹಾರಾಟವಿದ್ದರೆ, ಕೈತೋಟದ ಅಂದ ಹೆಚ್ಚುತ್ತದೆ.



6. ತೂಗು ಕುಂಡಗಳು

ನಿಮ್ಮ ಕೈತೋಟದಲ್ಲಿ ಮರಗಳಿದ್ದರೆ, ಅದರ ಟೊಂಗೆಗಳಿಗೆ ಹೂವು ಅರಳಿರುವ ಕುಂಡಗಳನ್ನು ತೂಗು ಹಾಕಿ. ಕಾಂಪೌಂಡ್ ಮೇಲೆ ಕಂಬಿಗಳಿದ್ದರೆ ಅಲ್ಲಿಗೂ ಗಿಡಗಳನ್ನು ತೂಗು ಹಾಕಿ. ಅಂಗಳದ ಸೊಬಗು ಇಮ್ಮಡಿಸುತ್ತದೆ.

7. ಸೂಕ್ತ ಗಿಡಗಳನ್ನು ಆರಿಸಿಕೊಳ್ಳಿ

ಬೇಸಿಗೆಯಲ್ಲಿ ಹೂವು ಅರಳುವಂತಹ ಗಿಡಗಳನ್ನು ಆಯ್ಕೆ ಮಾಡಿ(ಮಳೆಗಾಲದಲ್ಲೇ ಪ್ಲಾನ್ ಮಾಡಬೇಕು) ಕೈತೋಟದಲ್ಲಿ ನೆಡಿ. ಉರಿವ ಬಿಸಿಲಿನಲ್ಲಿ ಅರಳಿದ ಹೂವುಗಳನ್ನು ನೋಡಿದಾಗ ಮನಸ್ಸಿಗೆ ಹಿತವೆನಿಸುತ್ತದೆ. ಅದರಲ್ಲೂ ಬಣ್ಣ ಬಣ್ಣದ ಹೂವುಗಳನ್ನು ನೋಡಿದರೆ, ಮನಸ್ಸು ಅರಳುತ್ತದೆ. ಕೈತೋಟದಲ್ಲಿ ಸುಂದರ ಹೂವಿನ ಗಿಡಗಳಿದ್ದರೆ, ಮನೆಗೊಂದು ಸೊಬಗು. ದಾಸವಾಳ, ಬೋಗನ್‌ವಿಲ್ಲಾ, ಕರವೀರ, ಗುಲಾಬಿ ಇಂಥವು, ನಮ್ಮ ನೆಲದ ವಾತಾವರಣಕ್ಕೆ ಒಗ್ಗಿ ಬೆಳೆಯುವ ಹೂವಿನ ಗಿಡಗಳು.

8. ನೆರಳಿನಲ್ಲಿ ವಿರಮಿಸಿ

ಕೈತೋಟದಲ್ಲಿ ನೆರಳಿನ ಜಾಗವಿದ್ದರೆ (ಮೊದಲೇ ವಿನ್ಯಾಸ ಮಾಡಿದರೆ ಒಳ್ಳೆಯದು), ಅಲ್ಲಿ ಎರಡು ಕುರ್ಚಿ, ಒಂದು ಸೋಫಾ, ಮುಂದೊಂದು ಟೀಪಾಯಿ ಜೋಡಿಸಿ. ಇಡೀ ಕುಟುಂಬದವರು ಮರದ ನೆರಳಲ್ಲಿ ಕುಳಿತು ಸಂಜೆಯ ಕಾಫಿ ಹೀರುತ್ತಾ, ಕೈತೋಟದ ಸೌಂದರ್ಯವನ್ನು ಆಸ್ವಾದಿಸಬಹುದು.

ಜೀ5ನಲ್ಲಿ ಕನ್ನಡದಲ್ಲಿ 'ದಿ ಕಾಶ್ಮೀರ್‌ಫೈಲ್ಸ್'



ದಿ ಕಾಶ್ಮೀರ್ ಫೈಲ್ಸ್ ಚಿತ್ರದ ಪೋಸ್ಟರ್

ಕಳೆದ ಮಾರ್ಚ್ 11ರಂದು ಬಿಡುಗಡೆಯಾಗಿದ್ದ ವಿವೇಕ್ ಅಗ್ನಿಹೋತ್ರಿ ನಿರ್ದೇಶನದ 'ದಿ ಕಾಶ್ಮೀರ್ ಫೈಲ್ಸ್' ಚಿತ್ರವು ಮೇ 13ರಂದು ಒಟಿಟಿ ವೇದಿಕೆ ಜೀ5ನಲ್ಲಿ ಪ್ರಸಾರವಾಗಲಿದೆ.

ಕಾಶ್ಮೀರ ಪಂಡಿತರ ಮೇಲಾದ ದೌರ್ಜನ್ಯ, ನಿರಾಶ್ರಿತರ ಹತ್ಯೆ ಕುರಿತ ಈ ಚಿತ್ರವು ಬಿಡುಗಡೆಯಾದ ನಂತರ ದೇಶದಾದ್ಯಂತ ಸಂಚಲನ ಸೃಷ್ಟಿಸಿತ್ತು. ಹಲವು ರಾಜ್ಯಗಳು ಚಿತ್ರಕ್ಕೆ ತೆರಿಗೆ ವಿನಾಯಿತಿಯನ್ನೂ ನೀಡಿದ್ದವು. ರಾಜಕೀಯ ಕೆಸರೆರಚಾಟಕ್ಕೂ ಈ ಚಿತ್ರವು ವೇದಿಕೆ ಮಾಡಿತ್ತು. ಇದೆಲ್ಲದರ ನಡುವೆ ಬಾಕ್ಸ್ ಆಫೀಸ್‌ನಲ್ಲೂ ಈ ಚಿತ್ರ ಸದ್ದು ಮಾಡಿತ್ತು.

ಅನುಪಮ್ ಖೇರ್, ಮಿಥುನ್ ಚಕ್ರವರ್ತಿ, ಪಲ್ಲವಿ ಜೋಶಿ, ಪ್ರಕಾಶ್ ಬೆಳವಾಡಿ ಮತ್ತು ದರ್ಶನ್ ಕುಮಾರ್ ಮುಂತಾದ ದಿಗ್ಗಜರೇ ನಟಿಸಿದ್ದ ಈ ಸಿನಿಮಾವು 1991ರಲ್ಲಿ ಕಾಶ್ಮೀರದಲ್ಲಿ ನಡೆದ ಪಂಡಿತರ ಹತ್ಯೆ ಹಾಗೂ ವಲಸೆಯನ್ನು ಕಟ್ಟಿಕೊಟ್ಟಿತ್ತು. ಈ ಸಿನಿಮಾ, ಚಿತ್ರಮಂದಿರಗಳಲ್ಲಿ ಕೇವಲ ಹಿಂದಿ ಭಾಷೆಯಲ್ಲಿ ತೆರೆಕಂಡಿತ್ತು. ಆದರೆ ಜೀ5 ಒಟಿಟಿಯಲ್ಲಿ ನಾಲ್ಕು ಭಾಷೆಗಳಲ್ಲಿ ಈ ಚಿತ್ರವು ಪ್ರಸಾರವಾಗಲಿದೆ. ಕನ್ನಡ, ಹಿಂದಿ, ತಮಿಳು ಹಾಗೂ ತೆಲುಗು ಭಾಷೆಯಲ್ಲಿ ಸಿನಿಮಾ ಒಟಿಟಿಯಲ್ಲಿ ವೀಕ್ಷಣೆಗೆ ಲಭ್ಯವಿರಲಿದೆ.

'ಇನ್' ಟೀಸರ್‌ಗೆ ಸುದೀಪ್ ಖುಷಿ



ಪಾವನಾ ಗೌಡ, ಕಿಚ್ಚ ಸುದೀಪ್

ಇಡೀ ತೆರೆಯ ಮೇಲೆ ಒಂಟಿ ಮಹಿಳೆ. ಭಯ, ಆತಂಕ, ಕೋಪ ಎಲ್ಲದರ ಅಭಿವ್ಯಕ್ತಿ....

ಇದು 'ಇನ್' ಚಿತ್ರದ ಟೀಸರ್‌ನಲ್ಲಿ ಕಾಣುವ ದೃಶ್ಯ. ಈ ಟೀಸರನ್ನು ಕಿಚ್ಚ ಸುದೀಪ್ ಬಿಡುಗಡೆಗೊಳಿಸಿದ್ದಾರೆ. ಟೀಸರ್ ನೋಡಿದ ಕಿಚ್ಚ ಖುಷಿಯಾಗಿದ್ದಾರಂತೆ. ಚಿತ್ರತಂಡದ ಬೆನ್ನು ತಟ್ಟಿದ್ದಾರೆ.

ನಿರ್ದೇಶಕ ಬಡಿಗೇರ್ ದೇವೇಂದ್ರ ಅವರು, 'ನನ್ನ ಮೊದಲ ಚಿತ್ರ 'ರುದ್ರಿ'ಯೂ ಮಹಿಳಾ ಪ್ರಧಾನವಾಗಿತ್ತು. ಈಗ ನಿರ್ದೇಶಿಸಿರುವ 'ಇನ್' ಚಿತ್ರವೂ ಮಹಿಳಾ ಪ್ರಧಾನವಾಗಿದೆ. ಕೊರೊನಾ ಲಾಕ್‌ಡೌನ್ ಸಂದರ್ಭದಲ್ಲಿ ಸಿದ್ಧವಾಗಿರುವ ಇದೊಂದು ಪ್ರಯೋಗಾತ್ಮಕ ಚಿತ್ರ. ಕನ್ನಡ ಚಿತ್ರರಂಗದಲ್ಲಿ ಇದುವರೆಗೂ ಈ ರೀತಿಯ ಪ್ರಯತ್ನ ನಡೆದಿರುವ ಉದಾಹರಣೆ ಕಡಿಮೆ' ಎಂದರು.

ಈ ಚಿತ್ರದ ಫಸ್ಟ್ ಲುಕ್ ಅನ್ನು ಮುಖ್ಯಮಂತ್ರಿ ಬಸವರಾಜ ಬೊಮ್ಮಾಯಿ ಅವರು ಬಿಡುಗಡೆ ಮಾಡಿದ್ದರು.

ಚಿತ್ರದ ನಾಯಕಿ ಪಾವನಾ ಗೌಡ, 'ಇನ್' ಚಿತ್ರ ಅತ್ಯಂತ ವಿಭಿನ್ನವಾಗಿದ್ದು, ಇಡೀ ಚಿತ್ರದ ತುಂಬ ನಾನೊಬ್ಬಳೇ ತೆರೆಯ ಮೇಲೆ ಬರುವುದು ಇದೆ. ಇದೊಂದು ದೊಡ್ಡ ಸವಾಲಿನ ಚಿತ್ರ. ಈ ಚಿತ್ರವನ್ನು ಜನರು ಇಷ್ಟಪಡುತ್ತಾರೆ ಎನ್ನುವ ವಿಶ್ವಾಸ ನನಗಿದೆ ಎಂದರು. ಐಡಿಯಾ ಮೋಷನ್ ಪಿಕ್ಚರ್ಸ್ ಸಂಸ್ಥೆಯಡಿ ನಿರ್ಮಾಣವಾಗಿರುವ ಈ ಚಿತ್ರಕ್ಕೆ ಪ್ರಶಾಂತ ಅಯ್ಯಂಗಾರಿ ನಿರ್ಮಾಪಕರು. ದೀಪಕ್ ದುರ್ಗಾಯಿ, ಕರವೀರ ಸಂಗೊಳ್ಳಿ, ಸಹದೇವ ಪಾಗೋಜಿ, ನಾಗಪ್ಪ ಓಮನ್ನವರ, ಧನರಾಜ ಬಡಿಗೇರ, ಸಂಜೋತಾ ಪಾಗೋಜಿ ಸೇರಿ ಐದಾರು ಜನ ಸ್ನೇಹಿತರು ಸಹ ನಿರ್ಮಾಪಕರಾಗಿ ಬಂಡವಾಳ ಹೂಡಿದ್ದಾರೆ.

ಚಿತ್ರಕ್ಕೆ ಭರತ್ ನಾಯಕ್ ಸಂಗೀತ ನೀಡಿದ್ದು, ಸಾಹಿತ್ಯ ಬಡಿಗೇರ್ ದೇವೇಂದ್ರ, ಶಂಕರ ಪಾಗೋಜಿ ಚಿತ್ರಕಥೆ, ಸಂಭಾಷಣೆ ಬರೆದಿದ್ದಾರೆ.

'ಗರಡಿ'ಯೊಳಗೇನಿದೆ ಭಟ್ರೇ?

ಸಿನಿ ಹನಿ



ಗರಡಿ ಚಿತ್ರದಲ್ಲಿ ಸೂರ್ಯ ಹಾಗೂ ಸುಜಯ್ ಬೇಲೂರು

ರೊಮ್ಯಾಂಟಿಕ್ ಕಾಮಿಡಿ ಸಿನಿಮಾಗಳಿಂದಲೇ ಗುರುತಿಸಿಕೊಂಡಿರುವ ನಿರ್ದೇಶಕ ಯೋಗರಾಜ್ ಭಟ್ ಅವರು ಇದೀಗ ಪಕ್ಕಾ ಆ್ಯಕ್ಷನ್ ಸಿನಿಮಾ 'ಗರಡಿ'ಯೊಳಗೆ ಪ್ರವೇಶಿಸಿದ್ದಾರೆ. 11 ಸಾಹಸದೃಶ್ಯಗಳನ್ನೊಳಗೊಂಡ ಈ ಸಿನಿಮಾದ ಚಿತ್ರೀಕರಣ ಶೇ 70ರಷ್ಟು ಪೂರ್ಣಗೊಂಡಿದ್ದು, ಮಧ್ಯಂತರದಲ್ಲಿ ಬರುವ ಕುಸ್ತಿ ಪಂದ್ಯಾವಳಿಯ ಚಿತ್ರೀಕರಣ ಬೆಂಗಳೂರು ಸಮೀಪದ ಚಿಕ್ಕಜಾಲದ ಕೋಟೆ ಆಂಜನೇಯಸ್ವಾಮಿ ದೇವಸ್ಥಾನದಲ್ಲಿ ನಡೆದಿದೆ. ಈ ಸಂದರ್ಭದಲ್ಲಿ ಸುದ್ದಿಗಾರರ ಜೊತೆಗೆ 'ಗರಡಿ' ಚಿತ್ರದ ಕುರಿತು ಮಾತಿಗಿಳಿದ ಯೋಗರಾಜ್ ಭಟ್, 'ಆ್ಯಕ್ಷನ್ ಜೊತೆಗೆ ಪ್ರೇಮಕಥೆಯೂ ಚಿತ್ರದಲ್ಲಿದೆ. ವೈಯಕ್ತಿಕವಾಗಿ ಹೃದಯಕ್ಕೆ ತುಂಬಾ ಹತ್ತಿರವಾದ ಬರಹ 'ಗರಡಿ'. ಗರಡಿ ಒಬ್ಬ ಬಡವನ ಕಥೆ. 'ಅನಿಸಬಹುದು ನಿನಗೆ ಇದು ತುಂಬಾ ಸಣ್ಣ ವಿಷಯ. ಅರಿಯದೇನೆ ನಾನು ಆಗಿರುವೆ ನಿನ್ನ ಇನಿಯ. ಬೇರೆ ಯಾರೇ ನಿಂತರೂ ನಿನ್ನ ಬಾಜು. ಒಡೆದೇ ಹೋಗಬಹುದು ನನ್ನ ಬದುಕಿನ ಗಾಜು. ದಯಮಾಡಿ ಉರಿಸಬೇಡ ಈ ಬಡವನ ಹೃದಯ..' ಹೀಗೊಂದು ಹಾಡು ಬರೆದ ಮೇಲೆ ನಾಯಕ ಪಾತ್ರಪೋಷಣೆ ಕೈಗೆ ಸಿಕ್ಕಿತು. ಅತಿ ಸಾಮಾನ್ಯನ ಕಥೆ ಇದು. ನನಗೆ ಏಕಲವ್ಯನ ಪಾತ್ರ ಬಹಳ ಇಷ್ಟ. ಗುರುವಿನ ಸಹಕಾರವಿಲ್ಲದೇ ಒಬ್ಬನೇ ಕಲಿಯುತ್ತಾನೆ. ಗರಡಿಯಲ್ಲಿನ ಹೀರೊ ಕೂಡಾ ಏಕಲವ್ಯನಂತೆ. ಗರಡಿಯಲ್ಲಿ ಅಡುಗೆ ಮಾಡಿಕೊಂಡಿದ್ದ ಯುವಕ ಮುಂದೆ ಏನಾಗುತ್ತಾನೆ? ಎನ್ನುವುದೇ ಕಥೆ. ನಟ ದರ್ಶನ್ ಅವರೇ ಸೂರ್ಯನನ್ನು ಹೀರೊ ಸ್ಥಾನಕ್ಕೆ ಆಯ್ಕೆ ಮಾಡಿದರು' ಎಂದರು.

'ನಾಯಕನ ಅಣ್ಣನ ಪಾತ್ರದಲ್ಲಿ(ಶಂಕರ್) ದರ್ಶನ್ ಅವರು ನಟಿಸುತ್ತಿದ್ದು, ಅವರು ಯುವಕನಾಗಿದ್ದ ಸಂದರ್ಭದಲ್ಲಿ ಕುಸ್ತಿಪಟು ಆಗಿರುತ್ತಾನೆ. ಅಪರಾಧ ಕೃತ್ಯವೊಂದರಲ್ಲಿ ಶಂಕರ್ ಸಿಲುಕಿದ ಸಂದರ್ಭದಲ್ಲಿ ಗರಡಿಯೊಂದ ಹೊರದಬ್ಬಲ್ಪಡುತ್ತಾನೆ. ಕೊನೆಯಲ್ಲಿ ಕಥೆಯನ್ನು ಉಳಿಸಲು ಆತನ ಮರುಪ್ರವೇಶವಾಗುತ್ತದೆ. ನಟ, ಸಚಿವ ಬಿ.ಸಿ. ಪಾಟೀಲ ಅವರು ಗರಡಿ ಗುರುಗಳ ಪಾತ್ರದಲ್ಲಿ ಕಾಣಿಸಿಕೊಳ್ಳುತ್ತಾರೆ' ಎಂದು ಯೋಗರಾಜ್ ಭಟ್ ವಿವರಿಸಿದರು.

ಚಿತ್ರದಲ್ಲಿ ವಿಲನ್ ಪಾತ್ರದಲ್ಲಿ ಬಿ.ಸಿ. ಪಾಟೀಲ್ ಅವರ ಅಳಿಯ ಸುಜಯ್ ಬೇಲೂರು ಬಣ್ಣಹಚ್ಚಿದ್ದಾರೆ. ರವಿಶಂಕರ್, ಧರ್ಮಣ್ಣ ಕಡೂರ್, ಬಲ ರಾಜವಾಡಿ, ಚೆಲುವರಾಜು, ರಾಘವೇಂದ್ರ, ಕಾಮಿಡಿ ಕಿಲಾಡಿಗಳು ಖ್ಯಾತಿಯ ನಯನ ಮುಂತಾದವರು ಚಿತ್ರದ ತಾರಾಬಳಗದಲ್ಲಿದ್ದಾರೆ.

ಮನೋಜ್‌ಗೆ 'ಮರಳಿ ಮನಸಾಗಿದೆ'



ಮರಳಿ ಮನಸಾಗಿದೆ ಪೋಸ್ಟರ್‌ನಲ್ಲಿ ಮನೋಜ್, ನಿರೀಕ್ಷಾ ಶೆಟ್ಟಿ

ಮನೋಜ್ ಈಗ 'ಮರಳಿ ಮನಸಾಗಿದೆ' ಮೂಲಕ ಹೊಸ ಚಿತ್ರದಲ್ಲಿ ಕಾಣಿಸಿಕೊಳ್ಳಲಿದ್ದಾರೆ. ತೆಲುಗು ಚಿತ್ರರಂಗದಲ್ಲಿ ಬ್ಯುಸಿಯಾಗಿದ್ದ ಮನೋಜ್ ಅವರು ಅಲ್ಲಿನ ಯೋಜನೆಗಳನ್ನು ಮುಗಿಸಿಕೊಂಡು 'ಮರಳಿ ಮನಸಾಗಿದೆ' ಎಂದಿದ್ದಾರೆ.

ಬೆನಕ ಟಾಕೀಸ್ ಬ್ಯಾನರ್ ಅಡಿ, 'ಮರಳಿ ಮನಸಾಗಿದೆ' ಚಿತ್ರದ ಮುಹೂರ್ತ ಇತ್ತೀಚೆಗೆ ದಾವಣಗೆರೆ ಜಿಲ್ಲೆಯ ಆವರಗೊಳ್ಳದಲ್ಲಿ ನಡೆಯಿತು. ನಿರೀಕ್ಷಾ ಶೆಟ್ಟಿ ಚಿತ್ರದ ನಾಯಕಿ. ಈ ವಾರ ಚಿತ್ರೀಕರಣ ಆರಂಭವಾಗಲಿದೆ ಎಂದು ಚಿತ್ರತಂಡ ಹೇಳಿದೆ.

'ಈ ಚಿತ್ರದಲ್ಲಿ ಗಡ್ಡ ತೆಗೆದು ಯಂಗ್ ಲುಕ್ಕಿಂಗ್ ಪೋಸ್ ಕೊಟ್ಟಿದ್ದೇನೆ. ಪ್ರೇಮಕಥೆಯಾದರೂ ಭಿನ್ನವಾಗಿ ಹೇಳಲು ಹೊರಟಿದ್ದೇವೆ. ವೈದ್ಯಕೀಯ ಕ್ಷೇತ್ರದ ವಿಷಯವೊಂದನ್ನು ಇಟ್ಟುಕೊಂಡು ಕಥೆ ಹೇಳಲು ಹೊರಟಿದ್ದೇವೆ. ಕರ್ನಾಟಕದ ಸುಂದರ ತಾಣಗಳಲ್ಲಿ ಚಿತ್ರೀಕರಿಸಿದ್ದೇವೆ. ಎಲ್ಲ ಪ್ರೇಕ್ಷಕರಿಗೂ ಚಿತ್ರ, ಕಥೆ ಹಾಗೂ ಸಂಗೀತ ಇಷ್ಟವಾಗುತ್ತದೆ' ಎಂದು ಮನೋಜ್ ಹೇಳಿದರು.

ವಿನು ಮನಸು ಸಂಗೀತವಿದೆ. ಜೈ ಆನಂದ್ ಮತ್ತು ಹಾಲೇಶ್ ಎಸ್. ಛಾಯಾಗ್ರಾಹಕರು. ನಾಗರಾಜ್ ಶಂಕರ್ ನಿರ್ದೇಶನ, ಬೀರೇಶ್ ಎಚ್.ಎಸ್.ನವೀನ್‌ಕುಮಾರ್ ಆರ್.ಒ.ನಿರ್ಮಾಪಕರು.

ಕುಡ್ಲ ಕೆಫೆ, ಪವಿತ್ರ- ಬೀಡಿದ ಪೊಣ್ಣು ತುಳು ಚಿತ್ರಗಳ ಮೂಲಕ ಬೆಳ್ಳಿ ತೆರೆ ಕಂಡ ನಟ ಮನೋಜ್. 'ಹ್ಯಾಪಿ ಜರ್ನಿ', 'ಕುಮಾರಿ 21 (ಎಫ್)', 'ಪರಸಂಗ'ಗಳ ಮೂಲಕ ಚಿತ್ರರಸಿಕರನ್ನು ತಲುಪಿದ್ದರು. 'ಗಾಜನೂರು', 'ಕಾಲನಾಗಿನಿ'ಯಲ್ಲಿಯೂ ಬ್ಯುಸಿಯಾಗಿದ್ದಾರೆ.

ತೆಲುಗಿನ 'ಅಹಿರಾವಣ', '14 ಡೇಸ್ ಲವ್', ಬಿಡುಗಡೆಗೆ ಸಿದ್ಧವಾಗಿವೆ.



'ವಾಮನ'ನಿಗೆ ತುಳುನಾಡ ಬೆಡಗಿ ಜೋಡಿ

'ಬಜಾರ್' ಸಿನಿಮಾ ಮೂಲಕ ನಾಯಕನಾಗಿ ಮಿಂಚಿದ್ದ ನಟ ಧ್ವನೀರ್, 'ಬೈ ಟು ಲವ್' ಸಿನಿಮಾ ಬಳಿಕ 'ವಾಮನ' ಸೆಟ್‌ಗೆ ಇಳಿದಿದ್ದರು. ಶಂಕರ್ ರಾಮನ್ ನಿರ್ದೇಶನದ ಈ ಚಿತ್ರಕ್ಕೆ ಇದೀಗ ನಾಯಕಿಯ ಆಯ್ಕೆಯಾಗಿದ್ದು, ಕರಾವಳಿಯ ರಚನಾ ರೈ ಧನ್ವೀರ್‌ಗೆ ಜೋಡಿಯಾಗಿ ನಟಿಸಲಿದ್ದಾರೆ.

ಬೆಂಗಳೂರಿನಲ್ಲಿಯೇ ಚಿತ್ರದ ಮೊದಲ ಹಂತದ ಚಿತ್ರೀಕರಣ ಭರದಿಂದ ಸಾಗಿದೆ. ಈ ಹಿಂದೆ ತುಳು ಸಿನಿಮಾವೊಂದರಲ್ಲಿ ನಟಿಸಿದ್ದ ರಚನಾಗೆ ಇದು ಚೊಚ್ಚಲ ಕನ್ನಡ ಸಿನಿಮಾ. ರಚನಾ ಪಾತ್ರದ ಬಗ್ಗೆ ಚಿತ್ರತಂಡವು ಗುಟ್ಟುಬಿಟ್ಟುಕೊಟ್ಟಿಲ್ಲ. ಬದಲಾಗಿ ಬಬ್ಲಿ ಪಾತ್ರದ ಮೂಲಕ ಪ್ರೇಕ್ಷಕರನ್ನು ರಚನಾ ರಂಜಿಸಲಿದ್ದಾರೆ ಎಂದಷ್ಟೇ ತಿಳಿಸಿದೆ. ಬ್ಯಾಡ್ಮಿಂಟನ್ ಆಟಗಾರ್ತಿಯಾಗಿರುವ ರಚನಾ, ಮಾಡೆಲ್, ಡ್ಯಾನ್ಸರ್ ಹಾಗೆಯೇ ಬರಹಗಾರ್ತಿಯೂ ಆಗಿದ್ದಾರೆ.

ಈಕ್ವಿನಾಕ್ಸ್ ಗ್ಲೋಬಲ್ ಎಂಟರ್‌ಟೈನ್‌ಮೆಂಟ್‌ನಡಿ ಮೂಡಿಬರುತ್ತಿರುವ 'ವಾಮನ'ಗೆ ಚೇತನ್ ಕುಮಾರ್ ಬಂಡವಾಳ ಹೂಡಿದ್ದಾರೆ. ಮಾಫಿಯಾ ಲೋಕದ ಕಥೆಯ ಜೊತೆ ಆ್ಯಕ್ಷನ್ ಎಂಟರ್‌ಟೈನರ್ ಸಿನಿಮಾ ಇದಾಗಿದೆ.

ಸಂತಸದ ಬದುಕಿಗಿದೆ ಹಲವು ಸೂತ್ರ


ಸಾಂದರ್ಭಿಕ ಚಿತ್ರ

ಮನಸ್ವಿ

ಕೆಲವರು ಜೀವನದಲ್ಲಿ ಸದಾ ಕೊರಗುತ್ತಿರುತ್ತಾರೆ. ಎಲ್ಲವೂ ಇದ್ದರೂ ಏನೂ ಇಲ್ಲ ಎನ್ನುತ್ತಾ ಗೊಣಗುತ್ತಲೇ ಬದುಕುತ್ತಾರೆ. ಅಂತಹವರು ಜೀವನದಲ್ಲಿ ಖುಷಿ ಕಂಡುಕೊಳ್ಳುವುದು ನಿಜಕ್ಕೂ ಕಷ್ಟ! ಆದರೆ ಮನುಷ್ಯ ಆಶಾವಾದಿ ಆದಷ್ಟು ಜೀವನ ಚೆನ್ನಾಗಿರುತ್ತದೆ ಎನ್ನುವುದು ಅನುಭವಸ್ಥರ ಮಾತು. ಸದಾ ಖುಷಿ ಆಗಿರಬೇಕು ಎಂದರೆ ಇರುವುದರಲ್ಲೇ ನೆಮ್ಮದಿ, ಖುಷಿ ಕಂಡುಕೊಳ್ಳಬೇಕು. ಖುಷಿ ಎನ್ನುವುದು ಬೇರೆಲ್ಲೋ ಇಲ್ಲ. ನಮ್ಮೊಳಗಿನ ಭಾವವೇ ಖುಷಿ ಎಂದುಕೊಂಡರೆ ಜೀವನ ನಿಜಕ್ಕೂ ಸ್ವರ್ಗವೇ ಸೈ. ಹಾಗಾದರೆ ಖುಷಿ ಕಂಡುಕೊಳ್ಳುವ ಬಗೆ ಹೇಗೆ? ಇಲ್ಲಿದೆ ಕೆಲವು ದಾರಿ...



ಪ್ರಕ್ರಿಯೆಯ ಮೇಲಿರಲಿ ಗಮನ

ಯಾವುದೇ ಕೆಲಸದ ಆರಂಭಕ್ಕೂ ಮೊದಲು ಫಲಿತಾಂಶ ನಿರೀಕ್ಷೆ ಮಾಡಬೇಡಿ. ಮೊದಲು ಕೆಲಸ ಆರಂಭಿಸಬೇಕು. ಕೆಲಸದಲ್ಲಿ ಪ್ರಗತಿ ಕಂಡುಕೊಳ್ಳಬೇಕು. ಈ ಪ್ರಕ್ರಿಯೆಯಲ್ಲಿ ನಮ್ಮನ್ನು ನಾವು ಆತ್ಮವಿಮರ್ಶೆ ಮಾಡಿಕೊಳ್ಳುತ್ತಾ ಮುಂದೆ ಸಾಗಬೇಕು. ನಮ್ಮ ಸೋಲು-ಗೆಲುವು ಎರಡನ್ನೂ ನಾವೇ ವಿಮರ್ಶೆ ಮಾಡಿಕೊಂಡಾಗ ನಾವೆಲ್ಲಿ ಸೋಲುತ್ತಿದ್ದೇವೆ ಎಂಬುದು ಅರಿವಾಗುತ್ತದೆ. ಆಗ ಸೋಲಿನ ಹಾದಿಯನ್ನು ಬಿಟ್ಟು ಗೆಲುವಿನ ಹಾದಿಯಲ್ಲಿ ಸಾಗುವುದು ಸುಲಭವಾಗುತ್ತದೆ. ಫಲಿತಾಂಶದ ಬಗ್ಗೆ ಒತ್ತಡ ತಂದುಕೊಳ್ಳುವುದಕ್ಕಿಂತ ಆ ಬಗ್ಗೆ ಚಿಂತಿಸದೇ ಕೆಲಸ ಮುಂದುವರಿಸಬೇಕು. ಆಗ ಫಲಿತಾಂಶ ಖಂಡಿತ ಸಕಾರಾತ್ಮಕವಾಗಿರುತ್ತದೆ. ಇದರಿಂದ ಮನಸ್ಸಿಗೂ ಖುಷಿ ಸಿಗುತ್ತದೆ.

ವಿನಯದಿಂದಿರಿ

ಮಾನವೀಯತೆ, ವಿಧೇಯತೆ ಹಾಗೂ ವಿನಯಕ್ಕಿಂತ ದೊಡ್ಡ ಗುಣಗಳಿಲ್ಲ. ಮಾನವೀಯ ಗುಣವು ಮನುಷ್ಯನ ಸಂತೋಷದ ಕೀಲಿ ಕೈಗಳಲ್ಲಿ ಒಂದು. ಸಂಕುಚಿತ ಮನೋಭಾವ ಇರುವವರಿಗೆ ಅವಕಾಶಗಳು ಸಿಗುವುದು ಕಡಿಮೆ. ಅಲ್ಲದೇ ಸ್ವಯಂ ಅಭಿವೃದ್ಧಿ ಕೂಡ ಅಷ್ಟಕಷ್ಟೇ. ಆ ಕಾರಣಕ್ಕೆ ಕೆಲಸ, ಕಚೇರಿ, ಮನೆ ಎಲ್ಲೇ ಇರಿ ವಿನಯದಿಂದಿರುವುದು ಬಹಳ ಮುಖ್ಯ. ವಿನಯ ಎಂಬುದು ನಮ್ಮ ಬದುಕಿಗೆ ಹೊಸ ದಾರಿ, ಆ ದಾರಿಯಲ್ಲಿ ಹೊಸ ಜನರನ್ನು ಪರಿಚಯಿಸುತ್ತದೆ. ನಮ್ಮ ಚಿಂತನೆ ಹಾಗೂ ಚಟುವಟಿಕೆಗಳೂ ಬದಲಾಗುತ್ತವೆ. ಆತ್ಮವಿಶ್ವಾಸದಿಂದ ನಮ್ಮ ಹಾದಿಯಲ್ಲಿ ಮುನ್ನುಗಲು ಸಾಧ್ಯವಾಗುತ್ತದೆ. ಇದರಿಂದ ಸಿಗುವ ಸಂತಸ ಇನ್ನೊಂದಿಲ್ಲ.

ಸಣ್ಣ ಹೆಜ್ಜೆಯಿಂದಲೇ ಆರಂಭಿಸಿ

ಯಾವುದೇ ಕೆಲಸವನ್ನಾಗಲಿ ಸಣ್ಣದಾಗಿ ಆರಂಭಿಸಿ. ಇತರರೊಂದಿಗೆ ನಿಮ್ಮನ್ನು ಹೋಲಿಸಿ ಕೊಂಡು ಅವರಂತೆ ಆಗಬೇಕು ಎನ್ನುವ ಹಠ ಬೇಡ. ಒಬ್ಬೊಬ್ಬರ ಸಾಮರ್ಥ್ಯ ಒಂದೊಂದು ರೀತಿ ಇರುತ್ತದೆ. ನಿಮ್ಮ ಸಾಮರ್ಥ್ಯಕ್ಕೆ ತಕ್ಕ ಹಾಗೇ ನೀವು ಮುಂದಡಿ ಇಡಿ. ಯಾರದ್ದೋ ಗೆಲುವು ನೋಡಿ ಬೇಸರ ಪಟ್ಟುಕೊಂಡು ಮನಸ್ಸಿಗೆ ನೋವು ಕೊಡುವುದಕ್ಕಿಂತ ನಾನು ಹೇಗೆ ಗೆಲ್ಲಲಿ, ನಮ್ಮ ಗೆಲುವಿನ ಸಾಮರ್ಥ್ಯದ ಅವಧಿ ಏನು? ನನ್ನ ಗೆಲುವು ಯಾವುದರ ಮೇಲೆ ಅವಲಂಬಿತವಾಗಿದೆ ಎಂಬುದನ್ನೆಲ್ಲಾ ತಿಳಿದುಕೊಂಡು ಗೆಲುವಿನ ಹಾದಿ ಹಿಡಿಯಿರಿ. ಸಣ್ಣ ಹೆಜ್ಜೆಯಿಂದ ಆರಂಭವಾದ ನಿಮ್ಮ ಪಯಣ ಗೆಲುವಿನ ತುತ್ತ ತುದಿ ಮುಟ್ಟಿದಾಗ ಆಗುವ ಸಂತಸಕ್ಕೆ ಎಣೆಯಿಲ್ಲ.

ಕಷ್ಟಗಳನ್ನು ಸ್ವೀಕರಿಸಿ

ಕಷ್ಟ ಬಂದಾಗ ಜೀವನವೇ ಮುಗಿಯಿತು ಎಂದುಕೊಂಡು ನಿರಾಸೆಗೆ ಒಳಗಾಗುವುದು, ಆಕ್ರೋಶ, ಅಸಹನೆ ತೋರುತ್ತಾ ಹೆಣಗಾಡುವುದಕ್ಕಿಂತ ಕಷ್ಟವನ್ನು ಸಂತೋಷದಿಂದ ಸ್ವೀಕರಿಸಿ ಕಷ್ಟಗಳ ಪರಿಹಾರಕ್ಕೆ ದಾರಿ ಏನಿದೆ ಕಂಡುಕೊಳ್ಳಿ. ಕಠಿಣವಾದ ಹಾದಿಯಲ್ಲಿ ಸಾಗುತ್ತಿದ್ದಾಗಲೂ ನಡುವೆ ಬರುವ ಸುಲಭವಾದ ದಾರಿಯನ್ನು ಕಂಡುಕೊಳ್ಳಲು ಪ್ರಯತ್ನಿಸಿ. ಏನೇ ಆದರೂ ಗುರಿ ತಲುಪುತ್ತೇವೆ ಎಂಬ ಭಾವವಿದ್ದಾಗ ಸೋಲು ಆವರಿಸುವುದು ಕಡಿಮೆ. ಅಲ್ಲದೇ ಸೋಲಿನ ಕಹಿ ನಮ್ಮನ್ನು ಭಾದಿಸುವುದು ಕಡಿಮೆ.

ನಿಮ್ಮ ಸಂತಸವನ್ನು ಹಂಚಿಕೊಳ್ಳಿ

ಆಪ್ತರೊಂದಿಗೆ ನಿಮ್ಮ ಮನದ ಭಾವನೆಗಳನ್ನು ಹಂಚಿಕೊಳ್ಳಿ. ಹಾಗೆ ಹಂಚಿ ಕೊಳ್ಳುವಾಗ ಕೇವಲ ದುಃಖವನ್ನಷ್ಟೇ ಅಲ್ಲದೇ, ಸಂತಸವನ್ನೂ ಹಂಚಿಕೊಳ್ಳಿ.

ಪ್ರತಿದಿನ ನಿಮ್ಮ ದುಃಖದ ಕಥೆ ಕೇಳುತ್ತಿದ್ದವರು ಬೇಸರಪಟ್ಟುಕೊಂಡು ಮುಂದೆ ನಿಮ್ಮ ಮಾತನ್ನು ಆಲಿಸದಿರಬಹುದು. ಆ ಕಾರಣಕ್ಕೆ ಸಂತಸವನ್ನು ಹಂಚಿಕೊಳ್ಳಿ. ಸಂತಸ ಹಂಚಿಕೊಂಡಾಗ ನಿಮ್ಮ ಸಂತಸಕ್ಕೆ ದನಿಯಾಗುವವರು ಹಲವರಿರುತ್ತಾರೆ. ಇದರಿಂದ ನಿಮಗೂ ಖುಷಿಯಗುತ್ತದೆ. ಒಟ್ಟಾರೆ ಸಂತಸ- ಸಂಭ್ರಮಗಳನ್ನು ಹಂಚಿಕೊಂಡು ಬದುಕಲು ಪ್ರಯತ್ನಿಸಿ. ಬದುಕು ಸುಂದರವಾಗಿರುತ್ತದೆ. ❖

ವೂಟ್‌ಗೆ '777 ಚಾರ್ಲಿ' ಡಿಜಿಟಲ್ ಹಕ್ಕು

ಈ ವರ್ಷದ ಬಹುನಿರೀಕ್ಷಿತ ಸಿನಿಮಾಗಳಲ್ಲಿ ಒಂದಾದ ನಟ ರಕ್ಷಿತ್ ಶೆಟ್ಟಿ ಅಭಿನಯದ ಪ್ಯಾನ್ ಇಂಡಿಯಾ ಸಿನಿಮಾ '777 ಚಾರ್ಲಿ' ವಿಶ್ವದಾದ್ಯಂತ ಜೂನ್ 10ಕ್ಕೆ ಬಿಡುಗಡೆಯಾಗಲಿದೆ. ಚಿತ್ರದ ಕನ್ನಡ ಆವೃತ್ತಿಯ ಡಿಜಿಟಲ್ ಹಾಗೂ ಸ್ಯಾಟಲೈಟ್ ಪ್ರಸಾರದ ಹಕ್ಕನ್ನು ದೊಡ್ಡ ಮೊತ್ತಕ್ಕೆ ಕಲರ್ಸ್ ಕನ್ನಡ ಹಾಗೂ ವೂಟ್ ಪಡೆದುಕೊಂಡಿದೆ.

ಚಿತ್ರ ವೀಕ್ಷಿಸಿ ಫೇಸ್‌ಬುಕ್‌ನಲ್ಲಿ ತಮ್ಮ ಅಭಿಪ್ರಾಯ ಹಂಚಿಕೊಂಡಿರುವ ಕಲರ್ಸ್ ಕನ್ನಡ ಬಿಸಿನೆಸ್ ಹೆಡ್ ಪರಮೇಶ್ವರ್ ಗುಂಡ್ಕಲ್, 'ಚಾರ್ಲಿ ಸಿನಿಮಾ ಕೊಟ್ಟಿದ್ದು ಒಂದು ಹಿತವಾದ ಅನುಭವ. ಮನಸ್ಸನ್ನು ತೀವ್ರವಾಗಿ ಕಾಡುವ ಯಾವುದೇ ಕತೆ ಒಳ್ಳೆಯದಾಗಿರಲೇ ಬೇಕು! ಕಿರಣ್ ರಾಜ್ ಎಂಬ ಕತೆಗಾರ, ನಿರ್ದೇಶಕ ಕನ್ನಡದಲ್ಲಿ ಅತ್ಯುತ್ತಮ ಸಿನಿಮಾಗಳನ್ನು ಕೊಡಬಹುದು ಎಂಬ ಭರವಸೆ ಕೊಟ್ಟಿದ್ದು ಚಾರ್ಲಿ. ಐದು ವರ್ಷಗಳ ಶ್ರಮ, ಸಿನಿಮಾ ಪ್ರೀತಿ, ಸೂಕ್ಷ್ಮ ಅವಲೋಕನ ಮತ್ತು ನನಗೆ ಅನಿಸಿದ್ದನ್ನೇ ಮಾಡುತ್ತೇನೆ ಎಂಬ ಸ್ಪಷ್ಟತೆ ಕಾಸರಗೋಡಿನ ಈ ಹುಡುಗನನ್ನು ತುಂಬಾ ಎತ್ತರಕ್ಕೆ ಕರೆದುಕೊಂಡು ಹೋಗಲಿಕ್ಕಿದೆ ಅನಿಸಿತು. ರಕ್ಷಿತ್ ಅಭಿನಯ ಮತ್ತು ಚಾರ್ಲಿ ಎಂಬ ನಾಯಿ ತಂದ ಜೀವಂತಿಕೆ ಜೊತೆ ಮನಸ್ಸು ತಟ್ಟುವ ಸಂಭಾಷಣೆ ಈ ಸಿನಿಮಾದ ಪ್ಲಸ್ ಪಾಯಿಂಟ್ಸ್' ಎಂದಿದ್ದಾರೆ.

'777 ಚಾರ್ಲಿ' ಚಿತ್ರಕ್ಕೆ ಯು/ಎ ಪ್ರಮಾಣಪತ್ರ ದೊರಕಿದೆ. ಚಿತ್ರವು ಕನ್ನಡ, ತೆಲುಗು, ತಮಿಳು, ಮಲಯಾಳಂ ಹಾಗೂ ಹಿಂದಿ ಭಾಷೆಯಲ್ಲಿ ತೆರೆಕಾಣಲಿದೆ. ಸಂಗೀತಾ ಶೃಂಗೇರಿ ಚಿತ್ರದ ನಾಯಕಿ. ನಟ, ನಿರ್ದೇಶಕ ರಾಜ್ ಬಿ.ಶೆಟ್ಟಿ, ಡ್ಯಾನಿಶ್ ಸೇಠ್ ತಾರಾಗಣದಲ್ಲಿದ್ದಾರೆ. ಜಿ.ಎಸ್. ಗುಪ್ತ ಹಾಗೂ ರಕ್ಷಿತ್ ಶೆಟ್ಟಿ ಈ ಚಿತ್ರದ ನಿರ್ಮಾಪಕರು. ❖


ಸಂಗೀತ ಶೃಂಗೇರಿ ಹಾಗೂ ರಕ್ಷಿತ್ ಶೆಟ್ಟಿ

'ಶಿವಾಜಿ ಸುರತ್ಕಲ್'ನ ಮಗಳು ಬಂದಳು


ಆರಾಧ್ಯ, ರಮೇಶ್ ಅರವಿಂದ್

ರಮೇಶ್ ಅರವಿಂದ್ ಅಭಿನಯದ ಶಿವಾಜಿ ಸುರತ್ಕಲ್-2 ಚಿತ್ರದಲ್ಲಿ ಶಿವಾಜಿಯ (ರಮೇಶ್ ಅರವಿಂದ್) ಮಗಳ ಪಾತ್ರದಲ್ಲಿ ಆರಾಧ್ಯ ಬಂದಿದ್ದಾಳೆ. ಅಪ್ಪ-ಮಗಳು ಭಾರತ ಕ್ರಿಕೆಟ್ ತಂಡದ ಜೆರ್ಸಿ ಧರಿಸಿದ್ದಾರೆ. ಆರಾಧ್ಯ ಬ್ಯಾಟ್ ಹಿಡಿದು ನಿಂತಿದ್ದಾಳೆ. ಮುಂದೆ ಅಪ್ಪ ಮಗಳ ಬಾಂಧವ್ಯದ ಕಥೆ ಚಿತ್ರದಲ್ಲಿ ಇದೆಯಂತೆ.

ಚಿತ್ರದ ಶೇ 75 ಭಾಗ ಚಿತ್ರೀಕರಣ ಮುಗಿದಿದೆ. ಹಾಡುಗಳ ಚಿತ್ರೀಕರಣ ಬೆಂಗಳೂರಿನಲ್ಲಿ ನಡೆಯಲಿದೆ. ರಾಧಿಕಾ ನಾರಾಯಣ್, ತಮಿಳು ತೆಲುಗು ಖ್ಯಾತಿಯ ನಾಸರ್, ರಾಘು ರಮಣಕೊಪ್ಪ, ವೀಣಾ ಸುಂದರ್, ಸುಮಂತ್ ಭಟ್ ಇವರೂ ಕೂಡ ತಾರಾಗಣದಲ್ಲಿದ್ದಾರೆ. ಅಂಜನಾದ್ರಿ ಸಿನಿ ಕ್ರಿಯೇಷನ್ಸ್ ಬ್ಯಾನರ್ ಅಡಿಯಲ್ಲಿ ಶಿವಾಜಿ ಸುರತ್ಕಲ್-2 ಚಿತ್ರವು ನಿರ್ಮಾಣವಾಗುತ್ತಿದೆ. ಆಕಾಶ್ ಶ್ರೀವತ್ಸ ಅವರು ನಿರ್ದೇಶಕರು. ರೇಖಾ ಕೆ.ಎನ್. ಮತ್ತು ಅನೂಪ್ ಗೌಡ ನಿರ್ಮಾಪಕರು.

ಶಿವಾಜಿ ಸುರತ್ಕಲ್-1 ಕೂಡಾ ಪತ್ತೇಧಾರಿ ಕಥೆಯಿಂದಾಗಿ ಪ್ರೇಕ್ಷಕರ ಮೆಚ್ಚುಗೆ ಗಳಿಸಿತ್ತು. ❖


ಮೇ ತಿಂಗಳಲ್ಲಿ 'ಸಾಲ'

ಸ್ವಸಹಾಯ ಸಂಘಗಳಲ್ಲಿ ಸಾಲ ಪಡೆದವರ ಫಜೀತಿ ಹೇಗಿರುತ್ತದೆ? ಅದು ಮಹಿಳೆಯರ ವೈಯಕ್ತಿಕ ಬದುಕಿನ ಮೇಲೆ ಮಾಡುವ ಪರಿಣಾಮ ಏನು ಎಂಬುದನ್ನು ಹೇಳಲಿದೆ 'ಸಾಲ'.

ಅಂದಹಾಗೆ ಈ ಕಥೆ 2018ರ ಪ್ರಜಾವಾಣಿ 'ದೀಪಾವಳಿ' ಕಥಾ ಸ್ಪರ್ಧೆಯಲ್ಲಿ ದ್ವಿತೀಯ ಬಹುಮಾನ ಪಡೆದಿತ್ತು. ಮೂಲಕಥೆ 'ಸಣ್ಣ ಸಾಲ'. ದುಡ್ಡನಹಳ್ಳಿ ಮಂಜುನಾಥ್ ಅವರು ಈ ಕಥೆ ಬರೆದವರು. ಈ ಚಿತ್ರ ಮೇ ತಿಂಗಳಿನಲ್ಲಿ ತೆರೆ ಕಾಣಲಿದೆ. ಎಂ.ಆರ್. ನಟೇಶ್‌ಕುಮಾರ್ ಚಿತ್ರಕಥೆ, ಸಾಹಿತ್ಯ, ಸಂಭಾಷಣೆ ಬರೆದು ನಿರ್ದೇಶನ ಮಾಡಿದ್ದಾರೆ. ಮಹಿಳಾ ಪ್ರಧಾನ ಹಾಗೂ ಸಮಾಜಮುಖಿ ಸಿನಿಮಾ ಆಗಿದ್ದು, ಸ್ತ್ರೀಶಕ್ತಿ ಸ್ವಸಹಾಯ ಸಂಘಗಳಲ್ಲಿ ಮತ್ತು ಇತರ ಕಡೆ ಕಡಿಮೆ ಬಡ್ಡಿಗಾಗಿ ಸಾಲ ಪಡೆಯುವುದರಿಂದ ಹೆಣ್ಣಿನ ವೈಯಕ್ತಿಕ ಜೀವನದಲ್ಲಿ ಆಗುವ ಅನಾಹುತಗಳನ್ನು ಹಾಸ್ಯ, ಸೆಂಟಿಮೆಂಟ್ ಮೂಲಕ ತೋರಿಸಲಾಗಿದೆ. ಬಡ, ಮಧ್ಯಮ ವರ್ಗದದವರ ಜೀವನದ ವಾಸ್ತವಿಕತೆಗೆ ಬಹಳ ಹತ್ತಿರವಾಗಿದೆ ಎಂದಿದೆ ಚಿತ್ರ ತಂಡ.

ತಾರಾಗಣದಲ್ಲಿ ಸಿಂಚನಾಗೌಡ, ಭೈರವಿ ಬೀರೂರು, ಸುನಿಲ್ ಕುಮಾರ್, ಸುಹಾಸ ಆರಾಧ್ಯ, ಸತೀಶ್‌ಗೌಡ, ಮೈತ್ರಿ, ಮಂಜು ನಂಜನಗೂಡು, ಮುನಿ, ದೇವಿಪ್ರಸಾದ್, ಧನುಷ್ ಇದ್ದಾರೆ. ವಿನುಮನಸು ಸಂಗೀತ, ಕೃಷ್ಣಸಾರಥಿ ಛಾಯಾಗ್ರಹಣ, ವಿನಯ್‌ಕುಮಾರ್ ಕೂರ್ಗ್ ಸಂಕಲನವಿದೆ. ಕುಣಿಗಲ್, ಮೈಸೂರು, ಬೆಂಗಳೂರು ಸುತ್ತಮುತ್ತ ಚಿತ್ರೀಕರಣ ನಡೆಸಲಾಗಿದೆ. ಸಿರಿ ಮ್ಯೂಸಿಕ್ ಹೊರತಂದಿರುವ ಮೂರು ಹಾಡುಗಳ ಪೈಕಿ ಎರಡು ಗೀತೆಗಳಿಗೆ ಮಾನಸ ಹೊಳ್ಳ ಧ್ವನಿಯಾಗಿದ್ದಾರೆ. ❖

'Love...ಲಿ'ಯಾದ ವಸಿಷ್ಠ ಸಿಂಹ


'Love ಲಿ' ಚಿತ್ರದ ಫಸ್ಟ್‌ಲುಕ್

ತಮ್ಮ ಧ್ವನಿ ಹಾಗೂ ನಟನೆಯಿಂದ ವಿಲನ್ ಪಾತ್ರಗಳಿಗೆ ಗತ್ತು ತುಂಬಿದ್ದ ನಟ ವಸಿಷ್ಠ ಸಿಂಹ ಇದೀಗ 'Love ಲಿ' ಮೂಡ್‌ನಲ್ಲಿದ್ದಾರೆ. ಕಂಚಿನ ಕಂಠದ ವಸಿಷ್ಠ ಸಿಂಹ ನಟನೆಯ ಹೊಸ ಸಿನಿಮಾದ ಮುಹೂರ್ತ ಇತ್ತೀಚೆಗೆ ಸರ್ಕಲ್ ಮಾರಮ್ಮ ದೇವಸ್ಥಾನದಲ್ಲಿ ಸರಳವಾಗಿ ನಡೆಯಿತು.

ನಾಯಕ ನಟನಾಗಿಯೂ, ಖಳನಾಯಕನಾಗಿಯೂ ಬೆಳ್ಳಿಪರದೆಯ ಮೇಲೆ ಮಿಂಚಿದ್ದ ವಸಿಷ್ಠ ಸಿಂಹ ಸದ್ಯಕ್ಕೆ ತಾವು ನಾಯಕನಾಗಿ ನಟಿಸಿರುವ 'ಕಾಲಚಕ್ರ' ಸಿನಿಮಾ ಬಿಡುಗಡೆಗೆ ಎದುರು ನೋಡುತ್ತಿದ್ದಾರೆ. ಜೊತೆಗೆ 'ತಲ್ವಾರ್‌ಪೇಟೆ' ಸಿನಿಮಾದಲ್ಲಿ ಹೀರೊ ಆಗಿ ನಟಿಸುತ್ತಿದ್ದಾರೆ. 'ಡಾಲಿ' ಧನಂಜಯ್ ನಟನೆಯ 'ಹೆಡ್‌ಬುಷ್' ಸೇರಿದಂತೆ ತೆಲುಗಿನ ಕಲೆ ಚಿತ್ರಗಳಲ್ಲೂ ವಸಿಷ್ಠ ಬಣ್ಣಹಚ್ಚಿದ್ದಾರೆ. ಇದೀಗ ವಸಿಷ್ಠ ಅವರ ಮತ್ತೊಂದು ಸಿನಿಮಾ ಸೆಟ್ಟೇರಿದ್ದು, ಸಿನಿಮಾಗೆ 'Love...ಲಿ' ಎಂಬ ಶೀರ್ಷಿಕೆ ಇಡಲಾಗಿದೆ. ಮುಹೂರ್ತದ ದಿನವೇ ಚಿತ್ರದ ಫಸ್ಟ್‌ಲುಕ್ ಕೂಡ ಬಿಡುಗಡೆಯಾಗಿದೆ.

'Love...ಲಿ' ಪ್ರೇಮಕಥೆಯಾಗಿದ್ದು, ಜೊತೆಗೆ ರೌಡಿಸಂನ ವಿಭಿನ್ನ ಕಥಾಹಂದರವನ್ನು ಸಿನಿಮಾ ಒಳಗೊಂಡಿದೆ. ವಸಿಷ್ಠ ಸಿಂಹ ಅವರ ಆಪ್ತ, 'ಮಫ್ತಿ' ನಿರ್ದೇಶಕ ನರ್ತನ್ ಜೊತೆ ಕೆಲಸ ಮಾಡಿ ಅನುಭವವಿರುವ ಚೇತನ್ ಕೇಶವ್ ಈ ಸಿನಿಮಾಗೆ ನಿರ್ದೇಶನ ಮಾಡುತ್ತಿದ್ದಾರೆ. ಮೇ 4 ರಿಂದ ಬೆಂಗಳೂರು ಸುತ್ತಮುತ್ತ ಸಿನಿಮಾದ ಚಿತ್ರೀಕರಣ ಆರಂಭವಾಗಲಿದೆ, ಶೀಘ್ರದಲ್ಲೇ ಉಳಿದ ಕಲಾವಿದರ ಮಾಹಿತಿಯನ್ನು ತಿಳಿಸಲಾಗುವುದು ಎಂದು ಚಿತ್ರತಂಡ ತಿಳಿಸಿದೆ. ❖



ಸಾಂದರ್ಭಿಕ ಚಿತ್ರ

ಏಕಾಂಗಿ ಪೋಷಕಿಯರ ದ್ವಂದ್ವಗಳ ನಡುವೆ...

ಕೆ.ಎಸ್. ಶಕುಂತಲ

ಕೂಡು ಕುಟುಂಬದಲ್ಲಿ ಮಕ್ಕಳ ಬೆಳವಣಿಗೆಯ ಕುರಿತು ಎಲ್ಲರಿಗೂ ಜವಾಬ್ದಾರಿ ಇದ್ದೇ ಇರುತ್ತದೆ. ಭಾವನ ಮಕ್ಕಳನ್ನು ಅತ್ತಿಗೆ ನೋಡಿಕೊಳ್ಳುತ್ತಿದ್ದರು, ಮಗನ ಮಕ್ಕಳನ್ನು ಅತ್ತೆ ಸಿದ್ಧಮಾಡುತ್ತಿದ್ದರು, ಮಗುವಿಗೆ ಸ್ನಾನ ಮಾಡಿಸಲು ನಾದಿನಿಗೆ ಚೆನ್ನಾಗಿ ತಿಳಿದಿತ್ತು ಅಥವಾ ಸಂಜೆ ಮಕ್ಕಳ ಪಟಾಲಂ ಅಜ್ಜನ ವಾಕ್ ಜೊತೆಗೆ ತೆರಳಿ ಮನೆ ಕೆಲಸಗಳಲ್ಲಿ ನಿರತರಾಗಿದ್ದ ಅಮ್ಮಂದಿರಿಗೆ ಬಿಡುವು ಸಿಗುತ್ತಿತ್ತು. ಕಚೇರಿಗೆ ಹೋಗಿ ವೃತ್ತಿ ನಿರ್ವಹಿಸುವ ಕಿರಿಸೊಸೆಗೆ ಮನೆಯಲ್ಲಿ ಬಿಟ್ಟು ಬಂದ ಮಗುವನ್ನು ಒಬ್ಬರಲ್ಲದಿದ್ದರೆ ಮತ್ತೊಬ್ಬರು ಮುದ್ದು ಮಾಡುವರು ಎಂಬ ಸಮಾಧಾನವಿರುತ್ತಿತ್ತು.

ಕೂಡು ಕುಟುಂಬವು ಪ್ರತ್ಯೇಕವಾಗಿ 'ಒಂದು ಕುಟುಂಬಕ್ಕೆ ಒಂದು ಮನೆ'ಯೆಂದು ನಿಗದಿಯಾದಾಗ ಮಕ್ಕಳ ಜವಾಬ್ದಾರಿಯೆಲ್ಲ ಅಪ್ಪ ಅಮ್ಮನ ತಲೆಗೆ ಬಂದುಬಿಟ್ಟಿತು. ಅದಾದರೂ ಸರಿ, ಮಕ್ಕಳ ಬೇಕು ಬೇಡ ನೋಡಿಕೊಳ್ಳಲು ಇಬ್ಬರಿದ್ದರು. ಆದರೆ ಅಮ್ಮನೊಬ್ಬಳೇ ಮಕ್ಕಳನ್ನು ಸಾಕುವ ಅಥವಾ ಅಪ್ಪನೊಬ್ಬನೇ ಮಕ್ಕಳನ್ನು ನೋಡಿಕೊಳ್ಳುವ ಪರಿಸ್ಥಿತಿಗಳು ಇಂದು ಅನೇಕ ಕಡೆ ಇವೆ. ಇಂತಹ ಸಂದರ್ಭದಲ್ಲಿ ಮಕ್ಕಳ ಲಾಲನೆ ಪಾಲನೆ ಸುಲಭವಾದುದಲ್ಲ. ಏಕೆಂದರೆ ಮಕ್ಕಳ ಬೇಕು ಬೇಡಗಳನ್ನು ನೋಡಿಕೊಳ್ಳುವ ಸವಾಲು ಒಂದು ಕಡೆ, ದುಡಿಯುವ ಸವಾಲು ಮತ್ತೊಂದು ಕಡೆ ಇರುತ್ತದೆ. ಇದರ ಜೊತೆಗೆ ಏಕಾಂಗಿ ಬದುಕಿನಲ್ಲಿ ಭಾವನೆಗಳನ್ನು ಹಂಚಿಕೊಳ್ಳಲು ಜೊತೆಯಿಲ್ಲದೇ ಉಂಟಾಗುವ ಮಾನಸಿಕ ಏರುಪೇರುಗಳನ್ನು ನಿಭಾಯಿಸುವ ಸವಾಲು ಇರುತ್ತದೆ. ಅಷ್ಟೇ ಅಲ್ಲ, ಕೆಲವೊಮ್ಮೆ ತನ್ನ ಮಾನಸಿಕ ಒಳತೋಟಗಳು ಮಕ್ಕಳ ಮೇಲೆ ಪರಿಣಾಮ ಬೀರುತ್ತದೋ ಎಂಬ ಭಯವೂ ಕಾಡುತ್ತದೆ.

ನನ್ನೊಳಗಿನ ಬೇಸರಕ್ಕೆ ಮಕ್ಕಳಿಗೆ ಬೈದುಬಿಟ್ಟೆನೇನೋ, ಅವರ ಮನೆಯವರ ಮೇಲಿನ ಸಿಟ್ಟಿನ ಭರದಲ್ಲಿ ಮಗಳು ಬರೆದ ಡ್ರಾಯಿಂಗ್ ಹೇಗಿದೆ ಎಂದು ನೋಡಿ ಅವಳಿಗೆ 'ಗುಡ್' ಎಂದು ಹೇಳುವುದನ್ನು ಮರೆತನೇನೋ... ಎಂಬೆಲ್ಲ ಅಳುಕುಗಳು ಕಾಡುತ್ತಲೇ ಇರುತ್ತದೆ. ಆದರೂ ಕಾಡುವ ಸಮಸ್ಯೆಗಳನ್ನು ನುಂಗಿಕೊಂಡು ಬಾಳನ್ನು ಮುಂದುವರೆಸಲು ಪ್ರಧಾನವಾಗಿ ಇರುವ ಚೇತನಗಳೆಂದರೆ ಮಕ್ಕಳೇ ಆಗಿದ್ದಾರೆ ಎಂಬ ನೆನಪು ಮೂಡಿ ಮತ್ತೆ ಮನಸ್ಸು ಲವಲವಿಕೆಗೊಳ್ಳುತ್ತದೆ.

> ಅನೇಕ ಕಂಪನಿಗಳು ವರ್ಕ್‌ಫ್ರಂ ಹೋಮ್ ನಿಲ್ಲಿಸಿ, ಕಚೇರಿಯಿಂದ ಕೆಲಸ ಆರಂಭಿಸಿವೆ. ಏಕಾಂಗಿ ಪೋಷಕಿಯರಿರುವ ಮನೆಗಳಲ್ಲಿ ಇದೀಗ ಮತ್ತೆ ಹೊಸ ಟೈಮ್ ಟೇಬಲ್ ಮಾಡಬೇಕಾಗಿದೆ. ಅಂತಹ ಸಂದರ್ಭದಲ್ಲಿ ನೆನಪಿಡಬೇಕಾದ ಕೆಲವು ಅಂಶಗಳು ಇಲ್ಲಿವೆ.

ಪೋಷಕಿಯರಿಗೇ ಹೆಚ್ಚು ಸವಾಲು



ಒಂಟಿ ಪೋಷಕರ ಈ ಪಾಡು ಪೋಷಕಿಯರಿಗೆ ಮಾತ್ರವಲ್ಲ, ಪೋಷಕರನ್ನೂ ಕಾಡುತ್ತದೆ. ಆದರೆ ಪುರುಷರು ಒಂಟಿಯಾಗಿ ಮಕ್ಕಳನ್ನು ಸಲಹುವ ಪೂರ್ತಿ ಜವಾಬ್ದಾರಿಯನ್ನು ವಹಿಸಿಕೊಳ್ಳುವುದು ಭಾರಿ ಅಪರೂಪ. 'ಅದು ನಮ್ಮ ಕೈಲಾಗದ ಕೆಲಸ' ಎಂದೇ ಅನೇಕರು ಅಂತಹ ಜವಾಬ್ದಾರಿಯಿಂದ ದೂರ ಸರಿದು ಬಿಡುತ್ತಾರೆ. ಅಂತಹ ಅನಿವಾರ್ಯ ಪರಿಸ್ಥಿತಿಗಳು ಬಂದಾಗ ಅಜ್ಜಿ ಮನೆಯಲ್ಲಿಯೋ, ಅಕ್ಕನ ಮನೆಯಲ್ಲಿಯೋ ಮಕ್ಕಳನ್ನು ಇರಿಸಿ, ಪಾಲನೆ ಪೋಷಣೆಗೆ ಸಂಪನ್ಮೂಲ ಒದಗಿಸುತ್ತಾರೆ. ಪುರುಷರು ಅಂತಹ ಅವಕಾಶಗಳನ್ನು ಹುಡುಕಿಕೊಂಡರೆ ಸಮಾಜವು ಯಾಕೋ ಅದನ್ನು ಸ್ವೀಕರಿಸಿಬಿಡುತ್ತದೆ. ಆದರೆ ಮಹಿಳೆಯರು ಅಂತಹ ಅವಕಾಶಗಳನ್ನು ಹುಡುಕಿದರೆ, ಜವಾಬ್ದಾರಿಯಿಂದ ನುಣುಚಿಕೊಳ್ಳುವವಳು ಎಂಬುದೊಂದು ಟೀಕೆಯ ಧ್ವನಿ ಬಂದುಬಿಡುತ್ತದೆ. ಯಾಕೆ ಹೀಗೆ ಎಂದು ಪ್ರಶ್ನಿಸುವುದರಿಂದ ಪ್ರಸ್ತುತ ಹೆಚ್ಚಿನ ಲಾಭವಿಲ್ಲ. ಆದರೆ ವಾಸ್ತವವನ್ನು ಒಪ್ಪಿಕೊಂಡು, ಮಕ್ಕಳನ್ನು ಏಕಾಂಗಿಯಾಗಿ ಬೆಳೆಸುವುದು ಸುಲಭದ ಕೆಲಸವಂತೂ ಅಲ್ಲ. ಹಾಗಾಗಿ, ಸವಾಲುಗಳನ್ನು ಹೇಗೆ ಬಗೆ ಹರಿಸಬಹುದು ಎಂಬುದರತ್ತ ಮಾತ್ರ ಗಮನ ಹರಿಸಬಹುದು.

ಕಳೆದೆರಡು ವರ್ಷಗಳಿಂದ ಕೋವಿಡ್ ಸೋಂಕನ್ನು ತಡೆಯುವ ಸಲುವಾಗಿ ಲಾಕ್‌ಡೌನ್‌ಗಳನ್ನು ಆಗಾಗ ಹೇರಿದ್ದರಿಂದ ಅನೇಕರಿಗೆ ಮನೆಯಿಂದಲೇ ಕೆಲಸ ಮಾಡುವ ಅವಕಾಶ ದೊರೆತಿತ್ತು. ಹಾಗಾಗಿ ಏಕಾಂಗಿ ಪೋಷಕಿಯರಿಗೆ ಇದೊಂದು ವರದಾನವಾಗಿತ್ತು. ಇತ್ತ ಆನ್‌ಲೈನ್ ತರಗತಿಯೆಂದು ಶಾಲೆಗೆ ಹೋಗದೇ ಮನೆಯಲ್ಲಿಯೇ ಉಳಿಯುವ ಮಕ್ಕಳ ಯೋಗಕ್ಷೇಮ ನೋಡಿಕೊಳ್ಳುವುದು ಸವಾಲಾದಾಗ, ಅವರಿಗೆ ಮನೆಯಿಂದಲೇ ಕೆಲಸ ಮಾಡುವ ಅವಕಾಶ ದೊರೆತದ್ದು ಬಯಸದೇ ಬಂದ ಭಾಗ್ಯವಾಗಿತ್ತು. ಆದರೆ ಈ ವರ್ಷ ಹಾಗಿಲ್ಲ. ಹೆಚ್ಚಿನ ಸಂಸ್ಥೆಗಳಲ್ಲಿ ಮನೆಯಿಂದ ಕೆಲಸ ಮಾಡುವ ಅವಕಾಶವನ್ನು ವಾಪಸ್ ತೆಗೆದುಕೊಳ್ಳುತ್ತಿದ್ದಾರೆ. ಕಚೇರಿಗೆ ಹೋಗುವುದು ಅನಿವಾರ್ಯವಾಗಿದೆ. ಮಗುವನ್ನು ಎಲ್ಲಿ ಬಿಡಬೇಕು, ಆಹಾರ ಸಿದ್ಧಪಡಿಸಲು ಏನೇನು ಟೈಮ್ ಟೇಬಲ್ ಹಾಕಿಕೊಳ್ಳಬೇಕು ಎಂಬೆಲ್ಲ ವಿಚಾರಗಳು ಅವರ ತಲೆಯಲ್ಲಿ ಗಿರಕಿ ಹೊಡೆಯಲಾರಂಭಿಸಿದೆ.

ಹೊಸ ಟೈಮ್ ಟೇಬಲ್

ಇದೀಗ ಮನೆಯಲ್ಲಿಯೂ ಮತ್ತೆ ಹೊಸ ಟೈಮ್ ಟೇಬಲ್ ಮಾಡಬೇಕಾಗಿದೆ. ಅಂತಹ ಸಂದರ್ಭದಲ್ಲಿ ನೆನಪಿಡಬೇಕಾದ ಕೆಲವು ಅಂಶಗಳು ಇಲ್ಲಿವೆ: ಮೊದಲನೆಯದಾಗಿ ಮಕ್ಕಳಿಗೆ ಬೇಕು ಬೇಕಾದ್ದನ್ನು ತಾನು ಕಲ್ಪಿಸಬೇಕು ಎಂಬ ಭಾವನೆಯನ್ನು ಮನಸ್ಸಿನಿಂದ ತೆಗೆದು ಹಾಕುವುದು. ಮಗು ಅಥವಾ ಮಕ್ಕಳು ನಮ್ಮ ಜೊತೆಗೆ ಪರಸ್ಪರರ ಅಗತ್ಯಗಳನ್ನು ಪೂರೈಸುತ್ತ ಬದುಕು ಸಾಗಬೇಕು ಎಂಬುದನ್ನು ಮಗುವಿಗೂ ಅರ್ಥ ಮಾಡಿಸುವುದು, ಸ್ವಯಂ ತಾವೂ ಅರ್ಥ ಮಾಡಿಕೊಳ್ಳುವುದು. ಇದರಿಂದ, ಪೋಷಕಿಯರ ಮನಸ್ಸಿನಲ್ಲಿ ತರ್ಕರಹಿತವಾಗಿ, ವಿನಾಕಾರಣ ಮೂಡುವ ತಪ್ಪಿತಸ್ಥ ಭಾವನೆಯನ್ನು ತೊಡೆದು ಹಾಕುವುದು ಸಾಧ್ಯವಾಗುತ್ತದೆ.

ಮಕ್ಕಳಿಗೆ ನಾವು ಎಲ್ಲ ಸೌಕರ್ಯಗಳನ್ನೂ ಮಾಡಿಕೊಡಬೇಕು ಎಂಬುದು ಸುಳ್ಳು. ಅವರಿಗೆ ಸೌಕರ್ಯಗಳನ್ನು ಮಾಡಿಕೊಳ್ಳಲು ಎಲ್ಲಿಯವರೆಗೆ ನೆರವು ಬೇಕೋ, ಅಲ್ಲಿಯವರೆಗೆ ನೆರವು ಕಲ್ಪಿಸುವುದಷ್ಟೇ ಪೋಷಕರ ಕರ್ತವ್ಯವಾಗಿದೆ. ಅದಕ್ಕೂ ಮಿಗಿಲಾಗಿ, ಅತಿ ಪ್ರೀತಿಯಿಂದ, ಮುದ್ದಿನಿಂದ ಹೆಚ್ಚುವರಿ ಸೌಕರ್ಯಗಳನ್ನು ಕಲ್ಪಿಸುತ್ತ ಹೋಗುವುದರಿಂದ ಮಕ್ಕಳ ಸಾಮರ್ಥ್ಯವು ಕುಗ್ಗುತ್ತದೆ ಎಂಬುದು ನೆನಪಿರಲಿ.

ಆದ್ದರಿಂದ ಅಡುಗೆ ಕಾಯಕದಲ್ಲಿ ಅವರು ಜೊತೆಯಾಗಲಿ, ಅವರ ಓದುವಿಕೆಯನ್ನು ಸಾಧ್ಯವಾದಷ್ಟು ಮಟ್ಟಿಗೆ ಅವರೇ ನಿಭಾಯಿಸಿಕೊಳ್ಳಲಿ. ಅದನ್ನೂ ಮೀರಿದಂತೆ, ಅವರು ತಮ್ಮ ದಿನದ ಕತೆಯನ್ನು ಹೇಳಿಕೊಳ್ಳಲು, ಬೇನೆ ಬೇಸರಗಳನ್ನು ಹಂಚಿಕೊಳ್ಳಲು ಅಮ್ಮನ ಸೆರಗನ್ನು ಬೇಡಿ ಬಂದೇ ಬರುತ್ತಾರೆ. ಹಾಗಾಗಿ ದಿನದಲ್ಲಿ ಇಷ್ಟು ಹೊತ್ತು ಮುಕ್ತ ಮಾತುಕತೆಗಾಗಿ ಮೀಸಲಿಡಿ. ಹಾಗೆ ಮಾತನಾಡುವಾಗ ಫೋನ್ ಅಥವಾ ಟಿವಿ, ಲ್ಯಾಪ್‌ಟಾಪ್ ಆಫ್ ಆಗಿರಲಿ. ಅವರಿಗೆಂದು ಮೀಸಲಿಟ್ಟ ಸಮಯ ಕೇವಲ ಅವರಿಗಾಗಿಯೇ ಇರಬೇಕು ವಿನಾ ವಾಟ್ಸ್‌ಆ್ಯಪ್ ಮೆಸೇಜ್ ಬಂದ ತಕ್ಷಣವೇ ಗಮನವು ಮೊಬೈಲ್‌ನತ್ತ ಹರಿಸುವ ಅಮ್ಮನು, ಅವರಿಗೆ 'ಪರಿಪೂರ್ಣ ಅಮ್ಮ'ನಾಗಿ ಗೋಚರಿಸುವುದಿಲ್ಲ. ಹಾಗಾಗಿ ನಿರ್ದಿಷ್ಟ ಸಮಯವನ್ನು ಅವರಿಗೆಂದೇ ಮೀಸಲಿಡುವುದು ಮುಖ್ಯ.

ಉಳಿದಂತೆ ಮಕ್ಕಳು ಬೆಳೆದಂತೆ ಅಮ್ಮನ ಭಾವನೆಗಳನ್ನು ಮಕ್ಕಳು ಅರ್ಥ ಮಾಡಿಕೊಳ್ಳುವುದನ್ನು ಕಲಿಯುತ್ತಾರೆ. ಲಭ್ಯ ಅವಕಾಶದಲ್ಲಿ ನಮಗಾಗಿ ದುಡಿಯುವ ಅಮ್ಮನನ್ನು ಅರಿಯುವುದು ಅವರ ಕರ್ತವ್ಯ ಕೂಡ.

ವಿಧ ವಿಧ ಕೇಶವಿನ್ಯಾಸ

ಕಳೆದ ವರ್ಷ ಉದ್ದ ಕೂದಲು ಬಿಡುವ ಫ್ಯಾಷನ್ ಬದಲಾಗಿ ಈ ವರ್ಷ ಗಿಡ್ಡ ಕೂದಲಿನ ಹೇರ್‌ಕಟ್ ಟ್ರೆಂಡ್ ಸೃಷ್ಟಿಸಿದೆ.

ಹರವು ಸ್ಫೂರ್ತಿ



ಸಾಂದರ್ಭಿಕ ಚಿತ್ರ

ಕೊರೊನಾ ಸೋಂಕಿನ ಕಾಲದಲ್ಲಿ ಲಾಕ್‌ಡೌನ್‌ನಿಂದ ಮನೆಯಲ್ಲೇ ಇದ್ದ ಯುವ ಜನ ಪಾರ್ಲರ್, ಸ್ಪಾ, ಸಲೂನ್‌ಗಳಿಗೆ ಹೋಗದೆ ಉದ್ದ ಕೂದಲು, ಗಡ್ಡ ಬಿಟ್ಟು ಅದೇ ಫ್ಯಾಷನ್ ಎಂದರು. ಈ ವರ್ಷದಿಂದ ಸಲೂನ್‌ಗಳು ತೆರೆದಿದ್ದು; ಕೂದಲು ವಿನ್ಯಾಸದಲ್ಲೂ ಹೊಸ ಪ್ರಯೋಗಗಳು ಹುಟ್ಟಿಕೊಂಡಿವೆ. ಗಿಡ್ಡ ಕೂದಲು ಮಹಿಳೆ ಮತ್ತು ಪುರುಷರಲ್ಲಿ ಟ್ರೆಂಡ್ ಆಗಿದೆ.

ಆಚರಿಸದೆ- ಆಯೋಜಿಸದೆ ಉಳಿದ ಹಬ್ಬ, ಮದುವೆಗಳು ಮತ್ತೆ ಸಂಭ್ರಮಿಸುತ್ತಿವೆ. ಶಾಪಿಂಗ್ ಇಲ್ಲದೆ, ಮದುವೆಗಳಲ್ಲಿ ಸಿಂಗಾರ ಮಾಡಿಕೊಂಡು ಮೆರೆಯದೇ ಕೊರೊನಾ ವರ್ಷಗಳ ಕಳೆದಿದ್ದು, ಈ ವರ್ಷ ಭರ್ಜರಿ ಮೇಕ್ ಓವರ್‌ಗಳನ್ನು ಕಾಣಬಹುದು. ಅದರಲ್ಲೂ ಹೊಸ ಹೇರ್‌ಸ್ಟೈಲ್, ಹೇರ್‌ಕಟ್ ಯುವತಿಯರಿಗೆ ನವಚೈತನ್ಯ ತರುತ್ತಿದೆ. ಪಿಂಟರೆಸ್ಟ್, ಇನ್‌ಸ್ಟಾಗ್ರಾಂನಂತಹ ಸಾಮಾಜಿಕ ಜಾಲತಾಣದಲ್ಲಿ ಈ ವರ್ಷದ ಕೆಲವು ಜನಪ್ರಿಯ ಹೇರ್‌ಕಟ್‌ಗಳ ಮಾಹಿತಿ ಇಲ್ಲಿದೆ.

ಅಲ್ಟ್ರಾ ಶಾರ್ಟ್: ಅತಿ ಚಿಕ್ಕದಾದ ಕಟ್ ಇದು. ಸುರುಳಿ ಅಥವಾ ಗುಂಗುರು ಕೂದಲಿಗೆ ಈ ಕಟ್ ಸೂಕ್ತ. ಇದನ್ನು ಬಿಗ್ ಕಟ್ ಎಂದೂ ಕರೆಯುತ್ತಾರೆ. ಇದರ ನಿರ್ವಹಣೆ ಹೆಚ್ಚು ಇರುವುದಿಲ್ಲ.

ಲೇಯರ್ಡ್ ಲೋಬ್: ಕುತ್ತಿಗೆಯವರೆಗೆ ಕೂದಲು ಬರುವ ಹಾಗೆ ಈ ಕಟ್ ಮಾಡಲಾಗುತ್ತದೆ. ಹಣೆ ಭಾಗದಲ್ಲಿ ಬ್ಯಾಂಗ್ಸ್ ಮಾಡಿಸಿಕೊಂಡೂ ಈ ಕಟ್ ಮಾಡಿಸಿಕೊಳ್ಳಬಹುದು. ತೆಳುವಾದ ಕೂದಲು ಇರುವವರು ಈ ಕಟ್ ಮಾಡಿಸಿಕೊಂಡರೆ ಚೆಂದ. ಲೇಯರ್ಡ್‌ನಿಂದ ಕೂದಲು ಹೆಚ್ಚು ದಟ್ಟವಾಗಿ ಕಾಣಿಸುತ್ತದೆ. ಬೇಸಿಗೆಗೆ ಈ ಕಟ್ ಸೂಕ್ತ. ಸ್ಟ್ರೈಟ್ ಮತ್ತು ಸುರಳಿ ಕೂದಲಿಗೆ ಈ ಕಟ್ ಹೊಂದುತ್ತದೆ.

ಬಿಕ್ಸಿ: 90ರ ದಶಕದಲ್ಲಿ ಜನಪ್ರಿಯವಾಗಿದ್ದ ಬಿಕ್ಸಿ ಹೇರ್‌ಕಟ್ ಮತ್ತೆ ಮುನ್ನೆಲೆಗೆ ಬಂದಿದೆ. ಬಿಕ್ಸಿ ಎಂದರೆ ಸಮಾನ ಭಾಗಗಳ ಪಿಕ್ಸಿ ಕಟ್ ಎಂದು ಹೇಳಲಾಗುತ್ತದೆ. ಸ್ವಲ್ಪ ಬಾಬ್ ಕಟ್ ಅನ್ನೂ ಹೋಲುತ್ತದೆ. ನೆತ್ತಿಯಿಂದ ಕತ್ತಿನವರೆಗೆ ನೇರವಾಗಿ ಇರುವಂತೆ ಈ ಕಟ್ ಕಾಣುತ್ತದೆ. ಈ ಕಟ್ ಮಾಡಿದ ನಂತರ ಹೇರ್‌ಜೆಲ್‌ನಲ್ಲಿ ಸೆಟ್ ಮಾಡಿ ತಲೆಗೆ ಅಂಟಿರುವಂತೆ ಬಾಚಿಕೊಳ್ಳಬೇಕು. ಕೂದಲು ಬಿಡಿಬಿಡಿಯಾಗಿ ಇದ್ದರೆ ಚೆನ್ನಾಗಿ ಕಾಣುವುದಿಲ್ಲ.

ಬ್ರೋಕನ್ ಬೌಲ್: 'ಇಲಿ ಕಚ್ಚಿದ ಹಾಗೆ ನಿನ್ನ ಕೂದಲು ಆಗಿದೆ' ಎಂದು ಯಾರಾದರೂ ತಮಾಷೆ ಮಾಡಿದರೆ ಚಿಂತಿಸಬೇಡಿ. ಈ ವಿನ್ಯಾಸವನ್ನು ಬ್ರೋಕನ್ ಬೌಲ್ ಹೇರ್‌ಕಟ್. ಹಾಲಿವುಡ್‌ನಲ್ಲಿ ಟಾಪ್‌ರೇಟೆಡ್ ಕಟ್ ಇದು. ಕಿವಿ ಬಳಿ, ಹಣೆ ಮೇಲೆ ಅಂದಾಜು ಇಲ್ಲದಂತೆ ಕೂದಲು ಕತ್ತರಿಸುವ ಈ ಕಟ್ 'ಐಕಾನಿಕ್ ಹೇರ್‌ಕಟ್' ಎಂದೇ ಜನಪ್ರಿಯ.

ಕ್ಲಾಸಿಕ್ ಬಾಬ್: ಇದು ಸರ್ವಕಾಲಿಕ ಜನಪ್ರಿಯ ಹೇರ್‌ಕಟ್. ಕಿವಿ ತುದಿವರೆಗೆ ಹಿಂಬದಿಯಿಂದ ಲೇಯರ್ ನೀಡಿ ಕಟ್ ಮಾಡುವುದು. ಹೆಚ್ಚು ಪ್ರಯೋಗವಿಲ್ಲದೆ, ಗಿಡ್ಡ ಕೂದಲು ಒಪ್ಪುವ ಎಲ್ಲರಿಗೂ ಹೊಂದುತ್ತದೆ.

ಎಡ್ಜಿ ಅಂಡರ್‌ಕಟ್: ತಲೆಯ ಮಧ್ಯಭಾಗದಲ್ಲಿ ಮಾತ್ರ ಉದ್ದನೆಯ ಕೂದಲು ಬಿಟ್ಟು ಕಿವಿಗಳ ಬಳಿ ಪೂರ್ಣ ಶೇವ್ ಮಾಡಿದಂತೆ ಈ ಕಟ್ ಕಾಣಿಸುತ್ತದೆ. ಇದನ್ನು ರೆಡ್‌ಕಾರ್ಪೆಟ್ ಲುಕ್ ಎಂದೂ ಬಣ್ಣಿಸಲಾಗುತ್ತದೆ. ಎರಡು ಕಿವಿ ಬದಿ ಶೇವ್ ಮಾಡಿ ಮಧ್ಯಭಾಗದ ಕೂದಲನ್ನು ಉದ್ದವಾಗಿ ಕೂಡ ಉಳಿಸಿಕೊಳ್ಳಬಹುದು ಅಥವಾ ಕುತ್ತಿಗೆವರೆಗೆ ಗಿಡ್ಡವಾಗಿ ಇಟ್ಟುಕೊಳ್ಳಬಹುದು. ತುದಿ ನೇರವಾಗಿರಬೇಕು. ಲೇಯರ್‌ಗಳು ಹೆಚ್ಚು ಇರುವುದಿಲ್ಲ.

ಸಿನಿಮಾ ಪ್ರಭಾವ

ಫ್ಯಾಷನ್, ಕೇಶವಿನ್ಯಾಸದ ಮೇಲೆ ಮಾಧ್ಯಮದ ಪ್ರಭಾವ ಹೆಚ್ಚು. 70 ದಶಕದಲ್ಲಿ ಕಿವಿ ಪಕ್ಕದ ಕೂದಲನ್ನು ಕೆನ್ನೆ ಮೇಲೆ ಸುರಳಿ ಕೂರಿಸಿಕೊಳ್ಳುತ್ತಿದ್ದರಿಂದ ಹಿಡಿದು ರಸ್ನಾ ಜ್ಯೂಸ್‌ನ ಜಾಹೀರಾತಿನಲ್ಲಿ ಬರುತ್ತಿದ್ದ ಮುದ್ದು ಹುಡುಗಿಯ ಬಾಬ್ ಕಟ್, ಅಮೂಲ್ ಬೆಣ್ಣೆ ಜಾಹೀರಾತಿನ ಹುಡುಗಿಯ ನೆತ್ತಿ ಮೇಲೆ ಪೋನಿಟೇಲ್ ವಿನ್ಯಾಸ, ರಜನಿಕಾತ್ ಅವರ ಕಬಾಲಿ ಹೇರ್‌ಕಟ್, ಏರ್‌ಟೆಲ್ 4ಜಿ ಮುಖವಾಣಿ ಹುಡುಗಿಯ ಹೇರ್‌ಕಟ್, ಸುದೀಪ್ ಅವರ ಹೆಬ್ಬುಲಿ ಸಿನಿಮಾದಲ್ಲಿನ ಹೇರ್‌ಕಟ್ ಸೇರಿ ಇಂದು ಟ್ರೆಂಡ್‌ನಲ್ಲಿರುವ ಕೆಜಿಎಫ್ ಸಿನಿಮಾದಲ್ಲಿ ಯಶ್ ಅವರ ಹೇರ್‌ಕಟ್‌ವರೆಗೂ ಜನ ಸಿನಿಮಾ ನಾಯಕ–ನಾಯಕಿಯರಿಂದ ಯುವಕರು ಪ್ರೇರಣೆ ಪಡೆಯುತ್ತಿದ್ದಾರೆ.



ಸಾಂದರ್ಭಿಕ ಚಿತ್ರ

ಮುಖದ ಆಕಾರಕ್ಕೆ ತಕ್ಕ ಹೇರ್‌ಕಟ್



ಸಾಂದರ್ಭಿಕ ಚಿತ್ರ

ಎಲ್ಲರಿಗೂ ಎಲ್ಲಾಬಗೆಯ ಹೇರ್‌ಕಟ್ ಹೊಂದುವುದಿಲ್ಲ. ಕೇಶವಿನ್ಯಾಸಕರ ಸಲಹೆ ಮೇರೆಗೆ ತಮ್ಮ ಮುಖದ ಆಕಾರಕ್ಕೆ ಒಪ್ಪುವ ಕಟ್ ಮಾಡಿಸಿಕೊಳ್ಳುವುದು ಸೂಕ್ತ. ಈ ಬಗ್ಗೆ ಸಲಹೆ ನೀಡಿದ್ದಾರೆ ಬೆಂಗಳೂರಿನ ಬಸವೇಶ್ವರ ನಗರದ ಹೇರ್‌ಸ್ಟೈಲಿಸ್ಟ್ ಸಮೀರ್ ತಮೊಂಗ್.

ಆಯತ (ರೆಕ್ಟ್ಯಾಂಗಲ್) ಆಕಾರ ಮುಖ: ಕೆನ್ನೆಮೂಳೆ ಸ್ವಲ್ಪ ದೊಡ್ಡ ಇರುವ ಈ ಮುಖ ಆಕಾರ ಇರುವವರಿಗೆ ಲೇಯರ್ಡ್ ಕಟ್‌ಗಳು, ಉದ್ದದ ಸುರುಳಿ ವಿನ್ಯಾಸ, ಚಿಗ್ನಾನ್ (ಗಂಟಿನಂಥ ವಿನ್ಯಾಸ), ಕರ್ಟನ್ ಬ್ಯಾಂಗ್ಸ್ ಹೇರ್‌ಕಟ್ ಸೂಕ್ತವಾಗಿ ಹೊಂದುತ್ತವೆ.

ಓವಲ್ ಆಕಾರ ಮುಖ: ಮೊಂಡಾದ ತುದಿಯ ಬಾಬ್ ಕಟ್ ಮತ್ತು ಲೋಬ್‌ಗಳು ಸೂಕ್ತ, ಹೆಚ್ಚು ಪದರ ಉಳ್ಳ ಗಿಡ್ಡ ಲೇಯರ್ ಕಟ್, ಗಿಡ್ಡ ಬೇಡ ಎನಿಸಿದರೆ ಉದ್ದ ಲೇಯರ್ ಕೂಡ ಮಾಡಿಸಿಕೊಳ್ಳಬಹುದು.

ಚೌಕ ಆಕಾರ ಮುಖ: ಸೈಡ್-ಪಾರ್ಟೆಡ್ ಮಾಡಿರುವ ಹೇರ್‌ಕಟ್, ಉದ್ದ ಮತ್ತು ಪದರಗಳು ಇರುವ ಕಟ್, ಚಿಕ್ಕ ಲೇಯರ್ಡ್ ಬಾಬ್, ಸೈಡ್-ಸ್ವೆಪ್ ಬ್ಯಾಂಗ್ಸ್ ಸೂಕ್ತವಾಗಿ ಹೊಂದುತ್ತದೆ.

ಹಾರ್ಟ್ ಆಕಾರ ಮುಖ: ಉದ್ದನೆಯ ಸೈಡ್-ಸ್ವೀಪ್ ಕಟ್‌ಗಳು, ಕಿವಿಯ ಕೆಳಗೆ ಪ್ರಾರಂಭವಾಗುವ ಲೇಯರ್ಡ್ ಕಟ್ ಅಥವಾ ಸುರುಳಿಗಳು, ಬಾಬ್ ಕಟ್ ಮತ್ತು ಲಾಬ್ ಕಟ್‌ಗಳು ಸೂಕ್ತ.

ವಜ್ರ: ಕೆದರಿದ ಕಾಣುವ ಲೇಯರ್ಡ್ ಕಟ್, ವೀ ಕಟ್, ಗಲ್ಲದ ಉದ್ದಕ್ಕೆ ಬರುವ ಬಾಬ್ ಕಟ್, ಪೋನಿಟೇಲ್, ಮಧ್ಯ ಅಥವಾ ಉದ್ದನೆಯ ಲೇಯರ್ಡ್ ಕಟ್ ಸೂಕ್ತ.

ರೌಂಡ್: ಲಾಂಗ್ ಲೇಯರ್ಡ್ ಕಟ್‌ಗಳು, ಚಪ್ಪಿ ಪಿಕ್ಸಿ ಕಟ್ಸ್, ಶಾರ್ಟ್ ಸೈಡ್ ಬ್ಯಾಂಗ್ಸ್ ಕಟ್ ಇವರಿಗೆ ಹೊಂದುತ್ತದೆ.

ತ್ರಿಕೋನ: ಕಣ್ಣುಗಳು/ ಕೆನ್ನೆಯ ಮೂಳೆಗಳು ಅಥವಾ ಕಾಲರ್‌ಬೋನ್‌ವರೆಗೆ ಬರುವ ಹೇರ್ ಕಟ್ ಹೊಂದುತ್ತದೆ. ಚಪ್ಪಟೆಯಾದ ಪಿಕ್ಸಿ ಕಟ್‌ಗಳು, ಶಾರ್ಟ್ ಸೈಡ್ ಬ್ಯಾಂಗ್ಸ್ ಸೂಕ್ತ.

ನೂರಾರು ತಪ್ಪುಕಲ್ಪನೆಗಳು

ಏನಾದ್ರೂ ಕೇಳ್ಬೋದು



ನಡಹಳ್ಳಿ ವಸಂತ್

• ಪ್ರತಿದಿನ ಲೈಂಗಿಕ ಸಂಪರ್ಕ ಮಾಡಿದರೆ ತೊಂದರೆ ಇದೆಯಾ?

ಹೆಸರು, ಊರು ತಿಳಿಸಿಲ್ಲ

ಮಾನಸಿಕ ಸಮಸ್ಯೆಗಳಿಗೆ ಎಲ್ಲರಿಗೂ ಹೊಂದುವಂತಹ ಉತ್ತರಗಳಿರುವುದಿಲ್ಲ. ಹಾಗಾಗಿ ವೈಯಕ್ತಿಕ ವಿವರಗಳನ್ನು ನೀಡದ ಈ ರೀತಿಯ ಪ್ರಶ್ನೆಗಳಿಗೆ ಉತ್ತರಿಸುವುದು ಸೂಕ್ತವಾಗುವುದಿಲ್ಲ. ಹಾಗಿದ್ದರೂ ಲೈಂಗಿಕತೆಯ ಕುರಿತಾದ ತಪ್ಪುತಿಳಿವಳಿಕೆಗಳನ್ನು ಪರಿಹರಿಸಲು ಸಹಾಯವಾಗಬಹುದೆಂದು ಉತ್ತರಿಸಲಾಗಿದೆ. ಪ್ರತಿದಿನವೂ ಊಟ ಮಾಡಿದರೆ ಅಥವಾ ಪ್ರತಿಕ್ಷಣವೂ ಉಸಿರಾಡಿದರೆ ತೊಂದರೆಯಾಗಬಹುದೇ? ಲೈಂಗಿಕತೆಯೂ ಅಷ್ಟೇ. ಲೈಂಗಿಕ ಸಂಪರ್ಕವನ್ನು ಯಾವಾಗ ಎಷ್ಟು ಸಾರಿ ಮಾಡಬಹುದು ಎನ್ನುವುದು ಪ್ರಸ್ತುತವಲ್ಲ. ನೀವು ನಿಮ್ಮೊಳಗೆ ಉತ್ತರ ಹುಡುಕಿಕೊಳ್ಳಬೇಕಾಗಿರುವುದು ಎರಡು ಪ್ರಶ್ನೆಗಳಿಗೆ. ಮೊದಲನೆಯದು ಲೈಂಗಿಕಕ್ರಿಯೆ ನಿಮ್ಮ ಸಂಗಾತಿಯ ಅಗತ್ಯವೂ ಆಗಿದೆಯೇ? ಸಂಗಾತಿಯ ಪೂರ್ಣ ಮನಸ್ಸಿನ ಒಪ್ಪಿಗೆಯಿಲ್ಲದಿದ್ದಾಗ ನಡೆಯುವ ಒಮ್ಮುಖ ಲೈಂಗಿಕಕ್ರಿಯೆಯಿಂದ ಸಂಬಂಧಗಳು ಹಾಳಾಗುತ್ತವೆ. ಅಲ್ಲದೆ ನೀವು ಬಹಳಬೇಗ ನಿರಾಸೆ ಹೊಂದಿ ಲೈಂಗಿಕ ಒತ್ತಡ ಪರಿಹರಿಸಿಕೊಳ್ಳಲು ಹೊಸಹೊಸ ವ್ಯಕ್ತಿಗಳನ್ನು ಹುಡುಕುವ ಅಪಾಯಕಾರಿ ಸಾಹಸಕ್ಕೆ ಕೈಹಾಕಬಹುದು.

ಎರಡನೆಯದು ಲೈಂಗಿಕಕ್ರಿಯೆಯನ್ನು ಬೇರಾವುದೋ ನೋವು, ದುಃಖ, ಬೇಸರ, ಹತಾಶೆ ಅಸಹಾಯಕತೆಗಳನ್ನು ಮರೆಯುವ ಸಾಧನವಾಗಿ ಬಳುಸುತ್ತಿದ್ದೀರಾ? ಹಾಗೆ ಮಾಡಿದಾಗ ಲೈಂಗಿಕ ಆಸಕ್ತಿ ನಶೆಯಾಗಿ ಅಂಟಿಕೊಂಡು ನಿಮ್ಮ ಬದುಕು ಮತ್ತು ಸಂಬಂಧಗಳನ್ನು ಹಾಳುಮಾಡುತ್ತದೆ. ಪ್ರೀತಿಸುವ ಸಂಗಾತಿಯೊಡನೆ ಪೂರ್ಣ ಉತ್ಸಾಹ ಮತ್ತು ಒಪ್ಪಿಗೆಯಿಂದ ಎಷ್ಟು ಸಾರಿ ಬೇಕಾದರೂ ಸೇರಬಹುದು. ಇದರಿಂದ ದೈಹಿಕ ಮಾನಸಿಕ ಆರೋಗ್ಯಗಳು ಹಾಳಾಗುವುದರ ಬದಲಾಗಿ ಹೆಚ್ಚಾಗುತ್ತವೆ.

ಇನ್ನಷ್ಟು ಪ್ರಶ್ನೋತ್ತರಗಳಿಗೆ prajavani.net ನೋಡಿ

ಏನಾದ್ರೂ ಕೇಳ್ಬೋದು

ಹದಿಹರೆಯದ ಮತ್ತು ದಾಂಪತ್ಯದ ಲೈಂಗಿಕ ಸಮಸ್ಯೆ, ಮಾನಸಿಕ ಸಮಸ್ಯೆ ಕುರಿತು ಪ್ರಶ್ನೆಗಳನ್ನು ನಮಗೆ ಕಳುಹಿಸಿ. ನಿಮ್ಮ ಪ್ರಶ್ನೆಗಳಿಗೆ ಮನೋಚಿಕಿತ್ಸಕ ನಡಹಳ್ಳಿ ವಸಂತ್ ಉತ್ತರಿಸಲಿದ್ದಾರೆ
bhoomika@prajavani.co.in

ಪಾಲಕ್ ಪಂದಿಕರಿ ಕ್ಯಾರೆಟ್ ಕೋಳಿಗೊಜ್ಜು

ರಾಜೇಂದ್ರ ಪ್ರಸಾದ್

ನಳಪಾಕ

ಪಾಲಕ್ ಪಂದಿಕರಿ

ಬೇಕಾಗುವ ಸಾಮಗ್ರಿಗಳು :

ಹಂದಿ ಮಾಂಸ –1/2 ಕೆಜಿ
ಬಿಡಿಸಿದ ಪಾಲಕ್ ಸೊಪ್ಪು – ಒಂದು ಕಂತೆ(ಕಟ್ಟು)
ಈರುಳ್ಳಿ – 1-2 ದಪ್ಪಗೆ ಹೆಚ್ಚಿದ್ದು
ಹಸಿಮೆಣಸಿನಕಾಯಿ – 3 ರಿಂದ 4 ಉದ್ದಕ್ಕೆ ಸೀಳಿದ್ದು
ಬೆಳ್ಳುಳ್ಳಿ – 2 ಬಿಡಿಸಿಕೊಂಡಿದ್ದು
ಕಾಳುಮೆಣಸು– ಒಂದು ಚಮಚದಷ್ಟು
ನಿಂಬೆ ರಸ – ಒಂದು ಹಣ್ಣಿನದ್ದು
ಎಣ್ಣೆ – ನಾಲ್ಕು ಟೇಬಲ್ ಚಮಚದಷ್ಟು
ಉಪ್ಪು–ರುಚಿಗೆ ತಕ್ಕಷ್ಟು

ತಯಾರಿಸುವ ವಿಧಾನ: ಚೆನ್ನಾಗಿ ಬಿಸಿನೀರಲ್ಲಿ ತೊಳೆದುಕೊಂಡ ಹಂದಿಮಾಂಸವನ್ನು ನೀರು ಸೋರಲು ಬಿಡಿ. ನಂತರ ಒಂದು ಪಾತ್ರೆಯಲ್ಲಿ ಎಣ್ಣೆ ಹಾಕಿ ಕಾದ ನಂತರ ಈರುಳ್ಳಿ, ಹಸಿಮೆಣಸಿನಕಾಯಿ ಹಾಕಿ ಹುರಿದು ನಂತರ ಮಾಂಸವನ್ನು ಬೆರೆಸಿ ಬಾಡಿಸಿ. ಅದಕ್ಕೆ ಪಾಲಕ್ ಸೊಪ್ಪು ಮತ್ತು ಅಗತ್ಯವಿರುವಷ್ಟು ಉಪ್ಪು, ಚಿಟಿಕಿ ಅರಿಸಿನ ಪುಡಿ ಸೇರಿಸಿ. ಮಾಂಸ ನೀರು ಬಿಡಲು ಶುರುವಾಗುತ್ತದೆ. ಆ ನೀರು ಇಂಗುವವರೆಗೂ ಬಾಡಿಸುತ್ತಲೇ ಇರಿ.

ಬಹುತೇಕ ನೀರು ಇಂಗಿ ಮಾಂಸದ ಕೊಬ್ಬು ಕರಗಲು ಶುರುವಾದಾಗ ಅರೆದ ಶುಂಠಿ ಬೆಳ್ಳುಳ್ಳಿ ಮತ್ತು ಕಾಳುಮೆಣಸಿನ ಪುಡಿ ಬೆರೆಸಿ, ನಿಂಬೆ ರಸ ಸೇರಿಸಿ ಬಾಡಿಸಿ. ಒಂದು ಲೋಟದಷ್ಟು ನೀರು ಸೇರಿಸಿ, ಹದವಾಗಿ ಬೇಯಿಸಿರಿ. ನೀರು ಪೂರ್ತಿ ಇಂಗಲು (Dry) ಬಿಡಬೇಡಿ. ನಂತರ ಹಸಿರು ಹಸಿರಾಗಿ ಕಾಣುವ ಪಾಲಕ್ ಪಂದಿಕರಿಯನ್ನು ಅಕ್ಕಿರೊಟ್ಟಿ, ಚಪಾತಿ ಅಥವಾ ಮುದ್ದೆಯೊಡನೆ ತಿನ್ನಬಹುದು.



ಕ್ಯಾರೆಟ್ ಕೋಳಿಗೊಜ್ಜು



ಬೇಕಾಗುವ ಸಾಮಗ್ರಿಗಳು :

ಕೋಳಿಮಾಂಸ – 1/2 ಕೆಜಿ, ಕ್ಯಾರೆಟ್ – ಸಣ್ಣಗಾತ್ರದ 2 ಎಳೆಯ ಕಾಯಿ, ತೆಳುವಾಗಿ ದುಂಡಗೆ ಕತ್ತರಿಸಿ ಕೊಂಡಿದ್ದು
ಈರುಳ್ಳಿ –1ರಿಂದ 2 ದಪ್ಪಗೆ ಹೆಚ್ಚಿದ್ದು
ಹಸಿಮೆಣಸಿನಕಾಯಿ – 3 ರಿಂದ 4 ಉದ್ದಕ್ಕೆ ಸೀಳಿದ್ದು
ಟೊಮೆಟೊ – 2 ಮಧ್ಯಮ ಗಾತ್ರದ ಹಣ್ಣು (ಸಣ್ಣಗೆ ಹೆಚ್ಚಿದ್ದು)
ಖಾರದ ಪುಡಿ – 4 ಚಮಚ
ಶುಂಠಿ ಬೆಳ್ಳುಳ್ಳಿ ಪೇಸ್ಟ್ – 3 ಟೇಬಲ್ ಚಮಚ
ಗರಂ ಮಸಾಲ – 1 ಚಮಚ
ಎಣ್ಣೆ – ನಾಲ್ಕು ಟೇಬಲ್ ಚಮಚ

ತಯಾರಿಸುವ ವಿಧಾನ: ಹೆಚ್ಚಿದ ಈರುಳ್ಳಿ, ಹಸಿಮೆಣಸಿನಕಾಯಿ ಮತ್ತು ಕ್ಯಾರೆಟ್ ಅನ್ನು ಎಣ್ಣೆಯಲ್ಲಿ ಹುರಿದುಕೊಳ್ಳಿ. ಕೆಂಪಗಾಗುವ ಮುನ್ನ ಅದಕ್ಕೆ ತೊಳೆದಿಟ್ಟುಕೊಂಡ ಕೋಳಿ ಮಾಂಸ ಬೆರೆಸಿ, ರುಚಿಗೆ ತಕ್ಕಷ್ಟು ಉಪ್ಪು, ಅರ್ಧ ಚಮಚ ಅರಿಸಿನ ಹಾಕಿ ಕದಡುತ್ತಾ ಬನ್ನಿ. ಮಾಂಸದ ನೀರು ಬಿಟ್ಟು, ನಂತರ ಇಂಗಲು ಶುರುವಾದಾಗ ಅದಕ್ಕೆ ಟೊಮೆಟೊ, ಶುಂಠಿ-ಬೆಳ್ಳುಳ್ಳಿ ಪೇಸ್ಟ್, ಖಾರದ ಪುಡಿ, ಗರಂಮಸಾಲೆ ಬೆರೆಸಿ ಬಾಡಿಸಿ (ಅಗತ್ಯವೆನಿಸಿದರೆ ಇಲ್ಲಿ ತೆಂಗಿನಕಾಯಿ ಮಸಾಲೆ ಬಳಸಬಹುದು) ಒಂದು ಲೋಟ ನೀರು ಸೇರಿಸಿ. 15 ನಿಮಿಷ ಸಣ್ಣ ಉರಿಯಲ್ಲಿ ಬೇಯಲು ಬಿಡಿ. ನಂತರ ರೊಟ್ಟಿ, ಚಪಾತಿ, ಅನ್ನ, ಮುದ್ದೆ ಯಾವುದಕ್ಕಾದರೂ ಇದು ಹೊಂದಿಕೊಳ್ಳುತ್ತದೆ.